ಶುಕ್ರವಾರ, ಏಪ್ರಿಲ್ 14, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ನೃತ್ಯ ಅಮೃತಸರದಲ್ಲಿ ಬೈಸಾಕಿ ಹಬ್ಬದ ಅಂಗವಾಗಿ ವಿದ್ಯಾರ್ಥಿಗಳು ಗುರುವಾರ ‘ಭಾಂಗ್ರಾ’ ನೃತ್ಯ ಪ್ರದರ್ಶಿಸಿದರು

ವಿವಿಧ ನಗರಗಳಿಂದ ವಲಸೆ ಕಾರ್ಮಿಕರನ್ನು ಕರೆ ತರಲು ಅಭ್ಯರ್ಥಿಗಳ ತೀವ್ರ ಕಸರತ್ತು

ಗುಳೆ ಹೋದವರ ಜಾಡಿನಲ್ಲಿ...

• ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: ದುಡಿಮೆಗಾಗಿ ಮುಂಬೈ, ಪುಣೆ, ಬೆಂಗಳೂರು, ಹೈದರಾಬಾದ್‌ಗೆ ಗುಳೆ ಹೋಗಿರುವ ಕೂಲಿ ಕಾರ್ಮಿಕರ ಕುಟುಂಬಗಳ ಜಾಡು ಹಿಡಿದು ತೆರಳಿ, ಅವರನ್ನು ಮತದಾನಕ್ಕೆ ಕರೆತರಲು ಆಯಾ ಪಕ್ಷಗಳ ಅಭ್ಯರ್ಥಿಗಳು ಮತ್ತು ಬೆಂಬಲಿಗರು ಕಸರತ್ತು ನಡೆಸಿದ್ದಾರೆ.

ಮಹಾನಗರಗಳಲ್ಲಿ ದುಡಿಯುತ್ತಿರುವ ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು ಮತ್ತು ಕೊಪ್ಪಳದ ಜನರನ್ನು ಸಂಪರ್ಕಿಸಿ, ಮನವೊಲಿಸುವ ಮತ್ತು ಅವರ ವಾಸಸ್ಥಳದಲ್ಲೇ ಸಭೆಗಳನ್ನು ನಡೆಸುವ ಕಾರ್ಯದಲ್ಲೂ ನಿರತರಾಗಿದ್ದಾರೆ.

ಚಿಂಚೋಳಿ, ಚಿತ್ತಾಪುರ, ಕಮಲಾಪುರ, ಕಾಳಗಿ, ಆಳಂದ ತಾಲ್ಲೂಕುಗಳಿಂದ ತಲಾ 8 ರಿಂದ 10 ಸಾವಿರ ಕೂಲಿ ಕಾರ್ಮಿಕರು ಗುಳೆ ಹೋಗಿದ್ದಾರೆ. ಅವರಲ್ಲಿ ಲಂಬಾಣಿ, ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿಯವರೇ ಹೆಚ್ಚು.

ವಿವಿಧ ಪಕ್ಷಗಳ ಹೋಬಳಿ ಮಟ್ಟದ ನಾಯಕರು ಗ್ರಾಮಗಳಿಗೆ ತೆರಳಿ, ಅಲ್ಲಿನ ಸಂಬಂಧಿಕರ ಮೂಲಕ ವಲಸೆ ಹೋದವರ ಮೊಬೈಲ್ ಸಂಖ್ಯೆ ಸಮೇತ ಮಾಹಿತಿ ಪಟ್ಟಿ ಸಿದ್ಧಪಡಿಸಿಕೊಂಡಿದ್ದಾರೆ. ಇಟ್ಟಿಗೆ ಭಟ್ಟಿ, ಹಾಲೋ ಬ್ರಿಕ್ಸ್, ಜಲ್ಲಿಕಲ್ಲು ಕ್ರಷರ್, ಕಟ್ಟಡ ನಿರ್ಮಾಣ, ಗಾರ್ಮೆಂಟ್ಸ್ ಸೇರಿ ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಪತ್ತೆ ಮಾಡಿದ್ದಾರೆ.

'ಮತ ಹಾಕಲು ಬಂದು ಹೋಗಲು ಕನಿಷ್ಠ ಮೂರು ದಿನ ಬೇಕು. ದಿನದ ಕೂಲಿ, ಉಪಹಾರ, ಊಟ ಮತ್ತು ವಾಹನದ ವ್ಯವಸ್ಥೆ ಖರ್ಚು ಭರಿಸಬೇಕು. ಇದೆಲ್ಲದರ ವ್ಯವಸ್ಥೆ ಮಾಡಿದರೆ ಮಾತ್ರ ನಾವು ಮತದಾನಕ್ಕೆಂದು ಊರಿಗೆ ಹೋಗಲು ಸಾಧ್ಯ. ಇವೆಲ್ಲದರ ವ್ಯವಸ್ಥೆ ಮಾಡುವುದಾಗಿ ಆಯಾ ಪಕ್ಷಗಳ ಉಸ್ತುವಾರಿಗಳು ವಾಗ್ದಾನ ಮಾಡಿದ್ದಾರೆ' ಎಂದು ಪುಣೆಯ ವಲಸಿಗ ಕಾರ್ಮಿಕರೊಬ್ಬರು ತಿಳಿಸಿದರು.

'ಆಳಂದದಿಂದ 7 ಸಾವಿರ ಕೂಲಿ ಕಾರ್ಮಿಕರು ಮುಂಬೈ, ಪುಣೆ, ಕೊಲ್ಹಾಪುರ, ಉಮರ್ಗಾಕ್ಕೆ ವಲಸೆ ಹೋಗಿದ್ದಾರೆ. ಮುಂಬೈಯ ಕುರುವನಾಕಾದಿಂದ ಕಾರ್ಮಿಕರನ್ನು ಕರೆ ತರಲು ಮೂರು ಖಾಸಗಿ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಎರಡು ಗ್ರಾಮಗಳಿಗೆ ಒಂದೊಂದು ಬಸ್ ವ್ಯವಸ್ಥೆ ಮಾಡಿದ್ದಾರೆ' ಎಂದು ಕಟ್ಟಡ ಮತ್ತು ಕ್ವಾರಿ ಕಾರ್ಮಿಕರ ಸಂಘದ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಮುಂಗಡ ರೈಲ್ವೆ ಟಿಕೆಟ್ ಬುಕ್ಕಿಂಗ್, ಟ್ರಾವೆಲ್ಸ್ ವಾಹನಗಳನ್ನು ಬಳಸಲು ಚರ್ಚೆ ನಡೆದಿದೆ. ಮತದಾನದ ದಿನಕ್ಕೆ ಸರಿಯಾಗಿ ಸರ್ಕಾರಿ ಮತ್ತು ಖಾಸಗಿ ಬಸ್‌ಗಳಲ್ಲಿ ಕಾರ್ಮಿಕರು ಬಂದು ಮತ ಹಾಕಿ ಹೋಗುವ ಯೋಜನೆಯೂ ರೂಪಿಸಲಾಗಿದೆ.

ಯಾದಗಿರಿ, ಗುರುಮಠಕಲ್, ಶಹಾಪುರ, ಸುರಪುರ ತಾಲ್ಲೂಕಿನ ಜನರು ಬೆಂಗಳೂರು, ಮಂಗಳೂರು, ಮುಂಬೈ ಸೇರಿದಂತೆ ವಿವಿಧ ಮಹಾನಗರಗಳಲ್ಲಿ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರೆ. ಕೂಲಿ ಕಾರ್ಮಿಕರ ನಾಯಕರನ್ನು ಮತ್ತು ಆಯಾ ಜಾತಿ, ಸಮುದಾಯದ ಮುಖಂಡರ ಮೂಲಕ ಸಂಪರ್ಕಿಸಿ, ಮತದಾನ ದಿನದಂದು ಕರೆ ತರಲು ಚರ್ಚೆ ನಡೆದಿದೆ' ಎಂದು ರಾಜಕೀಯ ಪಕ್ಷದ ಮುಖಂಡರೊಬ್ಬರು ತಿಳಿಸಿದರು.

ಬೀದರ್ ಮತ್ತು ರಾಯಚೂರು ಜಿಲ್ಲೆಯಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಅಲ್ಲಿನ ರಾಜಕೀಯ ಪಕ್ಷದ ಮುಖಂಡರು ವಲಸೆ ಕೂಲಿ ಕಾರ್ಮಿಕರನ್ನು ಪತ್ತೆ ಮಾಡಿ, ಸಂಪರ್ಕಿಸಿ ಊರಿಗೆ ಕರೆ ತರಲು ಸಿದ್ಧತೆ ನಡೆಸಿದ್ದಾರೆ.

ಇದೆಲ್ಲದರ ಮಧ್ಯೆ ಮತದಾನ ಪ್ರಕ್ರಿಯೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳಬೇಕು ಎಂಬ ಆಶಯ ಹೊತ್ತು ಕೊಪ್ಪಳ ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರಾಗಿರುವ ರಾಹುಲ್ ರತ್ನಂ ಪಾಂಡೆ ಅವರೂ ಸಹ ವಲಸೆ ಹೋದ ಕಾರ್ಮಿಕರನ್ನು ಸಂಪರ್ಕಿಸಲು ಪ್ರಯತ್ನ ನಡೆಸಿದ್ದಾರೆ.

'ಬೆಂಗಳೂರು, ಮಂಗಳೂರು, ಕೇರಳ, ಆಂಧ್ರ, ಗೋವಾಕ್ಕೆ ತೆರಳಿರುವ ವಲಸೆ ಕಾರ್ಮಿಕರನ್ನು ಸಂಪರ್ಕಿಸಿ, ಊರಿಗೆ ಬಂದು ಮತ ಚಲಾಯಿಸುವಂತೆ ಅವರ ಸಂಬಂಧಿಕರ ಮೂಲಕ ಕೋರಲಾಗುತ್ತಿದೆ' ಎಂದಿದ್ದಾರೆ.

> **ರಾಜಕೀಯ ಪಕ್ಷಗಳು ಸಾರಿಗೆ ವ್ಯವಸ್ಥೆ ಮಾಡಿ ಮತದಾರರನ್ನು ಸಾಮೂಹಿಕವಾಗಿ ಮತದಾನಕ್ಕೆ ಕರೆ ತರುವಂತಿಲ್ಲ. ಕರೆ ತಂದರೆ ಅದನ್ನು ಅಭ್ಯರ್ಥಿಯ ಚುನಾವಣೆ ವೆಚ್ಚಕ್ಕೆ ಸೇರಿಸಲಾಗುವುದು.**
> **ಯಶವಂತ ಗುರುಕರ್**
> ಜಿಲ್ಲಾ ಚುನಾವಣಾಧಿಕಾರಿ


ಮುಂಬೈಯ ವಸೈ ಪ್ರದೇಶದಲ್ಲಿ ಕೂಲಿಕಾರ್ಮಿಕರನ್ನು ಉದ್ದೇಶಿಸಿ ಕಲಬುರಗಿಯ ಸಂಸದ ಡಾ.ಉಮೇಶ ಜಾಧವ ಮಾತನಾಡಿದರು

'ಮುಂಬೈನಲ್ಲಿ ಕಲಬುರಗಿ, ಬೀದರ್ ನಾಯಕರ ಪ್ರಚಾರ'

'ಕಲಬುರಗಿ ಮತ್ತು ಬೀದರ್ ಜಿಲ್ಲೆಗಳ ಮುಖಂಡರು ಮುಂಬೈಗೆ ಬಂದು, ವಲಸಿಗರನ್ನು ಭೇಟಿಯಾಗಿ ತಮ್ಮ ಪಕ್ಷದ ಸಾಧನೆ, ಸಿದ್ಧಾಂತ ಮತ್ತು ನಾಯಕರ ಬಗ್ಗೆ ಪ್ರಚಾರ ಮಾಡುತ್ತಾರೆ' ಎಂದು ಮುಂಬೈನಲ್ಲಿರುವ ಸಾಮಾಜಿಕ ಕಾರ್ಯಕರ್ತ ರಾಮು ರಾಠೋಡ ತಿಳಿಸಿದರು.

'ಮುಂಬೈಯ ಸಾಂತಾಕ್ರೂಜ್, ಬಾಂದ್ರಾ, ಅಂಧೇರಿ, ಮಲಾಡ್, ಬೊರಿವಲಿ, ಕೊಲಾಬಾ, ಅಂಬೇಡ್ಕರ್ ನಗರ ಸೇರಿ ಹಲವೆಡೆ ಕನ್ನಡಿಗರು ನೆಲೆಸಿದ್ದಾರೆ. ಯಾವುದೇ ರಾಜ್ಯದ ಚುನಾವಣೆ ನಡೆದರೂ ಆಯಾ ರಾಜ್ಯಗಳ ರಾಜಕಾರಣಿಗಳು ಬಂದು ಗುಳೆ ಮತದಾರರನ್ನು ಕರೆದೊಯ್ಯುತ್ತಾರೆ' ಎಂದು ಹೇಳಿದರು.

ಚಿಂಚೋಳಿ ಕ್ಷೇತ್ರದ ಬಹುತೇಕ ಲಂಬಾಣಿ ಸಮುದಾಯವರು ಮುಂಬೈನಲ್ಲಿದ್ದು, ಕಾಂಗ್ರೆಸ್ ಅಭ್ಯರ್ಥಿ ಸುಭಾಷ ರಾಠೋಡ ಮತ್ತು ಸಂಸದ ಡಾ.ಉಮೇಶ ಜಾಧವ ಅವರು ಅಲ್ಲಿಗೇ ಹೋಗಿ ಪ್ರಚಾರ ನಡೆಸಿದ್ದಾರೆ.

ಸ್ವಂತ ಹಣದಲ್ಲಿ ಬಂದು ಮತದಾನ!

ಮತದಾನಕ್ಕೆ ಬರುವ ವಲಸಿಗರು ಕೂಲಿ ಮತ್ತು ಸಾರಿಗೆಯ ಹಣದ ಬೇಡಿಕೆ ಇರಿಸುವುದು ಸಾಮಾನ್ಯ. ಆದರೆ, ಕೋವಿಡ್ ದಿನಗಳಲ್ಲಿ ತವರು ಸೇರಲು ಮುಖಂಡರು ನೆರವಾದ ಹಿನ್ನೆಲೆಯಲ್ಲಿ ಕಾರ್ಮಿಕರು ಸ್ವಂತ ಹಣದಲ್ಲಿ ಊರಿಗೆ ಬಂದು ಮತದಾನ ಮಾಡುವುದಾಗಿ ತಿಳಿಸಿದ್ದಾರೆ. 'ಲಾಕ್‌ಡೌನ್ ಅವಧಿಯಲ್ಲಿ ನಗರಗಳಲ್ಲಿ ಸಿಲುಕಿದ್ದ ಕೂಲಿ ಕಾರ್ಮಿಕರಿಗೆ ಆಳಂದದಿಂದ ದಿನಸಿ ಕಿಟ್ ಕಳುಹಿಸಿದ್ದೆವು. ಲಾಕ್‌ಡೌನ್ ಸಡಿಲಿಕೆ ಬಳಿಕ ಸಂಸದರ ಹಾಗೂ ಜಿಲ್ಲಾಧಿಕಾರಿ ನೆರವಿನಿಂದ ಮನೆಗೆ ಕರೆತರಲಾಯಿತು. ಇದನ್ನು ನೆನಪಿನಲ್ಲಿ ಇಟ್ಟುಕೊಂಡಿರುವ ಕೆಲ ಕೂಲಿ ಕಾರ್ಮಿಕರು ತಮ್ಮ ಖರ್ಚಿನಲ್ಲಿ ಮತದಾನಕ್ಕೆ ಬರುವುದಾಗಿ ಹೇಳಿದ್ದಾರೆ' ಎಂದು ಕಾಂಗ್ರೆಸ್ ಮುಖಂಡರೊಬ್ಬರು ಹೆಮ್ಮೆಯಿಂದಲೇ ಹೇಳಿದರು.

ಹುಟ್ಟೂರು ತೊರೆದು ಪರವೂರು ಸೇರಿದವರ ಸಂಕಟ

ಊರು ಕಟ್ಟುವವರಿಲ್ಲಿ 'ಆಟಕ್ಕುಂಟು ಲೆಕ್ಕಕ್ಕಿಲ್ಲ'

• ಪ್ರವೀಣ ಕುಮಾರ್ ಪಿ.ವಿ.

ಮಂಗಳೂರು: ರಿಯಲ್ ಎಸ್ಟೇಟ್ ಉದ್ಯಮ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಮಹಾನಗರವಿದು. ಈ ನಗರವನ್ನು ಕಟ್ಟುವ ಕಾಯಕದಲ್ಲಿ ಪರವೂರಿನವರ ಕೊಡುಗೆಯೇ ಜಾಸ್ತಿ. ಹುಟ್ಟೂರನ್ನೇ ಬಿಟ್ಟು ಬಂದು, ಬೆವರು ಸುರಿಸಿ ಹಗಲಿರುಳು ದುಡಿಯುವ ಈ ಕಾಯಕ ಜೀವಿಗಳ ಸ್ಥಿತಿ ಮಾತ್ರ ಇಲ್ಲಿ 'ಆಟಕ್ಕುಂಟು ಲೆಕ್ಕಕ್ಕಿಲ್ಲ'.


ನಗರದ ಹೊರವಲಯದ ಕುಂಜತ್ತಬೈಲ್, ಕಾವೂರಿನ ಜ್ಯೋತಿನಗರ, ಪಂಜಿಮೊಗರು, ಕೊಂಚಾಡಿ, ಬಸವನಗರ, ಮೂಡುಶೆಡ್ಡೆ, ವಾಮಂಜೂರು, ಮೂಲ್ಕಿ ಸಮೀಪದ ಲಿಂಗಪ್ಪಯ್ಯನ ಕಾಡು ಮೊದಲಾದ ಪ್ರದೇಶಗಳಲ್ಲಿ ಉತ್ತರ ಕರ್ನಾಟಕದಿಂದ ವಲಸೆ ಬಂದಿರುವ 10 ಸಾವಿರಕ್ಕೂ ಹೆಚ್ಚು ಕುಟುಂಬಗಳು ನೆಲೆಸಿವೆ. ಇವುಗಳಲ್ಲಿ ಎರಡು ಸಾವಿರಕ್ಕೂ ಅಧಿಕ ಕುಟುಂಬಗಳು ಸರ್ಕಾರ ಮಂಜೂರು ಮಾಡಿದ 3 ಸೆಂಟ್ಸ್ ಜಾಗದಲ್ಲಿ ಸ್ವಂತ ಸೂರನ್ನೂ ಕಟ್ಟಿಕೊಂಡಿವೆ. ಇಲ್ಲೇ ಪಡಿತರ ಚೀಟಿ, ಗುರುತಿನ ಚೀಟಿಯನ್ನೂ ಪಡೆದುಕೊಂಡಿವೆ.

'ಊರು ತೊರೆದು ಮೂರು ದಶಕಗಳ ಹಿಂದೆಯೇ ಇಲ್ಲಿ ಬಂದು ನೆಲೆಸಿದರೂ, ನಾವು ಇಲ್ಲಿನವರಾಗಲಿಲ್ಲ. ಅತ್ತ ಊರಿನವರ ಪಾಲಿಗೂ ಹೊರಗಿನವರಾಗಿ ಬಿಟ್ಟಿದ್ದೇವೆ' ಎಂದು ಅಳಲು ತೋಡಿಕೊಳ್ಳುತ್ತಾರೆ ಇಲ್ಲಿನ ವಲಸೆ ಕಾರ್ಮಿಕರು. ಇದಕ್ಕೆ ಕಾರಣಗಳೂ ಇವೆ. ಇಲ್ಲಿನ ಶೇ 50ಕ್ಕಿಂತಲೂ ಹೆಚ್ಚು ವಲಸೆ ಕಾರ್ಮಿಕರು ಈಗಲೂ ಊರಿನಲ್ಲೇ ಮತದಾನ ಮಾಡುತ್ತಾರೆ. ಚುನಾವಣೆ ಸಂದರ್ಭದಲ್ಲಿ ಯಾವುದಾದರೂ ರಾಜಕೀಯ ಪಕ್ಷಗಳು ಬಸ್ ವ್ಯವಸ್ಥೆ ಮಾಡಿ, ಊರಿಗೆ ಕರೆದೊಯ್ಯುತ್ತಾರಂತೆ. ಇವರಲ್ಲಿ ಬಹುತೇಕರಿಗೆ ಇಲ್ಲಿ ಮತದಾನದ ಹಕ್ಕು ಇಲ್ಲ ಎಂಬ ಕಾರಣಕ್ಕೆ ಸ್ಥಳೀಯ ರಾಜಕಾರಣಿಗಳೂ ಇವರ ಗೋಳುಗಳಿಗೆ ಕಿವಿಗೊಡುತ್ತಿಲ್ಲ.

'ನಗರದ ವಿವಿಧ ಭಾಗಗಳಲ್ಲಿ ಹಂಚಿಹೋಗಿರುವ ವಲಸೆ ಕಾರ್ಮಿಕರಲ್ಲಿ ಒಗ್ಗಟ್ಟೂ ಇಲ್ಲ. ರಾಜಕಾರಣಿಗಳ ಮೇಲೆ ಒತ್ತಡ ಹೇರುವಷ್ಟು ಸಂಖ್ಯಾಬಲವು ನಮ್ಮಲ್ಲಿಲ್ಲ. ಬಡವನ ಸಿಟ್ಟು ದವಡೆಗೆ ಮೂಲ ಎಂಬ ಕಾರಣಕ್ಕೆ ನಾವು ಸಂಕಟಗಳನ್ನೆಲ್ಲ ನುಂಗಿಕೊಂಡು ಬದುಕುತ್ತಿದ್ದೇವೆ' ಎನ್ನುತ್ತಾರೆ ಕಾರ್ಮಿಕರು.

'ನಗರದ ಕೆಲವು ಭಾಗಗಳಲ್ಲಿ ಜಾಗ ನೀಡಿ ನಮಗೆ ಉಳಿದುಕೊಳ್ಳುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಿದೆ. ಆದರೆ, ಇಲ್ಲಿ ಉತ್ತಮ ಸೌಕರ್ಯಗಳಿಲ್ಲ. ಕಾಟಾಚಾರಕ್ಕೆ ರಸ್ತೆ ನಿರ್ಮಿಸಿದ್ದಾರೆ. ಅದಕ್ಕೆ ಚರಂಡಿಯೂ ಇಲ್ಲ. ಮಳೆ ನೀರೆಲ್ಲ ರಸ್ತೆಯಲ್ಲೇ ಹರಿಯುತ್ತದೆ. 'ನಮ್ಮ ಕ್ಲಿನಿಕ್' ಸೌಕರ್ಯ ಇಲ್ಲ' ಎಂದು ಬೇಸರ ತೋಡಿಕೊಳ್ಳುತ್ತಾರೆ ಕಾವೂರಿನ ಹೇಮಯ್ಯ ಹಿರೇಮಠ.

'ಕಳೆದ ಚುನಾವಣೆಯಲ್ಲಿ ಮತ ಕೇಳಲು ಬಂದ ಬಳಿಕ ಯಾವೊಬ್ಬ ರಾಜಕಾರಣಿಯೂ ಈ ಪ್ರದೇಶಕ್ಕೆ ಬಂದಿಲ್ಲ. ನಮ್ಮ ಮನೆಗಳಿಗೆ ರಸ್ತೆ ಸಂಪರ್ಕವಿಲ್ಲ. ಇಳಿಜಾರಾಗಿರುವ ಓಣಿಯಲ್ಲೇ ಸಾಗಬೇಕು. ವೃದ್ಧರು, ಮಕ್ಕಳು ಓಡಾಡಲು ಸಾಧ್ಯವಿಲ್ಲದ ಸ್ಥಿತಿ ಇದೆ. ಜಾರುಬಂಡಿಯಂತಾಗುವ ಇಲ್ಲಿನ ದಾರಿಯಲ್ಲಿ ಬಿದ್ದು ಮಕ್ಕಳು ಗಾಯ ಮಾಡಿಕೊಂಡಿದ್ದಾರೆ. ಪಕ್ಕದ ಮನೆಯವರೊಬ್ಬರು ಬಿದ್ದು, ಕಾಲು ಮುರಿದಿದೆ.ಮೆಟ್ಟಿಲು ನಿರ್ಮಿಸಿ ಆ ಓಣಿಯನ್ನಾದರೂ ಒಪ್ಪ ಓರಣ ಮಾಡಿಕೊಡಿ ಎಂದರೆ ಯಾವ ಜನಪ್ರತಿನಿಧಿಯೂ ಕಿವಿಗೆ ಹಾಕಿಕೊಳ್ಳುವುದಿಲ್ಲ' ಎಂದು ದೂರುತ್ತಾರೆ ಜ್ಯೋತಿನಗರದ ನಿವಾಸಿ ರೇಖಾ.



ಮಂಗಳೂರು ಹೊರವಲಯದ ಕಾವೂರಿನ ಬಳಿಯ ಜ್ಯೋತಿನಗರದಲ್ಲಿ ವಲಸೆ ಕಾರ್ಮಿಕರ ಮನೆಗಳಿರುವ ಪ್ರದೇಶದಲ್ಲಿ ಓಣಿಯಂತಿರುವ ದಾರಿ
ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

'ದುಡಿಮೆ ಕಮ್ಮಿ- ಖರ್ಚೇ ಜಾಸ್ತಿ'

'ಏಳೆಂಟು ವರ್ಷಗಳ ಹಿಂದೆ ಇಲ್ಲಿ ದುಡಿದ ದುಡ್ಡಿನಲ್ಲಿ ಸ್ವಲ್ಪವಾದರೂ ಉಳಿಸಲು ಸಾಧ್ಯವಾಗುತ್ತಿತ್ತು. ಈಗ ಜೀವನ ದುಬಾರಿಯಾಗಿದೆ. ನಮ್ಮ ಪಗಾರ ಅದಕ್ಕೆ ತಕ್ಕಂತೆ ಜಾಸ್ತಿಯಾಗಿಲ್ಲ. ಬದುಕು ಸಾಗಿಸುವುದೇ ಕಷ್ಟವಾಗಿದೆ' ಎನ್ನುತ್ತಾರೆ ಕಲಬುರಗಿಯಿಂದ ಬಂದು ನಗರದಲ್ಲಿ ನೆಲೆಸಿರುವ ಹಮಾಲಿ ಕಾರ್ಮಿಕ ಶರಣಪ್ಪ.

'ಊರ ಜಾತ್ರೆಗೆ, ಯುಗಾದಿ, ದೀಪಾವಳಿ, ಸಂಕ್ರಾಂತಿ, ಪಂಚಮಿ ಸೇರಿ ವರ್ಷದಲ್ಲಿ ನಾಲ್ಕೈದು ಸಲ ಹಬ್ಬಕ್ಕೆ ಊರಿಗೆ ಹೋಗಬೇಕಾಗುತ್ತದೆ. ಹಬ್ಬಗಳ ಸಂದರ್ಭದಲ್ಲಿ ಬಸ್ ಟಿಕೆಟ್ ದರ ಜಾಸ್ತಿ ಮಾಡುತ್ತಾರೆ. ಕುಟುಂಬ ಸಮೇತ ಊರಿಗೆ ಹೋಗಿಬರಲು ಬಸ್ ಟಿಕೆಟ್‌ಗೆ ₹ 10 ಸಾವಿರಕ್ಕೂ ಹೆಚ್ಚು ಹಣ ಬೇಕಾಗುತ್ತದೆ' ಎಂದು ಅವರು ತಿಳಿಸಿದರು.


> **ನಮಗೆ ಕುಡಿಯುವ ನೀರು ಹಾಗೂ ವಿದ್ಯುತ್ ಉಚಿತವಾಗಿ ಸಿಗುವಂತೆ ಮಾಡಿದರೆ ಆರ್ಥಿಕ ಹೊರೆ ಸ್ವಲ್ಪ ಕಡಿಮೆಯಾಗುತ್ತದೆ. ದುಡಿಮೆಯಲ್ಲಿ ಸ್ವಲ್ಪ ಉಳಿತಾಯ ಮಾಡಬಹುದು**
> **ಬಸವರಾಜ,** ವಲಸೆ ಕಾರ್ಮಿಕ (ಕುಷ್ಟಗಿ)


> **ವಲಸೆ ಕಾರ್ಮಿಕರಿಗೆ ಜಾತಿ, ಧರ್ಮದ ಭೇದವಿಲ್ಲ. ವಿವಿಧ ಜಾತಿ, ಧರ್ಮದವರೂ ಒಟ್ಟಾಗಿ ಬಾಳುತ್ತಿದ್ದೇವೆ. ನಮಗೆ ದುಡಿಮೆಯೇ ದೇವರು. ಬೆವರಿಗೆ ತಕ್ಕ ಪ್ರತಿಫಲ ಸಿಗುತ್ತಿಲ್ಲ ಎಂಬುದೇ ಬೇಸರ**
> **ಹೇಮಯ್ಯ ಹಿರೇಮಠ,** ವಲಸೆ ಕಾರ್ಮಿಕ

ಪ್ರಜಾ ಪತ್ರ

ಅವಾಸ್ತವಿಕ ಭರವಸೆಗಳಿಗೆ ಮಾರುಹೋಗದಿರಿ


ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ನೀಡುವ ಅವಾಸ್ತವಿಕ ಭರವಸೆಗಳಿಗೆ ಮಾರುಹೋಗದಿರಿ. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗೆ ಸಂವಿಧಾನದ ಬಗ್ಗೆ ತಿಳಿವಳಿಕೆ ಇರಬೇಕು. ನಮ್ಮ ಮತವನ್ನು ಹಣ, ಹೆಂಡಕ್ಕೆ ಮಾರಿಕೊಳ್ಳಬಾರದು. ರಾಜಕೀಯ ಪಕ್ಷಗಳು ಮತ್ತು ಮುಖಂಡರು ಮತಗಳನ್ನು ಸೆಳೆಯುವ ಉದ್ದೇಶದಿಂದ ನಾನಾ ರೀತಿಯ ಪ್ರಚಾರ ಮತ್ತು ಭರವಸೆಯನ್ನು ನೀಡುತ್ತಾರೆ. ಆದರೆ, ನಮಗೆ ನೀಡುವ ಭರವಸೆಗಳಲ್ಲಿ ಎಷ್ಟರ ಮಟ್ಟಿಗೆ ಈಡೇರಿಸಲಾಗುತ್ತದೆ ಎಂಬುದನ್ನು ನೋಡಿಕೊಂಡು ಮತವನ್ನು ಚಲಾಯಿಸಬೇಕು.

ಮೇಧಿನಿ, ಬೆಂಗಳೂರು

ಭರವಸೆ ಈಡೇರಿಸುವ ನಾಯಕನನ್ನು ಆಯ್ಕೆ ಮಾಡಿ


ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳಿಂದ ಆಯ್ಕೆಯಾಗುವ ಶಾಸಕರು, ಚುನಾವಣೆಯ ಮುಂಚಿತವಾಗಿ ಜನರಿಗೆ ನೀಡುವ ಭರವಸೆಗಳನ್ನು ಈಡೇರಿಸಬೇಕು. ಗ್ರಾಮೀಣ ಭಾಗದ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಚುನಾವಣೆ ಸಂದರ್ಭದಲ್ಲಿ ಹೇಳಿದಂತೆ ಗೆದ್ದು ಬಂದ ನಂತರ ನಡೆದುಕೊಳ್ಳುವ ಅಭ್ಯರ್ಥಿಗೆ ಮತ ನೀಡಬೇಕು. ಯಾರು ಆಸೆ- ಆಮಿಷಗಳಿಗೆ ಬಲಿಯಾಗದೇ, ನಿರುದ್ಯೋಗ ಸಮಸ್ಯೆ ಹೋಗಲಾಡಿಸುವ, ಸೃಜನಶೀಲ, ನಿಸ್ವಾರ್ಥ ಸೇವೆ ಮಾಡುವ ನಾಯಕನನ್ನು ಆಯ್ಕೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಧರ್ಮ, ಜಾತಿ, ಹಣ, ಹೆಂಡಕ್ಕೆ ಒಳಗಾಗದೇ ಪ್ರತಿಯೊಬ್ಬರು ಮತ ಚಲಾಯಿಸುವ ಮೂಲಕ ಒಳ್ಳೆಯ ಜನಪ್ರತಿನಿಧಿಯನ್ನು ಆಯ್ಕೆ ಮಾಡೋಣ.

ಬಿ. ಎಸ್. ಮುಳ್ಳೂರ, ಹಲಗತ್ತಿ, ರಾಮದುರ್ಗ, ಬೆಳಗಾವಿ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ನಗರ ವಲಸಿಗರ ಹುಡುಕುತ್ತಿರುವ 'ಸರ್ಚ್ ಟೀಂ'!

• ರಾಜೇಂದ್ರ ಹೆಗಡೆ

ಶಿರಸಿ: ಉದ್ಯೋಗಕ್ಕಾಗಿ ಊರು ತೊರೆದವರನ್ನು ಈಗ 'ಸರ್ಚ್ ಟೀಂ' ಸದಸ್ಯರು ಹುಡುಕುತ್ತಿದ್ದಾರೆ. ಕ್ಷೇತ್ರದ ಪ್ರತಿ ಮನೆಯ ಕದ ಬಡಿದು ಮತದಾರರ ಮಾಹಿತಿ ಸಂಗ್ರಹಿಸುವಲ್ಲಿ ವಿವಿಧ ಪಕ್ಷಗಳ ಕಾರ್ಯಕರ್ತರೂ ನಿರತರಾಗಿದ್ದಾರೆ!

2018ರ ವಿಧಾನಸಭೆ ಚುನಾವಣೆ ವೇಳೆ ಉತ್ತರ ಕನ್ನಡ ಜಿಲ್ಲೆಯ 6 ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ 15,300ಕ್ಕೂ ಹೆಚ್ಚು ಜನರು ಉದ್ಯೋಗದ ಕಾರಣದಿಂದಾಗಿ ಹೊರ ಪ್ರದೇಶದಲ್ಲಿ ನೆಲೆಸಿರುವುದನ್ನು ಪಕ್ಷದ ಕಾರ್ಯಕರ್ತರು ಗುರುತಿಸಿದ್ದರು. ಐದು ವರ್ಷಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ಆ ಪ್ರಮಾಣ ಅಂದಾಜು ಶೇ 25ಕ್ಕಿಂತ ಹೆಚ್ಚಿದೆ.

ಮತದಾನದ ಹಕ್ಕು ಜಿಲ್ಲೆಯಲ್ಲಿಯೇ ಇರುವ, ಉದ್ಯೋಗಕ್ಕಾಗಿ ಜಿಲ್ಲೆಯನ್ನು ಬಿಟ್ಟು ಹೋಗಿರುವ ಮತದಾರರ ಸಂಖ್ಯೆ 19 ಸಾವಿರ ದಾಟಿದೆ ಎಂದು ವಿವಿಧ ಪಕ್ಷಗಳ ಸಮೀಕ್ಷೆಗಳು ಹೇಳುತ್ತಿವೆ. ಅಭ್ಯರ್ಥಿಗಳ ಕಣ್ಣು ಈ ನಗರ ವಲಸಿಗ ಮತದಾರರ ಮೇಲಿದೆ.

ಇವರನ್ನು ಸೆಳೆಯಲು ಪಕ್ಷಗಳ ಪ್ರಮುಖರು, ಸ್ನೇಹ ಸಮ್ಮಿಲನದ ಹೆಸರಲ್ಲಿ ಅವರೆಲ್ಲರನ್ನು ಒಂದೆಡೆ ಸೇರಿಸುವ ಹಾಗೂ ಸಂಪರ್ಕ ಸಾಧಿಸುವ ಹೊಸ ತಂತ್ರ ರಚಿಸಿದ್ದಾರೆ. ಅದಕ್ಕಾಗಿಯೇ ಪಕ್ಷದ ಜಿಲ್ಲಾ ಪ್ರಮುಖರನ್ನು ಒಳಗೊಂಡ 'ಸರ್ಚ್ ಟೀಂ' ಸಿದ್ಧವಾಗಿದೆ.

ಪ್ರಚಾರಕ್ಕೆ ಮನೆ ಮನೆಗೆ ಹೋಗುವ ಕಾರ್ಯಕರ್ತರು, ಹೊರಗೆ ಕೆಲಸ ಮಾಡುವವರ ಫೋನ್ ನಂಬರ್ ಪಡೆದು, ಬೂತ್ ಸಮಿತಿ ಮೂಲಕ ಸರ್ಚ್ ಟೀಂ ಗೆ ಮಾಹಿತಿ ನೀಡುತ್ತಿದ್ದಾರೆ.

'ಈಗಾಗಲೇ ನಗರಗಳಿಗೆ ವಲಸೆ ಹೋಗಿರುವ ಜಿಲ್ಲೆ ವ್ಯಾಪ್ತಿಯ 12 ಸಾವಿರ ಮತದಾರರ ಮಾಹಿತಿ ಪಕ್ಷದ ಬಳಿ ಇದೆ. ಉಳಿದಂತೆ ನಿತ್ಯವೂ ಹೊಸ ಸೇರ್ಪಡೆಯಾಗುತ್ತಿದೆ. ಆ ಮತದಾರರನ್ನು ಪಕ್ಷದ ಅಭ್ಯರ್ಥಿಯತ್ತ ಸೆಳೆಯಲು, ಮತದಾನದಲ್ಲಿ ಪಾಲ್ಗೊಳ್ಳಲು ಕಾರ್ಯತಂತ್ರ ಸಿದ್ಧವಾಗಿದೆ' ಎಂಬುದು ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ಸರ್ಚ್ ಟೀಂ ಮುಖ್ಯಸ್ಥರ ಮಾತು.

'ಸ್ನೇಹ ಸಮ್ಮಿಲನಕ್ಕೆ ಸ್ಥಳ ನಿಗದಿ ಮಾಡಿ, ನಿಗದಿತ ದಿನ ಕರೆಸಿ ಮನವೊಲಿಸುವ ಪ್ರಯತ್ನ ಮಾಡಲಾಗುವುದು. ಮತದಾನದ ದಿನ ಕ್ಷೇತ್ರಕ್ಕೆ ಸಾಮೂಹಿಕವಾಗಿ ಕರೆತರುವ ವ್ಯವಸ್ಥೆ ಮಾಡಲು ತಂಡ ಸಿದ್ಧವಾಗಿದೆ' ಎಂದು ಅವರು ಮಾಹಿತಿ ನೀಡಿದರು.


'ಒಂದು ನೋಟು, ಒಂದು ವೋಟು'

ಕೊಪ್ಪಳ: ಆಮ್ ಆದ್ಮಿ ಪಕ್ಷದ ಕೊಪ್ಪಳ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಂ.ಕೆ ಸಾಹೇಬ ನಾಗೇಶನಹಳ್ಳಿ ಅವರು ಚುನಾವಣಾ ಪ್ರಚಾರಕ್ಕೆ ಮತದಾರರಿಂದಲೇ ದೇಣಿಗೆ ಸಂಗ್ರಹಿಸುತ್ತಿದ್ದಾರೆ.

ತಾಲ್ಲೂಕಿನ ಬಂಡಿಹರ್ಲಾಪುರ, ಬಸಾಪುರ, ನಾರಾಯಣಪೇಟೆ, ಮಹಮ್ಮದ್ ನಗರ, ಅಗಳಕೇರಾಗಳಲ್ಲಿ ಗುರುವಾರ ಪ್ರಚಾರ ನಡೆಸಿದ ಅವರು ಮತದಾರರ ಮನೆಗಳಿಗೆ ತೆರಳಿ 'ಒಂದು ನೋಟು ಹಾಗೂ ಒಂದು ವೋಟು' ಕೊಡಿ ಎಂದು ಪ್ರಚಾರ ಮಾಡಿದರು.

ಸೆಲೆಬ್ರಿಟಿ ಮಾತು

ಪ್ರಜಾಪ್ರಭುತ್ವಕ್ಕೆ ಮತದಾನವೇ ಆಧಾರ


ಪ್ರೊ. ತೇಜಸ್ವಿ ವಿ. ಕಟ್ಟಿಮನಿ, ಕುಲಪತಿ, ಕೇಂದ್ರೀಯ ಬುಡಕಟ್ಟು ವಿ. ವಿ., ವಿಜಯನಗರಂ

ಮತದಾನ ನಮ್ಮೆಲ್ಲರ ಹಕ್ಕು. ಧರ್ಮ ಕೂಡ ಹೌದು. ನಾವು ಮತದಾನ ಮಾಡದಿದ್ದರೆ ಯಾರಿಗೂ ಬೇಡವಾದವರು ಆಯ್ಕೆ ಆಗಬಹುದು. ಮತದಾನದಿಂದ ನಮಗೆ ಹಾಗೂ ಸಮಾಜಕ್ಕೆ ಅಗತ್ಯವಿದ್ದವರು ಆಯ್ಕೆಯಾಗುತ್ತಾರೆ. ಪ್ರಜಾಪ್ರಭುತ್ವಕ್ಕೆ ಮತದಾನವೇ ಆಧಾರ. ಸಂವಿಧಾನವು ಪ್ರಜೆಗಳಿಗೆ ಮತದಾನ ಎಂಬ ದೊಡ್ಡ ಅಸ್ತ್ರ ನೀಡಿದೆ. ತಪ್ಪು ಮಾಡಿದವರನ್ನು ನಿರಾಕರಿಸಲು ಮತ್ತು ಸಮಾಜಕ್ಕೆ ಪ್ರಯೋಜನ ಆಗುವವರನ್ನು ಜನಪ್ರತಿನಿಧಿಯಾಗಿ ಆಯ್ಕೆ ಮಾಡಲು ಈ ಅಸ್ತ್ರ ಬಳಸಬೇಕು.

ಮಾತಿನೇಟು


ಶಿಸ್ತಿನ ಪಕ್ಷ, ದೇಶಭಕ್ತರ ಪಕ್ಷ ಎಂದೆಲ್ಲ ಕರೆದುಕೊಳ್ಳುವ ಬಿಜೆಪಿ ಟಿಕೆಟ್ ಹಂಚಿಕೆ ವಿಚಾರದಲ್ಲಿ ಬೂಟಾಟಿಕೆ ಪಕ್ಷ ಎಂಬುದು ಸಾಬೀತಾಗಿದೆ. ಬಿಜೆಪಿ ನಾಲ್ಕು ವರ್ಷಗಳ ಆಡಳಿತದಲ್ಲಿ ಅಭಿವೃದ್ಧಿ ಹಾಗೂ ಜನಪರ ಕಾರ್ಯಗಳನ್ನು ಮಾಡಿದ್ದರೆ ಹಾಲಿ ಶಾಸಕರಿಗೆ, ಸಚಿವರಿಗೆ, ಮಾಜಿ ಮುಖ್ಯಮಂತ್ರಿ, ಮಾಜಿ ಉಪ ಮುಖ್ಯಮಂತ್ರಿಗಳಿಗೆ ಟಿಕೆಟ್ ಕೈತಪ್ಪುವ ದುಃಸ್ಥಿತಿ ಎದುರಾಗುತ್ತಿರಲಿಲ್ಲ. ಜನರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸದ ಪರಿಣಾಮ ಚುನಾವಣೆಯಲ್ಲಿ ಹೊಸ ಮುಖಗಳನ್ನು ನಿಲ್ಲಿಸಬೇಕಾಗಿದೆ.

ಬಿ.ಕೆ.ಹರಿಪ್ರಸಾದ್, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ

ಗಾಳಿ ಮಾತು

ಚುನಾವಣೆ ಮುಗಿಯುವ ತನಕ ಕ್ಷೇತ್ರ ಬಿಡಿ!

'ನಮ್ಮ ಜತೆ ಬನ್ನಿ. ಒಂದು ವೇಳೆ ಪಕ್ಷಕ್ಕೆ ಬರದಿದ್ದರೆ ಯಾವುದೇ ಪಕ್ಷದ ಪರ ಪ್ರಚಾರ ಮಾಡುವುದು ಬೇಡ. ಕ್ಷೇತ್ರವನ್ನು ಬಿಡಿ. ಚುನಾವಣೆ ಮುಗಿಯುವವರೆಗೂ ಇತ್ತ ಸುಳಿಯಬೇಡಿ'

– ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಅನ್ಯ ಪಕ್ಷಗಳ ನಾಯಕರನ್ನು ಸೆಳೆಯಲು ಪ್ರಮುಖ ಪಕ್ಷವೊಂದು ಆರಂಭಿಸಿರುವ ಹೊಸ ವರಸೆಯಂತೆ.


ವಿಶೇಷವಾಗಿ ತಮಗೆ 'ಕೈ' ಕೊಡುವ ಮತ ಬ್ಯಾಂಕ್ ಎನಿಸಿರುವ ಸಮುದಾಯಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ಕಾರ್ಯಾಚರಣೆ ನಡೆಯುತ್ತಿದೆ. ಕುರುಬರು, ಮುಸ್ಲಿಮರು, ಕ್ರೈಸ್ತರ ಮತಗಳು ತಮಗೆ ಬರುವುದಿಲ್ಲ ಎನ್ನುವ ಭಾವನೆಯಿಂದ 'ಕ್ಷೇತ್ರ ಬಿಡಿ' ಕಾರ್ಯಾಚರಣೆ ಗುಟ್ಟಾಗಿ ನಡೆಯುತ್ತಿದೆ ಎನ್ನುವ ಗುಸುಗುಸು ಜೋರಾಗಿದೆ.

ಈ ಕಾರ್ಯಾಚರಣೆಗೆ ದೊಡ್ಡ ಪ್ರಮಾಣದಲ್ಲಿ ಹಣ ಸುರಿಯಲಾಗುತ್ತಿದೆ. ತಮ್ಮ ಪಕ್ಷ ಸೇರುತ್ತಿರುವ ನಾಯಕರಿಗೆ ಕೈ ತುಂಬಾ ಇಡುಗಂಟು ನೀಡಿ ಅದ್ದೂರಿಯಾಗಿ ಸ್ವಾಗತಿಸಲಾಗುತ್ತಿದೆ. ಈ ಸೇರ್ಪಡೆಯ ಪರ್ವ ಒಂದೆಡೆ ಜೋರಾಗಿಯೇ ನಡೆದಿದೆ. ಒಂದು ವೇಳೆ 'ನಾವು ನಿಮ್ಮ ಕಡೆ ಬರುವುದಿಲ್ಲ. ಅಲ್ಲಿಯೇ ಇರುತ್ತೇವೆ' ಎನ್ನುವ ಮುಖಂಡರಿಗೆ 'ಕ್ಷೇತ್ರ ಬಿಡಿ' ಆಫರ್ ನೀಡಲಾಗುತ್ತಿದೆ. ಕ್ಷೇತ್ರ ಬಿಡುವ ನಾಯಕರಿಗೂ ಒಳ್ಳೆಯ ಗಂಟು ದೊರೆಯುತ್ತದೆಯಂತೆ.

'₹3 ಲಕ್ಷ ಕೊಡುತ್ತೇವೆ, ನಮ್ಮ ಪಕ್ಷಕ್ಕೆ ಬನ್ನಿ ಎಂದು ಕರೆದರು. ನಾವು ಇಲ್ಲ ಎನ್ನುತ್ತಿದ್ದಂತೆಯೇ ಹಣ ಕೊಡುತ್ತೇವೆ. ನೀವು ನಮ್ಮ ಪರ ಪ್ರಚಾರಕ್ಕೆ ಬರುವುದು ಬೇಡ. ಆದರೆ ಚುನಾವಣೆ ಮುಗಿಯುವವರೆಗೂ ಕ್ಷೇತ್ರ ತೊರೆಯಿರಿ ಎಂದರು. ನಾವು ಯಾವುದಕ್ಕೂ ಒಪ್ಪಲಿಲ್ಲ' ಎನ್ನುತ್ತಾರೆ ಪ್ರಬಲ ಸಮುದಾಯದ ಮುಖಂಡರೊಬ್ಬರು.

ಕ್ಷೇತ್ರದ ಕೂಗು

• **ಕ್ಷೇತ್ರ: ಹುಬ್ಬಳ್ಳಿ– ಧಾರವಾಡ ಸೆಂಟ್ರಲ್**
• **ಶಾಸಕ: ಜಗದೀಶ ಶೆಟ್ಟರ್** (ಬಿಜೆಪಿ)


▸ ಕ್ಷೇತ್ರದಲ್ಲಿ ಕುಡಿಯುವ ನೀರಿನ ಪೂರೈಕೆ ಅಸಮರ್ಪಕವಾಗಿದೆ. ಕೆಲವು ವಾರ್ಡ್‌ಗಳಲ್ಲಿ 4 ರಿಂದ 5 ದಿನಗಳಿಗೊಮ್ಮೆ ನೀರು ಪೂರೈಕೆಯಾಗುತ್ತಿದೆ. ಕೆಲವು ವಾರ್ಡ್‌ಗಳಲ್ಲಿ 24X7 ಕುಡಿಯುವ ನೀರು ಪೂರೈಕೆ ಯೋಜನೆ ಜಾರಿಯಾಗಿದ್ದು, ಇದನ್ನು ಎಲ್ಲ ವಾರ್ಡ್‌ಗಳಿಗೆ ವಿಸ್ತರಿಸಬೇಕು. ಕ್ಷೇತ್ರದ ವಿವಿಧ ಭಾಗಗಳಲ್ಲಿ ರಕ್ಷಣಾ ಇಲಾಖೆಗೆ ಸೇರಿದ ಜಾಗವಿದ್ದು, ಇದರ ಸದ್ಬಳಕೆಯಾಗದೇ ಕಸದ ತೊಟ್ಟಿಯಾಗಿ ಪರಿಣಮಿಸಿದೆ. ಈ ಜಾಗವನ್ನು ಜಿಲ್ಲಾಡಳಿತ ಅಥವಾ ಮಹಾನಗರ ಪಾಲಿಕೆ ಮೂಲಕ ಪಡೆದು, ಕ್ರೀಡಾಂಗಣ ಸೇರಿದಂತೆ ವಿವಿಧೋದ್ದೇಶ ಸಂಕೀರ್ಣ ನಿರ್ಮಿಸಿ ಅಭಿವೃದ್ಧಿ ಕೈಗೊಳ್ಳಬೇಕು ಎನ್ನುವ ಬೇಡಿಕೆ ಇದೆ.


• **ಕ್ಷೇತ್ರ: ಹುಬ್ಬಳ್ಳಿ– ಧಾರವಾಡ ಪೂರ್ವ**
• **ಶಾಸಕ: ಪ್ರಸಾದ ಅಬ್ಬಯ್ಯ** (ಕಾಂಗ್ರೆಸ್)


▸ ಹುಬ್ಬಳ್ಳಿಯ ಬಹುತೇಕ ಹಳೇ ಪ್ರದೇಶಗಳನ್ನು ಒಳಗೊಂಡಿರುವ ಕ್ಷೇತ್ರದಲ್ಲಿ ಮೂಲಸೌಕರ್ಯಗಳ ಕೊರತೆ ಹೆಚ್ಚಾಗಿದೆ. ಇಂದಿಗೂ ಹಲವೆಡೆ ಕನಿಷ್ಠ 7–12 ದಿನಗಳಾದರೂ ಕುಡಿಯುವ ನೀರು ಬಾರದ ಸ್ಥಿತಿ ಇದೆ. ಕೂಲಿ ಕಾರ್ಮಿಕರು, ಅಲ್ಪ ಸಂಖ್ಯಾತರು, ಪರಿಶಿಷ್ಟರು ಹೆಚ್ಚಾಗಿರುವ ಕ್ಷೇತ್ರದಲ್ಲಿ ಕೊಳೆಗೇರಿ ಪ್ರದೇಶಗಳೂ ಹೆಚ್ಚಿವೆ. ಒಳ ಚರಂಡಿ, ರಸ್ತೆ, ಶೌಚಾಲಯ ಕೊರತೆ ಎದ್ದು ಕಾಣುತ್ತದೆ. ರಾಜಕಾಲುವೆಯ ಒತ್ತುವರಿ ಮಾಡಿಕೊಂಡು ಮನೆ ಕಟ್ಟಿಕೊಂಡಿರುವುದರಿಂದ, ಮಳೆ ಬಂದಾಗ ಕಾಲುವೆ ನೀರು ಮನೆಗಳಿಗೆ ನುಗ್ಗುವುದು ಸಾಮಾನ್ಯವಾಗಿದೆ. ನಗರದ ಹೊರವಲಯದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಬಡಾವಣೆಗಳಿಗೂ ಮೂಲಸೌಕರ್ಯವಿಲ್ಲ. 24X7 ಕುಡಿಯುವ ನೀರು ಯೋಜನೆ ಇನ್ನೂ ಕಾರ್ಯಗತವಾಗಿಲ್ಲ. ವಾರಕ್ಕೊಮ್ಮೆ ಬರುವ ನೀರಿನ ಜೊತೆಗೆ, ಟ್ಯಾಂಕರ್ ನೀರನ್ನೇ ಜನ ಅವಲಂಬಿಸಿದ್ದಾರೆ. ನಿರಂತರ ನೀರು, ಒಳ ಚರಂಡಿ, ಉತ್ತಮ ರಸ್ತೆ ಕ್ಷೇತ್ರದ ಜನರ ಕೂಗಾಗಿದೆ.

• **ಹುಬ್ಬಳ್ಳಿ– ಧಾರವಾಡ ಪಶ್ಚಿಮ**
• **ಶಾಸಕ: ಅರವಿಂದ ಬೆಲ್ಲದ** (ಬಿಜೆಪಿ)


▸ 2018ರ ಚುನಾವಣೆ ಹೊಸ್ತಿಲಲ್ಲಿ ತರಾತುರಿಯಲ್ಲಿ ಉದ್ಘಾಟನೆಗೊಂಡ ರಾಜೀವಗಾಂಧಿ ನಗರದ 1,072 ಮನೆಗಳುಳ್ಳ ವಸತಿ ಸಮುಚ್ಚಯಗಳು ಇಂದಿಗೂ ಹಂಚಿಕೆಯಾಗಿಲ್ಲ. ಜತೆಗೆ ಸ್ಮಾರ್ಟ್ ಸಿಟಿ ಯೋಜನೆ ಸೇರಿದಂತೆ ಅಭಿವೃದ್ಧಿ ಹುಬ್ಬಳ್ಳಿಗಷ್ಟೇ ಸೀಮಿತಗೊಳಿಸಿ ಧಾರವಾಡವನ್ನು ಕಡೆಗಣಿಸಲಾ ಗಿದ್ದು, ಪ್ರತ್ಯೇಕ ಪಾಲಿಕೆಗೆ ಬೇಡಿಕೆಯ ಹೋರಾಟಗಳು ನಡೆದಿವೆ. ಆದರೆ ಅದಕ್ಕೆ ಸರ್ಕಾರದಿಂದ ಯಾವುದೇ ಸ್ಪಂದನೆ ದೊರೆತಿಲ್ಲ.

• **ಕ್ಷೇತ್ರ: ನವಲಗುಂದ**
• **ಶಾಸಕ: ಶಂಕರ ಪಾಟೀಲ ಮುನೇನಕೊಪ್ಪ** (ಬಿಜೆಪಿ)


▸ ಕ್ಷೇತ್ರದ ಗ್ರಾಮೀಣ ಭಾಗಗಳಲ್ಲಿ ರಸ್ತೆಗಳು ತುಂಬಾ ಹದಗೆಟ್ಟಿವೆ. ನವಲಗುಂದ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ. ಶೌಚಾಲಯದ ನೀರು ತೆರೆದ ಚರಂಡಿಯಲ್ಲಿ ಹರಿಯುವುದರಿಂದ ಪಟ್ಟಣದ ತುಂಬ ದುರ್ವಾಸನೆ. ಸೂಕ್ತ ಒಳಚರಂಡಿ ವ್ಯವಸ್ಥೆ ನಿರ್ಮಿಸಬೇಕಿದೆ. ಕ್ಷೇತ್ರವು ಮಹದಾಯಿ ಯೋಜನಾ ವ್ಯಾಪ್ತಿಯೊಳಗಿದ್ದು, ಮಹದಾಯಿ ನೀರನ್ನು ಶೀಘ್ರವಾಗಿ ತರಬೇಕು. ತುಪ್ಪರಿ ಹಳ್ಳದ ನೀರನ್ನು ಬಳಸಿ ಏತ ನೀರಾವರಿ ಕೈಗೊಳ್ಳುವ ಯೋಜನೆಯನ್ನು ಪೂರ್ಣಗೊಳಿಸಬೇಕು. ಮಲಪ್ರಭಾ ಕಾಲುವೆಯ ಕೊನೆಯ ಹಳ್ಳಿಗಳಾದ ಅಮರಗೋಳ, ಗೊಬ್ಬರಗುಂಪಿ, ಬೆಳವಟಗೆ ಗ್ರಾಮಗಳ ಜಮೀನುಗಳಿಗೆ ನೀರು ಹರಿಸಬೇಕು ಎನ್ನುವುದು ರೈತರ ಬೇಡಿಕೆ.

• **ಕ್ಷೇತ್ರ: ಕುಂದಗೋಳ**
• **ಶಾಸಕಿ: ಕುಸುಮಾವತಿ ಶಿವಳ್ಳಿ** (ಕಾಂಗ್ರೆಸ್)


▸ ಜಿಲ್ಲೆಯ ಅತ್ಯಂತ ಹಿಂದುಳಿದಿರುವ ತಾಲ್ಲೂಕು ಕುಂದಗೋಳ. ಹತ್ತಿ, ಮೆಣಸಿನಕಾಯಿ, ಜೋಳದ ಜೊತೆಗೆ ಇತರ ಬೆಳೆಗಳನ್ನು ರೈತರು ಬೆಳೆಯುತ್ತಾರೆ. ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಿದೆ. ಹಲವು ಹಳ್ಳಿಗಳಲ್ಲಿ ವಾರಕ್ಕೊಮ್ಮೆ ನೀರು ಬರುತ್ತದೆ. ಹದಗೆಟ್ಟ ರಸ್ತೆಗಳು ಮತ್ತು ಚರಂಡಿಗಳಿಲ್ಲದ ಗ್ರಾಮಗಳು ಸಾಮಾನ್ಯ. ಶಾಲೆಗಳು ಮೂಲಸೌಕರ್ಯವಿಲ್ಲದೆ ಬಳಲುತ್ತಿವೆ. ಬಯಲು ಶೌಚಾಲಯ ಇಂದಿಗೂ ಜೀವಂತ. ಕ್ಷೇತ್ರದಲ್ಲಿ ಹಾದು ಹೋಗುವ ಬೆಣ್ಣೆ ಹಳ್ಳದಿಂದಾಗಿ ಪ್ರತಿ ವರ್ಷ ಹಳ್ಳದ ಅಂಚಿನ ಗ್ರಾಮಗಳು ಪ್ರವಾಹಕ್ಕೆ ಸಿಲುಕಿ ನಲುಗುತ್ತವೆ. ಕೃಷಿ ಬೆಳೆಗಳ ಮೌಲ್ಯವರ್ಧನೆ, ಮೆಣಸಿನಕಾಯಿ ಸಂಸ್ಕರಣಾ ಕೇಂದ್ರ ಸ್ಥಾಪನೆ, ಕೈಗಾರಿಕೆಗಳ ಸ್ಥಾಪನೆ ಆಗಬೇಕಿದೆ. ಬೆಣ್ಣೆಹಳ್ಳ ಪ್ರವಾಹಕ್ಕೆ ಪರಿಹಾರ ಒದಗಿಸಬೇಕಿದೆ. ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯ ಈ ಭಾಗದ ಜನರ ಪ್ರಮುಖ ಕೂಗಾಗಿದೆ.

• **ಕ್ಷೇತ್ರ: ಕಲಘಟಗಿ**
• **ಶಾಸಕ: ಸಿ.ಎಂ.ನಿಂಬಣ್ಣವರ** (ಬಿಜೆಪಿ)


▸ ಕ್ಷೇತ್ರದಲ್ಲಿರುವ ಕೆರೆಗಳ ಹೂಳು ತೆಗೆದು, ನೀರು ತುಂಬಿಸಬೇಕು ಮತ್ತು ಸಂಪೂರ್ಣ ನೀರಾವರಿ ಮಾಡಬೇಕು ಎಂಬ ಬಹುದಿನಗಳ ಬೇಡಿಕೆ ಈಡೇರಿಲ್ಲ. ತಾಲ್ಲೂಕಿನ ಜನರು ಕೆಲಸ ಅರಸಿ ಬೇರೆ ನಗರಗಳಿಗೆ ವಲಸೆ ಹೋಗುವುದು ಮುಂದುವರಿದಿದೆ. ಸ್ಥಳೀಯರಿಗೆ ಉದ್ಯೋಗ ಕಲ್ಪಿಸಲು ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಕಬ್ಬು ಬೆಳೆಗಾರರ ಅನುಕೂಲಕ್ಕಾಗಿ ಸಕ್ಕರೆ ಕಾರ್ಖಾನೆಗಳನ್ನು ಆರಂಭಿಸಬೇಕು.

• **ಧಾರವಾಡ ಗ್ರಾಮೀಣ:**
• **ಶಾಸಕ: ಅಮೃತ ದೇಸಾಯಿ** (ಬಿಜೆಪಿ)


▸ ಗ್ರಾಮೀಣ ಭಾಗದ ಬಹುತೇಕ ರಸ್ತೆಗಳು ತೀವ್ರವಾಗಿ ಹದಗೆಟ್ಟಿದ್ದು, ಅವುಗಳ ದುರಸ್ತಿ ಈವರೆಗೂ ಆಗಿಲ್ಲ. ಪ್ರತಿ ವರ್ಷ ನೆರೆ ಸೃಷ್ಟಿಸುವ ತುಪ್ಪರಿ ಹಳ್ಳಕ್ಕೆ ತಡೆಗೋಡೆ ನಿರ್ಮಿಸಿ, ಆ ನೀರನ್ನು ಬಳಸಿಕೊಳ್ಳುವ ಕುರಿತು ರಾಜ್ಯ ಸರ್ಕಾರ ಬಜೆಟ್‌ನಲ್ಲಿ ₹1,000 ಕೋಟಿ ಮೀಸಲಿಟ್ಟಿತ್ತು. ಆದರೆ ಅದರ ಕಾಮಗಾರಿ ಈವರೆಗೂ ಆಗಿಲ್ಲ.

ಶುಕ್ರವಾರ, ಏಪ್ರಿಲ್ 14, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು
ಮುಂಬೈನಲ್ಲಿ ಜಿಯೋ ಸ್ಟುಡಿಯೋಸ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಸಾನ್ಯಾ ಮಲ್ಹೋತ್ರಾ ಪಾಲ್ಗೊಂಡಿದ್ದರು




ಹಿಯರ್‌ಜ್ಯಾಪ್™
46 YEARS OF TRUST
90+ EXPERIENCE STORES PAN INDIA
CONNECTING GENERATIONS
WITH BETTER HEARING
USE COUPON CODE PHILIPS
FOR DISCOUNTS ON PHILIPS HEARING AIDS
PHILIPS
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ
ಅತ್ಯಾಧುನಿಕ ಶ್ರವಣ ಸಾಧನಗಳು ಲಭ್ಯವಿದೆ PHILIPS REXTON
ವಿಶೇಷ ರಿಯಾಯಿತಿ
0% ಡೌನ್ ಪೇಮೆಂಟ್ ಆಯ್ಕೆ
ಹೆಚ್ಚಿನ ವಾರಂಟಿ
ಮನೆಯಲ್ಲಿ ಶ್ರವಣ ಪರೀಕ್ಷೆಗಾಗಿ ಬುಕ್ ಮಾಡಿ
ನೇಮಕಾತಿಗಾಗಿ ಕರೆ ಮಾಡಿ
9659 455 455
AVAILABLE ON Google Play App Store
ಬೆಂಗಳೂರಿನಲ್ಲಿ ನಮ್ಮ ಶಾಖೆಗಳು: ಎಚ್‌ಎಸ್‌ಆರ್ ಲೇಔಟ್ • ಇಂದಿರಾ ನಗರ • ಜಯ ನಗರ
ಕಲ್ಯಾಣ ನಗರ • ನಾಗರಬಾವಿ • ಆರ್‌ಆರ್ ನಗರ • ಸದಾಶಿವ ನಗರ
ಕರ್ನಾಟಕ | ಮಹಾರಾಷ್ಟ್ರ | ಕೇರಳ | ತಮಿಳುನಾಡು | ಆಂಧ್ರ ಪ್ರದೇಶ | ತೆಲಂಗಾಣ | ಪಶ್ಚಿಮ ಬಂಗಾಳ | ಬಿಹಾರ | ಜಾರ್ಖಂಡ್

ಶುಕ್ರವಾರ, ಏಪ್ರಿಲ್ 14, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 103 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಕೆಲಕಾಲ ಚಿತ್ರರಂಗದಿಂದ ದೂರವಿದ್ದು ಅಧ್ಯಾತ್ಮಿಯಾಗಿದ್ದ ಕೋಮಲ್ ಈಗ 'ಉಂಡೆನಾಮ' ದೊಂದಿಗೆ ತೆರೆಗೆ ಮರಳಿದ್ದಾರೆ



ಆಳ-ಅಗಲ ಮತ್ತೆ ಏರುತ್ತಿದೆ ಕೋವಿಡ್
ಅತೀಕ್ ಪುತ್ರ ಅಸಾದ್, ಸಹಚರನ ಹತ್ಯೆ 10
'ಡಿಸಿಎಂ ಸ್ಥಾನ ಏಕೆ ಕಿತ್ತುಕೊಂಡಿರಿ?' 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,431 ▲	17,828 ▲	₹62,650 (ಬೆಂಗಳೂರು) ▼	₹77,900 (ಬೆಂಗಳೂರು) ▲	81.84 ▲

ರಾಹುಲ್ ಗಾಂಧಿ ಮೇಲ್ಮನವಿ: ಏ. 20ಕ್ಕೆ ಆದೇಶ

ಸೂರತ್ (ಪಿಟಿಐ): ಕ್ರಿಮಿನಲ್ ಮಾನಹಾನಿ ಮೊಕದ್ದಮೆ ಪ್ರಕರಣದಲ್ಲಿ ತಪ್ಪಿತಸ್ಥ ಎಂದು ನೀಡಿರುವ ತೀರ್ಪಿಗೆ ತಡೆಯಾಜ್ಞೆಯನ್ನು ಕೋರಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದ ಆದೇಶವನ್ನು ಇಲ್ಲಿನ ಸೆಷನ್ಸ್ ಕೋರ್ಟ್ ಏ.20ರಂದು ಪ್ರಕಟಿಸಲಿದೆ.

ಮೋದಿ ಉಪನಾಮ ಉಲ್ಲೇಖಿಸಿ ರಾಹುಲ್ ನೀಡಿದ್ದ ಹೇಳಿಕೆಗೆ ಸಂಬಂಧಿಸಿದಂತೆ ಮಾನಹಾನಿ ಪ್ರಕರಣ ದಾಖಲಾಗಿತ್ತು. ವಿಚಾರಣೆ ನಡೆಸಿದ್ದ ಕೋರ್ಟ್, ಅವರಿಗೆ ಎರಡು ವರ್ಷ ಶಿಕ್ಷೆ ವಿಧಿಸಿ ತೀರ್ಪು ನೀಡಿತ್ತು. ಆ ಆದೇಶಕ್ಕೆ ತಡೆಯಾಜ್ಞೆ ನೀಡುವಂತೆ ರಾಹುಲ್ ಮೇಲ್ಮನವಿ ಸಲ್ಲಿಸಿದ್ದರು.

ವಿಚಾರಣೆಯನ್ನು ಪೂರ್ಣಗೊಳಿಸಿರುವ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಆರ್.ಪಿ.ಮೊಗೆರಾ ಅವರು ಮೇಲ್ಮನವಿ ಅರ್ಜಿಗೆ ಸಂಬಂಧಿಸಿದ ಆದೇಶ ಪ್ರಕಟಿಸಲಿದ್ದಾರೆ.

ತೀರ್ಪನ್ನು ಪ್ರಶ್ನಿಸಿ ಮತ್ತೊಂದು ಮೇಲ್ಮನವಿಯನ್ನೂ ರಾಹುಲ್ ಸಲ್ಲಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಟಿಕೆಟ್ ಕೈತಪ್ಪಿದವರ ರೋಷಾವೇಶ • ಪಕ್ಷ ತೊರೆಯಲಿರುವ ಸವದಿ

ಬಿಜೆಪಿ: ಕಟ್ಟೆಯೊಡೆದ ಸಿಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ತನ್ನ ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆ ಮಾಡಿದ ಬಳಿಕ ಆಕಾಂಕ್ಷಿಗಳ ಆಕ್ರೋಶದ ಕಟ್ಟೆಯೊಡೆದಿದ್ದು, ರೊಚ್ಚಿಗೆದ್ದ ಅವರ ಬೆಂಬಲಿಗರು ಕೆಲವೆಡೆ ಟಯರ್‌ಗೆ, ಪಕ್ಷದ ಬಾವುಟಕ್ಕೆ ಬೆಂಕಿ ಹಚ್ಚಿ ತಮ್ಮ ಸಿಟ್ಟನ್ನು ಹೊರಹಾಕಿದ್ದಾರೆ. ಟಿಕೆಟ್ ಕೈತಪ್ಪಿದ್ದಕ್ಕೆ ನಾಯಕರ ವಿರುದ್ಧ ಆರೋಪ ಮಾಡಿರುವ ಹಾಲಿ-ಮಾಜಿ ಶಾಸಕರು ರಾಜೀನಾಮೆ ನೀಡಿ ಸ್ಪರ್ಧಾಕಣಕ್ಕೆ ಧುಮುಕಲು ಮುಂದಾಗಿದ್ದಾರೆ.

ಬಿಜೆಪಿ ಎರಡು ಕಂತಿನಲ್ಲಿ 212 ಕ್ಷೇತ್ರಗಳ ಪಟ್ಟಿ ಬಿಡುಗಡೆ ಮಾಡಿದ್ದು, ಇನ್ನೂ 12 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಬಿಡುಗಡೆಗೆ ಬಾಕಿ ಇದೆ. ಇದರಲ್ಲಿ ಕೆ.ಎಸ್. ಈಶ್ವರಪ್ಪ ಪ್ರತಿನಿಧಿಸುತ್ತಿರುವ ಶಿವಮೊಗ್ಗ ನಗರ, ಜಗದೀಶ ಶೆಟ್ಟರ್ ಪ್ರತಿನಿಧಿಸುವ ಹುಬ್ಬಳ್ಳಿ ಕೇಂದ್ರ, ವಿ.ಸೋಮಣ್ಣ ಪ್ರತಿನಿಧಿಸುವ ಗೋವಿಂದರಾಜ ನಗರ, ಅರವಿಂದ ಲಿಂಬಾವಳಿ ಪ್ರತಿನಿಧಿಸುವ ಮಹದೇವಪುರ ಕ್ಷೇತ್ರಗಳು ಪ್ರಮುಖವಾದವು.

ಮುನಿಸಿಕೊಂಡಿರುವ ಶೆಟ್ಟರ್ ಅವರು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ. ತಮಗೆ ಟಿಕೆಟ್ ನೀಡುವುದರಿಂದ ಕಿತ್ತೂರು ಕರ್ನಾಟಕ ಭಾಗದಲ್ಲಿ ಪಕ್ಷಕ್ಕೆ ಅನುಕೂಲವಾಗಲಿದೆ ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದು, ಶುಭ ಸುದ್ದಿ ಸಿಗಲಿದೆ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಕಡೆಗೆ ಹೆಜ್ಜೆ ಇಟ್ಟಿರುವ ಲಕ್ಷ್ಮಣ ಸವದಿಯವರನ್ನು ಮನವೊಲಿಸುವ ಕಾರ್ಯ ಫಲ ನೀಡಿಲ್ಲ. ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಮಾಡಿದ್ದ ಕರೆಗಳನ್ನು ಅವರು ಸ್ವೀಕರಿಸಿಲ್ಲ. ಇನ್ನು ಕೆಲವು ನಾಯಕರ ಮಾತಿಗೆ ಸೊಪ್ಪು ಹಾಕಲಿಲ್ಲ. ಬಿಜೆಪಿ ತಮ್ಮನ್ನು ಕೆಟ್ಟದಾಗಿ ನಡೆಸಿಕೊಂಡಿದೆ, ಅವಮಾನಿಸಿದೆ ಎಂದು ಹೇಳಿದ್ದಾರೆ.

ಟಿಕೆಟ್ ಕೈ ತಪ್ಪಿರುವುದರಿಂದ ಮುನಿಸಿಕೊಂಡಿರುವ ಮೂಡಿಗೆರೆ ಕ್ಷೇತ್ರದ ಶಾಸಕ ಎಂ.ಪಿ.ಕುಮಾರಸ್ವಾಮಿ ಪಕ್ಷ ಮತ್ತು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ತಮಗೆ ಟಿಕೆಟ್ ತಪ್ಪಲು ಸಿ.ಟಿ.ರವಿ ಮತ್ತು ಅವರ ಹಿಂಬಾಲಕರ ಷಡ್ಯಂತ್ರವೇ ಕಾರಣ ಎಂದು ಹರಿ ಹಾಯ್ದಿದ್ದಾರೆ. 'ಪಕ್ಷದ ಕಚೇರಿಗೆ ರಾಜೀನಾಮೆ ಪತ್ರ ತಲುಪಿಸಿದ್ದೇನೆ. ಶಾಸಕ ಸ್ಥಾನದ ರಾಜೀನಾಮೆ ಪತ್ರವನ್ನು ಸ್ಪೀಕರ್‌ಗೆ ಫ್ಯಾಕ್ಸ್ ಕಳಿಸಿದ್ದೇನೆ' ಎಂದು ತಿಳಿಸಿದ್ದಾರೆ.

4ನೇ ಪುಟ ನೋಡಿ



ಬಿಜೆಪಿ ಟಿಕೆಟ್ ಸಿಗದ ಕಾರಣ ಶಾಸಕ ನೆಹರು ಓಲೇಕಾರ ಮತ್ತು ಅವರ ಬೆಂಬಲಿಗರು ಹಾವೇರಿಯಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು

ಶಾಸಕರ ಬಂಡಾಯ ನಡೆ ಎತ್ತ?

- **ಎಂ.ಪಿ. ಕುಮಾರಸ್ವಾಮಿ** (ಮೂಡಿಗೆರೆ) ಪಕ್ಷೇತರ
- **ನೆಹರು ಓಲೇಕಾರ** ಹಾವೇರಿ (ಮೀಸಲು) ಜೆಡಿಎಸ್?
- **ಗೂಳಿಹಟ್ಟಿ ಶೇಖರ್** ಹೊಸದುರ್ಗ ಪಕ್ಷೇತರ
- **ಸಿ.ಎಂ. ನಿಂಬಣ್ಣವರ್** ಕಲಘಟಗಿ 2 ದಿನದಲ್ಲಿ ನಿರ್ಧಾರ
- **ಬಿ.ಸುಕುಮಾರ ಶೆಟ್ಟಿ** ಬೈಂದೂರು 2 ದಿನದಲ್ಲಿ ನಿರ್ಧಾರ
- **ಲಕ್ಷ್ಮಣ ಸವದಿ** ವಿಧಾನ ಪರಿಷತ್ ಸದಸ್ಯ–ಇಂದು ನಿರ್ಧಾರ
- **ಎನ್.ಆರ್. ಸಂತೋಷ್** (ಅರಸೀಕೆರೆ) ಜೆಡಿಎಸ್ ಅಥವಾ ಪಕ್ಷೇತರ (ಬಿಎಸ್‌ವೈ ಹತ್ತಿರದ ಸಂಬಂಧಿ)

ಮಾಜಿ ಶಾಸಕರ ನಡೆ?

ದೊಡ್ಡಪ್ಪಗೌಡ ಪಾಟೀಲ ನರಿಬೋಳ	ಜೇವರ್ಗಿ	ಜೆಡಿಎಸ್
ಗುರುಪಾಟೀಲ ಶಿರವಾಳ	ಶಹಾಪುರ	ಜೆಡಿಎಸ್
ಎಸ್.ಐ. ಚಿಕ್ಕನಗೌಡರ	ಕುಂದಗೋಳ	ಕಾಂಗ್ರೆಸ್
ಸುರೇಶಗೌಡ್ರ ಪಾಟೀಲ	ಬ್ಯಾಡಗಿ	ಪಕ್ಷೇತರ
ಸೊಗಡು ಶಿವಣ್ಣ	ತುಮಕೂರು	ಪಕ್ಷೇತರ
ಮಾರುತಿ ಅಷ್ಟಗಿ	ಯಮಕನಮರಡಿ	ಬಂಡಾಯ
ಎಂ.ವಿ. ನಾಗರಾಜು	ನೆಲಮಂಗಲ	ಬಂಡಾಯ

221 ಒಟ್ಟು ನಾಮಪತ್ರ ಸಲ್ಲಿಕೆ

ನಾಮಪತ್ರ ಸಲ್ಲಿಸಿದ ಪ್ರಮುಖರು

ಎಸ್.ಟಿ.ಸೋಮಶೇಖರ್ (ಬಿಜೆಪಿ)	ಯಶವಂತಪುರ
ಮುರುಗೇಶ ನಿರಾಣಿ (ಬಿಜೆಪಿ)	ಬೀಳಗಿ
ಡಾ.ಕೆ.ಸುಧಾಕರ್(ಬಿಜೆಪಿ)	ಚಿಕ್ಕಬಳ್ಳಾಪುರ
ಸಿ.ಸಿ.ಪಾಟೀಲ (ಬಿಜೆಪಿ)	ನರಗುಂದ
ರಮೇಶ ಜಾರಕಿಹೊಳಿ (ಬಿಜೆಪಿ)	ಗೋಕಾಕ
ಸುನಿಲ್ ಕುಮಾರ್ (ಬಿಜೆಪಿ)	ಕಾರ್ಕಳ
ರೂಪಕಲಾ ಎಂ. (ಕಾಂಗ್ರೆಸ್)	ಕೆಜಿಎಫ್
ಯಶವಂತರಾಯ ಗೌಡ ಪಾಟೀಲ (ಕಾಂ)	ಇಂಡಿ
ರಾಜಶೇಖರ ಪಾಟೀಲ (ಕಾಂಗ್ರೆಸ್)	ಹುಮ್ನಾಬಾದ್

ಅತೃಪ್ತರ ಕಡೆ ಜೆಡಿಎಸ್ ನೋಟ

ಬಿಜೆಪಿ, ಕಾಂಗ್ರೆಸ್ ಟಿಕೆಟ್ ಸಿಗದಿರುವ ಹಾಲಿ–ಮಾಜಿ ಶಾಸಕರು, ಆಕಾಂಕ್ಷಿಗಳನ್ನು ಸೆಳೆದು ಕಣಕ್ಕೆ ಇಳಿಸಲು ಜೆಡಿಎಸ್ ಮುಂದಾಗಿದೆ. 93 ಕ್ಷೇತ್ರಗಳ ಅಭ್ಯರ್ಥಿಗಳನ್ನಷ್ಟೇ ಅಖೈರುಗೊಳಿಸಿರುವ ಈ ಪಕ್ಷದ ನಾಯಕರು, ಗೆಲ್ಲುವ ಹುರಿಯಾಳುಗಳು ಸಿಕ್ಕರೆ, ಅವರಿಗೆ ಟಿಕೆಟ್ ನೀಡುವ ಆಲೋಚನೆಯಲ್ಲಿದ್ದಾರೆ.

ಕಾಂಗ್ರೆಸ್ ಸೇರಿದ್ದ ಕಡೂರಿನ ಮಾಜಿ ಶಾಸಕ ವೈ.ಎಸ್.ವಿ. ದತ್ತ ಅವರನ್ನು ಮರಳಿ ಜೆಡಿಎಸ್‌ಗೆ ಸೇರಿಸಿಕೊಳ್ಳುವುದಾಗಿ ಎಚ್.ಡಿ. ರೇವಣ್ಣ ಹೇಳಿದ್ದಾರೆ. ಹಾವೇರಿ ಶಾಸಕ ನೆಹರು ಓಲೇಕಾರ್ ಜೆಡಿಎಸ್‌ನತ್ತ ಮುಖ ಮಾಡಿದ್ದಾರೆ.

ಬಿಜೆಪಿ ಟಿಕೆಟ್ ಕೈತಪ್ಪಿದ ದೊಡ್ಡಪ್ಪಗೌಡ ಪಾಟೀಲ ನರಿಬೋಳ, ಗುರುಪಾಟೀಲ ಶಿರವಾಳ ಜೆಡಿಎಸ್ ಸೇರುವುದಾಗಿ ಘೋಷಿಸಿದ್ದಾರೆ. ಅರಸೀಕೆರೆಯಲ್ಲಿ ಪ್ರಬಲ ಆಕಾಂಕ್ಷಿಯಾಗಿದ್ದ ಯಡಿಯೂರಪ್ಪ ಆಪ್ತ ಎನ್.ಆರ್. ಸಂತೋಷ, ಜೆಡಿಎಸ್ ಟಿಕೆಟ್ ನಿರೀಕ್ಷೆಯಲ್ಲಿದ್ದಾರೆ.

ಕಾಂಗ್ರೆಸ್ ಟಿಕೆಟ್ ತಪ್ಪಿದ್ದರಿಂದ ಆಕ್ರೋಶಗೊಂಡಿದ್ದ ವಿಧಾನ ಪರಿಷತ್ ಮಾಜಿ ಸದಸ್ಯ ರಘು ಆಚಾರ್ ಶುಕ್ರವಾರ ಜೆಡಿಎಸ್ ಸೇರಲಿದ್ದಾರೆ.

'ಹಲವು ಶಾಸಕರು, ವಿಧಾನ ಪರಿಷತ್ ಸದಸ್ಯರು ಸಂಪರ್ಕದಲ್ಲಿದ್ದು, ಪಕ್ಷ ಸೇರಲು ಸಿದ್ಧತೆ ನಡೆಸಿದ್ದಾರೆ. ಶುಕ್ರವಾರ(ಏ.14) ಅಂತಿಮ ಪಟ್ಟಿ ಬಿಡುಗಡೆ ಮಾಡುತ್ತೇವೆ' ಎಂದು ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಮುಸ್ಲಿಮರ ಮೀಸಲಾತಿ ರದ್ದು ದೋಷಪೂರಿತ ಎಂದ 'ಸುಪ್ರೀಂ'

ಸೋಮವಾರದೊಳಗೆ ಪ್ರತಿಕ್ರಿಯೆ: ರಾಜ್ಯ ಸರ್ಕಾರಕ್ಕೆ ತಾಕೀತು

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಸ್ಲಿಮರಿಗೆ ನೀಡಿದ್ದ ಶೇ 4ರಷ್ಟು ಒಬಿಸಿ ಕೋಟಾ ಮೀಸಲಾತಿಯನ್ನು ರದ್ದುಗೊಳಿಸಿರುವ ಕರ್ನಾಟಕ ರಾಜ್ಯ ಸರ್ಕಾರದ ನಿರ್ಧಾರವು ದೋಷಪೂರಿತ, ಅಸ್ಥಿರ ಹಾಗೂ ಪ್ರಮಾದದಿಂದ ಕೂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ರಾಜ್ಯ ಸಚಿವ ಸಂಪುಟವು ಮಾರ್ಚ್ 27ರಂದು ತೆಗೆದುಕೊಂಡಿರುವ ನಿರ್ಧಾರ ಪ್ರಶ್ನಿಸಿ ಎಲ್. ಗುಲಾಮ್ ರಸೂಲ್ ಮತ್ತು ಇತರರು ಸಲ್ಲಿಸಿರುವ ಮೇಲ್ಮನವಿ ವಿಚಾರಣೆಯ ವೇಳೆ ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಬಿ.ವಿ.ನಾಗರತ್ನ ಅವರಿದ್ದ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು. ಆಗ ರಾಜ್ಯ ಸರ್ಕಾರದ ಪರವಾಗಿ, ಮಾರ್ಚ್ 27ರ ಆದೇಶದ ಆಧಾರದ ಮೇಲೆ ಯಾವುದೇ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶಾತಿ ನೀಡುವುದಿಲ್ಲ ಮತ್ತು ಯಾವುದೇ ಉದ್ಯೋಗಗಳಿಗೆ ನೇಮಕಾತಿ ಮಾಡುವುದಿಲ್ಲ ಎಂದು ಭರವಸೆ ನೀಡಲಾಯಿತು.

10ನೇ ಪುಟ ನೋಡಿ

> ಹಿಂದುಳಿದ ವರ್ಗದ ಶಾಶ್ವತ ಆಯೋಗದ ಅಂತಿಮ ವರದಿಗೆ ಕಾಯದೆ ಮಧ್ಯಂತರ ವರದಿಯ ಆಧಾರದಲ್ಲಿ ಮೀಸಲಾತಿ ಕೋಟಾವನ್ನು ರದ್ದುಪಡಿಸುವ ಅಗತ್ಯ ಏನಿತ್ತು?
>
> **ನ್ಯಾಯಪೀಠ ಪ್ರಶ್ನೆ**

> ಈಗ ಮುಸ್ಲಿಮರನ್ನು ಒಬಿಸಿ ಪಟ್ಟಿಯಿಂದ ಕೈಬಿಟ್ಟಿರುವುದು ಕಾನೂನುಬಾಹಿರ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದ ಪಟ್ಟಿಗೆ ಅವರನ್ನು ಸೇರಿಸಿರುವುದು ಕೂಡ ಕಾನೂನಿಗೆ ವಿರುದ್ಧ
>
> **ಅರ್ಜಿದಾರರ ಪರ ವಕೀಲರು**

> ಈ ಅರ್ಜಿಗೆ ಪ್ರತಿಕ್ರಿಯೆ ನೀಡಲು ಕಾಲಾವಕಾಶ ನೀಡಿ. ಇದೇನೂ ವಿಶೇಷ ಪ್ರಕರಣ ಅಲ್ಲ. ಇದರ ಆಧಾರದಲ್ಲಿ ಪ್ರವೇಶಾತಿ ನಡೆಯುತ್ತಿಲ್ಲ. ತಡೆಯಾಜ್ಞೆ ನೀಡುವ ಅಗತ್ಯ ಇಲ್ಲ.
>
> **ತುಷಾರ್ ಮೆಹ್ತಾ,** ಸಾಲಿಸಿಟರ್ ಜನರಲ್

ಬಂಡಾಯದ ಭಯ; 'ಕೈ' ಪಟ್ಟಿ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಪಟ್ಟಿ ಬಿಡುಗಡೆ ಬಳಿಕ ಬಿಜೆಪಿಯನ್ನು ಕಾಡುತ್ತಿರುವ ಬಂಡಾಯದ ಬೇಗೆಯನ್ನು ಕಂಡ ಕಾಂಗ್ರೆಸ್ ನಾಯಕರು, ತಮ್ಮ ಪಕ್ಷದ ಮೂರನೇ ಪಟ್ಟಿ ಪ್ರಕಟಿಸಲು ವಿಳಂಬ ನೀತಿ ಅನುಸರಿಸುತ್ತಿದ್ದಾರೆ.

166 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಕಾಂಗ್ರೆಸ್ ಘೋಷಿಸಿದೆ. ಪ್ರಕಟಿಸಲು ಬಾಕಿಯಿರುವ 58 ಕ್ಷೇತ್ರಗಳ ಪೈಕಿ, ಬಹುತೇಕ ಕಡೆ ಭಾರಿ ಪೈಪೋಟಿ ಎದುರಾಗಿದೆ. ಈ ಕ್ಷೇತ್ರಗಳಲ್ಲಿ ಯಾರಿಗೆ ಟಿಕೆಟ್ ನೀಡಿದರೂ ಬಂಡಾಯ ಭುಗಿಲೇಳುವ ಸಾಧ್ಯತೆಯಿದೆ ಎಂಬ ಲೆಕ್ಕಾಚಾರ ಕಾಂಗ್ರೆಸ್‌ನಲ್ಲಿ ನಡೆಯುತ್ತಿದೆ.

ಪಕ್ಷದ ಶಾಸಕರಿರುವ ನಾಲ್ಕು ಕ್ಷೇತ್ರಗಳಿಗೂ ಕಾಂಗ್ರೆಸ್ ಟಿಕೆಟ್ ಅಂತಿಮಗೊಳಿಸಿಲ್ಲ. ಲಿಂಗಸಗೂರು ಕ್ಷೇತ್ರದಿಂದ ಶಾಸಕ ಡಿ.ಎಸ್. ಹೂಲಗೇರಿ ಅವರಿಗೇ ಟಿಕೆಟ್ ನೀಡುವ ಬಗ್ಗೆ ಚರ್ಚೆ ನಡೆದಿದೆ. ಆದರೆ, ಪುಲಕೇಶಿನಗರ ಕ್ಷೇತ್ರದಿಂದ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಮತ್ತು ಹರಿಹರ ಕ್ಷೇತ್ರದ ಶಾಸಕ ರಾಮಪ್ಪ ಅವರಿಗೆ ಮತ್ತೆ ಟಿಕೆಟ್ ನೀಡುವ ವಿಚಾರದಲ್ಲಿ ಕೊನೆಯಲ್ಲಿ ತೀರ್ಮಾನ ತೆಗೆದುಕೊಳ್ಳಲು ನಾಯಕರು ನಿರ್ಧರಿಸಿದ್ದಾರೆ. ಕುಂದಗೋಳ ಕ್ಷೇತ್ರದ ಶಾಸಕಿ ಕುಸುಮಾವತಿ ಶಿವಳ್ಳಿ ಅವರನ್ನು ಬದಲಿಸುವ ಬಗ್ಗೆ ಚರ್ಚೆ ನಡೆದಿದೆ ಎಂದೂ ಮೂಲಗಳು ಹೇಳಿವೆ.

ವರುಣ ಕ್ಷೇತ್ರದ ಜೊತೆ ಕೋಲಾರದಿಂದಲೂ ಕಣಕ್ಕಿಳಿಯಲು ಸಿದ್ದರಾಮಯ್ಯ ಮುಂದಾಗಿದ್ದಾರೆ. ಆದರೆ, ಸಿದ್ದರಾಮಯ್ಯ ಅವರಿಗೆ ಎರಡು ಕ್ಷೇತ್ರಗಳಿಂದ ಟಿಕೆಟ್ ನೀಡುವ ವಿಚಾರದಲ್ಲಿ ನಾಯಕರ ಮಧ್ಯೆ ಒಮ್ಮತಾಭಿಪ್ರಾಯ ಮೂಡಿಲ್ಲ.

ಚನ್ನಪಟ್ಟಣ, ಮದ್ದೂರು, ಚಾಮರಾಜ ಕ್ಷೇತ್ರಗಳಿಗೂ ಕಾಂಗ್ರೆಸ್ ಟಿಕೆಟ್ ಘೋಷಣೆ ಆಗಿಲ್ಲ. ಚನ್ನಪಟ್ಟಣದಲ್ಲಿ ಸಿ.ಪಿ. ಯೋಗೇಶ್ವರ್ ಅವರ ನಡೆಯನ್ನು ಕಾಂಗ್ರೆಸ್ ನಾಯಕರು ಗಮನಿಸುತ್ತಿದ್ದಾರೆ. ಇಲ್ಲಿ ನಟಿ ರಮ್ಯಾ ಅವರನ್ನು ಕಣಕ್ಕಿಳಿಸುವ ಬಗ್ಗೆಯೂ ಚರ್ಚೆ ನಡೆದಿದೆ. ಮದ್ದೂರು ಕ್ಷೇತ್ರದಲ್ಲಿ ಕದಲೂರು ಉದಯ್ ಗೌಡ ಹಾಗೂ ಗುರುಚರಣ್ ನಡುವೆ ಪೈಪೋಟಿ ನಡೆಯುತ್ತಿದ್ದು, ಯಾರಿಗೆ ಟಿಕೆಟ್ ನೀಡಿದರೂ ಒಬ್ಬರು ಸಿಡಿದೇಳುವ ಸಾಧ್ಯತೆ ಇದೆ.

15ರಂದು 'ಸಪ್ತಕ' 500ನೇ ಕಾರ್ಯಕ್ರಮ

ನವದೆಹಲಿ: ಬೆಂಗಳೂರಿನ ಸಪ್ತಕ ಸಂಸ್ಥೆಯ 500ನೇ ಕಾರ್ಯಕ್ರಮ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಇದೇ 15ರಂದು ಸಂಜೆ 6 ಗಂಟೆಗೆ ನಡೆಯಲಿದೆ.

ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಅಂತರರಾಷ್ಟ್ರೀಯ ಕಾನೂನು ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಡಾ.ವೆಂಕಟಾಚಲ ಹೆಗಡೆ ಮುಖ್ಯ ಅತಿಥಿಯಾಗಿರುವರು. ಬಳಿಕ ಪಂಡಿತ್ ಜಯತೀರ್ಥ ಮೇವುಂಡಿ ಅವರಿಂದ ಗಾಯನ ಕಾರ್ಯಕ್ರಮ ಇರಲಿದೆ ಎಂದು ಸಪ್ತಕ ಸಂಸ್ಥೆಯ ಸಂಚಾಲಕ ಜಿ.ಎಸ್.ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮೂಲ್ ಪ್ರವೇಶ ತಡೆಯಲು ಕರ್ನಾಟಕ ರಕ್ಷಣಾ ವೇದಿಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ಅಮೂಲ್ ಹಾಲು ಮತ್ತು ಇತರ ಉತ್ಪನ್ನಗಳ ಪ್ರವೇಶ ತಡೆಯಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕರಿಗೆ ಗುರುವಾರ ಮನವಿ ಸಲ್ಲಿಸಿದರು.

'ಮೊದಲ ಹಂತದಲ್ಲಿ ಇ-ಕಾಮರ್ಸ್ ಮೂಲಕ ಹಾಲು ಮತ್ತು ಮೊಸರು ಮಾರಾಟ ಆರಂಭಿಸಲಾಗುವುದು. ಮುಂದಿನ ದಿನಗಳಲ್ಲಿ ರೈತರಿಂದ ನೇರವಾಗಿ ಹಾಲು ಖರೀದಿಸಿ ಗ್ರಾಹಕರಿಗೆ ಮಾರಾಟ ಮಾಡುವ ಉದ್ದೇಶವನ್ನೂ ಅಮೂಲ್ ಹೊಂದಿದೆ. ಇದನ್ನು ಅಮೂಲ್ ವ್ಯವಸ್ಥಾಪಕ ನಿರ್ದೇಶಕರೇ ಹೇಳಿದ್ದಾರೆ. ಈ ರೀತಿ ಮಾರುಕಟ್ಟೆ ವಿಸ್ತರಣೆಗೆ ಅಮೂಲ್ ಮುಂದಾದರೆ ತಡೆದುಕೊಳ್ಳುವ ಶಕ್ತಿ ಕೆಎಂಎಫ್‌ಗೆ ಇದೆಯೇ' ಎಂದು ಕರವೇ ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣಗೌಡ ಪ್ರಶ್ನಿಸಿದ್ದಾರೆ.

'ಗುಜರಾತಿನಲ್ಲಿ ಅಮೂಲ್ ಹೇಗೋ ರಾಜ್ಯದಲ್ಲಿ ನಂದಿನಿ ಹಾಗೆ. ಆದರೆ ಇಡೀ ಹಾಲಿನ ಉದ್ಯಮವನ್ನು ಕೇಂದ್ರ ಸರ್ಕಾರದ ಅಡಿಯಲ್ಲಿ ತರಲು ಕೇಂದ್ರ ಸಹಕಾರ ಇಲಾಖೆ ರಚಿಸಲಾಗಿದೆ. ಮಾತ್ರವಲ್ಲ ಅಂಬಾನಿ ರೀತಿಯ ಕಾರ್ಪೊರೇಟ್ ಉದ್ಯಮಿಗಳು ಈಗಾಗಲೇ ಅಮೂಲ್ ಜೊತೆ ನಿಕಟ ಸಂಪರ್ಕ ಸಾಧಿಸಿದ್ದಾರೆ. ನಂದಿನಿಯನ್ನು ಅಮೂಲ್ ಜತೆ ವಿಲೀನಗೊಳಿಸಿದರೆ ಕೇಂದ್ರದ ಮೂಲಕ ಕೆಎಂಎಫ್ ಕೂಡ ಅಂಬಾನಿ ಅಂತವರ ಕೈಗೆ ಹೋಗುತ್ತದೆ. ಈ ಬೆಳವಣಿಗೆ ಕುರಿತು ಕೆಎಂಎಫ್ ಅಧಿಕಾರಿಗಳಿಗೆ ಮಾಹಿತಿ ಇಲ್ಲವೇ' ಎಂದು ಕೇಳಿದ್ದಾರೆ.

'ಕೆಎಂಎಫ್ ಕನ್ನಡಿಗರ ಸಂಸ್ಥೆಯಾಗಿದ್ದು, ಕರ್ನಾಟಕದ ರೈತರು ಹಾಲು ನೀಡಿ ಪೊರೆದ ಸಂಸ್ಥೆ. ಅದು ಈಗಿರುವ ಸ್ವರೂಪದಲ್ಲೇ ಮುಂದುವರಿಯಬೇಕು. ಅಮೂಲ್ ಜತೆ ವಿಲೀನಗೊಳಿಸಲು ಮುಂದಾದರೆ ಕರ್ನಾಟಕದ ಜನತೆ ಸುಮ್ಮನಿರುವುದಿಲ್ಲ. ಜನರ ಜತೆಗೂಡಿ ಹೋರಾಟಕ್ಕೂ ಕರವೇ ಸಜ್ಜಾಗಿರುತ್ತದೆ' ಎಂದು ಎಚ್ಚರಿಸಿದ್ದಾರೆ.

ನಗರದಲ್ಲಿ ಇಂದು

ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ: ಉದ್ಘಾಟನೆ: ವಿ. ಗೋಪಾಲಗೌಡ, ಅಧ್ಯಕ್ಷತೆ: ಜಯಕರ ಎಸ್.ಎಂ., ಭಾಷಣಕಾರ: ಎಚ್. ಮೋಹನ್ ಕುಮಾರ್, ಅತಿಥಿಗಳು: ಎನ್. ಮಹೇಶ ಬಾಬು, ಸಿ. ಶ್ರೀನಿವಾಸ್, ಅಜಿತ್ ಕುಮಾರ್ ಹೆಗ್ಡೆ, ಎಚ್. ಸುಧಾಕರ್, ಎಂ. ಉದಯ್ ಕುಮಾರ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ: ಉಪಸ್ಥಿತಿ: ಎಚ್.ಬಿ. ಸಿದ್ಯಾನಾಯಕ್, ಎಸ್.ಆರ್. ರಾಜಾ ನಾಯಕ್, ಆಯೋಜನೆ: ಬಂಜಾರ ಪ್ರಗತಿಪರ ಸಂಘಟನೆಗಳ ಒಕ್ಕೂಟ, ಸ್ಥಳ: ಬಂಜಾರ ಭವನ, ಬೆಳಿಗ್ಗೆ 11

ವಿಧಾನಸಭೆ ಚುನಾವಣೆ ರಾಜಕೀಯ ಸಮಾವೇಶ: ಉದ್ಘಾಟನೆ: ಬಿ.ಎನ್. ಮಂಜುನಾಥ್, ಅತಿಥಿಗಳು: ಬಿ. ರಾಜಶೇಖರಮೂರ್ತಿ, ಸಿ.ಜಿ. ಶ್ರೀಪತಿ, ಎ.ಎಂ. ರವಿಚಂದ್ರನ್, ಲತಾ, ಅಧ್ಯಕ್ಷತೆ: ಬಸಮ್ಮ, ಉಪಸ್ಥಿತಿ: ಪಾರ್ವತಮ್ಮ, ವಿ. ಅಭಿಷೇಕ್, ಶ್ರೀರಾಮ್, ಆಯೋಜನೆ: ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ), ಸ್ಥಳ: ಜ್ಯೋತಿಬಸು ಭವನ, ಬಸವನಗುಡಿ, ಮಧ್ಯಾಹ್ನ 3ರಿಂದ

ಮಕ್ಕಳ ಬೇಸಿಗೆ ರಜೆಯ ಶಿಕ್ಷಣ ಹಾಗೂ ಮನರಂಜನಾ ಶಿಬಿರ: ಉದ್ಘಾಟನೆ: ಐ.ಎಸ್. ಪ್ರಸಾದ್, ಅಧ್ಯಕ್ಷತೆ: ಕೆ. ಮೋಹನ್ ದೇವ್ ಆಳ್ವ, ಅತಿಥಿಗಳು: ಎ. ಪ್ರಕಾಶ್, ನಾಗರಾಜ ಉಪಾಧ್ಯಾಯ ಬಿ., ಆಯೋಜನೆ ಮತ್ತು ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಸಂಜೆ 4

ಅಂಬೇಡ್ಕರ ಜಯಂತಿ: ಉದ್ಘಾಟನೆ: ಶ್ರೀಪಾದ್ ಎ., ಅಧ್ಯಕ್ಷತೆ: ಕೇಶವ ಕುಮಾರ್ ಎನ್., ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಬಸವರಾಜು ಬಿ.ವಿ., ತ್ರಿವೇಣಿ, 'ಅಂಬೇಡ್ಕರ್ ಮತ್ತು ಬಸವಣ್ಣನ ಚಿಂತನೆ' ಕುರಿತು ಉಪನ್ಯಾಸ: ಕೆ.ಎಸ್. ನಾಗರಾಜ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ, ಸಂಜೆ 5.30

ಶ್ರೀರಾಮಕೃಷ್ಣ ಸಂಗೀತ ಸೌರಭ: ಹಿಂದೂಸ್ತಾನಿ ಶಾಸ್ತ್ರೀಯ ಬಾನ್ಸುರಿ: ರವಿಶಂಕರ ಮಿಶ್ರಾ, ತಬಲಾ: ಗುರುಮೂರ್ತಿ ವೈದ್ಯ, ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ: ಸಂಪಗೋಡು ಎಸ್. ವಿಘ್ನರಾಜ, ಪಿಟೀಲು: ಜ್ಯೋತ್ಸ್ನಾ ಶ್ರೀಕಾಂತ್, ಮೃದಂಗ: ಎನ್. ಜಿ. ರವಿ, ಮೋರ್ಚಿಂಗ: ಬಿ. ರಾಜಶೇಖರ್, ಆಯೋಜನೆ ಮತ್ತು ಸ್ಥಳ: ಸ್ವಾಮಿ ವಿವೇಕಾನಂದ ಸಭಾಂಗಣ, ರಾಮಕೃಷ್ಣ ಮಠ, ಬಸವನಗುಡಿ, ಸಂಜೆ 6ರಿಂದ

ದೊಡ್ಡರಂಗೇಗೌಡ ಅವರ 'ನೀಳ್ಗವಿತೆಗಳು' ಮತ್ತು 'ಸಮಕಾಲೀನ ಸಾಹಿತ್ಯ' ಪುಸ್ತಕಗಳ ಬಿಡುಗಡೆ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ಎಂ.ಸಿ. ಪೂಣಚ್ಚ, ಉಪಸ್ಥಿತಿ: ದೊಡ್ಡರಂಗೇಗೌಡ, ಸಾಧಕರಿಗೆ ಸನ್ಮಾನ: ಆರ್.ಎಸ್. ಗಣೇಶ್ ನಾರಾಯಣ್, ಕೆ. ರಾಮಚಂದ್ರ, ಆಯೋಜನೆ: ವಿದ್ಯಾರಣ್ಯಪುರ ಹಿರಿಯ ನಾಗರಿಕರ ವೇದಿಕೆ, ಸ್ಥಳ: ವಿದ್ಯಾರಣ್ಯಪುರ ಹಿರಿಯ ನಾಗರಿಕರ ವೇದಿಕೆ ಸಭಾಂಗಣ, ವಿದ್ಯಾರಣ್ಯಪುರ, ಸಂಜೆ 6



ದೊಡ್ಡರಂಗೇಗೌಡ

ರಾಮೋತ್ಸವ ವಿಶೇಷ

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಗಾಯನ: ಮುದ್ದು ಮೋಹನ್, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ತಬಲಾ: ವಿಶ್ವನಾಥ್ ನಾಕೋಡ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ



ಮುದ್ದು ಮೋಹನ್

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ವರದಾ ಕುಲಕರ್ಣಿ, ಗಾಯನ: ಎಸ್. ಐಶ್ವರ್ಯ, ಎಸ್. ಸೌಂದರ್ಯ, ಪಿಟೀಲು: ವಿಶ್ವಜಿತ್ ಮತ್ತೂರು, ಮೃದಂಗ: ಫಣೀಂದ್ರ ಭಾಸ್ಕರ್, ಘಟ: ಸುಮನಾ ಚಂದ್ರಶೇಖರ್, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15ರಿಂದ

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಎಸ್. ಸಿ. ಶರ್ಮಾ, ಪಿಟೀಲು: ಅಚ್ಯುತ್ ರಾವ್, ಮೃದಂಗ: ಚೆಲುವರಾಜು, ಘಟ: ಎಸ್.ಎನ್. ನಾರಾಯಣಮೂರ್ತಿ, ಖಂಜೀರಾ: ಮುಕುಂದ್, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

'ಅಂಬೇಡ್ಕರ ಹಬ್ಬ' ಪ್ರಶಸ್ತಿ ಪ್ರದಾನ: ಪಿ. ಕೋದಂಡರಾಮಯ್ಯ, ಅತಿಥಿ: ಮುಜಾಫರ್ ಅಸ್ಸಾದಿ, ಅಧ್ಯಕ್ಷತೆ: ಎಸ್. ಮರಿಸ್ವಾಮಿ, 'ಬೋಧಿವೃಕ್ಷ' ಪ್ರಶಸ್ತಿ ಪುರಸ್ಕೃತರು: ರವಿವರ್ಮ ಕುಮಾರ್, 'ಬೋಧಿವರ್ಧನ' ಪ್ರಶಸ್ತಿ ಪುರಸ್ಕೃತರು: ಮುನಿಸ್ವಾಮಿ ಎನ್., ಜಿ. ಮಹಾಂತೇಶ್, ಬೀಬಿಜಾನ್ ಹಳೇಮನಿ, ಆಯೋಜನೆ: ಸ್ಫೂರ್ತಿಧಾಮ, ಸ್ಥಳ: ಸ್ಫೂರ್ತಿಧಾಮ, ಅಂಜನಾನಗರ, ಮಾಗಡಿರಸ್ತೆ, ಸಂಜೆ 6

ನೃತ್ಯ ಉತ್ಸವ: ಒಡಿಸ್ಸಿ ನೃತ್ಯ: ಲಿಂಗರಾಜ್ ಪ್ರಧಾನ್, ಭರತನಾಟ್ಯ ಪ್ರದರ್ಶನ: ಶೋಭಾ ಶಶಿಕುಮಾರ್, ಆಯೋಜನೆ: ಎಂ.ಇ.ಎಸ್. ಕಲಾವೇದಿ, ಸ್ಥಳ: ಎಂ.ಇ.ಎಸ್. ಸಭಾಂಗಣ, ಮಲ್ಲೇಶ್ವರ, ಸಂಜೆ 6.15ರಿಂದ

ಮೀರಾ ಅಯ್ಯರ್ ಅವರ 'ಎ ಗಾರ್ಡನರ್ ಆ್ಯಂಡ್ ಎ ಜಂಟಲ್‌ಮ್ಯಾನ್' ಪುಸ್ತಕ ಬಿಡುಗಡೆ: ಉಪಸ್ಥಿತಿ: ಮೀರಾ ಅಯ್ಯರ್, ಗಣೇಶ ಶಂಕರ್ ರಾಜ್, ಸ್ಥಳ: ಬೆಂಗಳೂರು ಅಂತರ ರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30ರಿಂದ

ಹರಿದಾಸ ಮಂಜರಿ: ಗಾಯನ: ಪೂರ್ಣಿಮಾ ಕುಲಕರ್ಣಿ, ಆಯೋಜನೆ ಮತ್ತು ಸ್ಥಳ: ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 6.30



ಭೂಮಿಕಾ ಕ್ಲಬ್

‘ಭೂಮಿಕಾ ಕ್ಲಬ್’ ಕಾರ್ಯಕ್ರಮ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ನ ‘ಭೂಮಿಕಾ ಕ್ಲಬ್’ ವೇದಿಕೆ, ಇದೇ 15ರಂದು ಮಧ್ಯಾಹ್ನ 2.30ಕ್ಕೆ ಸಮರ್ಥ ಮಹಿಳೆ, ಸಶಕ್ತ ಜಗತ್ತು! ಕಾರ್ಯಕ್ರಮ ಹಮ್ಮಿಕೊಂಡಿದೆ.


ಖುಷಿ ರವಿ

ಎವಿಆರ್ ಸ್ವರ್ಣ ಮಹಲ್ ಜ್ಯೂವೆಲರ್ಸ್ ಮತ್ತು ಹಟ್ಟಿ ಕಾಫಿ ಸಹಯೋಗದಲ್ಲಿ, ನಗರದ ಕೋರಮಂಗಲದ 6ನೇ ಬ್ಲಾಕ್‌ನ 6ನೇ ಅಡ್ಡರಸ್ತೆಯಲ್ಲಿರುವ ಕೋರಮಂಗಲ ಕ್ಲಬ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ.

ನಟಿ ಖುಷಿ ರವಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ದಿವ್ಯಾ ರಾಮಚಂದ್ರ ಅವರ ಸಂಗೀತ ಕಛೇರಿ ನಡೆಯಲಿದ್ದು, ಕಲಾಕದಂಬ ಆರ್ಟ್ಸ್ ಸೆಂಟರ್‌ನ ನಿರ್ದೇಶಕ ಡಾ. ರಾಧಾಕೃಷ್ಣ ಉರಾಳ ಅವರ ತಂಡ ಯಕ್ಷಗಾನ ಪ್ರದರ್ಶಿಸಲಿದೆ.

‘ಆಭರಣ ವಿನ್ಯಾಸ’ದ ಬಗ್ಗೆ ಪಲ್ಲವಿ ಪೋಲೆ ಮಾತನಾಡಲಿದ್ದಾರೆ. ‘ಮಹಿಳೆಯರ ಉದ್ಯಮಶೀಲತೆ’ ಎನ್ನುವ ಸಂವಾದ ಕಾರ್ಯಕ್ರಮದಲ್ಲಿ ‘ಯುವರ್ ಸ್ಟೋರಿ’ ಸಂಸ್ಥಾಪಕಿ ಶ್ರದ್ಧಾ ಶರ್ಮಾ, ‘ಸಮೋಸಾ ಪಾರ್ಟಿ’ ಸಹ ಸಂಸ್ಥಾಪಕಿ ದೀಕ್ಷಾ ಪಾಂಡೆ, ದಿ ರಾಮೇಶ್ವರಂ ಕೆಫೆ ಸಹ ಸಂಸ್ಥಾಪಕಿ ದಿವ್ಯಾ ರಾಘವೇಂದ್ರ ರಾವ್ ಅವರು ಭಾಗವಹಿಸಲಿದ್ದು, ಸುಚರಿತಾ ಈಶ್ವರ್ ನಿರ್ವಹಣೆ ಮಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಹೆಸರು ನೋಂದಾಯಿಸಿದವರಿಗೆ ಮಾತ್ರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಇದೆ ಎಂದು ಪ್ರಕಟಣೆ ತಿಳಿಸಿದೆ.

ನೋಂದಣಿಗೆ: bit.ly/BhumikaClubApr15





ಪಿಇಎಸ್: ‘ಆತ್ಮತೃಷಾ’ ಸಾಂಸ್ಕೃತಿಕ ಹಬ್ಬಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯ ಹಮ್ಮಿಕೊಂಡಿರುವ ‘ಆತ್ಮತೃಷಾ’ ವಾರ್ಷಿಕ ತಾಂತ್ರಿಕ-ಸಾಂಸ್ಕೃತಿಕ ಹಬ್ಬಕ್ಕೆ ನಗರದಲ್ಲಿ ಗುರುವಾರ ಚಾಲನೆ ನೀಡಲಾಯಿತು. ನಾಲ್ಕು ದಿನಗಳ ಈ ಹಬ್ಬದಲ್ಲಿ ದೇಶದ 50 ಶಿಕ್ಷಣ ಸಂಸ್ಥೆಗಳ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.

ಕಾರ್ಯಕ್ರಮವನ್ನು ಉದ್ಘಾಟಿಸಿದ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ, ‘ಸಾಮಾನ್ಯವಾಗಿ ತಾಂತ್ರಿಕ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿಗಳು ಇಂಗ್ಲಿಷ್ ಹಾಗೂ ಪಾಶ್ಚಾತ್ಯ ಸಂಸ್ಕೃತಿಗೆ ಒತ್ತು ಕೊಡುತ್ತಾರೆ. ಆದರೆ, ನಮ್ಮಲ್ಲಿ ಭಿನ್ನವಾದ ವಾತಾವರಣವಿದ್ದು, ಇಲ್ಲಿನ ಕಲೆ ಹಾಗೂ ಸಂಸ್ಕೃತಿಗೆ ಆದ್ಯತೆ ನೀಡಲಾಗುತ್ತಿದೆ. ಈಗಿನ ವಿದ್ಯಾರ್ಥಿಗಳಲ್ಲಿ ಹಿಂದಿನ ತಲೆಮಾರಿನವರಿಗಿಂತ ಹೆಚ್ಚು ಪ್ರತಿಭೆಯಿದೆ. ಅದನ್ನು ಹುಡುಕಿ, ಪ್ರೋತ್ಸಾಹಿಸುವುದು ಶಿಕ್ಷಕರ ಕರ್ತವ್ಯ’ ಎಂದು ಹೇಳಿದರು.


‘ಆತ್ಮತೃಷಾ’ ವಾರ್ಷಿಕ ತಾಂತ್ರಿಕ –ಸಾಂಸ್ಕೃತಿಕ ಹಬ್ಬಕ್ಕೆ ಎಂ.ಆರ್. ದೊರೆಸ್ವಾಮಿ ಚಾಲನೆ ನೀಡಿದರು. ವೈಜಯಂತಿ ಕಾಶಿ, ಇತಿಹಾಸಕಾರ ಧರ್ಮೇಂದ್ರ ಕುಮಾರ್ ಹಾಗೂ ವಿ. ಕೃಷ್ಣ ಇದ್ದಾರೆ

ಕಲಾವಿದೆ ವೈಜಯಂತಿ ಕಾಶಿ, ‘ಪ್ರತಿಯೊಬ್ಬ ಮನುಷ್ಯನಿಗೂ ತನ್ನನ್ನು ಗುರುತಿಸಿಕೊಳ್ಳಬೇಕೆಂಬ ಬಯಕೆ ಇರುತ್ತದೆ. ಪ್ರತಿಭೆಗೆ ಸೂಕ್ತ ವೇದಿಕೆ ಕಲ್ಪಿಸುವುದು ಮುಖ್ಯ’ ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ವಿದ್ಯಾರ್ಥಿ ವ್ಯವಹಾರಗಳ ಡೀನ್ ವಿ. ಕೃಷ್ಣ ‘ತಾಂತ್ರಿಕ-ಸಾಂಸ್ಕೃತಿಕ ಹಬ್ಬಕ್ಕೆ ದೇಶದ ವಿವಿಧೆಡೆಯಿಂದ ವಿದ್ಯಾರ್ಥಿಗಳು ಬಂದಿದ್ದಾರೆ. ಭಾನುವಾರದವರೆಗೂ ಈ ಕಾರ್ಯಕ್ರಮ ನಡೆಯುತ್ತದೆ’ ಎಂದರು. ಕನ್ನಡ ಹಬ್ಬದ ಭಾಗವಾಗಿ ನಡೆದ ‘ಅಪ್ಪು ನೆನಪು’ ಕಾರ್ಯಕ್ರಮ ನೆರದಿದ್ದವರನ್ನು ಭಾವುಕಗೊಳಿಸಿತು. ವಿಶ್ವವಿದ್ಯಾಲಯದ ಕುಲಸಚಿವ ಕೆ.ಎಸ್. ಶ್ರೀಧರ್, ವಿವಿಧ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಕರಾವಳಿಯಲ್ಲಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿಯ ಎಲ್ಲ ಜಿಲ್ಲೆಗಳಲ್ಲಿ ಒಂದೆರಡು ಕಡೆ ಶುಕ್ರವಾರ ಹಾಗೂ ಶನಿವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ಬೆಳಗಾವಿ, ಗದಗ, ಹಾವೇರಿ, ಧಾರವಾಡ, ಬಾಗಲಕೋಟೆ, ಕಲಬುರಗಿ, ವಿಜಯಪುರ ಹಾಗೂ ದಕ್ಷಿಣ ಒಳನಾಡಿನ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಯ ಒಂದೆರಡು ಕಡೆ ಮಳೆಯಾಗುವ ಸಾಧ್ಯತೆ ಇರಲಿದೆ. ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ ಎಂದು ಇಲಾಖೆ ಹೇಳಿದೆ.

ರಾಜ್ಯದಲ್ಲಿ ಗುರುವಾರ ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (40.9 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ.



ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

CONNECT ಕ್ಲಾಸಿಫೈಡ್ಸ್

PUBLIC NOTICE

PUBLIC NOTICE

We are investigating title to the immovable properties fully mentioned and described in the Item No 1 and Item No 2 of the Schedule hereunder (collectively the "Schedule Property"), under instructions from our Clients who intend to enter into definitive documents with the owners to develop the said property.

Madhura Ventures, (previously known as Sumukha Ventures) a partnership firm registered under the Indian Partnership Act, 1932, having its principal place of business at No.13 (Old No.370), 16th Main Road, 4th 'T' Block, Jayanagar, Bangalore 560 041. represented by its partners (i) Mr. V S Chandrashekar, Son of late Mr V S Kumar, residing at #12, 24th Main Road, 1st Phase, J P Nagar, Bangalore 560 078 and Mr. Akhilesh Vadlamudi Chandrashekar S/o Sri. V S Chandrashekar residing at #12, 24th Main Road, 1st Phase, J P Nagar, Bangalore – 560 078 ("Owner") has represented itself as the sole and absolute owner of the parcels comprising the Schedule Property, having good clear marketable, right, title and interest therein. The Owner has further represented that there are no other person/s having any right or claim over the Schedule Property. The Owner has further represented that it has not entered any Agreements/ Memorandum of Understanding etc., nor mortgaged, created any, right, interest, lien or encumbered the Schedule Property or any part thereof in any manner with any person/s. Any person/s having objection/s or claims, shall with documentary evidence lodge their objection/s or claims within 15 (fifteen) days from the date of this Notice with the Undersigned, failing which, my client shall proceed to conclude the proposed transaction.

SCHEDULE

Item No 1:
ALL THAT piece and parcel of immovable property being vacant land bearing Survey No 61/3, measuring 1 acre 4 guntas, situated at Vajarahalli Village, Uttarahalli Hobli, Bangalore South Taluk, Bangalore Urban District, converted for non-agricultural residential purpose vide order of the Deputy Commissioner bearing No B.Dis.ALN.SR(S) 203/88-89 dated 22/02/1989, currently bearing BBMP khata No 802/61/3, Hemmigepura Ward No 198, Vajarahalli, Kenderi, Bengaluru and bounded as follows:
East by: Kanakapura Main Road
West by: Land belonging to Mr Krishnappa North by : Property bearing Survey No 61/2 South by: Property belonging to Mr Vajrappa

Item No 2:
ALL THAT piece and parcel of immovable property being vacant land bearing Survey No 61/2, measuring 5 guntas, situated at Vajarahalli Village, Uttarahalli Hobli, Bangalore South Taluk, Bangalore Urban District, converted for non-agricultural residential purpose vide order of the Deputy Commissioner bearing No ALN.SU/SR(KA) 92/15-16 dated 28/03/2017, currently bearing BBMP khata No 497/61/2, Hemmigepura Ward No 198, Vajarahalli, Kenderi, Bengaluru and bounded as follows: East by :Kanakapura Bangalore Main Road West by : Mr Krishnappa's land bearing Survey No 63 North by : Private Property bearing Survey No 61/2 belonging to Mr Kishore South by : Property bearing Survey No 61/3

Ms. Rashmi Deshpande,
Advocate
Senior Partner
Krishnamurty & Co
4th Floor, Prestige Takt,
No.23, Kasturba Cross Road,
Bangalore-560001.
Rashmi.deshpande@klaw.in
Place: Bengaluru
Date: 13-04-2023

PUBLIC NOTICE

This notice is issued on behalf of our client to bring to the notice of the general public that the original registered deeds detailed below:
1) Sale Deed dated 02.03.1975, regd as doc No.5442/1974-75 of Book I, Volume 1701 at Pages 199-204 for Sy. No.18/1A & 18/1B.
2) Sale Deed dated 28.12.1980, regd as doc No.2911/1980-81 of Book I, Volume 1837 at Pages 245-247 for Sy. No. 30/8.
3) Sale Deed dated 30.11.1975, regd as doc No.3265/1975-76 of Book I, Volume 1730 at pages 179-182 for Sy. No. 30/10.
4) Sale Deed dated 21.12.1936, regd as doc No.1294/1936-37 of Book I, Volume 503 at pages 207-208 for Sy. No. 27/2.
5) Sale Deed dated 05.05.1942, regd as doc No. 1341/1942-43 of Book I, Volume 613 at pages 39-41 for Sy. No. 27/2, Sl No.1 to 5 are registered in the office of Sub Registrar, Magadi., are lost.
If any person/s, firm, company, institution or organization has any claim are holding the afore mentioned document, they shall return the same or contact the undersigned in writing within 7 days from the date of this notice failing which it will be presumed that there are no claims.

SCHEDULE PROPERTY
All that piece and parcel of property bearing Sy Nos.18/1A & 18/1B, 30/8, 30/10 and 27/2, situated at Honniganahatti Village, Tavarekere Hobli, Bangalore South Taluk, Bangalore District.
Raveendra T.R, Advocate
No.C.-204, House of Lords,
St.Marks Road, Bangalore-560001


REAL ESTATE SELLING

Agricultural Land Converted

Intl Airport Road

SALE 3.32 Acres Land, Behind Sobha Bangalore opposite TIDCO Apartments, Hindupur, Clear Documents. 9343510635/ 9493640270

ಪ್ರಜಾವಾಣಿ DH
Book Your Classifieds Ads
Online Log in to
dhclassifieds.com
Contact :
9886213331 : 9901641752
9845114560 : 9731810277
080 - 45557163 / 164



Agricultural Land

Out-Station

GARDEN SALE 8.3 acres near Hosakere Madhugiri Taluk, Coconut, Areca nut, Banana with drip system, fencing, Farm House. contact: 9972844441

Commercial Building

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram, Bangalore. Contact: 9663001940.

Flat

Malleshwaram

SALE 3BHK apartment 1755 sqft Renaissance Park-3, Malleshwaram West. Final price 1.85 crores 2 carparking. Contact: 9342139450

House

Mallathalli

G+3 RESIDENTIAL NEWLY BUILT HOUSE FOR SALE, NEAR MALLATHALLI, 32.6x40, EAST FACE, 9538384105 / 8073033622

Sites

Rajajinagar

FOR SALE RAJAJINAGAR 2ND STAGE, BDA OLD HOUSE, 49x30, NORTH FACING,9538384105 / 8073033622

Farm House/ Land/ Resorts

Kanakapura Road

FOR_SALE Kanakapura`Town near`City Bus-Stop 2_Acres,(33 Guntas Conversion+1.25 Acres Farm_House)with Water &_Electricity. Kumar: 9945928994.

RENTAL PROPERTIES

Accommodation Available

Commercial

RENT COMMERCIAL Shops On Main Road, Suitable for Hotel & 2BHK Flat, Kumarapark. Owner: 6303110330

JOB OPPORTUNITIES

Part-Time Jobs

EARN 30K-2L/ Month Age 35-60 VRS, Housewife, Retired People & Self Employee. Bangalore, Jayanagar: 7899493370

EXCELLENT GREAT Opportunity Work From Home Earn Unlimited From 35k-40k Part/ Full Time: 8147236252/ 9886641282

General

WANTED FOR Clerical Job in transport Company Qualification PU or B.Com`Passed Male`only Location Peenya 2nd Stage. Call:9845351200 9535218502.



Manager

We are RECRUITING for... fizikem
Managers at Bangalore & HUBLI and Medical Sales Executives for all over Karnataka.
Candidates must have prior experience in Generics, OTC & Ayurvedic Sales.
Good fluency in English, Kannada. Candidates must have 2 Wheeler.
Send your CV's to ishanpharmalabs@gmail.com
99456 12866

SENIOR FINANCE MANAGER: Leading international back-office service provider in Mangalore is looking to hire Senior Finance Manager with min. 10yrs experience, preferably in Tourism Industry. Email: hr1@royalarabian.com

Teachers/ Professors

CAMLIN ENGLISH SCHOOL 6th 'C' Main Hampinagara Vijayanagar 2nd Stage Bangalore-104. Requires TEACHERS B.Sc., B.Ed. (Maths, Science) B.A., B.Ed. (English, Kannada, Social) TCH/D.Ed., NTT, Computers, Drawings, SECURITY GUARD, ATTENDER, AYA SCHOOL BUS DRIVER. Contact immediately/ Apply: 080-23301363

WANTED EXPERIENCED, Trained graduates/ Post Graduates to teach Science, Mathematics, Social Science & English for VVS Sardar Patel high school, DHRUVADHAMA, 1st block, Rajajinagar, Bangalore 560010. Apply with full details within 5 days to the Hon Secretary. Contact 9916517712.

PERSONAL

Change of Name

I BIPINDAS PUTHUKUDDY S/o Haridasan Puthukuddy aged about 47 years Residing At #A1505, 'Nikoo Homes-2 Bhartiya city', off Thanisandra main road, Chokkanahalli, Bengaluru-560064 Changed my Name to BIPIN DAS Vide Affidavit Dated 13/04/2023 before Notary G. Dakshahini Bengaluru

I, SHIREESHA V residing at Bengaluru-91, have changed my name as SIREESHA VIYYAPU, vide affidavit dated 13/04/2023 before Notary P.C.Ramaiah, Bengaluru

Why Suffer in Pain
when you have world class treatment for all your aches and pains right here?
Your one-stop solution for all spine, and joints, along with regenerative medicine All in day-care
Insurance Accepted
Carry this Newspaper with you to get 25% off on first consultation
We also do Customized Insoles for Sports, Diabetic Foot and Foot Anomalies
Consult and get relief of your pain with simple daycare procedures.
Call for an appointment or walk-in
IPSC Dr. Swati Bhat
MBBS, MD, FIAPM, DPMCAI (Ireland)
1st Floor, 11 & 12, Bellary Road, Sahakar Nagar, Above Bata Show Room Bengaluru - 560092
Ph : 7028207222 | WhatsApp: 9311223926

I, SANGEETHA KUMARI, Residing at #353,K.R.Layout 7th`Cross,near Inchara Hotel, J.P.Nagar 6th Phase,Bangalore -560678.have changed`my name from Sangeethakumari to`Sangeetha Dubey vide`affidavit dated:12.4.2023 before`Notary A.Manjunath, Bangalore.

I, GEORGE K.J, Residing at No. 40, Jose Mary villa, Janapriya Layout, Begur, Karnataka, Bangalore -68, Have Changed My Name to GEORGE JOSEPH Vide Affidavit dated 13/04/2023 Before Notary A.S Narayana Reddy Bangalore.

I, SWETA G JAGANNATH W/o. Santosh K R/a#1811, 4th Cross, MCECHS Layout, SRK.Nagara Phase-2, Jakkur Post, Bangalore- 560064 Have Changed My Name to SWETA S vide Affidavit Dated: 13-04-2023 Before Notary Sivakumara.M.N Bengaluru

I, C. MAHENDRAN S/o Late P Chinna Thambi R/a#240, 3rd Cross, Near NGEF, Arasappa Layout, Krishaiahnapalya, Bangalore- 560038 Have Changed My`Name to C. VENKATESH vide affidavit`dated 10.02.2023 before notary A.R.Muneer Ahamed, Bengaluru

I, SREEDEVI MANOJ, Residing at #11, 5th cross, Sharadhamhanagar, Jalahalli, Bengaluru-13 have changed my name as SREEDEVI MOHAN DAS, vide affidavit dated 11/04/2023 before Notary Kundan Babu.M, Bengaluru

Lost

LOST
I, Hemalatha V.H D/o Hanumegowda V.R R/o Varadanayakanahalli village, Jakkanahalli post, Nelamangala taluk, Bengaluru rural district do hereby declare that, I have passed my SSLC exams (ICSE) in 2020. I have lost its marks card bearing Reg. No. 7059724 along with some books and other stuff while taking its xerox copies. If anybody found the same, kindly inform me on
7892432576, 9686299485

BUSINESS

Business Offers

Finance

NRI'S INVESTMENT/FINANCE available on low-interest for properties,land& building,sites flats,converted lands also personal,educational call pengana-7204995189

'ಅಪ್ಪೆಮಿಡಿ ಪ್ರಕೃತಿಯ ಅಮೂಲ್ಯ ಕೊಡುಗೆ'

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪ್ಪೆಮಿಡಿ ಮಾವು ಪ್ರಕೃತಿ ನಮಗೆ ನೀಡಿರುವ ಅಮೂಲ್ಯ ಕೊಡುಗೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ್ ಹೇಳಿದರು.

ಐಐಎಚ್‌ಆರ್‌ನಲ್ಲಿ ಆಯೋಜಿಸಿದ್ದ ಅಪ್ಪೆಮಿಡಿ ಮಾವಿನ ವೈವಿಧ್ಯತಾ ಮೇಳದಲ್ಲಿ ಮಾತನಾಡಿದ ಅವರು, 'ಅಪ್ಪೆಮಿಡಿ ಮಾವು ಸಂರಕ್ಷಣೆ ಮಾಡುವಲ್ಲಿ ಐಐಎಚ್‌ಆರ್‌ನ ವಿಜ್ಞಾನಿಗಳ ಶ್ರಮ ಶ್ಲಾಘನೀಯ. ಈ ಮಾವು ಸಾವಯವಯುಕ್ತವಾಗಿದ್ದು, ಇದರ ಮೌಲ್ಯವರ್ಧನೆ ಮಾಡುವುದರ ಮೂಲಕ ರೈತರ ಆದಾಯವನ್ನು ದ್ವಿಗುಣಗೊಳಿಸಲು ಸಹಕಾರಿಯಾಗಿದೆ. ಅಪ್ಪೆಮಿಡಿ ಮಾವಿನ ಬೇಡಿಕೆಯನ್ನು ಹೆಚ್ಚಿಸಲು ಈ ಮಾವು ಬೆಳೆಯುವ ಕ್ಷೇತ್ರವನ್ನು ವಿಸ್ತರಣೆಗೆ ಅಗತ್ಯ ಕ್ರಮಕೈಗೊಳ್ಳಬೇಕು' ಎಂದರು.


ಅಪ್ಪೆಮಿಡಿ ತಳಿ ಸಂರಕ್ಷಣೆ ಮಾಡಿದ ರೈತರನ್ನು ಸನ್ಮಾನಿಸಲಾಯಿತು.

ಅಪೇಡಾ ದಕ್ಷಿಣ ಪ್ರಾಂತ್ಯದ ಮುಖ್ಯಸ್ಥ ಆರ್. ರವೀಂದ್ರ ಮಾತನಾಡಿ, 'ಅಪ್ಪೆಮಿಡಿ ಮಾವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯಗೊಳಿಸಲು ಎಲ್ಲ ರೀತಿಯ ಸಹಕಾರ ನೀಡಲಾಗುವುದು' ಎಂದು ಹೇಳಿದರು.

ಅಪ್ಪೆಮಿಡಿ ತಳಿ ಸಂರಕ್ಷಣೆ ಮಾಡಿದ ರೈತರಾದ ಗಣೇಶ್ ಕಾಕಲ್, ನಾಗಭೂಷಣ, ಅನಂತಮೂರ್ತಿ ಜವಳಿ, ಬೇಲೂರು ಸುಬ್ಬಣ್ಣ, ಕೇರಳದ ಶೈಜು ಮುಜಾತಿ ಅವರನ್ನು ಸನ್ಮಾನಿಸಲಾಯಿತು. ಎರಡು ದಿನದ ಈ ಮೇಳದಲ್ಲಿ ನೂರಕ್ಕೂ ಹೆಚ್ಚು ಅಪ್ಪೆ ಮಿಡಿ ತಳಿಗಳ ವೈವಿಧ್ಯತೆಯನ್ನು ಪ್ರದರ್ಶಿಸಲಾಯಿತು. 20ಕ್ಕೂ ಹೆಚ್ಚು ಅಪ್ಪೆಮಿಡಿ ಮೌಲ್ಯವರ್ಧಿತ ವಸ್ತುಗಳ ಮಾರಾಟ ನಡೆಯಿತು. ಐದು ಸಾವಿರಕ್ಕೂ ಹೆಚ್ಚು ಜನ ಈ ಮೇಳದಲ್ಲಿ ಭಾಗವಹಿಸಿದ್ದರು. ಅಪ್ಪೆಮಿಡಿ ಹಾಗೂ ಇತರೆ ಸಸಿ ಮತ್ತು ಬೀಜಗಳನ್ನು ಖರೀದಿಸಿದರು.

ನವದೆಹಲಿಯ ಐಸಿಎಆರ್‌ನ ಸಹಾಯಕ ಮಹಾನಿರ್ದೇಶಕ ವಿ.ಬಿ ಪಟೇಲ್, ತೆಲಂಗಾಣ ಸರ್ಕಾರದ ಕೃಷಿಸಲಹೆಗಾರ ಶ್ರೀನಿವಾಸ ರಾವ್, ಐಐಎಚ್‌ಆರ್‌ನ ನಿರ್ದೇಶಕ ಸಂಜಯ್ ಕುಮಾರ್ ಸಿಂಗ್, ಕಾರ್ಯದರ್ಶಿ ಶಂಕರನ್, ಮಾಧ್ಯಮ ಸಂಯೋಜಕ ಪಿ. ನಂದೀಶ್ ಇದ್ದರು.

ವಿದ್ಯಾರ್ಥಿನಿ ಸಾವು

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಪಟ್ಟಣ ಹೊರ ವಲಯದಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಬಳಿ ಬುಧವಾರ ಸಾರಿಗೆ ಸಂಸ್ಥೆ ಬಸ್ ನಿಲುಗಡೆ ಮಾಡದಿದ್ದಾಗ ಚಲಿಸುತ್ತಿದ್ದಾಗಲೇ ಅದರಿಂದ ಇಳಿಯಲು ಹೋಗಿ ಗಂಭೀರ ಗಾಯಗೊಂಡು ವಿದ್ಯಾರ್ಥಿನಿ ಮೃತಪಟ್ಟಿರುವ ಘಟನೆ ಜರುಗಿದೆ.

ಹೊಳಲು ಗ್ರಾಮದ ಎಲ್. ಶ್ವೇತಾ ಶಾಂತಪ್ಪನವರ (19) ಮೃತ ವಿದ್ಯಾರ್ಥಿನಿ.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. E-GSU-ELE-2023-24-OT-1 ದಿನಾಂಕ: 07.04.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
"ಅಮೃತ್ ಭಾರತ್" ಯೋಜನೆಯಡಿ (ಹಂತ I) ಬೆಂಗಳೂರು ವಿಭಾಗದ 15 [illegible]	ರೂ. 5,07,85,104/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05-05-2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in [illegible]
PUB/20/AAWPRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಕ್ರ.ಸಂ.1	ಟೆಂಡರ್ ಸೂಚನೆ ಸಂ. SBC-GSU-ENGG-2023-13 ದಿನಾಂಕ: 06.04.2023 [illegible] ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28-04-2023, 15:00 ಗಂಟೆಯವರೆಗೆ	ರೂ. 14,33,47,339/-
ಕ್ರ.ಸಂ.2	ಟೆಂಡರ್ ಸೂಚನೆ ಸಂ. SBC-GSU-ENGG-2023-14 ದಿನಾಂಕ: 06.04.2023 [illegible]	ರೂ. 13,02,34,651/-
ಕ್ರ.ಸಂ.3	ಟೆಂಡರ್ ಸೂಚನೆ ಸಂ. SBC-GSU-ENGG-2023-ABSS-07 ದಿನಾಂಕ: 07.04.2023 [illegible]	ರೂ. 17,42,77,995/-

ಹೆಚ್ಚಿನ ಮಾಹಿತಿಗಾಗಿ www.ireps.gov.in [illegible]
PUB/19/AAWPRB/SWR/2023-24
S.W.Railways SWRRLY SWRRLY

PUBLIC NOTICE

My clients Shree Khimji Keshara Patel and M/s. South Pacific Developers and Investments LLP have instructed me to issue the following Public Notice :

My clients had entered into a Memorandum of Understanding along with properties stated at Annexure 'A' on 9th June 2022 with M/s. Ranka Raj Properties.

Kindly take notice that my clients have discontinued with the said Memorandum of Understanding dated 9th June 2022.

Hence kindly take notice that any person or persons, any entity whomsoever deals in respect of the said property with M/s Ranka Raj Properties shall be doing so at their own risks, costs and consequences.

In pursuance thereof any person, persons and any entity whomsoever intending to purchase the said properties as stated in the said Memorandum of Understanding dated 9th June 2022 then in such event my clients shall conclude the said deal.

However, as an abundant caution take further notice that any other person, persons and any entity whomsoever have any claim of any nature whatsoever shall lodge their claim within 15 days from the receipt of this Public Notice failing which any transaction entered by my clients with whomsoever shall be deemed to be concluded.

Thereafter any claim of any nature whatsoever from whomsoever shall not be entertained by my clients which please note.

Geetha MS, Associate
GDROIT ADVOCATES
G-4, Brigade Business Suites
#44, Ashoka Pillar, Jayanagar
2nd Block, Bengaluru 560011
office@gdroit.com

ಕೆಟ್ಟುನಿಂತ ಆಟೊದಲ್ಲಿ ₹ 1 ಕೋಟಿ ನಗದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಖಲೆ ಇಲ್ಲದೇ ಆಟೊದಲ್ಲಿ ಸಾಗಿಸುತ್ತಿದ್ದ ₹ 1 ಕೋಟಿ ಹಣವನ್ನು ಎಸ್‌.ಜೆ.ಪಾರ್ಕ್ ಠಾಣೆ ಪೊಲೀಸರು ಗುರುವಾರ ಜಪ್ತಿ ಮಾಡಿದ್ದಾರೆ.

ಎಸ್‌.ಜೆ.ಪಾರ್ಕ್ ಠಾಣೆ ವ್ಯಾಪ್ತಿಯ ಕಾಳಿಂಗರಾವ್ ಬಸ್ ತಂಗುದಾಣ ಬಳಿ ಚೆಕ್‌ಪೋಸ್ಟ್ ನಿರ್ಮಿಸಲಾಗಿದೆ. ಚುನಾವಣಾಧಿಕಾರಿಗಳ ತಂಡ ಹಾಗೂ ಪೊಲೀಸರು ವಾಹನಗಳನ್ನು ತಡೆದು ತಪಾಸಣೆ ನಡೆಸುತ್ತಿದ್ದಾರೆ.

'ಜಯನಗರದಿಂದ ವಿಜಯನಗರದ ಕಡೆಗೆ ₹ 1 ಕೋಟಿ ಹಣವನ್ನು ಆಟೊದಲ್ಲಿ ಕೊಂಡೊಯ್ಯಲಾಗುತ್ತಿತ್ತು. ಪ್ರವೀಣ್ ಹಾಗೂ ಸುರೇಶ್ ಎಂಬುವವರು ಆಟೊದಲ್ಲಿದ್ದರು. ಚೆಕ್‌ಪೋಸ್ಟ್ ಬಳಿಯೇ ಆಟೊ ಕೆಟ್ಟು ನಿಂತಿತ್ತು. ಚಾಲಕ ರಸ್ತೆಯಲ್ಲಿಯೇ ಆಟೊ ದುರಸ್ತಿ ಮಾಡಲು ಮುಂದಾಗಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಈ ಬಗ್ಗೆ ವಿಚಾರಿಸಲು ಸಿಬ್ಬಂದಿ, ಆಟೊ ಬಳಿ ಹೋಗಿದ್ದರು. ಆಟೊದಲ್ಲಿ ಬ್ಯಾಗ್‌ಗಳನ್ನು ನೋಡಿದ್ದರು. ಅನುಮಾನಗೊಂಡ ಸಿಬ್ಬಂದಿ, ಚಾಲಕನನ್ನು ವಿಚಾರಿಸಿದ್ದರು. ಉತ್ತರಿಸಲು ಚಾಲಕ ತಡವರಿಸಿದ್ದ. ಮತ್ತಷ್ಟು ಅನುಮಾನ ಬಂದು ಬ್ಯಾಗ್ ಬಿಚ್ಚಿಸಿ ನೋಡಿದಾಗ ಹಣ ಪತ್ತೆಯಾಯಿತು' ಎಂದು ತಿಳಿಸಿದರು.

'₹500 ಮುಖಬೆಲೆಯ ನೋಟುಗಳಿವೆ. ಆಟೊದಲ್ಲಿದ್ದ ಇಬ್ಬರನ್ನೂ ವಶಕ್ಕೆ ಪಡೆಯಲಾಗಿದ್ದು, ಅವರು ಯಾವುದೇ ದಾಖಲೆ ನೀಡಿಲ್ಲ. ಆಟೊದಲ್ಲಿದ್ದ ಹಣ ಸಂಸ್ಥೆಯೊಂದಕ್ಕೆ ಸೇರಿದ್ದೆಂಬ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದರು.

₹ 1.25 ಕೋಟಿ ಮೌಲ್ಯದ ಚಿನ್ನಾಭರಣ ಜಪ್ತಿ: ನಗರತ್‌ಪೇಟೆಯಲ್ಲಿ ದಾಖಲೆ ಇಲ್ಲದೇ ಸಾಗಿಸುತ್ತಿದ್ದ ₹ 1.25 ಕೋಟಿ ಮೌಲ್ಯದ 2 ಕೆ.ಜಿ 500 ಗ್ರಾಂ ತೂಕದ ಚಿನ್ನಾಭರಣವನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಜಪ್ತಿ ಮಾಡಿದ್ದಾರೆ.

'ಏಪ್ರಿಲ್ 11ರಂದು ರಾತ್ರಿ ವ್ಯಕ್ತಿಯೊಬ್ಬ ಚಿನ್ನಾಭರಣದ ಬ್ಯಾಗ್ ತೆಗೆದುಕೊಂಡು ಹೊರಟಿದ್ದ. ಆತನನ್ನು ಪರಿಶೀಲಿಸಿದಾಗ ಚಿನ್ನಾಭರಣ ಸಿಕ್ಕಿವೆ. ಆತ ಆಭರಣ ವ್ಯಾಪಾರಿಯೊಬ್ಬರ ಸಹಾಯಕನೆಂದು ಗೊತ್ತಾಗಿದ್ದು, ಯಾವುದೇ ದಾಖಲೆ ನೀಡಿಲ್ಲ' ಎಂದು ಪೊಲೀಸರು ಹೇಳಿದರು.

ಕರಗ ತಪ್ಪುವ ಭೀತಿ: ಅರ್ಚಕರಿಗೆ ರಾಸಾಯನಿಕ ಎರಚಿದ್ದವ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಗಳರಪೇಟೆಯಲ್ಲಿರುವ ಧರ್ಮರಾಯ ಸ್ವಾಮಿ ದೇವಸ್ಥಾನದ ಅರ್ಚಕ ಜ್ಞಾನೇಂದ್ರ ಅವರು ಕರಗ ಹೊತ್ತಿದ್ದ ಸಂದರ್ಭದಲ್ಲಿ ರಾಸಾಯನಿಕವೊಂದನ್ನು ಎರಚಿದ್ದ ಆರೋಪದಡಿ ಆದಿನಾರಾಯಣ್ (52) ಎಂಬುವವರನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಏಪ್ರಿಲ್ 6ರಂದು ತಡರಾತ್ರಿ ಕರಗ ಉತ್ಸವದ ವೇಳೆ ನಡೆದಿದ್ದ ಘಟನೆ ಸಂಬಂಧ ಅರ್ಚಕ ಜ್ಞಾನೇಂದ್ರ ಹಾಗೂ ದೇವಸ್ಥಾನ ಆಡಳಿತ ಮಂಡಳಿಯವರು ದೂರು ನೀಡಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದ ದೃಶ್ಯಗಳನ್ನು ಆಧರಿಸಿ ಕೊಲೆ ಯತ್ನ ಪ್ರಕರಣದಲ್ಲಿ ಆರೋಪಿ ಆದಿನಾರಾಯಣ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ವಿಚಾರಣೆಗಾಗಿ 5 ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದರು.

ಹೈಕೋರ್ಟ್‌ನಲ್ಲಿ ಮೊಕದ್ದಮೆ: 'ಕರಗ ಹೊರುವ ವಿಚಾರ ಸಂಬಂಧ ಕುಟುಂಬಗಳ ನಡುವೆ ವ್ಯಾಜ್ಯವಿದೆ. ಈ ಬಗ್ಗೆ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಲಾಗಿದ್ದು, ವಿಚಾರಣೆ ನಡೆಯುತ್ತಿದೆ. ಘಟನೆ ಬಗ್ಗೆ ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಕರಗ ತಪ್ಪಿಸಬಹುದೆಂದು ಕೃತ್ಯ: 'ಆದಿನಾರಾಯಣ ಕುಟುಂಬದ ಸದಸ್ಯರು ಈ ಹಿಂದೆ ಕರಗ ಹೊರುತ್ತಿದ್ದರು. ಹಲವು ವರ್ಷ ಅವಕಾಶ ತಪ್ಪಿತ್ತು. ಸದ್ಯ ಅರ್ಚಕರಾಗಿರುವ ಜ್ಞಾನೇಂದ್ರ, ನ್ಯಾಯಾಲಯದ ಮೂಲಕ ತಡೆಯಾಜ್ಞೆಗಳನ್ನು ತಂದು ಕರಗ ಹೊರುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.


ಆದಿನಾರಾಯಣ್

'ಆರೋಪಿಯ ಸಂಬಂಧಿಯಾದ ಹೇಮಂತ್ ಅವರು ಮುಂದಿನ ವರ್ಷ ಕರಗ ಹೊರಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಈ ಅವಕಾಶವನ್ನು ಜ್ಞಾನೇಂದ್ರ ತಪ್ಪಿಸಬಹುದೆಂಬ ಭೀತಿ ಆದಿನಾರಾಯಣ್‌ಗೆ ಇತ್ತು. ಅದೇ ಕಾರಣಕ್ಕೆ ಈತ, ಯಾವುದೋ ರಾಸಾಯನಿಕವನ್ನು ಅರ್ಚಕ ಜ್ಞಾನೇಂದ್ರ ಮೇಲೆ ಎರಚಿದ್ದಾನೆ. ಮೈ ಮೇಲೆ ಗಾಯಗಳಾದರೆ, ಮುಂದಿನ ವರ್ಷ ಜ್ಞಾನೇಂದ್ರ ಕರಗ ಹೊರಲು ಸಾಧ್ಯವಾಗುವುದಿಲ್ಲವೆಂದು ಆರೋಪಿ ತಿಳಿದುಕೊಂಡಿದ್ದನೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಹೇಳಿವೆ.

ಸಮಗ್ರ ತನಿಖೆಗೆ ಆಗ್ರಹ: ಘಟನೆ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ಧರ್ಮರಾಯಸ್ವಾಮಿ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಸತೀಶ್, 'ಕರಗ ಉತ್ಸವದಲ್ಲಿ ಭಕ್ತರು ಮಲ್ಲಿಗೆ ಹೂವು ಅರ್ಪಿಸುತ್ತಾರೆ. ಆದರೆ, ಆದಿ ನಾರಾಯಣ ಯಾವುದೋ ರಾಸಾಯನಿಕ ಎರಚಿದ್ದಾನೆ. ಈ ಬಗ್ಗೆ ಪೊಲೀಸರು ಸಮಗ್ರ ತನಿಖೆ ನಡೆಸಿ, ಷಡ್ಯಂತ್ರವನ್ನು ಪತ್ತೆ ಮಾಡಬೇಕು' ಎಂದು ಆಗ್ರಹಿಸಿದರು.

ಮಗುವಿನ ಜೊತೆ ಸುತ್ತಾಟ: ಮನೆ ಗುರುತಿಸಿ ಕಳ್ಳತನ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ನಡೆದಿದ್ದ ಕಳ್ಳತನ ಸಂಬಂಧ ಮಹಿಳೆ ಸೇರಿ ಮೂವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ಜಯಂತಿ (32), ಗುಜರಾತ್‌ನ ಮುಜುಬಾಯ್ (32) ಹಾಗೂ ಬೆಂಗಳೂರಿನ ಅಮ್ಜದ್‌ಸಿಂಗ್ (36) ಬಂಧಿತರು. ಇವರಿಂದ ₹ 1 ಕೋಟಿ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಜಯಂತಿ, ಅಪರಾಧ ಹಿನ್ನೆಲೆಯುಳ್ಳವರು. ಕಳ್ಳತನ ಪ್ರಕರಣದಲ್ಲಿ ಜೈಲಿಗೂ ಹೋಗಿ ಬಂದಿದ್ದರು. ಮಗುವಿನ ಜೊತೆ ನಗರದಲ್ಲಿ ಸುತ್ತಾಡುತ್ತಿದ್ದ ಇವರು, ಮನೆಗಳನ್ನು ಗುರುತಿಸುತ್ತಿದ್ದರು. ರಾತ್ರಿ ವೇಳೆ ಮನೆಗಳಿಗೆ ನುಗ್ಗಿ ಕಳ್ಳತನ ಮಾಡಿ ಪರಾರಿಯಾಗುತ್ತಿದ್ದರು. ಇವರ ಬಂಧನದಿಂದ 5 ಪ್ರಕರಣಗಳು ಪತ್ತೆಯಾಗಿವೆ' ಎಂದರು.

'ಆರೋಪಿ ಮುಜುಬಾಯ್, ಸ್ನೇಹಿತರ ಜೊತೆ ನಗರಕ್ಕೆ ಬಂದಿದ್ದ. ಬಸ್ ಹಾಗೂ ರೈಲು ನಿಲ್ದಾಣಗಳಲ್ಲಿ ಉಳಿದುಕೊಳ್ಳುತ್ತಿದ್ದ. ಮನೆಗಳಲ್ಲಿ ಕಳ್ಳತನ ಮಾಡಿ ಚಿನ್ನಾಭರಣ ಕದ್ದೊಯ್ಯುತ್ತಿದ್ದ. ಅಂಥ ಚಿನ್ನಾಭರಣಗಳನ್ನು ಕೆಲ ದಿನ ಮಣ್ಣಿನಲ್ಲಿ ಹೂತಿಡುತ್ತಿದ್ದ. ಹಲವು ದಿನ ಬಿಟ್ಟು ಅವುಗಳನ್ನು ಹೊರಗೆ ತೆಗೆದು ಮಾರುತ್ತಿದ್ದ' ಎಂದರು.

'ಆರೋಪಿ ಅಮ್ಜದ್‌ಸಿಂಗ್, ಬಾಗಲೂರು ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಜೋಡಿ ಕೊಲೆ ಪ್ರಕರಣದ ಆರೋಪಿ. ಜೈಲಿಗೂ ಹೋಗಿ ಬಂದಿದ್ದ. ಮನೆಗಳ ಬೀಗ ಮುರಿದು ಕಳ್ಳತನ ಮಾಡುತ್ತಿದ್ದ' ಎಂದು ಹೇಳಿದರು.

₹ 40 ಕೋಟಿ ಹೆಚ್ಚುವರಿ ಪಾವತಿ: ತನಿಖೆಗೆ ನಿರ್ಧಾರ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿರ್ಮಾಣ ಕಾಮಗಾರಿ ಗುತ್ತಿಗೆ ಪಡೆದ ಎರಡು ಕಂಪನಿಗಳಿಗೆ ಹೆಚ್ಚುವರಿಯಾಗಿ ₹ 40 ಕೋಟಿ ಬಿಡುಗಡೆ ಮಾಡಿರುವ ಬಗ್ಗೆ ತನಿಖೆ ನಡೆಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಧರಿಸಿದೆ.

ಬಿಡಿಎ ಎಂಜಿನಿಯರಿಂಗ್ ಸದಸ್ಯರು ತನಿಖೆ ಕೈಗೊಳ್ಳಲಿದ್ದು, 15 ದಿನಗಳ ಒಳಗೆ ವರದಿ ಸಲ್ಲಿಸುವ ಸಾಧ್ಯತೆ ಇದೆ.

ಬಿಡಿಎ ಮುಖ್ಯ ಆಯುಕ್ತ ಜಿ. ಕುಮಾರ್ ನಾಯ್ಕ್ ಅವರು ತನಿಖೆ ಕೈಗೊಳ್ಳುವಂತೆ ಆದೇಶ ನೀಡಿದ್ದಾರೆ.

ನಾಮಪತ್ರ ಸಲ್ಲಿಕೆ ವೇಳೆ ನಿಯಮ ಉಲ್ಲಂಘನೆ: ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಮ್ ಆದ್ಮಿ ಪಾರ್ಟಿ ಅಭ್ಯರ್ಥಿ ಶ್ರೀನಿವಾಸ ರೆಡ್ಡಿ ಅವರು ನಾಮಪತ್ರ ಸಲ್ಲಿಸುವ ವೇಳೆ ನಿಯಮ ಉಲ್ಲಂಘಿಸಿದ್ದು, ಅವರ ಮೇಲೆ ಬಿಟಿಎಂ ಲೇಔಟ್ ವಿಧಾನಸಭೆ ಚುನಾವಣಾಧಿಕಾರಿ ದೂರು ದಾಖಲಿಸಿದ್ದಾರೆ.

ಗುರುವಾರ ನಾಮಪತ್ರ ಸಲ್ಲಿಸುವ ವೇಳೆ ಅನುಮತಿ ಪಡೆಯದೆ ರ‍್ಯಾಲಿಯಲ್ಲಿ 14 ವಾಹನಗಳು, ಪಕ್ಷದ ಬಾವುಟ, ಟೀ–ಶರ್ಟ್, ಟೋಪಿಗಳನ್ನು ಬಳಸಲಾಗಿದೆ. ಇದು ನೀತಿ ಸಂಹಿತೆಯ ಉಲ್ಲಂಘನೆಯಾಗಿದೆ ಎಂದು ನೋಡಲ್ ಅಧಿಕಾರಿ ಶಿವಮೂರ್ತಿ ಮಾರ್ಗದರ್ಶನದಲ್ಲಿ ಜಾಗೃತ ದಳದ ತಂಡದ ಮುಖ್ಯಸ್ಥ ಕುಬೇರ್ ನಾಯ್ಕ ವಸ್ತು, ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ.

ಈ ಬಗ್ಗೆ ಆಡುಗೋಡಿ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಲಾಗಿದೆ ಎಂದು ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿಯಾದ ಇಸ್ಲಾವುದ್ದೀನ್ ಜಿ. ಗದ್ಯಾಳ ತಿಳಿಸಿದ್ದಾರೆ.

'ಆರ್‌ಟಿಇ ಜಾರಿಗೆ ಸರ್ಕಾರ ವಿಫಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಅನುಷ್ಠಾನಗೊಳಿಸುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ರಾಜ್ಯದಲ್ಲಿ ಆರ್‌ಟಿಇ ಅನುಷ್ಠಾನಗೊಳಿಸುವ ಪ್ರಮಾಣ ಕೇವಲ ಶೇ 23.6ರಷ್ಟಿದೆ' ಎಂದು ಶಿಕ್ಷಣ ತಜ್ಞ ನಿರಂಜನ ಆರಾಧ್ಯ ಹೇಳಿದರು.

ಬಹುತ್ವ ಕರ್ನಾಟಕ ಬುಧವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದಕ್ಷಿಣ ಭಾರತದ ರಾಜ್ಯಗಳಲ್ಲಿ ಕರ್ನಾಟಕ 6ನೇ ಸ್ಥಾನದಲ್ಲಿದೆ. ಆರ್‌ಟಿಇ ಅನ್ವಯ, ಕನಿಷ್ಠ ಸೌಲಭ್ಯಗಳಾದ ಶಿಕ್ಷಕರು, ತರಬೇತಿ ಕೊಠಡಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯ, ಶುದ್ಧ ಕುಡಿಯುವ ನೀರು, ಗ್ರಂಥಾಲಯ, ವಿದ್ಯುತ್, ಆಟದ ಮೈದಾನ ಸೌಲಭ್ಯಗಳಿರಬೇಕು. ಆರ್‌ಟಿಇ ಜಾರಿಯಾಗಿ 13 ವರ್ಷಗಳಾದರೂ ರಾಜ್ಯದ 100 ಶಾಲೆಗಳಲ್ಲಿ ಕೇವಲ 23 ಶಾಲೆಗಳಲ್ಲಿ ಮಾತ್ರ ಈ ಸೌಲಭ್ಯಗಳಿವೆ' ಎಂದು ವಿವರಿಸಿದರು.


ನಗರದಲ್ಲಿ ಬುಧವಾರ ರಾಜ್ಯ ಸರ್ಕಾರದ ಶೈಕ್ಷಣಿಕ ಕಾರ್ಯಕ್ಷಮತೆಯ ಬಗ್ಗೆ ಬಹುತ್ವ ಕರ್ನಾಟಕದ ಸದಸ್ಯರು ರಿಪೋರ್ಟ್ ಕಾರ್ಡ್ ಬಿಡುಗಡೆ ಮಾಡಿದರು. (ಎಡದಿಂದ ಬಲಕ್ಕೆ) ಗುರುಮೂರ್ತಿ ಕೆ., ಸಾನಿಯಾ, ನಿರಂಜನ ಆರಾಧ್ಯ, ಅನಂತ್ ಮತ್ತು ಆಮೀನಾ ಇದ್ದರು. –ಪ್ರಜಾವಾಣಿ ಚಿತ್ರ

'2,064 ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕೇವಲ ಒಬ್ಬ ಶಿಕ್ಷಕರಿದ್ದು, ಒಂದರಿಂದ 5ನೇ ತರಗತಿಯ 17 ವಿಷಯಗಳನ್ನು ಪಾಠ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಾದರಿ ಕ್ಷೇತ್ರ

ಮುಂದಿನ ಶಾಸಕರಿಂದ ಜನರ ನಿರೀಕ್ಷೆಗಳೇನು?

ಮುಂದೆ ಆಯ್ಕೆಯಾಗುವ ಶಾಸಕರಿಂದ ಮತದಾರರು ಏನನ್ನು ನಿರೀಕ್ಷಿಸುತ್ತೀರಿ? ನಿಮ್ಮ ಕ್ಷೇತ್ರ ಮಾದರಿಯಾಗಬೇಕಾದರೆ ಏನಾಗಬೇಕು? 50 ಪದದಲ್ಲಿ ಬರೆದು ಕಳುಹಿಸಿ.

ಕ್ಷೇತ್ರಗಳು: • ಪದ್ಮನಾಭನಗರ • ಸಿ.ವಿ.ರಾಮನ್ ನಗರ, • ಶಾಂತಿನಗರ • ಆನೇಕಲ್

96060 38256

ಬ್ಯಾಟರಾಯನಪುರ

ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದಲ್ಲಿ ಯೋಜನೆಗಳ ಪ್ರಕಟಣೆ ಹೆಚ್ಚಾಗಿದ್ದರೂ, ಅನುಷ್ಠಾನ ಕಡಿಮೆಯಾಗಿದೆ. ಕಾರ್ಪೊರೇಟರ್‌ಗಳಿಲ್ಲದ ಸಮಯದಲ್ಲಿ ಶಾಸನ ರಚಿಸುವವರು ಜನರಿಗೆ ಮೂಲಸೌಕರ್ಯ ಒದಗಿಸಲು ರಸ್ತೆಗಿಳಿಯಲೇಬೇಕು ಎಂಬುದು ಜನರ ಒತ್ತಾಸೆ.

‘ಯೋಜನೆಗಳು ಪ್ರಸ್ತಾವಕ್ಕಿಂತ ಅನುಷ್ಠಾನವಾಗಲಿ’



ಬ್ಯಾಟರಾಯನಪುರ ಕ್ಷೇತ್ರದಲ್ಲಿ ಬಹಳಷ್ಟು ಅವಶ್ಯಕ ಯೋಜನೆಗಳ ಪ್ರಸ್ತಾವ ಆಗಿದ್ದೂ, ಯಾವುದೂ ಅನುಷ್ಠಾನವಾಗಿಲ್ಲ. ಯೋಜನೆಗಳನ್ನು ವಾಸ್ತವಾಗಿಸುವ ಕೆಲಸ ಮೊದಲು ಆಗಬೇಕು. ಅಗ್ರಹಾರ ಬಡಾವಣೆ, ಚಿಕ್ಕಜಾಲದಲ್ಲಿರುವ ಆಸ್ಪತ್ರೆಗಳಲ್ಲಿ ಸೌಲಭ್ಯವೇ ಇಲ್ಲ. ಹೆರಿಗೆ ಆಸ್ಪತ್ರೆ ನಿರ್ಮಿಸಬೇಕು. ಐಟಿ–ಬಿಟಿ ಕಂಪನಿಗಳು ಹೆಚ್ಚಿರುವ ಈ ಕ್ಷೇತ್ರದಲ್ಲಿ ಸಿಆರ್‌ಎಫ್‌ನಿಂದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು. ಬೆಳ್ಳಹಳ್ಳಿ ಗ್ರಾಮದಲ್ಲಿ ಮುಂದಿನ ಅವಧಿಯಲ್ಲಿ ಕಾರ್ಮಿಕರ ಭವನ, ಸಾರ್ವಜನಿಕರ ಕ್ರೀಡಾಂಗಣ, ರಂಗಮಂದಿರ ನಿರ್ಮಾಣವಾಗಬೇಕು

ಜಿಮ್ ನಾಗೇಶ್ ಕೋಗಿಲು, ಬ್ಯಾಟರಾಯನಪುರ

‘ಸಮಗ್ರ ಅಭಿವೃದ್ಧಿಯೇ ಧ್ಯೇಯವಾಗಲಿ’



ಬ್ಯಾಟರಾಯನಪುರ ಕ್ಷೇತ್ರದಲ್ಲಿ ಒಂದೂ ಪದವಿ ಕಾಲೇಜು ಇಲ್ಲ. ಇಂದಿಗೂ ಯಲಹಂಕ ಹೋಗುವ ಸ್ಥಿತಿ ಇದೆ. ಇದು ಬದಲಾಗಬೇಕು. ಕ್ಷೇತ್ರದ ಅಭಿವೃದ್ಧಿಯಲ್ಲಿ ಎಲ್ಲ ವಾರ್ಡ್‌ಗಳಿಗೂ ಸಮನಾದ ಅವಕಾಶ ಇರಬೇಕು. ಪಕ್ಷಭೇದ ಮಾಡಬಾರದು. ಆಟದ ಮೈದಾನ ಹಾಗೂ ಕ್ರೀಡಾಂಗಣ ನಿರ್ಮಿಸಲು ಯುವಕರು ಬೇಡಿಕೆ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣವನ್ನು ನಿರ್ಮಿಸಬೇಕು. ಸಾರ್ವಜನಿಕ ಶೌಚಾಲಯ ಕೊರತೆ ಕ್ಷೇತ್ರದಾದ್ಯಂತ ಇದೆ. ಇನ್ನು ಆರೋಗ್ಯ ರಕ್ಷಣೆಗೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಬೇಕಿದೆ.

ವಿ. ನಾರಾಯಣ, ಬ್ಯಾಟರಾಯನಪುರ

ಕಾರ್ಪೊರೇಟರ್‌ಗಳ ಕೆಲಸವನ್ನೂ ಮಾಡಲಿ



ಬ್ಯಾಟರಾಯನಪುರ ಕ್ಷೇತ್ರದ ಹಲವೆಡೆ ಜಕ್ಕೂರು ಕೋಗಿಲು ಈ ಭಾಗದಲ್ಲಿ ರಾಜಕಾಲುವೆ ಇಲ್ಲ. ಮಳೆಗಾಲದಲ್ಲಿ ಈ ಪ್ರದೇಶದ ಬಡಾವಣೆಗಳು ಜಲಾವೃತಗೊಂಡು ನಾಗರಿಕರು ಸಂಕಷ್ಟಕ್ಕೆ ಒಳಗಾಗುತ್ತಾರೆ. ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಚಿತಾಗಾರಕ್ಕೆ ಹೆಬ್ಬಾಳ ಕ್ಷೇತ್ರಕ್ಕೆ ಹೋಗುವ ಅನಿವಾರ್ಯತೆ ಇದೆ. ಈ ಬಗ್ಗೆ ಭವಿಷ್ಯದ ಶಾಸಕರು ಯೋಚಿಸಿ, ಚಿತಾಗಾರ ನಿರ್ಮಿಸಬೇಕು. ಶಾಸನ ಮಾಡುವ ಜೊತೆಗೆ ಕಾರ್ಪೊರೇಟರ್‌ಗಳು ಇಲ್ಲದಾಗ ಅವರ ಕೆಲಸವನ್ನೂ ಶಾಸಕರು ಮಾಢಬೇಕು. ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು.

ಮುನಿಯಪ್ಪ ಕೆ., ಬ್ಯಾಟರಾಯನಪುರ

ರಾಜಾಜಿನಗರ

ರಾಜಾಜಿನಗರ ವಿಧಾನಸಭೆ ಕ್ಷೇತ್ರದಲ್ಲಿ ಅಭಿವೃದ್ಧಿ ಯೋಜನೆಗಳ ಜತೆಗೆ ಸ್ವಚ್ಛತೆಯದ್ದೇ ಸಮಸ್ಯೆಯಾಗಿದೆ. ಶಿಕ್ಷಣ ಹಾಗೂ ಆರೋಗ್ಯ ವಿಭಾಗಗಳಲ್ಲಿ ಗುಣಮಟ್ಟ, ಅತ್ಯಾಧುನಿಕ ವ್ಯವಸ್ಥೆಗಳನ್ನು ಕಲ್ಪಿಸುವುದು ಭವಿಷ್ಯದ ಶಾಸಕರ ಆದ್ಯತೆಯಾಗಲಿ ಎಂಬುದು ಜನರ ಆಶಯ.

‘ದಂಡವಾಗಿ ಹೆಲ್ಮೆಟ್ ನೀಡಿ’



ರಾಜಾಜಿನಗರದ ಎಲ್ಲ ಸಿಗ್ನಲ್‌ಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಬೇಕು. ಟ್ರಾಫಿಕ್ ದಂಡ ಕಡಿಮೆ ಮಾಡಬೇಕು. ಪೊಲೀಸರು ವಾಹನ ತಡೆಹಿಡಿಯುವ ಜಾಗದಲ್ಲೇ ಅಥವಾ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ದಂಡ ಪಾವತಿಗೆ ಅವಕಾಶ ಮಾಡಿಕೊಡಬೇಕು. ಅಲ್ಲದೆ, ಹೆಲ್ಮೆಟ್ ಧರಿಸದ್ದವರಿಗೆ ದಂಡವಾಗಿ ಹೆಲ್ಮೆಟ್ ಖರೀದಿ ಮಾಡುವಂತೆ ಮಾಡಬೇಕು. ಪರಿಸರ ರಕ್ಷಣೆಗೆ ಯೋಜನೆಗಳನ್ನು ರೂಪಿಸಬೇಕು. ಎಲ್ಲೆಂದರಲ್ಲಿ ಕಸ ಎಸೆಯುತ್ತಿರುವುದರಿಂದ ಕಾಯಿಲೆಗಳು ಹೆಚ್ಚಾಗಿದ್ದು, ಸ್ವಚ್ಛತೆಗೆ ಆದ್ಯತೆ ನೀಡಬೇಕು.

ರವಿ ಕೆ.ಎಸ್., ಶಿವನಗರ


‘ಸ್ವಚ್ಛತೆಯದ್ದೇ ಕೊರತೆ’



ರಾಜಾಜಿನಗರ ವಿಧಾನಸಭೆ ಕ್ಷೇತ್ರದ ಹಲವು ಬಡಾವಣೆಗಳಲ್ಲಿ ಸ್ವಚ್ಛತೆ ಇಲ್ಲ. ರಸ್ತೆಗಳ ಬದಿಯ ಚರಂಡಿಗಳು ಯಾವಾಗಲೂ ತ್ಯಾಜ್ಯದಿಂದ ತುಂಬಿರುತ್ತವೆ. ಇದನ್ನು ಸ್ವಚ್ಛ ಮಾಡುವುದಿಲ್ಲ. ಸರ್ಕಾರಿ ಆಸ್ಪತ್ರೆ ಹಾಗೂ ಶಾಲೆಗಳಲ್ಲಿ ಸೌಲಭ್ಯಗಳಿಲ್ಲ. ಅಲ್ಲದೆ, ಅಲ್ಲಿ ಸ್ವಚ್ಛತೆಗೂ ಗಮನಹರಿಸಿಲ್ಲ. ಮಕ್ಕಳಿಗೆ ಶಿಕ್ಷಣ ನೀಡುವ ಪರಿಸರ ಶುಚಿಯಾಗಿರಬೇಕು ಎಂಬುದನ್ನು ಶಾಸಕರೂ ಅರಿಯಬೇಕು. ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ನೀಡಬೇಕು. ಸಿಬ್ಬಂದಿಯನ್ನೂ ನೇಮಿಸಬೇಕು. ಬಹಳಷ್ಟು ರಸ್ತೆಗಳು ದುಃಸ್ಥಿತಿಯಲ್ಲಿದ್ದು, ಅಪಘಾತಗಳಿಗೆ ಕಾರಣವಾಗಿವೆ.

ಉದಯ ಪಾಂಚಾಲ್, ರಾಜಾಜಿನಗರ

‘ಉನ್ನತ ಶಿಕ್ಷಣಕ್ಕೆ ಸೌಲಭ್ಯ ನೀಡಲಿ’




ಅಂಗವಿಕಲರಿಗೆ ಅಗತ್ಯವಾದ ಮಾಹಿತಿ ಹಾಗೂ ಅವರ ಕಲ್ಯಾಣ ಕಾರ್ಯಕ್ರಮಗಳತ್ತ ಭವಿಷ್ಯದ ಶಾಸಕರು ಆದ್ಯತೆ ನೀಡಿ, ಅವರಿಗೆ ಸ್ವಯಂ ಉದ್ಯೋಗ ಅನುಕೂಲವಾಗುವ ಸೌಲಭ್ಯಗಳನ್ನು ಒದಗಿಸಬೇಕು. ಕಂಪ್ಯೂಟರ್ ತರಬೇತಿ ಕೇಂದ್ರವನ್ನು ಎಲ್ಲ ವರ್ಗದವರಿಗೆ ಸ್ಥಾಪಿಸಬೇಕು. ಉನ್ನತ ವಿದ್ಯಾಭ್ಯಾಸಕ್ಕೆ ವಿದೇಶ ಪ್ರಯಾಣ ಮಾಡಲು ಬಯಸುವವರಿಗೆ ಮಾಹಿತಿ, ಪಾಸ್‌ಪೋರ್ಟ್ ಲಭ್ಯತೆಗೆ ಸಹಾಯ ಮಾಡಬೇಕು. ವಿದ್ಯಾರ್ಥಿಗಳು ರಾಜ್ಯವನ್ನು ಯಾವ ರೀತಿ ವಿದೇಶದಲ್ಲಿ ಪ್ರತಿನಿಧಿಸಿ ಗೌರವ ತರಬೇಕು ಎಂಬ ಸಂಪೂರ್ಣ ಮಾಹಿತಿ ಸಿಗುವಂತೆ ನೋಡಿಕೊಳ್ಳಬೇಕು.

ಅಮೃತ್ ಕುಮಾರ್ ಟಿ.ಎಂ., ರಾಜಾಜಿನಗರ

ಹೆಬ್ಬಾಳ

ಹೆಬ್ಬಾಳ ವಿಧಾನಸಭೆ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಡುತ್ತಿದೆ. ಪರಿಸರವನ್ನು ಸ್ವಚ್ಛವಾಗಿರಿಸಿಕೊಳ್ಳಲು ಯೋಜನೆಗಳು ಬೇಕಿವೆ. ಯುವಕರು ದಾರಿ ತಪ್ಪುತ್ತಿದ್ದು, ಮಹಿಳೆಯರಿಗೆ ಕಿರುಕುಳ ನೀಡುತ್ತಿದ್ದಾರೆ. ಕಾನೂನು ಕ್ರಮ ಕಠಿಣವಾಗಿರಬೇಕು ಎಂಬ ನಿರೀಕ್ಷೆ ಇಲ್ಲಿಯ ಜನರದ್ದು.

‘ಮಹಿಳೆಯರಿಗೆ ಸುರಕ್ಷೆ ಹೆಚ್ಚಿಸಿ



ಸಂಜಯನಗರ ವ್ಯಾಪ್ತಿಯಲ್ಲಿ ಕ್ರೀಡಾಂಗಣ ಇಲ್ಲ. ಸ್ವಚ್ಛತೆ ಮತ್ತು ಪರಿಸರ ಕಾಳಜಿ ವಹಿಸಬೇಕಿದೆ. ಇದಕ್ಕಾಗಿ ನಾಮಫಲಕಗಳನ್ನು ಪ್ರತಿ ಬಸ್ ನಿಲ್ದಾಣದಲ್ಲಿ ಹಾಕಬೇಕು. ಪೊಲೀಸ್ ಭದ್ರತೆ ಹೆಚ್ಚಿಸಿ ಮಹಿಳಾ ಸುರಕ್ಷತೆಗೆ ಹೆಚ್ಚು ಆದ್ಯತೆ ನೀಡಬೇಕು. ಈಜುಕೊಳ ನಿರ್ಮಿಸಿ ತರಬೇತಿ ಕೇಂದ್ರ ಆರಂಭಿಸಬೇಕು. ಬೀದಿದೀಪಗಳ ದುಸ್ಥಿತಿ ಬಗ್ಗೆ ಗಮನಕೊಟ್ಟು ಕೂಡಲೇ ಸರಿ ಪಡಿಸಬೇಕು. ಸರ್ಕಾರಿ ಯೋಜನೆಗಳು ನಾಗರಿಕರಿಗೆ ನೇರವಾಗಿ ತಲುಪಂತೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು.

ಚಂದ್ರಶೇಖರ್ ಎನ್., ಸಂಜಯನಗರ

ಕುಡಿಯುವ ನೀರಿಗೆ ಪರಿಹಾರ ನೀಡಲಿ



ಹೆಬ್ಬಾಳ ಕ್ಷೇತ್ರದಲ್ಲಿ ಹಲವು ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಇದಕ್ಕೆ ಶಾಶ್ವತ ಪರಿಹಾರ ನೀಡುವ ಯೋಜನೆ ಮಾಡಬೇಕು. ನಾಗಶೆಟ್ಟಿಹಳ್ಳಿ ವ್ಯಾಪ್ತಿಯಲ್ಲಿ ಹಿರಿಯ ನಾಗರಿಕರ ವೇದಿಕೆ ಮತ್ತು ಸಾರ್ವಜನಿಕ ಗ್ರಂಥಾಲಯ ನಿರ್ಮಿಸಬೇಕು. ಆರ್‌.ಟಿ. ನಗರದಲ್ಲಿ ಶಾಂತಿ ಸಾಗರ ಹೋಟೆಲ್ ಬಳಿ ರಸ್ತೆ ದಾಟಲು ಬಹಳ ದೊಡ್ಡ ಸಮಸ್ಯೆ ಇದೆ. ನಾಗರಿಕರಿಗೆ ಅನುಕೂಲ ಕಲ್ಪಿಸಲು ಅಂಡರ್ ಪಾಸ್ ಅಥವಾ ಮೇಲ್ಸೇತುವೆ ನಿರ್ಮಾಣ ಮಾಡಬೇಕೆಂಬ ದೀರ್ಘಕಾಲದ ಆಶಯವನ್ನು ಭವಿಷ್ಯದ ಶಾಸಕರು ಮೊದಲು ಪೂರೈಸಬೇಕು.

ಪುಟ್ಟಮಾದಯ್ಯ, ಗಂಗಾ ನಗರ


‘500 ಹಾಸಿಗೆಯ ಆಸ್ಪತ್ರೆ ಬೇಕು’



ಹೆಬ್ಬಾಳ ಕ್ಷೇತ್ರದಲ್ಲಿ ಆರೋಗ್ಯ ರಕ್ಷಣೆಗೆ 500ಕ್ಕೂ ಹೆಚ್ಚು ಹಾಸಿಗೆಗಳ ಆಸ್ಪತ್ರೆ ಬೇಕಿದೆ. ಅಲ್ಲದೆ, ಸರ್ಕಾರಿ ಸಂಜೆ ಕಾಲೇಜನ್ನು ನಿರ್ಮಿಸಬೇಕು. ನಿರ್ಗತಿಕರಿಗೆ ಮತ್ತು ಕಡು ಬಡತನದಲ್ಲಿ ಇರುವ ಜನತೆಗೆ ಆಹಾರ ಕೇಂದ್ರ ನಿರ್ಮಿಸಿ ಕಡಿಮೆ ದರದಲ್ಲಿ ಊಟ, ತಿಂಡಿ ಸಿಗುವ ವ್ಯವಸ್ಥೆಯಾಗಬೇಕು. ಯುವಕರು ದುಶ್ಚಟಗಳಲ್ಲಿ ಭಾಗಿಯಾಗುವುದು ಹೆಚ್ಚಾಗುತ್ತಿದೆ. ಯುವಕರು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕು. ಅಕ್ರಮ ಚಟುವಟಿಕೆ ಹಾಗೂ ಮಹಿಳೆಯರಿಗೆ ತೊಂದರೆ ನೀಡುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು.

ಎಲ್. ಕುಮಾರ್, ಚಾಮುಂಡಿ ನಗರ

ಸೆಲೆಬ್ರಿಟಿ ಮಾತು



‘ನೀತಿಗೆಟ್ಟ ಪಕ್ಷಗಳನ್ನು ಪ್ರಶ್ನಿಸುವ ನೈತಿಕತೆ ಇರಲಿ’

ಸಂಪತ್ ಕುಮಾರ್, ನಟ

ಕಲಾವಿದ(ಎಲ್ಲಾ ಪ್ರಕಾರದ) ಬೇರೆ ನಾಗರಿಕರಿಗಿಂತಲೂ ಎಚ್ಚರದಿಂದ ಇರಬೇಕಾಗುತ್ತದೆ. ಕಲೆ ಆಧ್ಯಾತ್ಮಿಕವಾದದ್ದು. ಕಲಾವಿದನಾಗುವುದೆಂದರೆ ಸುಲಭವಲ್ಲ. ತನ್ನಲ್ಲಿರುವ ಅಮಾನವೀಯ ಪೊರೆಗಳನ್ನು ಕಳಚಿಕೊಂಡು ಮನುಷ್ಯನಾದವನು ಮಾತ್ರವೇ ಶುದ್ಧ ಕಲಾವಿದನಾಗಲು ಸಾಧ್ಯ. ಏಕೆಂದರೆ ಅವನು ಯಾವ ಸಿದ್ಧಾಂತಗಳಿಗೂ ಒಳಪಡುವುದಿಲ್ಲ. ಜಾತಿ, ಧರ್ಮ, ಭಾಷೆಯ ಮಿತಿಗೆ ಒಳಪಡುವುದಿಲ್ಲ. ಮಾನವೀಯತೆ, ಪ್ರೀತಿಯೇ ಅವನ ಗುಣವಾಗಬೇಕು. ಪ್ರೇಕ್ಷಕನು ಕಲಾವಿದನನ್ನು ಯಾವ ಅನಿಷ್ಠಗಳಿಂದಲೂ ಗುರುತಿಸದೆ ಕಲೆಯಿಂದ ಮಾತ್ರವೇ ಗುರುತಿಸುತ್ತಾನೆ ಮತ್ತು ಪ್ರೀತಿಸುತ್ತಾನೆ. ಹಾಗಾಗಿಯೇ ಕಲಾವಿದ ಇತರರಿಗಿಂತ ಹೆಚ್ಚು ಅರಿವಿನಿಂದ ಇರಬೇಕಾಗುತ್ತದೆ. ಕಲಾವಿದನ ವೈಯಕ್ತಿಕ ಇರಾದೆಗಳು ಸಾವಿರವಿರಲಿ; ಸ್ನೇಹ ಸಂಬಂಧದ ಕಾರಣಕ್ಕೆ ಯಾವ ರಾಜಕಾರಣಿಯಿಂದ ಎಷ್ಟೇ ಸಹಾಯ ಪಡೆದಿದ್ದರೂ ಅದು ವೈಯಕ್ತಿಕ. ಆ ಒಂದು ನೆಪಕ್ಕೆ ಯಾವ ಪಕ್ಷಕ್ಕೂ ಒಳಗಾಗದಿರುವುದೇ ಒಳಿತು. ಹಾಗೊಂದು ವೇಳೆ ಕಲಾವಿದ ಸಾರ್ವಜನಿಕವಾಗಿ ಒಂದು ನಿರ್ದಿಷ್ಟ ಪಕ್ಷದ ಮೂಲಕ ಗುರುತಿಸಿಕೊಳ್ಳುವುದಾದರೆ ಆ ಪಕ್ಷ ನೀತಿಗೆಟ್ಟಾಗಲೆಲ್ಲ, ಅಮಾನವೀಯಗೊಂಡಾಗಲೆಲ್ಲಾ ಯಾವ ಮುಲಾಜೂ ಇಲ್ಲದೆ ಸಾರ್ವಜನಿಕವಾಗಿಯೇ ಪ್ರಶ್ನಿಸುವ, ಎಚ್ಚರಿಸುವ ನೈತಿಕ ಹೊಣೆಯನ್ನು ಹೊಂದಿರಬೇಕಾಗುತ್ತದೆ


ಪದ್ಮನಾಭನಗರ: ಕೊನೆಯ ಕ್ಷಣದಲ್ಲೂ ಕಾಂಗ್ರೆಸ್ ಅಭ್ಯರ್ಥಿ ಬದಲು ಸಾಧ್ಯತೆ!

ರಾಜಕೀಯ ತಂತ್ರಗಾರಿಕೆಯ ಕಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಪ್ರಕಟವಾದ ನಂತರ ಪದ್ಮನಾಭನಗರ ವಿಧಾನಸಭೆ ಕ್ಷೇತ್ರದಲ್ಲಿ ಬೆಳವಣಿಗೆಗಳು ಹೆಚ್ಚಾಗಿವೆ. ಬಿಜೆಪಿಯಲ್ಲಿಯ ಅಸಮಾಧಾನದ ಜೊತೆಗೆ, ಕಾಂಗ್ರೆಸ್‌ನಲ್ಲಿ ಪ್ರತಿತಂತ್ರಗಳನ್ನು ರೂಪಿಸಲಾಗುತ್ತಿದೆ.

ಸಚಿವ ಆರ್. ಅಶೋಕ ಅವರು ಪದ್ಮನಾಭನಗರದ ಜೊತೆಗೆ ಕನಕಪುರ ವಿಧಾನಸಭೆ ಕ್ಷೇತ್ರದಲ್ಲಿ ಸ್ಪರ್ಧಿಸುವುದು ಅರಿವಾದ ಮೇಲೆ ಕಾಂಗ್ರೆಸ್‌ನಲ್ಲಿ ಹೆಚ್ಚಿನ ಚಟುವಟಿಕೆ ಆರಂಭವಾಗಿದೆ. ಪದ್ಮನಾಭನಗರದಲ್ಲಿ ‘ಪ್ರಬಲ ಅಸ್ತ್ರ’ ಪ್ರಯೋಗಿಸಲು ಚಿಂತಿಸುತ್ತಿದೆ. ಹೀಗಾಗಿಯೇ, ಗುರುವಾರ ತಡವಾಗಿ ಬಿ ಫಾರಂ ಪಡೆದಿರುವ ಅಭ್ಯರ್ಥಿ ರಘುನಾಥ ನಾಯ್ಡು ಅವರು, ‘ಡಿ.ಕೆ. ಸುರೇಶ್ ಅವರು ಸ್ಪರ್ಧಿಸುವುದಾದರೆ ಕ್ಷೇತ್ರ ತ್ಯಾಗ ಮಾಡಲು ಸಿದ್ಧ’ ಎಂದಿದ್ದಾರೆ.



ರಘುನಾಥ



ಡಿ.ಕೆ. ಸುರೇಶ್

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಗುರುವಾರ ಬೆಳಿಗ್ಗೆ ಭೇಟಿ ಮಾಡಿದ್ದ ರಘುನಾಥ, ‘ಡಿ.ಕೆ. ಸುರೇಶ್ ಅವರು ಕ್ಷೇತ್ರದಲ್ಲಿ ಸ್ಪರ್ಧಿಸಿದರೆ 70 ಸಾವಿರಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲಿಸಿಕೊಂಡು ಬರುತ್ತೇವೆ. ಎರಡೂ ಕ್ಷೇತ್ರದಲ್ಲಿ ಭಾರಿ ಅಂತರದ ಸೋಲನ್ನು ಅಶೋಕ ಅವರಿಗೆ ತೋರಿಸಬಹುದು’ ಎಂದು ಹೇಳಿದ್ದರು. ಇದಕ್ಕೆ ಶಿವಕುಮಾರ್ ಯಾವುದೇ ರೀತಿ ಪ್ರತಿಕ್ರಿಯಿಸಿರಲಿಲ್ಲ.

ಗುರುವಾರ ಸಂಜೆ ರಘುನಾಥ ನಾಯ್ಡು ಅವರನ್ನು ಕರೆಯಿಸಿಕೊಂಡು ಬಿ ಫಾರಂ ನೀಡಿದ ಶಿವಕುಮಾರ್, ‘ಸದ್ಯ ಕ್ಷೇತ್ರದಲ್ಲಿ ಕೆಲಸ ಮಾಡು’ ಎಂದು ಮಾರ್ಮಿಕವಾಗಿ ಹೇಳಿದ್ದರು.

> ಪಕ್ಷ ಬಯಸಿದರೆ ಪದ್ಮನಾಭನಗರ ಸೇರಿದಂತೆ ರಾಜ್ಯದ ಯಾವುದೇ ಕ್ಷೇತ್ರದಲ್ಲಿ ಸ್ಪರ್ಧೆಗೆ ಸಿದ್ಧನಿದ್ದೇನೆ
>
> **ಡಿ.ಕೆ. ಸುರೇಶ್,** ಸಂಸದ

‘ಪದ್ಮನಾಭನಗರದಲ್ಲಿ ನಾಯ್ಡು ಸಮುದಾಯದವರು ಹೆಚ್ಚಿದ್ದಾರೆ. ಸಾಕಷ್ಟು ಸಂಖ್ಯೆಯಲ್ಲಿ ಹೊಸ ಸದಸ್ಯರನ್ನೂ ಮಾಡಲಾಗಿದೆ. ಕಾಂಗ್ರೆಸ್ ಇಲ್ಲಿ ಈ ಬಾರಿ ಗೆಲುವು ಸಾಧಿಸುತ್ತದೆ. ಆದರೂ, ಡಿ.ಕೆ. ಸುರೇಶ್ ಅವರು ಸ್ಪರ್ಧಿಸಿದರೆ ಹೆಚ್ಚಿನ ಅಂತರ ಬರುತ್ತದೆ. ಇದನ್ನೇ ಪಕ್ಷದ ಅಧ್ಯಕ್ಷರಿಗೆ ತಿಳಿಸಿದ್ದೇನೆ. ಸುರೇಶ್ ಅವರು ಸ್ಪರ್ಧಿಸಿದರೆ ಈಗಲೂ ಕ್ಷೇತ್ರ ತ್ಯಾಗಕ್ಕೆ ಸಿದ್ಧ’ ಎಂದು ರಘುನಾಥ ನಾಯ್ಡು ತಿಳಿಸಿದರು.

ಬಿಜೆಪಿ ಬಂಡಾಯ: ಬಿಜೆಪಿಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ರಮೇಶ್ ಎನ್.ಆರ್. ಜಯನಗರ ವಿಧಾನಸಭೆ ಕ್ಷೇತ್ರದಿಂದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ ಟಿಕೆಟ್ ಸಿಕ್ಕಿಲ್ಲ. ಪದ್ಮನಾಭನಗರದಲ್ಲಿ ಪಕ್ಷದ ಬಂಡಾಯ ಅಭ್ಯರ್ಥಿಯಾಗುವ ನಿರೀಕ್ಷೆ ಇದೆ. ಕೆಲವು ಬೆಂಬಲಿಗರು ಜೆಡಿಎಸ್‌ನಿಂದ ಸ್ಪರ್ಧಿಸುವಂತೆ ಒತ್ತಾಯಿಸುತ್ತಿದ್ದು, ಅದರ ಬಗ್ಗೆ ಇನ್ನೂ ಅಂತಿಮ ನಿರ್ಧಾರವಾಗಿಲ್ಲ.

ಬಿಜೆಪಿಯ ಹಿರಿಯ ನಾಯಕರು ಒಂದೆರಡು ದಿನ ಕಾಯುವಂತೆ ಹೇಳಿದ್ದು, ರಮೇಶ್ ಅದಕ್ಕೆ ಬದ್ಧರಾಗಿದ್ದಾರೆ. ‘ಒಂದೆರಡು ದಿನಗಳಲ್ಲಿ ನಿರ್ಧಾರವಾಗದಿದ್ದರೆ ಮುಂದಿನ ಹಾದಿ ಬಗ್ಗೆ ನಿರ್ಧರಿಸುವೆ’ ಎಂದು ರಮೇಶ್ ತಿಳಿಸಿದರು.

ಸುನಿಲ್ ₹5.63 ಕೋಟಿ ಒಡೆಯ, ಕುಟುಂಬದ ಆಸ್ತಿ ₹7.98 ಕೋಟಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಂಧನ ಸಚಿವ ವಿ.ಸುನಿಲ್ ಸುನಿಲ್ ಕುಮಾರ್ 2004ರಲ್ಲಿ ಮೊದಲ ಸಲ ಕಾರ್ಕಳ ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಿದಾಗ ಅವರ ಕೈಯಲ್ಲಿದ್ದುದು ₹ 500 ನಗದು. ಹಾಗೂ ಬ್ಯಾಂಕ್‌ನಲ್ಲಿ ₹ 1.12 ಲಕ್ಷ ಠೇವಣಿ. ಈಗ ಸ್ಥಿರಾಸ್ತಿ ಹಾಗೂ ಚರಾಸ್ತಿ ಸೇರಿ ಒಟ್ಟು ₹ 5.63 ಕೋಟಿಯ ಒಡೆಯ.

ಸುನಿಲ್ ಅವರ ಕುಟುಂಬದ ಬಳಿ ಒಟ್ಟು ₹ 7.98 ಕೋಟಿ ಆಸ್ತಿ ಇದೆ. ಇದರಲ್ಲಿ ಅವರ ಪತ್ನಿ ಪ್ರಿಯಾಂಕ ₹ 1.80 ಕೋಟಿ ಮೌಲ್ಯದ ಆಸ್ತಿ ಹಾಗೂ ತಂದೆ ವಾಸುದೇವ ಎಂ.ಕೆ. ಅವರ ₹ 54.14 ಲಕ್ಷ ಮೌಲ್ಯದ ಆಸ್ತಿಯೂ ಸೇರಿದೆ. ಸುನಿಲ್ ₹ 45.16 ಲಕ್ಷ ಸಾಲವನ್ನೂ ಹೊಂದಿದ್ದಾರೆ.

ಪತ್ನಿ ಬಳಿ 2.23 ಕೆ.ಜಿ ಚಿನ್ನ

ಸುನಿಲ್ ಬಳಿ 272.70 ಗ್ರಾಂ ಚಿನ್ನಾಭರಣವಿದ್ದು, ಅದರ ಮೌಲ್ಯ ₹ 14.31 ಲಕ್ಷ. ಅವರ ಪತ್ನಿ ಪ್ರಿಯಾಂಕಾ ಬಳಿ 2,230 ಗ್ರಾಂ (2.23 ಕೆ.ಜಿ) ಚಿನ್ನಾಭರಣ ವಿದ್ದು ಇದರ ಮೌಲ್ಯ ₹ 1.17 ಕೋಟಿ. ಪತ್ನಿ 10.60 ಕೆ.ಜಿ ಬೆಳ್ಳಿಯನ್ನು ಹೊಂದಿದ್ದು ಅದರ ಮೌಲ್ಯ ₹ 7.42 ಲಕ್ಷ.

ಅವರು ಗುರುವಾರ ನಾಮಪತ್ರ ಸಲ್ಲಿಸಿದ್ದು ಚುನಾವಣಾ ಆಯೋಗಕ್ಕೆ ಅವರು ಸಲ್ಲಿಸಿದ ಪ್ರಮಾಣಪತ್ರದಲ್ಲಿ ಅವರ ಕುಟುಂಬದ ಆಸ್ತಿಯ ವಿವರಗಳನ್ನು ಸಲ್ಲಿಸಿದ್ದಾರೆ.

ಗಂಗಾಂಬಿಕೆ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್ ಅವರು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಗುರುವಾರ ಎರಡು ನಾಮಪತ್ರ ಸಲ್ಲಿಸಿದರು.

‘ನಾನು ಕಾಂಗ್ರೆಸ್ ಅಭ್ಯರ್ಥಿ’ ಎಂಬುದಾಗಿ ಒಂದು ನಾಮಪತ್ರ ಹಾಗೂ ಪಕ್ಷೇತರ ಅಭ್ಯರ್ಥಿಯಾಗಿಯೂ ನಾಮಪತ್ರ ಸಲ್ಲಿಸಿದ್ದಾರೆ. ಮೆರವಣಿಗೆ ಮೂಲಕ ಚುನಾವಣಾಧಿಕಾರಿ ಕಚೇರಿಗೆ ತೆರಳಿದ್ದ ಗಂಗಾಂಬಿಕೆ ಅವರಿಗೆ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಕೆಜಿಎಫ್ ಬಾಬು, ಇತರರು ಸಹಕಾರ ನೀಡಿದ್ದರು.

‘ನನಗೆ ಕಾಂಗ್ರೆಸ್ ಟಿಕೆಟ್ ದೊರೆಯುವ ವಿಶ್ವಾಸವಿದೆ. ಹೀಗಾಗಿ, ಇದೇ ಪಕ್ಷದ ಹೆಸರಿನಲ್ಲಿ ನಾಮಪತ್ರ ಸಲ್ಲಿಸಿದ್ದೇನೆ. ಈ ಕ್ಷೇತ್ರದ ಮತದಾರರ, ಮುಖಂಡರ ಬೆಂಬಲ ನನಗಿದೆ’ ಎಂದು ಅವರು ಹೇಳಿದರು.

ಚಿತ್ರಾವಳಿ



ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡರಾದ ಬಾಲಾಜಿ ವೆಂಕಟೇಶ್, ಪಪ್ಪಾಯ ನಾಗರಾಜ್, ವೇಣುಗೋಪಾಲ್, ಕೈಗಾರಿಕೋದ್ಯಮಿ ತಿಮ್ಮಗೌಡ, ಮಾರೇಗೌಡ, ಗಿರೀಶ್, ಧನುಷ್, ಹರೀಶ್ ಅವರು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಜೆಡಿಎಸ್ ರಾಷ್ಟ್ರೀಯ ಕಾರ್ಯಾಧ್ಯಕ್ಷ ಬಿ.ಎಂ.ಫಾರೂಕ್, ಶಾಸಕ ಆರ್‌.ಮಂಜುನಾಥ್ ಇದ್ದರು



ಮಲ್ಲೇಶ್ವರದ ವಿವಿಧ ಬಡಾವಣೆಗಳಲ್ಲಿ ಸಚಿವ ಡಾ ಸಿ.ಎನ್. ಅಶ್ವತ್ಥನಾರಾಯಣ ಗುರುವಾರ ಮತಯಾಚಿಸಿದರು

ಪಿ.ಸಿ.ಮೋಹನ್, ಸಂಗಣ್ಣ ಕರಡಿ, ರಮೇಶ್ ಜಿಗಜಿಣಗಿಗೆ ಟಿಕೆಟ್?

ಪ್ರಜಾವಾಣಿ ವಾರ್ತೆ

ಕೊಪ್ಪಳ: ಕೊಪ್ಪಳ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿರುವ ಸಂಗಣ್ಣ ಕರಡಿ ಸೇರಿ 3 ಸಂಸದರಿಗೆ ಟಿಕೆಟ್ ಘೋಷಣೆ ಯಾಗುವ ಸಾಧ್ಯತೆಯಿದೆ. ಕೊಪ್ಪಳ ಕ್ಷೇತ್ರಕ್ಕೆ ಸಂಗಣ್ಣ ಮತ್ತು ಮುಖಂಡ ಸಿ.ವಿ. ಚಂದ್ರಶೇಖರ್ ಆಕಾಂಕ್ಷಿಯಾಗಿದ್ದಾರೆ.

ಲಕ್ಷ್ಮಣ ಸವದಿ ಕಾಂಗ್ರೆಸ್ ಸೇರ್ಪಡೆಯಾಗುವ ಕಾರಣ ಪೆಟ್ಟು ಸರಿಪಡಿಸಲು ಮೂವರು ಸಂಸದರಿಗೆ ಟಿಕೆಟ್ ನೀಡಲು ವರಿಷ್ಠರು ಮುಂದಾಗಿದ್ದಾರೆ. ಬೆಂಗಳೂರು ಸೆಂಟ್ರಲ್ ಕ್ಷೇತ್ರದ ಸಂಸದ ಪಿ.ಸಿ. ಮೋಹನ್ ಮತ್ತು ವಿಜಯಪುರದ ಸಂಸದ ರಮೇಶ ಜಿಗಜಿಣಗಿ ಅವರಿಗೆ ಟಿಕೆಟ್ ಲಭಿಸುವ ಸಾಧ್ಯತೆಯಿದೆ. ಈ ಸಂಬಂಧ ಶುಕ್ರವಾರ ನಿರ್ಧಾರವಾಗಬಹುದು ಎನ್ನಲಾಗಿದೆ.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ

ಮೂವರ ಹೆಸರು ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಸಚಿವ ವಿ. ಸೋಮಣ್ಣ ಅವರ ವಲಸೆಯಿಂದ ಖಾಲಿ ಆಗಲಿರುವ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ಹೊಸ ಅಭ್ಯರ್ಥಿಯನ್ನು ಹುಡುಕುವ ಕೆಲಸ ಬಿಜೆಪಿಯಲ್ಲಿ ಚುರುಕಾಗಿದೆ. ಸಚಿವರ ಮಗ ಅರುಣ್ ಸೋಮಣ್ಣ ಸೇರಿದಂತೆ ಮೂವರ ಹೆಸರನ್ನು ಸಂಭವನೀಯ ಅಭ್ಯರ್ಥಿಗಳ ಪಟ್ಟಿಯಲ್ಲಿ ಶಿಫಾರಸು ಮಾಡಲಾಗಿದೆ.

ಸೋಮಣ್ಣ ಅವರಿಗೆ ವರುಣ ಮತ್ತು ಚಾಮರಾಜನಗರ ಎರಡೂ ಕ್ಷೇತ್ರಗಳಲ್ಲಿ ಟಿಕೆಟ್ ಘೋಷಿಸಲಾಗಿದೆ. ಹೀಗಾಗಿ ಪರ್ಯಾಯ ಅಭ್ಯರ್ಥಿಯನ್ನು ಶೋಧಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಸೋಮಣ್ಣ ನೇತೃತ್ವದಲ್ಲೇ ಸಭೆ ನಡೆಸಿ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಮೌಖಿಕವಾಗಿ ರವಾನಿಸುವಂತೆ ಬಿಜೆಪಿ ವರಿಷ್ಠರಿಂದ ಸೂಚನೆ ಬಂದಿತ್ತು. ಬುಧವಾರ ಮಧ್ಯಾಹ್ನ ಸಭೆ ನಡೆಸಿದ್ದು, ಟಿಕೆಟ್ ಆಕಾಂಕ್ಷಿಗಳು, ಬಿಜೆಪಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ಸಮಿತಿ ಪದಾಧಿಕಾರಿಗಳು, ಮಹಾನಗರ ಪಾಲಿಕೆ ಮಾಜಿ ಸದಸ್ಯರು ಮತ್ತು ಪ್ರಮುಖ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.

‘ಅರುಣ್ ಸೋಮಣ್ಣ, ಬಿಜೆಪಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ಸಮಿತಿ ಅಧ್ಯಕ್ಷ ವಿಶ್ವನಾಥ ಗೌಡ ಮತ್ತು ಮಹಾನಗರ ಪಾಲಿಕೆ ಮಾಜಿ ಸದಸ್ಯ ಮೋಹನ್ ಕುಮಾರ್ ಹೆಸರುಗಳನ್ನು ಬಿಜೆಪಿ ವರಿಷ್ಠರಿಗೆ ಮೌಖಿಕವಾಗಿ ಕಳುಹಿಸಲಾಗಿದೆ. ಮೂವರಲ್ಲಿ ಒಬ್ಬರಿಗೆ ಟಿಕೆಟ್ ನೀಡುವಂತೆ ಶಿಫಾರಸು ಮಾಡಲಾಗಿದೆ’ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಅರುಣ್ ಸೋಮಣ್ಣ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿ. ಪ್ರಿಯ ಕೃಷ್ಣ ಅವರ ವಿರುದ್ಧ ಒಕ್ಕಲಿಗರನ್ನೇ ಕಣಕ್ಕಿಳಿಸಬೇಕೆಂಬ ತೀರ್ಮಾನಕ್ಕೆ ಬರುವುದಾದರೆ ವಿಶ್ವನಾಥ ಗೌಡ ಅವರಿಗೆ ಅವಕಾಶ ನೀಡುವಂತೆ ಶಿಫಾರಸು ಮಾಡಲಾಗಿದೆ. ಪ್ರಿಯಕೃಷ್ಣ ಮತ್ತು ವಿಶ್ವನಾಥ ಗೌಡ ಒಕ್ಕಲಿಗರಲ್ಲಿ ಒಂದೇ ಉಪ ಪಂಗಡಕ್ಕೆ ಸೇರಿದವರು. ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳ ಸಮುದಾಯಗಳ ಮತದಾರರು ದೊಡ್ಡ ಸಂಖ್ಯೆಯಲ್ಲಿರುವುದನ್ನು ಪರಿಗಣಿಸಿ ಅಭ್ಯರ್ಥಿ ಆಯ್ಕೆ ಮಾಡುವುದಾದರೆ ಯಾದವ ಸಮುದಾಯದ ಮೋಹನ್ ಕುಮಾರ್ ಅವರಿಗೆ ಅವಕಾಶ ನೀಡಬಹುದು ಎಂಬುದಾಗಿ ಶಿಫಾರಸು ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಮಹಾನಗರ ಪಾಲಿಕೆ ಮಾಜಿ ಸದಸ್ಯ ಉಮೇಶ್ ಶೆಟ್ಟಿ ಸೇರಿದಂತೆ ಹಲವರು ಗೋವಿಂದರಾಜನಗರ ಕ್ಷೇತ್ರದ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಉಮೇಶ್ ಶೆಟ್ಟಿ ವಿಜಯನಗರ ವಿಧಾನಸಭಾ ಕ್ಷೇತ್ರದ ಟಿಕೆಟ್‌ಗೆ ಭಾರಿ ಪ್ರಯತ್ನ ನಡೆಸಿದ್ದರು. ಅಲ್ಲಿ ಎಚ್. ರವೀಂದ್ರ ಅವರಿಗೆ ಟಿಕೆಟ್ ಘೋಷಿಸಲಾಗಿದೆ.

ಕ್ಷೇತ್ರ	ಯಶವಂತಪುರ
ಅಭ್ಯರ್ಥಿ	ಎಸ್.ಟಿ.ಸೋಮಶೇಖರ(65)
ಪಕ್ಷ	ಬಿಜೆಪಿ
ಒಟ್ಟು ಆಸ್ತಿ	₹14.38 ಕೋಟಿ
ಹಿಂದೆ ಘೋಷಿಸಿದ್ದ ಒಟ್ಟು ಆಸ್ತಿ	₹14.15 ಕೋಟಿ
ಅಪರಾಧ ಪ್ರಕರಣ	ಬಿಡಿಎ ಕಾಮಗಾರಿಗೆ ಕಾರ್ಯಾದೇಶ ಅಕ್ರಮ
ಶಿಕ್ಷಣ	ಬಿಎಸ್ಸಿ
ಚರಾಸ್ತಿ	₹5.46 ಕೋಟಿ
ಸ್ಥಿರಾಸ್ತಿ	₹8.91 ಕೋಟಿ
ಸಾಲ	₹1.22 ಕೋಟಿ
ವಾಹನಗಳು	ಇಲ್ಲ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹9.26 ಕೋಟಿ
ಸಾಲ	₹27.20 ಲಕ್ಷ
ಮಗನ ಹೆಸರಿನಲ್ಲಿರುವ ಆಸ್ತಿ	₹4.23 ಕೋಟಿ



ನೆಲಮಂಗಲ: ಅಭ್ಯರ್ಥಿ ಬದಲಾಯಿಸದಿದ್ದರೆ ಬಂಡಾಯ–ನಾಗರಾಜು

ವಲಸಿಗರಿಗೆ ಟಿಕೆಟ್ ನೀಡಿದ್ದಕ್ಕೆ ಆಕ್ರೋಶ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಸ್ಥಳೀಯ ಅಭ್ಯರ್ಥಿಯನ್ನು ಕೈಬಿಟ್ಟು ವಲಸೆ ಬಂದಿರುವ ವ್ಯಕ್ತಿಗೆ ಬಿಜೆಪಿ ಟಿಕೆಟ್ ನೀಡಿದ್ದು ಬೇಸರದ ಸಂಗತಿ ಎಂದು ಪಕ್ಷದ ಮುಖಂಡ ಭವಾನಿಶಂಕರ್ ಬೈರೇಗೌಡ ಬೇಸರ ವ್ಯಕ್ತಪಡಿಸಿದರು.

ಟಿಕೆಟ್ ವಂಚಿತ ಮಾಜಿ ಶಾಸಕ ಎಂ.ವಿ. ನಾಗರಾಜು ಅವರು ಕರೆದಿದ್ದ ಸಭೆಯಲ್ಲಿ ಮಾತನಾಡಿ, ವರಿಷ್ಠರು ಟಿಕೆಟ್ ಹಂಚಿಕೆ ವಿಚಾರವಾಗಿ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂದು ದೂರಿದರು.

ಸಂಘಟನಾ ಕಾರ್ಯದರ್ಶಿ ಕಾಂತರಾಜು ಹಾಗೂ ಇತರ ಕೆಲವರ ಕುತಂತ್ರದಿಂದ ಎಂ.ವಿ. ನಾಗರಾಜು ಅವರಿಗೆ ಟಿಕೆಟ್ ಕೈತಪ್ಪಿದೆ. ಕಾಂತರಾಜು ಅವರು ಜವಾಬ್ದಾರಿ ವಹಿಸಿಕೊಂಡ ದಿನದಿಂದ ಪಕ್ಷ ಮೂರನೇ ಸ್ಥಾನಕ್ಕೆ ಕುಸಿದಿದೆ. ಕೂಡಲೇ ಅವರನ್ನು ವಜಾಗೊಳಿಸಬೇಕು. ವರಿಷ್ಠರು ಮಧ್ಯಪ್ರವೇಶಿಸಿ ಬಿಕ್ಕಟ್ಟು ಶಮನಗೊಳಿಸಿ ಬಿಜೆಪಿ ಗೆಲುವಿಗೆ ಸುಗಮ ದಾರಿಮಾಡಿಕೊಡಬೇಕು ಎಂದು ಹೇಳಿದರು.



ನೆಲಮಂಗಲದಲ್ಲಿ ನಡೆದ ಸಭೆಯಲ್ಲಿ ಕಾರ್ಯಕರ್ತರನ್ನು ಮುಖಂಡರು ಸಮಾಧಾನಪಡಿಸಿದರು. ನಗರಸಭೆ ಸದಸ್ಯ ಎನ್‌.ಗಣೇಶ್, ಬಿಜೆಪಿ ಉಪಾಧ್ಯಕ್ಷ ಜಗದೀಶ್ ಚೌಧರಿ, ಉಸ್ತುವಾರಿ ಲೋಕೇಶ್‌ಗೌಡ, ಆಕಾಂಕ್ಷಿಗಳಾದ ಬಿ.ಹೊಂಬಯ್ಯ, ಎಂ.ವಿ.ನಾಗರಾಜು, ಮುಖಂಡರಾದ ಭವಾನಿಶಂಕರ್ ಬೈರೇಗೌಡ, ರಾಮಕೃಷ್ಣಪ್ಪ ಇದ್ದಾರೆ

ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಸ್.ಮಲ್ಲಯ್ಯ ಮಾತನಾಡಿ, ‘ನಾಗರಾಜು ಹಾಗೂ ಬಿ. ಹೊಂಬಯ್ಯ ಅವರಿಗೆ ಅನ್ಯಾಯವಾಗಿದೆ. ಇವರಿಬ್ಬರೇ ನಮಗೆ ಅಭ್ಯರ್ಥಿ ಎಂದು ತಿಳಿದು ಬಿಜೆಪಿಗೆ ಕೆಲಸ ಮಾಡಿ’ ಎಂದರು.

ನಾಗರಾಜು ಮಾತನಾಡಿ, ವರಿಷ್ಠರನ್ನು ಸಂಪರ್ಕಿಸಿ ಅನ್ಯಾಯ ಸರಿಪಡಿಸುವಂತೆ ಮನವಿ ಮಾಡಲಾಗಿದೆ. ಆದರೂ ಟಿಕೆಟ್ ನೀಡದಿದ್ದರೆ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡುತ್ತೇನೆ’ ಎಂದರು. ದಶಕಗಳಿಂದ ತಮಗೆ ಸಹಕರಿಸಿದ ಕಾರ್ಯಕರ್ತರನ್ನು ನೆನೆದು ಅವರು ಕಣ್ಣೀರು ಹಾಕಿದರು.

ಎನ್‌ಐಎ: ರಾಜ್ಯದಲ್ಲಿ 17 ಪ್ರಕರಣ– 124 ಮಂದಿ ಜೈಲುಗಳಲ್ಲಿ

ಖುಲಾಸೆಯಾಗದ ಆರೋಪಿಗಳು

• ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: ರಾಜ್ಯದ ವಿವಿಧೆಡೆ ನಡೆದಿರುವ ಹಲವು ಗುರುತರ ಅಪರಾಧಿಕ ಪ್ರಕರಣಗಳನ್ನು ಕೈಗೆತ್ತಿಕೊಂಡು ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ದಾಖಲಿಸಿರುವ 17 ಪ್ರಕರಣಗಳಲ್ಲಿನ 43 ಅಪರಾಧಿಗಳಲ್ಲಿ ಯಾವೊಬ್ಬ ಆರೋಪಿಯೂ ಈತನಕ ಖುಲಾಸೆಯಾಗಿಲ್ಲ.

ಈ ಪ್ರಕರಣಗಳ ತನಿಖೆ ನಡೆಸುತ್ತಿರುವ ಎನ್‌ಐಎ, 'ಕೆಲವು ಕ್ಲಿಷ್ಟಕರ ಪ್ರಕರಣಗಳಲ್ಲಿನ ಆರೋಪಿಗಳು ತಮ್ಮ ಭಯೋತ್ಪಾದಕ ಚಟುವಟಿಕೆಗಳಿಗೆ ಸಂಬಂಧಿಸಿದ ಸಭೆಗಳನ್ನು ನಡೆಸಲು ಬೆಂಗಳೂರನ್ನೇ ಆಯ್ಕೆ ಮಾಡಿಕೊಂಡಿದ್ದಾರೆ' ಎಂಬ ಅಂಶವನ್ನು ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಈ ಸಂಬಂಧದ ಕ್ರೋಡೀಕೃತ ಅಂಕಿ–ಅಂಶಗಳು 'ಪ್ರಜಾವಾಣಿ'ಗೆ ಲಭ್ಯವಾಗಿದ್ದು, 'ರಾಜ್ಯದಲ್ಲಿ ನಡೆದಿರುವ ಹಲವಾರು ಪ್ರಕರಣಗಳಲ್ಲಿನ ಒಟ್ಟು 124 ಆರೋಪಿಗಳನ್ನು ಬೆಂಗಳೂರು ಕೇಂದ್ರ ಕಾರಾಗೃಹ, ತಿಹಾರ್ ಜೈಲು, ಸೇಲಂ ಕೇಂದ್ರ ಕಾರಾಗೃಹ, ಚೆನ್ನೈ ಕೇಂದ್ರ ಕಾರಾಗೃಹ, ಕೋಲ್ಕತ್ತ ಪ್ರೆಸಿಡೆನ್ಸಿ ಜೈಲು, ಕೋಲ್ಕತ್ತ ಡಂಡಂ ಜೈಲು ಸೇರಿದಂತೆ ದೇಶದ ವಿವಿಧ ಜೈಲುಗಳಲ್ಲಿ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದೆ' ಎಂಬ ಅಂಶ ವ್ಯಕ್ತವಾಗಿದೆ.

ಒಟ್ಟು ಪ್ರಕರಣಗಳಲ್ಲಿ 222 ಆರೋಪಿಗಳಿಗೆ ಭಾರತೀಯ ದಂಡ ಸಂಹಿತೆ-1860ರ ವಿವಿಧ ಕಲಂಗಳಡಿ ಜಾಮೀನು ದೊರೆತಿದ್ದರೆ, ಯುಎಪಿಎ (ಕಾನೂನು ಬಾಹಿರ ಚಟುವಟಿಕೆಗಳ ತಡೆ) ಕಾಯ್ದೆ-1967ರ ವಿವಿಧ ಕಲಂಗಳ ಅಡಿಯಲ್ಲಿನ ಯಾವೊಬ್ಬ ಆರೋಪಿಗೂ ಜಾಮೀನು ದೊರೆತಿಲ್ಲ. ವಿವಿಧ ಪ್ರಕರಣಗಳಲ್ಲಿ ಒಟ್ಟು 19 ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ. ಇವರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ರುದ್ರೇಶ್ ಹತ್ಯೆ ಪ್ರಕರಣದ ಆರನೇ ಆರೋಪಿ ಮೊಹಮದ್ ಗೌಸ್ ನಯಾಜಿ ಅಲಿಯಾಸ್ ಗೌಸ್ ಭಾಯ್ ಅಲಿಯಾಸ್ ಗೌಸ್ ಈತನಕವೂ ತಲೆಮರೆಸಿಕೊಂಡಿರುವುದು ಗಮನಾರ್ಹ.

ಈ ಕುರಿತಂತೆ ವಿವರಿಸಿರುವ ಕರ್ನಾಟಕದ ಎನ್‌ಐಎ ಪರ ವಿಶೇಷ ನ್ಯಾಯಾಲಯ ಮತ್ತು ಹೈಕೋರ್ಟ್‌ನಲ್ಲಿ ವಾದ ಮಂಡಿಸುತ್ತಿರುವ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, 'ವಿವಿಧ ಪ್ರಕರಣಗಳಲ್ಲಿ 13 ಆರೋಪಿಗಳಿಗೆ ಶಿಕ್ಷೆ ವಿಧಿಸಲಾಗಿದೆ. ಯುಎಪಿಎ ಕಾಯ್ದೆ ಅಡಿಯಲ್ಲಿನ 247 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಿದ್ಧಪಡಿಸಿ ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ' ಎಂದು ತಿಳಿಸಿದ್ದಾರೆ.

'2020ರ ಆಗಸ್ಟ್‌ನಲ್ಲಿ ನಡೆದಿದ್ದ ಡಿಜೆ ಹಳ್ಳಿ-ಕೆಜಿ ಹಳ್ಳಿ ಗಲಭೆ ಪ್ರಕರಣದಲ್ಲಿ ಯುಎಪಿಎ ಕಾಯ್ದೆ ಅಡಿಯಲ್ಲಿ ದಾಖಲಾದ ವಿವಿಧ ಪ್ರಕರಣಗಳಲ್ಲಿ ಎನ್‌ಐಎ, ಒಟ್ಟು 480 ಶಂಕಿತರನ್ನು ಬಂಧಿಸಿತ್ತು' ಎಂದು ತಿಳಿಸಿದ್ದಾರೆ.

'ಎಲ್‌ಇಟಿ- ಬೆಂಗಳೂರು ಮಾಡ್ಯೂಲ್ ಪ್ರಕರಣದಲ್ಲಿ ನಡೆಸಲಾಗಿರುವ ತನಿಖೆಯಲ್ಲಿ, ಎನ್‌ಐಎ 17 ವ್ಯಕ್ತಿಗಳನ್ನು ಬಂಧಿಸಿದ್ದು ಅವರ ವಿರುದ್ಧವೂ ದೋಷಾರೋಪ ಹೊರಿಸಲಾಗಿದೆ' ಎಂದು ಹೇಳಿದ್ದಾರೆ.

ಪ್ರಕರಣಗಳ ವಿವರ

ರಾಜ್ಯದಲ್ಲಿ ಎನ್‌ಐಎ ದಾಖಲಿಸಿರುವ ಪ್ರಕರಣಗಳು: ಎಲ್‌ಇಟಿ- ಬೆಂಗಳೂರು ಮಾಡ್ಯೂಲ್ ಪ್ರಕರಣ, ಚರ್ಚ್ ಸ್ಟ್ರೀಟ್ ಸ್ಫೋಟ, ರುದ್ರೇಶ್ ಹತ್ಯೆ, ಬೆಂಗಳೂರು ಎಫ್‌ಐಸಿಎನ್ (ಫೇಕ್ ಇಂಡಿಯನ್ ಕರೆನ್ಸಿ ನೋಟ್), ಚಿಕ್ಕೋಡಿ ಎಫ್‌ಐಸಿಎನ್, ಜೆಎಂಬಿ (ಜಮಾತ್ ಉಲ್ ಮುಜಾಹಿದೀನ್ ಬಾಂಗ್ಲಾದೇಶ್), ಐಎಸ್‌ಐಎಸ್ ಅಲ್ ಹಿಂದ್, ಜೆಎಂಬಿ ಡಕಾಯಿತಿ, ಐಎಸ್‌ಐಎಸ್ ಮತ್ತು ಐಎಸ್‌ಕೆಪಿ (ಇಸ್ಲಾಮಿಕ್ ಸ್ಟೇಟ್-ಖೊರಾಸನ್ ಪ್ರಾವಿನ್ಸ್), ಡಿಜೆ ಹಳ್ಳಿ-ಕೆಜಿ ಹಳ್ಳಿ ಪ್ರಕರಣ, ಮಾನವ ಕಳ್ಳಸಾಗಣೆ ಬಾಂಗ್ಲಾದೇಶ, ಮಾನವ ಕಳ್ಳಸಾಗಣೆ ಶ್ರೀಲಂಕಾ, ಹರ್ಷ ಹತ್ಯೆ, ಪ್ರವೀಣ್ ನೆಟ್ಟಾರು ಹತ್ಯೆ, ಅಲ್ ಕೈದಾ ಪ್ರಕರಣ, ಶಿವಮೊಗ್ಗ ಐಎಸ್ ಸಂಚು, ಮಂಗಳೂರು ಕುಕ್ಕರ್ ಸ್ಫೋಟ ಮತ್ತು ಅಲ್ ಕೈದಾ ಹಾಗೂ ಟಿಟಿಪಿ (ತೆಹ್ರಿಕ್ ಎ ತಾಲಿಬಾನ್ ಪಾಕಿಸ್ತಾನ್) ಪ್ರಕರಣ.

ಅಂಕಿ ಅಂಶಗಳ ಅನುಸಾರ 2012ರಿಂದ ಈತನಕ, 17 ಪ್ರಕರಣಗಳಲ್ಲಿ ಎನ್‌ಐಎ ಮಹತ್ವದ ತನಿಖೆ ನಡೆಸಿದೆ. ವಿವಿಧ ಪ್ರಕರಣಗಳಲ್ಲಿ 43 ವ್ಯಕ್ತಿಗಳು ಶಿಕ್ಷೆಗೊಳಗಾಗಿದ್ದಾರೆ

ಪಿ.ಪ್ರಸನ್ನ ಕುಮಾರ್, ಎನ್‌ಐಎ ಪರ ರಾಜ್ಯದ ಪ್ರಾಸಿಕ್ಯೂಟರ್

ಪ್ರತಿನಿತ್ಯ 20 ಸಾವಿರ ಪರೀಕ್ಷೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೈನಂದಿನ ಕೋವಿಡ್ ಪರೀಕ್ಷೆಗಳ ಗುರಿಯನ್ನು 20 ಸಾವಿರಕ್ಕೆ ಹೆಚ್ಚಿಸಿರುವ ಆರೋಗ್ಯ ಇಲಾಖೆ, ಮನೆ ಹಾಗೂ ಕಚೇರಿಗಳಲ್ಲಿ ಸೋಂಕಿತರ ಪ್ರಾಥಮಿಕ ಸಂಪರ್ಕಿತರಿಗೆ ಕಡ್ಡಾಯವಾಗಿ ಪರೀಕ್ಷೆ ನಡೆಸಬೇಕು ಎಂದು ಸೂಚಿಸಿದೆ.

ಈ ಬಗ್ಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ. ಎಲ್ಲ ಐಎಲ್‌ಐ (ಶೀತ ಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ) ಮತ್ತು ಸಾರಿ (ತೀವ್ರ ಉಸಿರಾಟದ ಸಮಸ್ಯೆ) ಪ್ರಕರಣಗಳನ್ನು ಕಡ್ಡಾಯವಾಗಿ ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು. ಹಾಗೆಯೇ ರೋಗ ಲಕ್ಷಣವುಳ್ಳ ಅಂತರರಾಜ್ಯ ಮತ್ತು ಅಂತರ ರಾಷ್ಟ್ರೀಯ ಪ್ರಯಾಣಿಕರನ್ನು ಪರೀಕ್ಷೆಗೆ ಒಳಪಡಿಸಬೇಕು. ಜಿಲ್ಲಾವಾರು ಪರೀಕ್ಷೆ ಗುರಿಯನ್ನು ಪ್ರತಿನಿತ್ಯ ಕಡ್ಡಾಯವಾಗಿ ತಲುಪಬೇಕು ಎಂದು ತಿಳಿಸಲಾಗಿದೆ.

ನಿಗದಿಪಡಿಸಲಾದ ಕೋವಿಡ್ ಪರೀಕ್ಷೆ ಗುರಿಯಲ್ಲಿ ಶೇ 70ರಷ್ಟು ಪರೀಕ್ಷೆಗಳನ್ನು ಆರ್‌ಟಿ–ಪಿಸಿಆರ್ ವಿಧಾನದ ಮೂಲಕ ಸರ್ಕಾರಿ ಪ್ರಯೋಗಾಲಯದಲ್ಲಿ ನಡೆಸಬೇಕು. ಶೇ 30ರಷ್ಟು ಪರೀಕ್ಷೆಗಳನ್ನು ರ‍್ಯಾಟ್ ಮಾದರಿಯಲ್ಲಿ ಮಾಡಬೇಕು ಎಂದು ಹೇಳಲಾಗಿದೆ.

ರಾಜ್ಯದ ಪ್ರಯೋಗಾಲಯದಲ್ಲಿ ಕಳೆದ 10 ದಿನಗಳಲ್ಲಿ ಪ್ರತಿನಿತ್ಯ ಸರಾಸರಿ 7,729 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಸರಾಸರಿ ಶೇ 3.53ರಷ್ಟಿದೆ. ಬೆಂಗಳೂರಿನಲ್ಲಿ ಸರಾಸರಿ 1,979 ಪರೀಕ್ಷೆಗಳನ್ನು ನಡೆಸಲಾಗಿದ್ದು, ಸೋಂಕು ದೃಢ ಪ್ರಮಾಣ ಶೇ 7.51ಕ್ಕೆ ತಲುಪಿದೆ. ಬಳ್ಳಾರಿಯಲ್ಲಿ ಶೇ 7.95, ಶಿವಮೊಗ್ಗದಲ್ಲಿ ಶೇ 6.2, ದಾವಣಗೆರೆಯಲ್ಲಿ ಶೇ 6.09, ಮೈಸೂರಿನಲ್ಲಿ ಶೇ 5.07, ಚಿಕ್ಕಮಗಳೂರಿನಲ್ಲಿ ಶೇ 4.34ರಷ್ಟು ದೃಢ ಪ್ರಮಾಣ ವರದಿಯಾಗಿದೆ. ಉಳಿದ ಜಿಲ್ಲೆಗಳಲ್ಲಿ ಈ ಪ್ರಮಾಣ ಶೇ 4ಕ್ಕಿಂತ ಕಡಿಮೆಯಿದೆ.

ಬೆಂಗಳೂರಿನಲ್ಲಿ ಪರೀಕ್ಷೆ ಗುರಿಯನ್ನು 10 ಸಾವಿರಕ್ಕೆ ಹೆಚ್ಚಿಸಲಾಗಿದೆ. ಇದೇ ರೀತಿ ಉಳಿದ ಜಿಲ್ಲೆಗಳಿಗೂ ಪರೀಕ್ಷೆಯ ಗುರಿಯನ್ನು ಎರಡು ಮೂರು ಪಟ್ಟು ಹೆಚ್ಚಿಸಲಾಗಿದೆ.

500 ಗಡಿಯತ್ತ ಕೋವಿಡ್

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಏರಿಕೆ ಕಂಡಿದ್ದು, ಗುರುವಾರ 498 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿವೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನೂ ಹೆಚ್ಚಳ ಮಾಡಲಾಗಿದ್ದು, ಒಂದು ದಿನದ ಅವಧಿಯಲ್ಲಿ 15,036 ಪರೀಕ್ಷೆ ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 3.31ರಷ್ಟಿದೆ. ಬೆಂಗಳೂರಿನಲ್ಲಿ 328 ಪ್ರಕರಣಗಳು ಪತ್ತೆಯಾಗಿವೆ. ಶಿವಮೊಗ್ಗ 47, ದಾವಣಗೆರೆ 17, ಕಲಬುರಗಿ 16 ಹಾಗೂ ಉತ್ತರ ಕನ್ನಡದಲ್ಲಿ 11 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆಯಿದೆ. ಸೋಂಕಿತರಲ್ಲಿ ವಿಜಯಪುರದ 75 ವರ್ಷದ ವೃದ್ಧರೊಬ್ಬರು ಮೃತಪಟ್ಟಿದ್ದಾರೆ.



ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಗಾರ್ಮೆಂಟ್ಸ್ ಉದ್ಯೋಗಿಗಳನ್ನು ಗುರುವಾರ ಭೇಟಿ ಮಾಡಿದ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್, ಮತದಾನ ಮಾಡಲು ಮನವಿ ಮಾಡಿದರು

ಗಾರ್ಮೆಂಟ್ಸ್ ಉದ್ಯೋಗಿಗಳಿಗೆ ಮತದಾನ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಐಟಿ–ಬಿಟಿ ಸಂಸ್ಥೆಗಳು ಹಾಗೂ ಗಾರ್ಮೆಂಟ್ಸ್ ಉದ್ಯೋಗಿಗಳನ್ನು ಗುರುವಾರ ಭೇಟಿ ಮಾಡಿದ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್, ಮತದಾನ ಮಾಡಲು ಮನವಿ ಮಾಡಿದರು.

ಅರವಿಂದ್ ಲಿಮಿಟೆಡ್ ಗಾರ್ಮೆಂಟ್ಸ್‌ಗೆ ಭೇಟಿ ನೀಡಿದ ತುಷಾರ್ ಗಿರಿನಾಥ್ ಅವರು, ಅಲ್ಲಿ ಕೆಲಸ ಮಾಡುವ ಸುಮಾರು 2,000 ಕೆಲಸಗಾರರಿಗೆ ಚುನಾವಣೆಯ ದಿನ ತಪ್ಪದೇ ಮತದಾನ ಮಾಡಲು ತಿಳಿಸಿದರು.

ಟೆಕ್ ಮಹೀಂದ್ರದಲ್ಲಿ ಏರ್ಪಡಿಸಿದ್ದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿ, ಅನೇಕ ಸಂಸ್ಥೆಗಳ ಸಿಇಒಗಳು ತಮ್ಮ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಉದ್ಯೋಗಿಗಳಿಗೆ 'ಮತದಾನದ ಉತ್ಸವ'ದಲ್ಲಿ ತಪ್ಪದೆ ಭಾಗವಹಿಸಿ ಮತದಾನ ಮಾಡಲು ತಿಳಿಸುವುದಾಗಿ ಹೇಳಿದರು.

'ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಐಟಿ-ಬಿಟಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಉದ್ಯೋಗಳಿಗೆ ಮತದಾನ ಮಾಡುವ ಒಲವು ಹೆಚ್ಚಿರುವುದಿಲ್ಲ. ಈ ಸಂಬಂಧ ಅವರಲ್ಲಿರುವಂತಹ ತಪ್ಪು ಕಲ್ಪನೆ ಹಾಗೂ ಆಲೋಚನೆಗಳನ್ನು ಬದಲಿಸಿ ಎಲ್ಲರಿಂದಲೂ ಮತದಾನ ಮಾಡಿಸುವುದು ಚುನಾವಣಾ ಆಯೋಗದ ಉದ್ದೇಶವಾಗಿದೆ' ಎಂದು ಹೇಳಿದರು.

ಬೆಂಗಳೂರು ವ್ಯಾಪ್ತಿಯಲ್ಲಿ ಬರುವ 28 ವಿಧಾನಸಭಾ ಕ್ಷೇತ್ರಗಳಲ್ಲೂ ಈ ಬಾರಿ ಹೆಚ್ಚು ಮತದಾನ ಮಾಡಿಸುವ ಉದ್ದೇಶವನ್ನಿಟ್ಟುಕೊಂಡು, ಎಲ್ಲಾ ಕಡೆ ಮತದಾನ ಜಾಗೃತಿ ಜಾಥಾ, ನಾಟಕ ಸೇರಿದಂತೆ ನಮ್ಮ ಬೆಂಗಳೂರು ಐಕಾನ್ಸ್‌ಗಳ ಮೂಲಕ ಮತದಾರರು ತಪ್ಪದೆ ಮತಚಲಾಯಿಸುವಂತೆ ಪ್ರೇರೇಪಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ಐಟಿ-ಬಿಟಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಉದ್ಯೋಗಿಗಳಿಗೆ ಮತದಾನ ದಿನ ಮೇ 10ರಂದು ಎಲ್ಲರೂ ಮತದಾನ ಮಾಡಲು ಸಂಬಳ ಸಹಿತ ರಜೆ ನೀಡಲಾಗುತ್ತಿದೆ ಎಂದು ತಿಳಿಸಿದರು

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಸಂಗಪ್ಪ, ಜಂಟಿ ಆಯುಕ್ತ ಕೃಷ್ಣಮೂರ್ತಿ, ವಿವಿಧ ಸಂಸ್ಥೆಗಳ ಸಿಇಒಗಳು ಉಪಸ್ಥಿತರಿದ್ದರು.

ಹಸಿರು ವಲಯಕ್ಕೆ ಕಾಂಕ್ರೀಟೀಕರಣ ಮಾರಕ

ನಗರಕ್ಕೆ ಪರಿಸರ ಸ್ನೇಹಿ ಖ್ಯಾತಿ ಮರುಕಳಿಸಲು ಬೇಕಿದೆ 'ಕಾನೂನು ಮಂತ್ರದಂಡ'

• ಆರ್. ಮಂಜುನಾಥ್

ಬೆಂಗಳೂರು: ಉದ್ಯಾನ ನಗರ, ಹವಾನಿಯಂತ್ರಿತ ನಗರ ಎನ್ನುವ ಖ್ಯಾತಿ ಹೊಂದಿದ್ದ ಬೆಂಗಳೂರು ಮಹಾನಗರಿಯನ್ನು ಮತ್ತೆ ಅದೇ ಸ್ಥಿತಿಗೆ ತರುತ್ತೇವೆ ಎನ್ನುವ ಮಾತು ಪದೇ ಪದೇ ಕೇಳಿಬರುತ್ತದೆ. ಇದಕ್ಕಾಗಿ ವಿಶೇಷ ಯೋಜನೆಗಳನ್ನೂ ರೂಪಿಸಲಾಗುತ್ತದೆ. ಆದರೆ, ಅನುಷ್ಠಾನ ಮಾತ್ರ ಕಾಂಕ್ರೀಟೀಕರಣಕ್ಕೆ ಮಾತ್ರ ಸೀಮಿತವಾಗಿದೆ

ಕೆರೆ ಹಾಗೂ ಉದ್ಯಾನಗಳ ಅಭಿವೃದ್ಧಿಗೆ ವಾರ್ಷಿಕವಾಗಿ ನೂರಾರು ಕೋಟಿ ವೆಚ್ಚ ಮಾಡಲಾಗುತ್ತಿದೆ. ಪ್ರತಿ ವರ್ಷವೂ ಲಕ್ಷಾಂತರ ಸಸಿಗಳನ್ನು ನೆಡಲಾಗುತ್ತಿದೆ ಎಂಬುದು ಪ್ರಕಟಣೆಗೆ ಮಾತ್ರ ಸೀಮಿತವಾಗಿದೆ. ಪ್ರತಿ ವರ್ಷ ಇಷ್ಟೊಂದು ಲಕ್ಷ ಸಸಿಗಳನ್ನು ನೆಟ್ಟಿದ್ದರೆ ನಗರ ಪೂರ್ಣ ಮರಗಳೇ ಇರಬೇಕಿತ್ತು.

ಇನ್ನು, ಪ್ರತಿಯೊಂದು ಕೆರೆಯ ಅಭಿವೃದ್ಧಿಗೆ ಹತ್ತಾರು ಕೋಟಿ ವೆಚ್ಚ ಮಾಡಲಾಗುತ್ತಿದೆ. ಇಲ್ಲಿ ಜೀವವೈವಿಧ್ಯಕ್ಕೆ ಅನುವು ಮಾಡಿಕೊಡುವ ಬದಲು ಕಾಂಕ್ರೀಟ್ ನಿರ್ಮಾಣಕ್ಕೇ ಹೆಚ್ಚು ಗಮನವಹಿಸಲಾಗುತ್ತಿದೆ. ಹಿಂದಿನ ಕಾಲದಲ್ಲಿ ಸಂಪರ್ಕ ಸೇತುವಾಗಿ ಕೆರೆ ಏರಿ ಬಳಕೆಯಾಗುತ್ತಿದ್ದದ್ದು ಹೊರತುಪಡಿಸಿದರೆ ಇನ್ನೇನು ಇರುತ್ತಿರಲಿಲ್ಲ. ಇದೀಗ ಕೆರೆಯ ಸುತ್ತ ವಾಕಿಂಗ್ ಟ್ರ್ಯಾಕ್‌ಗಾಗಿ ಕಾಂಕ್ರೀಟ್ ಬಳಕೆಯಾಗುತ್ತಿದೆ. ಕಟ್ಟಡಗಳ ನಿರ್ಮಾಣ, ಹೈಟೆಕ್ ಸೌಲಭ್ಯ ಎಂದೆಲ್ಲ ಬೇಡದ್ದೆಲ್ಲ ಸೌಲಭ್ಯಗಳಿಗೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡಲಾಗುತ್ತಿದೆ. ಆದರೆ, ಜೀವವೈವಿಧ್ಯದ ತಾಣವಾಗಿರುವ ಕೆರೆಗಳಲ್ಲಿ ಪಕ್ಷಿ–ಪ್ರಾಣಿಗಳಿಗೆ ನೀಡಬೇಕಾದ ಸೌಲಭ್ಯಗಳಿಲ್ಲ. ವೃಕ್ಷವನಗಳಿಗೆ ಜಾಗವೇ ಇಲ್ಲ.

ಒಂದು ಕೆರೆಯ ಅಭಿವೃದ್ಧಿಗೆ ಸಿವಿಲ್ ಎಂಜಿನಿಯರ್ ಅಷ್ಟೇ ಮಾನದಂಡವಾಗಿದ್ದು, ಪರಿಸರ ಸ್ನೇಹಿಯಾದ ಸೌಲಭ್ಯಗಳು ನಗಣ್ಯವಾಗಿವೆ. ಇದು ಉದ್ಯಾನಗಳಿಗೂ ಅನ್ವಯ. ಉದ್ಯಾನಗಳಲ್ಲಿ ಗಿಡಮರಗಳಿಗಿಂತ ಪೀಠೋಪಕರಣಗಳಿಗೇ ಆದ್ಯತೆ ಎಂಬುದು ನಾಗರಿಕರ ಆರೋಪ.

'ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಸಾಕಷ್ಟು ಕೆಲಸಗಳಾಗಬೇಕಿದೆ. ವಾಯು, ನೀರು ಮಾಲಿನ್ಯವನ್ನು ಮಾಪನ ಮಾಡಿ, ಅದನ್ನು ಪ್ರಕಟಿಸುವುದಷ್ಟೇ ಕಾರ್ಯವಾಗಿದೆ. ಇಷ್ಟು ವರ್ಷಗಳಿಂದ ಇಷ್ಟಕ್ಕೇ ಸೀಮಿತವಾಗಿರುವ ಈ ಮಂಡಳಿಗೆ ಜವಾಬ್ದಾರಿ ನಿಗದಿಪಡಿಸಬೇಕಿದೆ. ಯಾವುದೇ ರೀತಿಯ ಮಾಲಿನ್ಯ ಕಂಡುಬಂದರೆ ಅದಕ್ಕೆ ಮಂಡಳಿಯನ್ನೇ ಹೊಣೆ ಮಾಡಬೇಕಿದೆ. ಇಂತಹ ನಿರೀಕ್ಷೆಗೆ ಸರ್ಕಾರದ ಅಧಿಕೃತ ಮೊಹರು ಬೇಕಿದೆ. ಇಲ್ಲದಿದ್ದರೆ ಕಾನೂನಿನಿಂದ ಆದೇಶವಾಗಬೇಕಿದೆ' ಎಂದು ಪರಿಸರ ಕಾರ್ಯಕರ್ತರು ಆಗ್ರಹಿಸುತ್ತಾರೆ.

ಉಷ್ಣ ದ್ವೀಪಗಳ ಸೃಷ್ಟಿಯೇ ಮಾರಕ



ನಗರದಲ್ಲಿ ಕೆರೆಗಳನ್ನು ನೂರಾರು ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಮಾಡುತ್ತಿದ್ದು, ಅವುಗಳನ್ನು ಉಷ್ಣ ದ್ವೀಪಗಳನ್ನಾಗಿ ನಿರ್ಮಿಸಲಾಗುತ್ತಿದೆ. ಕೆರೆಗಳ ಅಭಿವೃದ್ಧಿಗೆ ಮಾನದಂಡಗಳೇ ಇಲ್ಲ. ಪರಿಸರ ತಜ್ಞರು ಅಂದರೆ ಭೂವಿಜ್ಞಾನಿಗಳು, ಜಲವಿಜ್ಞಾನಿಗಳು, ಲಿಮ್ನಾಲಜಿಸ್ಟ್, ವಿಷಶಾಸ್ತ್ರ ತಜ್ಞರು ಮತ್ತು ಸಿವಿಲ್ ಎಂಜಿನಿಯರ್‌ಗಳಿರುವ ತಾಂತ್ರಿಕ ಅನುಮೋದನಾ ಸಮಿತಿ ರಚನೆ ಅಗತ್ಯ. ಇಲ್ಲಿ ಅನುಮೋದನೆಯಾಗಿರುವುದನ್ನು ಕಾರ್ಯಗತಗೊಳಿಸಲು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಮುಂದಾಗಬೇಕು. ಎಲ್ಲವೂ ಈ ಪ್ರಾಧಿಕಾರದ ನಿಗಾದಲ್ಲೇ ನಡೆಯಲು ಬಲ ನೀಡಬೇಕು.

ಯಾವುದೇ ಕೆರೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಇಲ್ಲದೆ, ಅದಕ್ಕೆ ತಾಂತ್ರಿಕ ಅನುಮೋದನಾ ಸಮಿತಿ ಸಮ್ಮತಿ ಇಲ್ಲದೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬಾರದು. ಈ ಎಲ್ಲ ವಿವರಗಳು ವೆಬ್‌ಸೈಟ್ ಮೂಲಕ ನಾಗರಿಕರಿಗೆ ಮುಕ್ತವಾಗಿ ಸಿಗುವ ವ್ಯವಸ್ಥೆ ಇರಬೇಕು. ನ್ಯಾಯಮೂರ್ತಿ ಎನ್.ಕೆ. ಪಾಟೀಲ್ ವರದಿಯಂತೆ ಜಿಲ್ಲಾ ಮತ್ತು ರಾಜ್ಯ ಮಟ್ಟದ ಕೆರೆ ಸಮಿತಿಗಳನ್ನು ರಚಿಸಿ ಮೇಲ್ವಿಚಾರಣೆ ಜವಾಬ್ದಾರಿ ವಹಿಸಬೇಕು. ಕೆರೆ ಹಾಗೂ ಬಫರ್ ಝೋನ್‌ನಲ್ಲಿ ರಸ್ತೆ– ಮೇಲ್ಸೇತುವೆ ಸೇರಿದಂತೆ ಯಾವ ರೀತಿಯ ಕಾಂಕ್ರೀಟ್ ಅಭಿವೃದ್ಧಿಯೂ ಆಗಬಾರದು. ಬೆಂಗಳೂರಿನಲ್ಲಿ ಉಷ್ಣಾಂಶವನ್ನು ಕಡಿಮೆ ಮಾಡಲು ಪರಿಸರವನ್ನು ಉಳಿಸಿಕೊಳ್ಳಬೇಕಿದೆ. ಪುಸ್ತಕದಲ್ಲಿ ಎಲ್ಲವನ್ನೂ ತೋರುವ ಬದಲು ಅದನ್ನು, ಪರಿಸರಸ್ನೇಹಿ ಅಭಿವೃದ್ಧಿಗಳನ್ನೂ ಮಾತ್ರ ಕೈಗೊಳ್ಳುವಂತಾಗಬೇಕಿದೆ.

ರಾಮ್‌ಪ್ರಸಾದ್, ಫ್ರೆಂಡ್ಸ್ ಆಫ್ ಲೇಕ್ಸ್

ಪರಿಸರದ ಮೇಲಿನ ಪರಿಣಾಮ ಮೌಲ್ಯಮಾಪನ ಕಡ್ಡಾಯವಾಗಲಿ

ನಗರ ಮತ್ತು ಅದರ ಜನಸಂಖ್ಯೆಯ ಸುಸ್ಥಿರ ಬೆಳವಣಿಗೆಗೆ ಕೆರೆಗಳು, ಉದ್ಯಾನಗಳು ಮತ್ತು ಮರಗಳು ನಿರ್ಣಾಯಕ. ವಸತಿ ಮತ್ತು ಇತರ ಮೂಲಸೌಕರ್ಯಗಳ ಅಗತ್ಯವಿದ್ದರೂ, ಸೂಕ್ಷ್ಮ ಹವಾಮಾನ ಬದಲಾವಣೆಯನ್ನು ತಗ್ಗಿಸಲು ಸುಸ್ಥಿರ ಅಭಿವೃದ್ಧಿಯಾಗಬೇಕಿದೆ. ಅಭಿವೃದ್ಧಿಯ ಹೆಸರಿನಲ್ಲಿ ನಾವು ಕಳೆದುಕೊಂಡಿರುವ ಉದ್ಯಾನ ನಗರವೆಂಬ ಪಟ್ಟವನ್ನು ನಾವು ಮರಳಿ ಪಡೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಮುಂಬರುವ ಮತ್ತು ಪ್ರಸ್ತುತ ಎಲ್ಲಾ ಯೋಜನೆಗಳಿಗೆ ಪರಿಸರದ ಮೇಲಿನ ಪರಿಣಾಮ ಮೌಲ್ಯಮಾಪನ (ಇಐಎ) ಕಡ್ಡಾಯವಾಗಿರಬೇಕು. ಪ್ರತಿ ವರ್ಷಕ್ಕೆ ಮಾಸ್ಟರ್ ಪ್ಲಾನ್ ನಿರಂತರವಾಗಿ ರೂಪುಗೊಳ್ಳಬೇಕು. ನಗರದಲ್ಲಿ ವಾರ್ಡ್‌ವಾರು ಭೂ-ಬಳಕೆಯ ಬದಲಾವಣೆಗಳನ್ನು ಪಟ್ಟಿ ಮಾಡಿ, ಜನಸ್ನೇಹಿ ಹವಾಮಾನ ರೂಪುಗೊಳ್ಳಲು ನೆರವಾಗಬೇಕು.



ವಿನೋದ್ ಜೇಕಬ್, ಪ್ರಧಾನ ವ್ಯವಸ್ಥಾಪಕ, ನಮ್ಮ ಬೆಂಗಳೂರು ಫೌಂಡೇಷನ್

ಅಭಿವೃದ್ಧಿ ಜೀವಕ್ಕೆ ಮಾರಕವಾಗದಿರಲಿ

ನಗರ ಅರಣ್ಯಗಳನ್ನು ಉಳಿಸಿಕೊಳ್ಳುವುದಕ್ಕೆ ಒತ್ತು ಕೊಟ್ಟು, ರಾಜಕಾಲುವೆಗಳನ್ನು ಪುನರ್ ಅಭಿವೃದ್ಧಿಗೊಳಿಸಿ, ಕೆರೆಗಳಿಗೆ ಶುದ್ಧ ನೀರು ತುಂಬಿಸುವ ಕೆಲಸ ಆಗಲೇಬೇಕು. ಇಷ್ಟಾದರೆ ಚೇತರಿಕೆ ಕಂಡಂತೆ. ನಗರದ ಹೊರ ವಲಯಗಳಲ್ಲಿ ಹೊಸ ಬಡಾವಣೆಗಳು ನಿರ್ಮಾಣವಾದಾಗ, ಶೇಕಡ 50ರಷ್ಟು ವನ ನಿರ್ಮಾಣವಾಗಬೇಕು. ವಾಹನ ದಟ್ಟಣೆ ಕಡಿಮೆಯಾಗಿಸಲು ಹಲವು ಹತ್ತು ಪ್ರಚಲಿತ ಮಾರ್ಗಗಳಿದ್ದು, ಅನುಷ್ಠಾನಕ್ಕೆ ತರಬೇಕಿದೆ. ಪರಿಸರ ನಿರ್ವಹಣಾ ಹಾಗೂ ನಿಯಂತ್ರಣಾ ಮಂಡಳಿಗಳು ಪರಿಸರಕ್ಕೆ ಮಾರಕವಾಗುವ ಕಾಮಗಾರಿಗಳಿಗೆ ನಿರ್ದಾಕ್ಷಿಣ್ಯವಾಗಿ ತಡೆ ಹಾಕಬೇಕು. ಜೀವ ಇದ್ದರೆ ಮಾತ್ರ ಜೀವನ. ಅಭಿವೃದ್ಧಿ ಜೀವಕ್ಕೆ ಮಾರಕವಾಗದಿರಲಿ.



ಡಾ.ಟಿ.ಜೆ. ರೇಣುಕಾ ಪ್ರಸಾದ್, ಭೂವಿಜ್ಞಾನ ನಿವೃತ್ತ ಪ್ರಾಧ್ಯಾಪಕ, ಬೆಂಗಳೂರು ವಿಶ್ವವಿದ್ಯಾಲಯ

ಚಿತ್ರಾವಳಿ



ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 85ನೇ ಶ್ರೀರಾಮ ನವಮಿ ಸಂಗೀತೋತ್ಸವದಲ್ಲಿ ಜಯತೀರ್ಥ ಮೇವುಂಡಿ ಅವರು ಗುರುವಾರ ಸಂಗೀತ ಕಛೇರಿ ನಡೆಸಿಕೊಟ್ಟರು. ತಬಲಾ ವಾದಕ ಪಾಂಡುರಂಗ್ ಪವಾರ್ ಸಾಥ್ ನೀಡಿದರು. –ಪ್ರಜಾವಾಣಿ ಚಿತ್ರ



ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯನ್ನಾಗಿ ತಮ್ಮೇಶ್ ಗೌಡ ಅವರನ್ನು ಆಯ್ಕೆ ಮಾಡಿರುವ ವರಿಷ್ಠರ ನಿರ್ಧಾರವನ್ನು ಖಂಡಿಸಿ, ಟಿಕೆಟ್ ಆಕಾಂಕ್ಷಿಗಳಾಗಿದ್ದ ಕೆ.ಎ. ಮುನೀಂದ್ರ ಕುಮಾರ್ ಮತ್ತು ಎ. ರವಿ ಬೆಂಬಲಿಗರು, ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು


ಬ್ರಿಟನ್‌ನಲ್ಲಿ ಭಯೋತ್ಪಾದನೆಗೆ ಜಾಗವಿಲ್ಲ: ಸುನಕ್

ಲಂಡನ್ (ರಾಯಿಟರ್ಸ್): ಬ್ರಿಟನ್‌ನಲ್ಲಿ ಭಯೋತ್ಪಾದನೆಗೆ ಯಾವುದೇ ಅವಕಾಶವಿಲ್ಲ ಎಂದು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಗುರುವಾರ ಹೇಳಿದ್ದಾರೆ.

ಲಂಡನ್‌ನಲ್ಲಿನ ಭಾರತೀಯ ರಾಯಭಾರ ಕಚೇರಿ ಎದುರು ಏಪ್ರಿಲ್ ಆರಂಭದಲ್ಲಿ ನಡೆದ ಹಿಂಸಾಚಾರದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ರಿಷಿ ಸುನಕ್ ದೂರವಾಣಿಯಲ್ಲಿ ಮಾತುಕತೆ ನಡೆಸಿದರು. ಈ ಹಿಂಸಾಚಾರವನ್ನು ಸುನಕ್ ಖಂಡಿಸಿದ್ದಾರೆ ಎಂದು ಅವರ ಕಚೇರಿ ಮಾಹಿತಿ ನೀಡಿದೆ.

ನಿಧನ ವಾರ್ತೆ

ಫ್ರಾನ್ಸಿಸ್ ಶಾಂತಕುಮಾರ್



ಬೆಂಗಳೂರು: ಕರ್ನಾಟಕ ದಲಿತ ಕ್ರೈಸ್ತರ ಪರ ಹೋರಾಟಗಾರ ಫ್ರಾನ್ಸಿಸ್ ಶಾಂತಕುಮಾರ್ (60) ಹೃದಯಾಘಾತದಿಂದ ಗುರುವಾರ ನಿಧನರಾದರು.

ಇವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ. ಶಾಂತಕುಮಾರ್ ಅವರ ಮೃತದೇಹವನ್ನು ರಾಯಪುರದ ಸಂತ ರಾಯಪ್ಪ ಮತ್ತು ಚಿನ್ನಪ್ಪರ ದೇವಾಲಯದಲ್ಲಿ ಸಾರ್ವಜನಿಕ ದರ್ಶನಕ್ಕೆ ಇರಿಸಲಾಗಿತ್ತು. ಬಳಿಕ ಮೈಸೂರು ರಸ್ತೆಯಲ್ಲಿನ ಕ್ರೈಸ್ತಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಕರಿಗೌಡ ಜಿ.ಎಸ್.



ಬೆಂಗಳೂರು: ಬೆಸ್ಕಾಂನ ನಿವೃತ್ತ ಸಹಾಯಕ ಎಂಜಿನಿಯರ್ (ಜೆ.ಇ) ಕರಿಗೌಡ ಜಿ.ಎಸ್. (68) ಅವರು ಗುರುವಾರ ನಿಧನರಾದರು.

ನಾಗರಬಾವಿ ಅನ್ನಪೂರ್ಣೇಶ್ವರಿನಗರದಲ್ಲಿ ವಾಸವಿದ್ದ ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಸ್ವಂತ ಊರಾದ ಮಂಡ್ಯ ಜಿಲ್ಲೆಯ ಚಿಕ್ಕೋನಹಳ್ಳಿ ಗ್ರಾಮದಲ್ಲಿ ಕರಿಗೌಡ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ರಾಜ್ಯದ 4,131 ಗ್ರಾಮಗಳಲ್ಲಿ ಕಾರ್ಯಾಚರಣೆ

ಮದ್ಯ ಆಮಿಷ ತಡೆಗೆ 'ನವಜೀವನ ಸಮಿತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕೆಲ ರಾಜಕಾರಣಿಗಳು ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ಮದ್ಯದ ಆಮಿಷವೊಡ್ಡುತ್ತಿರುವ ಪ್ರಕರಣಗಳು ವರದಿಯಾಗಿದ್ದು, ಇಂಥ ಕೃತ್ಯವನ್ನು ತಡೆಯಲು 'ಶ್ರೀಕ್ಷೇತ್ರ ಧರ್ಮಸ್ಥಳದ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ' ನೇತೃತ್ವದಲ್ಲಿ ರಾಜ್ಯದಾದ್ಯಂತ ನವಜೀವನ ಸಮಿತಿಗಳನ್ನು ರಚಿಸಲಾಗಿದೆ.

ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಮಾರ್ಗದರ್ಶನದಲ್ಲಿ ವೇದಿಕೆ ವತಿಯಿಂದ 1,648 ಮದ್ಯವರ್ಜನ ಶಿಬಿರಗಳನ್ನು ನಡೆಸಲಾಗಿದೆ. ಶಿಬಿರದಲ್ಲಿ ಪಾಲ್ಗೊಂಡು ಮದ್ಯಪಾನ ತ್ಯಜಿಸಿರುವ ವ್ಯಕ್ತಿಗಳೇ ಸಮಿತಿಯ ಸದಸ್ಯರಾಗಿ ಮದ್ಯ ವಿತರಣೆ ಹಾಗೂ ಸಾಗಣೆ ವಿರುದ್ಧ ಧ್ವನಿ ಎತ್ತಲು ಸಜ್ಜಾಗಿದ್ದಾರೆ.

'ಮದ್ಯಮುಕ್ತ ಸಮಾಜ ನಿರ್ಮಾಣಕ್ಕಾಗಿ ವೇದಿಕೆ 31 ವರ್ಷಗಳಿಂದ ಕೆಲಸ ಮಾಡುತ್ತಿದೆ. ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕೆಲ ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಮದ್ಯದ ಆಮಿಷವೊಡ್ಡಿ ಗ್ರಾಮೀಣ ಪ್ರದೇಶಗಳ ಜನರ ಜೀವನವನ್ನೇ ಹಾಳು ಮಾಡುತ್ತಿದ್ದಾರೆ. ಮದ್ಯ ತ್ಯಜಿಸಿದವರು ಪುನಃ ಮದ್ಯದ ಚಟಕ್ಕೆ ದಾಸರಾಗುವ ಭಯವಿದೆ. ಹೀಗಾಗಿ, 4,131 ನವಜೀವನ ಸಮಿತಿಗಳನ್ನು ರಚಿಸಿ ಮದ್ಯದ ವಿರುದ್ಧ ಹೋರಾಟ ಆರಂಭಿಸಿದ್ದೇವೆ' ಎಂದು ವೇದಿಕೆಯ ಕಾರ್ಯದರ್ಶಿ ವಿವೇಕ್ ವಿ. ಪ್ಯಾಸ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



ವಿವೇಕ್ ಪಾಸ್ಯಾ

'ರಾಜ್ಯದ ಬಹುತೇಕ ಗ್ರಾಮಗಳಲ್ಲಿ ಏಪ್ರಿಲ್ 20ರಿಂದ ಸಮಿತಿಯ ಕಾರ್ಯಾಚರಣೆಗಳು ಶುರುವಾಗಲಿವೆ. ಯಾರಾದರೂ ಮದ್ಯ ಹಂಚಿದರೆ, ಸಾಗಿಸಿದರೆ ಅಥವಾ ಆಮಿಷವೊಡ್ಡಿದರೆ ಅದರ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿ ಹಾಗೂ ತಾಲ್ಲೂಕು ಅಧಿಕಾರಿಗಳಿಗೆ ಮಾಹಿತಿ ನೀಡಲಿದ್ದಾರೆ. ದಾಳಿ ಮಾಡಿಸಿ ಮದ್ಯವನ್ನು ಜಪ್ತಿ ಮಾಡಿಸಿ ಪ್ರಕರಣ ದಾಖಲಿಸುವವರೆಗೂ ಕಾರ್ಯಾಚರಣೆ ನಡೆಸಲಿದ್ದಾರೆ. ಸದಸ್ಯರಿಗೆ ಈಗಾಗಲೇ ತರಬೇತಿ ನೀಡಲಾಗಿದ್ದು, ಕಾವಲು ಸಮಿತಿ ರೀತಿಯಲ್ಲಿ ಕೆಲಸ ಮಾಡಲಿದ್ದಾರೆ' ಎಂದರು.

ಅಭಿಯಾನ: 'ಮದ್ಯದಿಂದಾಗಿ ಕುಟುಂಬಗಳು ಬೀದಿ ಪಾಲಾಗಿವೆ. ರಾಜ್ಯದಲ್ಲಿ ಮದ್ಯ ಮಾರಾಟ ನಿಷೇಧ ಮಾಡುವುದು ಕಷ್ಟ. ಆದರೆ, ಅಸಾಧ್ಯವೇನಲ್ಲ. ಮುಂಬರುವ ಸರ್ಕಾರವಾದರೂ ಮದ್ಯ ನಿಷೇಧ ಮಾಡಬೇಕು. ಈ ಬಾರಿ ವೇದಿಕೆಯಿಂದ ಮದ್ಯಮುಕ್ತ ಮತದಾನ ಮಾಡಲು ಪಣ ತೊಟ್ಟಿದ್ದೇವೆ' ಎಂದು ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ರಾಜಣ್ಣ ಕೊರವಿ ತಿಳಿಸಿದರು.

ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ಲಾಭ ₹9.05 ಕೋಟಿ

ಬೆಂಗಳೂರು: ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತವು 2022–23ನೇ ಹಣಕಾಸು ವರ್ಷದಲ್ಲಿ ₹9.05 ಕೋಟಿ ನಿವ್ವಳ ಲಾಭ ಗಳಿಸಿದ್ದು, ಶೇ 120ರಷ್ಟು ಪ್ರಗತಿ ಸಾಧಿಸಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಠೇವಣಿ ಮೊತ್ತ ₹383 ಕೋಟಿ ಮತ್ತು ಸಾಲ ₹256 ಕೋಟಿ ಇದ್ದು, ಒಟ್ಟು ವಹಿವಾಟು ₹639 ಕೋಟಿಯಷ್ಟು ಆಗಿದೆ. ಬ್ಯಾಂಕ್‌ನ ಎನ್‌ಪಿಎ ಶೂನ್ಯಕ್ಕೆ ಇಳಿಕೆ ಕಂಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನಮ್ಮ ಬ್ಯಾಂಕ್, ರಜತ ಮಹೋತ್ಸವ ವರ್ಷಕ್ಕೆ ಕಾಲಿಟ್ಟಿದ್ದು, ಶಾಖೆಗಳ ವಿಸ್ತರಣೆಯೊಂದಿಗೆ ಮತ್ತಷ್ಟು ಹೊಸ ಬ್ಯಾಂಕಿಂಗ್ ಸೇವೆಗಳನ್ನು ಪರಿಚಯಿಸುವ ಯೋಜನೆಯನ್ನು ಆಡಳಿತ ಮಂಡಳಿ ಹಮ್ಮಿಕೊಂಡಿದೆ ಎಂದು ಅಧ್ಯಕ್ಷ ಸದಾಶಿವರೆಡ್ಡಿ ತಿಳಿಸಿದ್ದಾರೆ.

'ವೀರಶೈವ-ಲಿಂಗಾಯತರ ಕಡೆಗಣನೆ'

ಪೀಣ್ಯ ದಾಸರಹಳ್ಳಿ: 'ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ನಗರದಲ್ಲಿ ವೀರಶೈವ ಲಿಂಗಾಯತ ಸಮುದಾಯದವರನ್ನು ಎಲ್ಲಾ ಪಕ್ಷಗಳು ಕಡೆಗಣಿಸಿವೆ' ಎಂದು ವೀರಶೈವ ಲಿಂಗಾಯತ ಕ್ಷೇಮಾಭಿವೃದ್ಧಿ ವೇದಿಕೆಯ ಪ್ರಧಾನ ಕಾರ್ಯದರ್ಶಿ ಬಸವರಾಜಣ್ಣ ಆರೋಪಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎಲ್ಲಾ ಪಕ್ಷದ ರಾಜಕೀಯ ಮುಖಂಡರು ತಮ್ಮ ಹಿಂಬಾಲಕರಿಗೆ, ಕುಲಬಾಂಧವರಿಗೆ ಟಿಕೆಟ್ ಕೊಡಿಸುವ ಮೂಲಕ ನಮ್ಮ ಸಮುದಾಯಕ್ಕೆ ಅನ್ಯಾಯ ಮಾಡಿದ್ದಾರೆ. ನಮ್ಮ ಸಮುದಾಯ ಜಾಗೃತವಾಗಿದ್ದು, ಈ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿದೆ ನಿರ್ಲಕ್ಷ್ಯ ಮಾಡಿದ ಪಕ್ಷಕ್ಕೆ ತಕ್ಕ ಪಾಠ ಕಲಿಸಲು ಸಮಾಜವು ಸದಾ ಸಿದ್ಧವಿದೆ' ಎಂದು ಎಚ್ಚರಿಸಿದರು.

ವೇದಿಕೆಯ ಅಧ್ಯಕ್ಷ ಬಿ.ಟಿ. ಸುರೇಶ್. ಪೋಷಕ ಎಂ.ಎಸ್. ಬಸವರಾಜು, ಖಜಾಂಚಿ ಎ.ಆರ್. ಶಿವಶಂಕರ್ ಇದ್ದರು.

ಉದಕಮಂಡಲ ರೇಸ್

ಸಮ್‌ಥಿಂಗ್ ರಾಯಲ್ ಗೆಲ್ಲುವ ನಿರೀಕ್ಷೆ

ನೀಲ್‌ಗಿರೀಸ್ 1000 ಗಿನ್ನೀಸ್ ಶುಕ್ರವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಮ್‌ಥಿಂಗ್ ರಾಯಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 11:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ

1ನೇ ರೇಸ್: ಅಟೆನ್‌ಬೊರೊ 1, ಕರೆಂಟ್ ವ್ಯೂ 2, ಬ್ಲ್ಯಾಕ್ ಲೇಬಲ್ 8
2ನೇ ರೇಸ್: ಜುಕಾರ್ಡಿ 5, ಡ್ಯಾಜ್ಲಿಂಗ್ ಪ್ರಿನ್ಸೆಸ್ 1, ಎಂಬ್ಯಾರ್ಕ್‌ಮೆಂಟ್ 3
3ನೇ ರೇಸ್: ಏಂಜೆಲ್ ಹಾರ್ಟ್ 4, ಗ್ಲೋರಿಯಸ್ ಗ್ರೇಸ್ 8, ಟೈಮ್‌ಲೆಸ್ ರೊಮಾನ್ಸ್ 2
4ನೇ ರೇಸ್: ಸುಪ್ರೀಮ್ ಡ್ಯಾನ್ಸ್ 2, ಆಲ್ಬಿನಸ್ 4, ಗ್ರ್ಯಾಂಡಿಯೋಸ್ 8
5ನೇ ರೇಸ್: ಸಮ್‌ಥಿಂಗ್ ರಾಯಲ್ 11, ಗ್ಯಾಲಕ್ಟಿಕಸ್ 4, ಸೆಮಿನೋಲ್ ವಿಂಡ್ 9
6ನೇ ರೇಸ್: ರೂಬಿರೋಸ 2, ಗ್ಯಾಲಂಟ್ರಿ 3, ಅಡ್ಮಿರಲ್ ಷಾ 7
7ನೇ ರೇಸ್: ವಿನ್ನಿಂಗ್ ಲೆಗಸಿ 6, ಅಗಸ್ಟ 3, ಆಂಬರ್ ಲೈಟ್ನಿಂಗ್ 7

ಉತ್ತಮ ಬೆಟ್: ರೂಬಿರೋಸ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸುಳ್ಯ ತಾಲ್ಲೂಕಿನ ಅಜ್ಜಾವರ ಗ್ರಾಮದಲ್ಲಿ ಕೆರೆಗೆ ಇಳಿದಿದ್ದ ಆನೆ ಹಿಂಡು

ಕೆರೆಯಲ್ಲಿ ಸಿಲುಕಿದ್ದ ಕಾಡಾನೆಗಳ ರಕ್ಷಣೆ

ಪ್ರಜಾವಾಣಿ ವಾರ್ತೆ

ಸುಳ್ಯ (ದಕ್ಷಿಣ ಕನ್ನಡ): ತಾಲ್ಲೂಕಿನ ಅಜ್ಜಾವರದಲ್ಲಿ ರೈತರೊಬ್ಬರ ಜಮೀನಿನಲ್ಲಿಯ ದೊಡ್ಡ ಹೊಂಡ (ಕೆರೆ)ದಲ್ಲಿ ಸಿಲುಕಿದ್ದ ಎರಡು ಮರಿಯಾನೆಗಳ ಸಹಿತ ನಾಲ್ಕು ಕಾಡಾನೆಗಳನ್ನು ಸ್ಥಳೀಯರು ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ ನೆರವಿನಿಂದ ಗುರುವಾರ ರಕ್ಷಣೆ ಮಾಡಲಾಯಿತು.

ಅಜ್ಜಾವರ ಗ್ರಾಮದ ತುದಿಯಡ್ಕ ಸಂತೋಷ್ ಅವರ ತೋಟದೊಳಗೆ ಬಂದಿದ್ದ ಎರಡು ದೊಡ್ಡ ಕಾಡಾನೆಗಳು ಹಾಗೂ ಎರಡು ಮರಿಯಾನೆಗಳು ಕೆರೆಗೆ ಇಳಿದಿದ್ದವು. ಮೇಲೆ ಬರಲಾಗದೆ ಅಲ್ಲೇ ಸಿಲುಕಿದ್ದವು.

ಸ್ಥಳೀಯರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಕೆರೆಯ ಅಂಚಿನಲ್ಲಿ ಮಣ್ಣು ಅಗೆದು ತೆಗೆದು ಆನೆಗಳು ಮೇಲಕ್ಕೆ ಬರಲು ದಾರಿ ಮಾಡಿಕೊಟ್ಟರು. ಒಂದು ಮರಿಯಾನೆ ಮತ್ತು ಎರಡು ದೊಡ್ಡ ಆನೆಗಳು ಕೆರೆಯಿಂದ ಮೇಲೆ ಬಂದವು. ಆದರೆ, ಭಯಗೊಂಡಿದ್ದ ಮರಿಯಾನೆಯೊಂದು ನೀರಿನಲ್ಲೇ ಉಳಿದಿತ್ತು. ಬಳಿಕ ಸ್ಥಳೀಯರು ನೀರಿಗಿಳಿದು ಆನೆ ಮರಿಯನ್ನು ಮೇಲಕ್ಕೆ ದೂಡಿದರು. ಮೇಲೆ ಬಂದ ಆ ಮರಿಯಾನೆಯನ್ನು ಆನೆ ಹಿಂಡಿನ ಜೊತೆ ಸೇರಿಸಿದರು.

ಆನೆಗಳನ್ನು ಕಾಡಿಗೆ ಬಿಡಲಾಗಿತ್ತು. ಅದರಲ್ಲಿ ಮರಿಯಾನೆಯೊಂದು ತಾಯಿಯ ಜೊತೆ ಹೋಗದೇ ಅಜ್ಜಾವರಕ್ಕೆ ಮರಳಿದೆ.

'ತಾಯಿ ಆನೆಯು ರಾತ್ರಿ ವೇಳೆ ಕೆರೆಯ ಬಳಿಗೆ ಬಂದು ಮರಿಯನ್ನು ಕರೆದುಕೊಂಡು ಹೋಗುವ ಸಾಧ್ಯತೆ ಇದೆ. ಹಾಗಾಗಿ ಇಂದು ರಾತ್ರಿ ಮರಿಯಾನೆಯ ಮೇಲೆ ನಿಗಾ ಇಟ್ಟಿದ್ದೇವೆ' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ದಿನೇಶ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬೇಸಿಗೆ ವೇಳೆ ಕಾಡಿನಲ್ಲಿ ಆಹಾರ ಮತ್ತು ನೀರಿನ ಕೊರತೆ ಎದುರಾದಾಗ ಜನವಸತಿ ಪ್ರದೇಶಕ್ಕೆ ಆನೆಗಳು ಬರುವುದು ಈ ಪ್ರದೇಶದಲ್ಲಿ ಸಾಮಾನ್ಯ. ಅಜ್ಜಾವರ, ಆಲೆಟ್ಟಿ ಗ್ರಾಮಗಳಲ್ಲಿ ಆನೆಗಳ ಹಾವಳಿ ಜೋರಾಗಿದ್ದು, ಭಾರಿ ಪ್ರಮಾಣದ ಕೃಷಿ ನಾಶ ಆಗಾಗ ನಡೆಯುತ್ತಲೇ ಇದೆ' ಎನ್ನುತ್ತಾರೆ ಸ್ಥಳೀಯರು.



ಸುಳ್ಯ ತಾಲ್ಲೂಕಿನ ಅಜ್ಜಾವರ ಗ್ರಾಮದ ತುದಿಯಡ್ಕದಲ್ಲಿ ತೋಟದ ನಡುವಿನ ಹೊಂಡದಲ್ಲಿ ಸಿಲುಕಿದ್ದ ಕಾಡಾನೆಗಳು

ತಾಯಿ ಮಡಿಲು ಸೇರದ ಮರಿಯಾನೆ

ಸುಳ್ಯದ ಅಜ್ಜಾವರದಲ್ಲಿ ಗುರುವಾರ ರಕ್ಷಣೆ ಮಾಡಲಾದ ನಾಲ್ಕು ಕಾಡಾನೆಗಳಲ್ಲಿ ಮರಿ ಆನೆಯೊಂದು ತಾಯಿಯನ್ನು ಸೇರಿಕೊಳ್ಳುವ ಬದಲು ಮತ್ತೆ ತೋಟಕ್ಕೆ ಮರಳಿದೆ. 'ಮರಿಯಾನೆಗೆ ಮೂರು ತಿಂಗಳು ಆಗಿರಬಹುದು. ಅದು ಒಂಟಿಯಾಗಿ ಅಜ್ಜಾವರದ ರಬ್ಬರ್ ತೋಟದಲ್ಲಿ ಅಲೆದಾಡುತ್ತಿದೆ. ಅದಕ್ಕೆ ಸರಿಯಾಗಿ ಆಹಾರವೂ ಸಿಕ್ಕಿಲ್ಲ. ಮನುಷ್ಯರನ್ನು ಕಂಡರೆ ಆಪ್ತರಂತೆ ವರ್ತಿಸುತ್ತಿದೆ. ಅವರನ್ನು ಹಿಂಬಾಲಿಸಿಕೊಂಡು ಬರುವ ಪ್ರಯತ್ನ ನಡೆಸುತ್ತಿದೆ' ಎಂದು ಸ್ಥಳೀಯರೊಬ್ಬರು ಮಾಹಿತಿ ನೀಡಿದರು.

'ಮನುಷ್ಯರು ಮುಟ್ಟಿದರು ಎಂಬ ಕಾರಣಕ್ಕೆ ತಾಯಿಯು ಮರಿಯಾನೆಯನ್ನು ಹತ್ತಿರ ಸೇರಿಸಿಕೊಳ್ಳುತ್ತಿಲ್ಲ' ಎಂದು ಸ್ಥಳೀಯರು ಹೇಳಿದ್ದಾರೆ.

ಆದರೆ, ವನ್ಯಜೀವಿ ತಜ್ಞರು ಇದನ್ನು ಒಪ್ಪುವುದಿಲ್ಲ. 'ಮನುಷ್ಯ ಮುಟ್ಟಿದ ಕಾರಣ ಯಾವ ತಾಯಿ ಆನೆಯೂ ಮರಿಯನ್ನು ದೂರ ಇಡುವುದಿಲ್ಲ. ಮರಿಯಾನೆಯು ಊರಿಗೆ ಮರಳುವುದಕ್ಕೆ ಬೇರೇನೋ ಕಾರಣವಿರಬಹುದು' ಎಂದು ವನ್ಯಜೀವಿ ತಜ್ಞರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಇಂಡಿಯನ್ ಮನಿ ಕಂಪನಿ ವಿರುದ್ಧ 6 ಎಫ್‌ಐಆರ್ • ನ್ಯಾಯಾಂಗ ಬಂಧನಕ್ಕೆ ಸಿಇಒ ಸುಧೀರ್

'ಚಂದಾದಾರಿಕೆ' ಹೆಸರಿನಲ್ಲಿ ವಂಚನೆ ಗಾಳ

• ಸಂತೋಷ ಜಿಗಳಿಕೊಪ್ಪ


ಸಿ.ಎಸ್‌. ಸುಧೀರ್

ಬೆಂಗಳೂರು: ಹಣಕಾಸು ವಿಷಯದಲ್ಲಿ ಸಲಹೆ ನೀಡುವ ಉದ್ದೇಶವಿಟ್ಟುಕೊಂಡಿದ್ದ 'ಇಂಡಿಯನ್ ಮನಿ ಡಾಟ್ ಕಾಮ್' ಕಂಪನಿ, ಹಲವು ಸಾಧಕರ ಹೆಸರು ಹಾಗೂ ಅವರಿಂದ ತರಬೇತಿ ಕೊಡಿಸುವ ನೆಪದಲ್ಲಿ ಸಾವಿರಾರು ಜನರಿಂದ 'ಚಂದಾದಾರಿಕೆ' ಹಣ ಪಡೆದು ವಂಚಿಸಿರುವ ಸಂಗತಿ ಪೊಲೀಸರ ತನಿಖೆಯಿಂದ ಹೊರಬಿದ್ದಿದೆ.

ಅರೆಕಾಲಿಕ ಕೆಲಸದ ಹೆಸರಿನಲ್ಲಿ ಯುವಕ–ಯುವತಿಯರನ್ನು ವಂಚಿಸಿರುವ ಪ್ರಕರಣದ ತನಿಖೆ ಕೈಗೊಂಡಿರುವ ಬನಶಂಕರಿ ಠಾಣೆ ಪೊಲೀಸರು, ಕಂಪನಿಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಸಿ.ಎಸ್. ಸುಧೀರ್ ಹಾಗೂ ಮಾನವ ಸಂಪನ್ಮೂಲ ವಿಭಾಗದ ರಘು ಅವರನ್ನು ಬಂಧಿಸಿದ್ದಾರೆ. ಇಬ್ಬರೂ ನ್ಯಾಯಾಂಗ ಬಂಧನದಲ್ಲಿದ್ದು, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲು ಪೊಲೀಸರು ತಯಾರಿ ಆರಂಭಿಸಿದ್ದಾರೆ.

ಮುಖ್ಯಾಂಶಗಳು

- ರೈತರು, ವಿದ್ಯಾರ್ಥಿಗಳು, ಉದ್ಯೋಗಸ್ಥರಿಗೆ ವಂಚನೆ
- ಮಾನವ ಸಂಪನ್ಮೂಲ ವಿಭಾಗದ ಉದ್ಯೋಗಿ ಬಂಧನ
- ಸಿಸಿಬಿಗೆ 'ಫ್ರೀಡಂ ಆ್ಯಪ್' ತನಿಖೆ ಹೊಣೆ ?

ಕಂಪನಿಯ ಆಮಿಷಕ್ಕೆ ಒಳಗಾಗಿ ಕೆಲ ತಿಂಗಳು ಕೆಲಸ ಮಾಡಿ ವಂಚನೆಗೀಡಾಗಿದ್ದ ಯುವಕ–ಯುವತಿಯರು ಬನಶಂಕರಿ ಠಾಣೆಯಲ್ಲಿ ಏಪ್ರಿಲ್ 4ರಂದು ದೂರು ದಾಖಲಿಸಿದ್ದರು. ಬಂಧನ ಭೀತಿಯಲ್ಲಿದ್ದ ಸುಧೀರ್ ಹಾಗೂ ಇತರರು, ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿದ್ದರು.

ಇದರ ಮಧ್ಯೆಯೇ ಕಂಪನಿಯ ಕೆಲ ಉದ್ಯೋಗಿಗಳು ಪ್ರತ್ಯೇಕ ದೂರು ನೀಡಿದ್ದಾರೆ. ಇದರನ್ವಯ ಹೊಸದಾಗಿ ಐದು ಎಫ್‌ಐಆರ್ ದಾಖಲಾಗಿವೆ. ಈ ಪ್ರಕರಣಗಳಲ್ಲಿ ಸುಧೀರ್ ಹಾಗೂ ರಘು ಬಂಧನವಾಗಿದ್ದು, ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

'ಕೆಲಸ ಮಾಡುವ ಉದ್ಯೋಗಿಗಳು ಮಾತ್ರವಲ್ಲದೇ, ಜನರಿಗೂ ಕಂಪನಿಯಿಂದ ವಂಚನೆಯಾಗಿರುವುದು ಪ್ರಾಥಮಿಕ ತನಿಖೆಯಿಂದ ತಿಳಿಯುತ್ತಿದೆ. ವಂಚನೆ ಉದ್ದೇಶದಿಂದಲೇ ಕಂಪನಿಯವರು 'ಫ್ರೀಡಂ ಆ್ಯಪ್' ಅಭಿವೃದ್ಧಿಪಡಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಕ್ರಮವಾಗಿ 6 ಎಫ್‌ಐಆರ್‌ಗಳು ದಾಖಲಾಗಿದ್ದು, ಪ್ರಕರಣದಲ್ಲಿ ಕೋಟ್ಯಂತರ ರೂಪಾಯಿ ವಂಚನೆ ಆಗಿರುವ ಅನುಮಾನವಿದೆ. ತನಿಖೆ ಹೊಣೆಯನ್ನು ಸಿಸಿಬಿಗೆ ವಹಿಸಲು ಚಿಂತನೆ ನಡೆದಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ರೈತರು, ಅಧಿಕಾರಿಗಳ ಹೆಸರು ದುರ್ಬಳಕೆ: 'ಕೃಷಿಯಲ್ಲಿ ಸಾಧನೆ ಮಾಡಿರುವ ರೈತರು ಹಾಗೂ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅಧಿಕಾರಿಯಾದವರ ಹೆಸರನ್ನು ಕಂಪನಿ ದುರ್ಬಳಕೆ ಮಾಡಿಕೊಂಡಿರುವುದು ತನಿಖೆಯಲ್ಲಿ ಕಂಡುಬಂದಿದೆ' ಎಂದು ಪೊಲೀಸರು ಹೇಳಿದರು.

'ಐಪಿಎಸ್ ಅಧಿಕಾರಿ ರವಿ ಚನ್ನಣ್ಣನವರ ಫೋಟೊ ಹಾಗೂ ಹೆಸರು ಹೇಳಿಕೊಂಡು ಅಮಾಯಕ ಯುವಕರ ದಿಕ್ಕು ತಪ್ಪಿಸಲಾಗಿದೆ. ಚನ್ನಣ್ಣನವರ ರೀತಿಯಲ್ಲಿ ನೀವೂ ಐಪಿಎಸ್ ಅಧಿಕಾರಿಯಾಗಬಹುದೆಂದು ಹೇಳಿ ತರಬೇತಿ ನೆಪದಲ್ಲಿ ಹಣ ಪಡೆದು ವಂಚಿಸಿರುವ ಮಾಹಿತಿ ಇದೆ. ಈ ಬಗ್ಗೆ ಚನ್ನಣ್ಣನವರ ಅವರಿಂದ ಮಾಹಿತಿ ಪಡೆಯಲಾಗುವುದು' ಎಂದು ತಿಳಿಸಿದರು.

'ಕೃಷಿಯಲ್ಲಿ ಲಕ್ಷ ಲಕ್ಷ ಗಳಿಸುವುದು ಹೇಗೆ? ಉದ್ಯಮ ಆರಂಭಿಸುವುದು ಹೇಗೆ? ಮನೆಯಲ್ಲೇ ಕುಳಿತು ದುಡಿಯುವುದು ಹೇಗೆ? ಸ್ಪರ್ಧಾತ್ಮಕ ಪರೀಕ್ಷೆ ಸೇರಿ 30ಕ್ಕೂ ಹೆಚ್ಚು ವಿಷಯಗಳ ಬಗ್ಗೆ ಆ್ಯಪ್ ಮೂಲಕ ಕೋರ್ಸ್ ನಡೆಸಲಾಗುತ್ತಿತ್ತು. ಚಂದಾದಾರಿಕೆ ಹೆಸರಿನಲ್ಲಿ ಜನರಿಂದ ಹಣ ಪಡೆದಿದ್ದ ಕಂಪನಿ, ಯಾವುದೇ ತರಬೇತಿ ನೀಡದೇ ವಂಚಿಸಿರುವ ಬಗ್ಗೆ ಉದ್ಯೋಗಿಗಳೇ ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಸಾಮಾಜಿಕ ಮಾಧ್ಯಮ ಹಾಗೂ ಇತರೆಡೆ ಜಾಹೀರಾತು ನೀಡಿ, ಜನರನ್ನು ಸೆಳೆಯಲಾಗುತ್ತಿತ್ತು. ನಾನಾ ಆಮಿಷವೊಡ್ಡಿ ಜನರಿಂದ ಹಣ ತುಂಬಿಸಿಕೊಳ್ಳಲಾಗುತ್ತಿತ್ತು. ಕಂಪನಿ ಉದ್ಯೋಗಿಗಳು ಮಾತ್ರ ಈಗ ದೂರು ನೀಡಿದ್ದಾರೆ. ಜನರು ಯಾರಾದರೂ ದೂರು ನೀಡಿದರೆ, ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗುವುದು' ಎಂದರು.

ಯಾರು ಈ ಸುಧೀರ್?

'ತೀರ್ಥಹಳ್ಳಿ ತಾಲ್ಲೂಕಿನ ಚಿಕ್ಕಳ್ಳಿಯ ಸುಧೀರ್, ಬಿಬಿಎಂ ಪದವೀಧರ. ಪದವಿ ಬಳಿಕ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ ಈತ, ಅಲ್ಲಿಂದ ಹೊರಬಂದು ಸ್ನೇಹಿತರ ಜೊತೆ ಸೇರಿ ಇಂಡಿಯನ್ ಮನಿ ಡಾಟ್ ಕಾಮ್ ಕಂಪನಿ ಕಟ್ಟಿದ್ದ. ಜನರಿಗೆ ಹಣಕಾಸು ಸಲಹೆ ನೀಡಲಾರಂಭಿಸಿದ್ದ. ಸದ್ಯ ಬನಶಂಕರಿ 2ನೇ ಹಂತದ ಬ್ರಿಗೇಡ್ ಸಾಫ್ಟ್‌ವೇರ್ ಪಾರ್ಕ್ ಕಟ್ಟಡದಲ್ಲಿ ಕಂಪನಿಯ ಪ್ರಧಾನ ಕಚೇರಿ ಇದೆ' ಎಂದು ಪೊಲೀಸರು ಹೇಳಿದರು.

ಲಕ್ಷಾಂತರ ಹಣ ವಂಚನೆ ವ್ಯವಸ್ಥಾಪಕರ ಹೇಳಿಕೆ

'30ಕ್ಕೂ ಹೆಚ್ಚು ಕೋರ್ಸ್‌ಗಳಿಗಾಗಿ ಜನರನ್ನು ಕರೆತರುವಂತೆ ನಮಗೆ ಹೇಳಿದ್ದರು. ನಾವೇ ಜನರನ್ನು ಹುಡುಕಿ ಕೋರ್ಸ್‌ಗೆ ಸೇರಿಸಿದ್ದೆವು. ಅವರಿಂದ ಕಂಪನಿಯವರು ಲಕ್ಷಾಂತರ ಹಣ ಕಟ್ಟಿಸಿಕೊಂಡಿದ್ದರು. ಆದರೆ, ಜನರಿಗೆ ಯಾವುದೇ ತರಬೇತಿ ನೀಡದೇ ಸಿಇಒ ಹಾಗೂ ಇತರರು ವಂಚಿಸಿದ್ದಾರೆ' ಎಂಬುದಾಗಿ ಕಂಪನಿಗೆ ಸಂಬಂಧಿಸಿದ ಮೂವರು ವ್ಯವಸ್ಥಾಪಕರು ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ.

ಆಂಧ್ರಪ್ರದೇಶ ಸೇರಿ ಕೆಲವು ರಾಜ್ಯಗಳಲ್ಲಿ ಬಿಸಿಗಾಳಿ: ಐಎಂಡಿ ಎಚ್ಚರಿಕೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ, ಒಡಿಶಾ, ಆಂಧ್ರಪ್ರದೇಶ, ಬಿಹಾರದ ಕೆಲವು ಪ್ರದೇಶಗಳಲ್ಲಿ ಮುಂದಿನ ಮೂರರಿಂದ ನಾಲ್ಕು ದಿನಗಳ ಕಾಲ ಬಿಸಿಗಾಳಿಯ ವಾತಾವರಣ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಗುರುವಾರ ತಿಳಿಸಿದೆ.

ಏಪ್ರಿಲ್ ಮತ್ತು ಜೂನ್ ತಿಂಗಳ ಅವಧಿಯಲ್ಲಿ ಈಶಾನ್ಯದ ಹಲವು ರಾಜ್ಯಗಳಲ್ಲಿ ಉಷ್ಣಾಂಶ ಸಾಮಾನ್ಯಕ್ಕಿಂತ ಗರಿಷ್ಠ ಪ್ರಮಾಣದಲ್ಲಿ ಇರಲಿದೆ ಎಂದು ಇಲಾಖೆಯು ಕಳೆದ ತಿಂಗಳು ಅಂದಾಜು ಮಾಡಿತ್ತು.

ಇಲಾಖೆಯ ಮುನ್ಸೂಚನೆ ಅನುಸಾರ, ಸಾಮಾನ್ಯಕ್ಕಿಂತಲೂ ಅಧಿಕ ಬಿಸಿಗಾಳಿಯ ವಾತಾವರಣ ದೇಶದ ಕೇಂದ್ರ, ಪೂರ್ವ ಮತ್ತು ಈಶಾನ್ಯ ಭಾಗಗಳಲ್ಲಿ ಇರಲಿದೆ. ಕೇಂದ್ರ ಮತ್ತು ಉತ್ತರ ಭಾರತದ ಕೆಲವೆಡೆ ಸದ್ಯ ಗರಿಷ್ಠ ತಾಪಮಾನ 40 ರಿಂದ 42 ಡಿಗ್ರಿ ಸೆಲ್ಸಿಯಸ್‌ನಷ್ಟಿದೆ. ಪಶ್ಚಿಮ ಬಂಗಾಳದಲ್ಲಿ ಏಪ್ರಿಲ್ 17ರವರೆಗೆ, ಆಂಧ್ರಪ್ರದೇಶ ಮತ್ತು ಒಡಿಶಾದ ಉತ್ತರ ಮತ್ತು ಕರಾವಳಿ ಭಾಗದಲ್ಲಿ ಶನಿವಾರದವರೆಗೂ (ಏ.15) ಮತ್ತು ಬಿಹಾರದಲ್ಲಿ ಏ. 15 ರಿಂದ 17ರವರೆಗೂ ಬಿಸಿಗಾಳಿಯ ವಾತಾವರಣ ಇರಲಿದೆ ಎಂದು ಇಲಾಖೆಯು ತಿಳಿಸಿದೆ.

ಹಿಮಾಲಯದ ಪಶ್ಚಿಮ ಭಾಗ, ಈಶಾನ್ಯ ರಾಜ್ಯಗಳು, ಪಶ್ಚಿಮ ಬಂಗಾಳ, ಸಿಕ್ಕಿಂ, ಒಡಿಶಾ, ಆಂಧ್ರಪ್ರದೇಶ, ಕೇರಳದ ಬಹುತೇಕ ಕಡೆ ತಾಪಮಾನ ಹೆಚ್ಚಿರುತ್ತದೆ.

ಕಾರಿನ ಮೇಲೆ ಗುಂಡಿನ ದಾಳಿ: ವಿಎಚ್‌ಪಿ ಮುಖಂಡನಿಂದ ದೂರು

ಪ್ರಜಾವಾಣಿ ವಾರ್ತೆ

ಮಡಿಕೇರಿ: 'ನನ್ನ ಕಾರಿನ ಮೇಲೆ ಗುಂಡಿನ ದಾಳಿ ನಡೆದಿದೆ' ಎಂದು ವಿಶ್ವ ಹಿಂದೂ ಪರಿಷತ್ತಿನ (ವಿಎಚ್‌ಪಿ) ಜಿಲ್ಲಾ ಘಟಕದ ಅಧ್ಯಕ್ಷ ಕೃಷ್ಣಮೂರ್ತಿ ಮಡಿಕೇರಿ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

'ಬುಧವಾರ ತಡರಾತ್ರಿ ಮಡಿಕೇರಿ-ಚೆಟ್ಟಳ್ಳಿ ಮಾರ್ಗಮಧ್ಯದಲ್ಲಿ ಅಪರಿಚಿತರು ಗುಂಡಿನ ದಾಳಿ ನಡೆಸಿದ್ದು, ಸ್ವಲ್ಪದರಲ್ಲೇ ಪಾರಾಗಿರುವೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ತನಿಖೆ ನಡೆಸಲಾಗುತ್ತಿದೆ. ಹೆಚ್ಚೇನೂ ಹೇಳಲಾಗದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಮರಣ ಕಾರಣ ನಮೂದು ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಸರ್ಕಾರಿ, ಖಾಸಗಿ ಆಸ್ಪತ್ರೆಗಳು ಮರಣ ಕಾರಣವನ್ನು ಕಡ್ಡಾಯವಾಗಿ ವೈದ್ಯಕೀಯ ಪ್ರಮಾಣ ಪತ್ರದಲ್ಲಿ ಭರ್ತಿ ಮಾಡಿ, ಜನನ–ಮರಣ ಮುಖ್ಯ ನೋಂದಣಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಈ ಬಗ್ಗೆ ಆರೋಗ್ಯ ಇಲಾಖೆ ಆಯುಕ್ತರು ಹಾಗೂ ಜನನ, ಮರಣಗಳ ಮುಖ್ಯ ನೋಂದಣಾಧಿಕಾರಿ ಜಂಟಿಯಾಗಿ ಸುತ್ತೋಲೆ ಹೊರಡಿಸಿದ್ದಾರೆ.

ಜನನ, ಮರಣಗಳ ನೋಂದಣಿ ಅಧಿನಿಯಮ 1969ರ ಪ್ರಕಾರ ಎಲ್ಲಾ ವೈದ್ಯರು, ವೈದ್ಯ ವೃತ್ತಿಪರರು ತಾವು ಉಪಚರಿಸಿದ ವ್ಯಕ್ತಿ ಮೃತನಾದಲ್ಲಿ ವೈದ್ಯಕೀಯ ಪ್ರಮಾಣ ಪತ್ರದಲ್ಲಿ ಮರಣ ಕಾರಣ ನಮೂದಿಸಬೇಕು. ಮರಣ ಕಾರಣಗಳ ಸಂಗ್ರಹಣೆ, ವಿಶ್ಲೇಷಣೆಯು ಸರ್ಕಾರಕ್ಕೆ, ಆರೋಗ್ಯ ಸಂಶೋಧಕರಿಗೆ ಹಾಗೂ ನೀತಿ ರೂಪಕರಿಗೆ ವಿವಿಧ ನಿರ್ಧಾರ, ಕ್ರಮಗಳನ್ನು ಕೈಗೊಳ್ಳಲು ಅವಶ್ಯವಾಗಿದೆ. ಆದ್ದರಿಂದ ರಾಜ್ಯದ ಎಲ್ಲಾ ಆರೋಗ್ಯ ಸಂಸ್ಥೆಗಳು ಮರಣ ಕಾರಣಗಳನ್ನು ಸಂಗ್ರಹಿಸಬೇಕು.

ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ, ಕೆಪಿಎಂಇ ಕಾಯ್ದೆಯಡಿ ನೋಂದಣಿಯಾಗಿರುವ ಎಲ್ಲಾ ಖಾಸಗಿ ಆಸ್ಪತ್ರೆಗಳಿಗೂ ಇ-ಜನ್ಮ ತಂತ್ರಾಂಶದಲ್ಲಿ ಮರಣ ಘಟನೆಯ ಮಾಹಿತಿಯನ್ನು ದಾಖಲಿಸಲು ಯೂಸರ್ ಐಡಿ, ಪಾಸ್‌ವರ್ಡ್ ನೀಡಬೇಕು. ಮರಣ ಕಾರಣ ವೈದ್ಯಕೀಯ ಪ್ರಮಾಣ ಪತ್ರವನ್ನು ಜನನ, ಮರಣಗಳ ಮುಖ್ಯ ನೋಂದಣಾಧಿಕಾರಿಗಳ ಕಚೇರಿಗೆ ಪ್ರತಿ ತಿಂಗಳು ಸಲ್ಲಿಸಬೇಕು. ನಿಗದಿತ ತಿಂಗಳಲ್ಲಿ ಮರಣ ಸಂಭವಿಸದೇ ಇದ್ದಲ್ಲಿ 'ಶೂನ್ಯ ವರದಿ' ಸಲ್ಲಿಸಬೇಕು ಎಂದು ತಿಳಿಸಲಾಗಿದೆ.

ಕರಾವಳಿಯ ದೇವಸ್ಥಾನ ಸುತ್ತಿದ ಮುಖ್ಯಮಂತ್ರಿ

ಕೊಲ್ಲೂರು ಶ್ರೀಮೂಕಾಂಬಿಕಾ, ಕಟೀಲು ಶ್ರೀ ದುರ್ಗಾ ಪರಮೇಶ್ವರಿ, ಸೋಮೇಶ್ವರ ದೇವಸ್ಥಾನಗಳಿಗೆ ಭೇಟಿ

ಪ್ರಜಾವಾಣಿ ವಾರ್ತೆ

ಮಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯಿಂದ ಟಿಕೆಟ್ ವಂಚಿತರಾದವರ ಆಕ್ರೋಶ ಹೆಚ್ಚುತ್ತಿರುವಂತೆಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕರಾವಳಿಯ ದೇವಸ್ಥಾನಗಳನ್ನು ಸಂದರ್ಶಿಸಿ ಪ್ರಾರ್ಥನೆ ಸಲ್ಲಿಸುವುದಲ್ಲಿ ನಿರತರಾಗಿದ್ದರು.

ಬುಧವಾರ ರಾತ್ರಿ ಮಂಗಳೂರಿನಲ್ಲೇ ವಾಸ್ತವ್ಯ ಹೂಡಿದ್ದ ಮುಖ್ಯಮಂತ್ರಿ ಗುರುವಾರ ಬೆಳಿಗ್ಗೆ ಉಡುಪಿ ಜಿಲ್ಲೆಯ ಕೊಲ್ಲೂರು ಶ್ರೀಮೂಕಾಂಬಿಕಾ ದೇವಸ್ಥಾನಕ್ಕೆ, ಪತ್ನಿ ಚನ್ನಮ್ಮ ಅವರೊಟ್ಟಿಗೆ ಹೆಲಿಕಾಪ್ಟರ್‌ನಲ್ಲಿ ತೆರಳಿ ದರ್ಶನ ಪಡೆದರು. ಬಳಿಕ ಮತ್ತೆ ದಕ್ಷಿಣ ಕನ್ನಡ ಜಿಲ್ಲೆಗೆ ಮರಳಿ ಕಟೀಲು ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನ ಹಾಗೂ ಉಳ್ಳಾಲ ಸಮೀಪದ ಸೋಮೇಶ್ವರ ದೇವಸ್ಥಾನಗಳಿಗೆ ಭೇಟಿ ನೀಡಿದರು.


ಕೊಲ್ಲೂರಿನ ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಗುರುವಾರ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶ್ರೀದೇವಿಯ ದರ್ಶನ ಪಡೆದುಕೊಂಡು, ಋತ್ವಿಜರ ಮೂಲಕ ವಿಶೇಷ ಪೂಜೆ ಸಲ್ಲಿಸಿದರು

ಕಟೀಲು ದೇವಸ್ಥಾನದಲ್ಲೇ ಮಧ್ಯಾಹ್ನ ಅನ್ನ ಪ್ರಸಾದ ಸ್ವೀಕರಿಸಿದರು.

ಅವರು ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ದೇವಸ್ಥಾನ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಹಾಗೂ ನಗರದ ಕಂಕನಾಡಿಯ ಬ್ರಹ್ಮಬೈದರ್ಕಳ ಗರಡಿಗೆ ಬುಧವಾರ ಭೇಟಿ ನೀಡಿದ್ದರು. ಇವೆಲ್ಲವೂ ಪೂರ್ವ ನಿಯೋಜಿತ ಕಾರ್ಯಕ್ರಮಗಳಾಗಿರಲಿಲ್ಲ.

ಬಹುತೇಕ ಕಡೆ ಬಿಜೆಪಿಯ ಸ್ಥಳೀಯ ಅಭ್ಯರ್ಥಿಗಳು ಮುಖ್ಯಮಂತ್ರಿಯವರನ್ನು ಬರಮಾಡಿಕೊಂಡರು. ಆದರೆ, ಅವರು ಕೊಲ್ಲೂರಿಗೆ ಭೇಟಿ ನೀಡುವಾಗ ಅವರನ್ನು ಸ್ವಾಗತಿಸಲು ಉಡುಪಿ ಜಿಲ್ಲೆಯ ಐವರು ಶಾಸಕರ ಪೈಕಿ ಒಬ್ಬರೂ ಬರಲಿಲ್ಲ.

ಈ ಬಗ್ಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, 'ಸ್ಥಳೀಯ ಮುಖಂಡರನ್ನು ನಾನೇ ಬರುವುದು ಬೇಡ ಎಂದಿದ್ದೆ. ಹಾಗಾಗಿ ಕೊಲ್ಲೂರಿಗೆ ಯಾರು ಬಂದಿಲ್ಲ. ಇದರಲ್ಲಿ ಅನ್ಯ ಉದ್ದೇಶಗಳಿಲ್ಲ' ಎಂದರು.

ನಟ ರಿಷಬ್ ಶೆಟ್ಟಿ ಭೇಟಿ

ಕಾಂತಾರ ಸಿನಿಮಾ ನಿರ್ದೇಶಕ, ನಟ ರಿಷಬ್ ಶೆಟ್ಟಿ ಅವರು ಕೊಲ್ಲೂರಿನಲ್ಲಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾದರು.

'ನಾನು ಮತ್ತು ರಿಷಬ್ ಶೆಟ್ಟಿ ಮೊದಲಿನಿಂದಲೂ ಸ್ನೇಹಿತರು. ಅವರೊಬ್ಬ ಒಳ್ಳೆಯ ನಟ. ಅವರು ದೇವಸ್ಥಾನಕ್ಕೆ ಬರುವ ವಿಚಾರ ನನಗೆ ಗೊತ್ತೇ ಇರಲಿಲ್ಲ. ಕುಂದಾಪುರದಲ್ಲೇ ಇದ್ದ ಅವರು ನಾನು ಬರುವ ಮಾಹಿತಿ ಪಡೆದುಕೊಂಡು ಇಲ್ಲಿಗೆ ಬಂದಿದ್ದಾರೆ' ಎಂದರು.

'ಪಕ್ಷದ ಚುನಾವಣಾ ಪ್ರಚಾರಕ್ಕೆ ರಿಷಬ್ ಅವರನ್ನು ಬಳಸಿಕೊಳ್ಳುವ ಕುರಿತು ಯಾವುದೇ ಚಿಂತನೆ ನಡೆಸಿಲ್ಲ. ಅವರ ಆಲೋಚನೆ ಹಾಗೂ ಪ್ರತಿಪಾದನೆ ನಮ್ಮ ಪಕ್ಷದ ಸಿದ್ಧಾಂತಕ್ಕೆ ಪೂರಕವಾಗಿದೆ' ಎಂದು ಸಿ.ಎಂ ಹೇಳಿದರು.

ರಾಹುಲ್, ಖರ್ಗೆ ಭೇಟಿ ಮಾಡಿದ ಎನ್‌ಸಿಪಿ ವರಿಷ್ಠ

ಶರದ್ ಪವಾರ್ ಅಖಾಡಕ್ಕೆ ವಿಪಕ್ಷಗಳ ಮೈತ್ರಿ ಪ್ರಯತ್ನಕ್ಕೆ ವೇಗ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ಪುಣೆ: ಎನ್‌ಸಿಪಿ ವರಿಷ್ಠ ಶರದ್ ಪವಾರ್ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಗುರುವಾರ ಭೇಟಿ ಮಾಡಿದ್ದು, ವಿರೋಧ ಪಕ್ಷಗಳನ್ನು ಒಂದುಗೂಡಿಸುವ ಕುರಿತು ಚರ್ಚೆ ನಡೆಸಿದ್ದಾರೆ.

ಖರ್ಗೆ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ, ವಿರೋಧ ಪಕ್ಷಗಳ ಒಗ್ಗಟ್ಟು ಸಾಧಿಸುವ ಕುರಿತ ಪ್ರಯತ್ನಗಳನ್ನು ಮತ್ತೊಂದು ಹಂತಕ್ಕೆ ಒಯ್ಯುವ ಕುರಿತು ಚರ್ಚೆ ನಡೆಯಿತು ಎಂದು ಮೂಲಗಳು ಹೇಳಿವೆ.

ಎನ್‌ಸಿಪಿ ವರಿಷ್ಠ ಶರದ್ ಪವಾರ್ ಕೂಡ 'ವಿರೋಧ ಪಕ್ಷಗಳ ಒಗ್ಗಟ್ಟು' ಸಾಧಿಸಲು ಅಖಾಡಕ್ಕೆ ಇಳಿದಿದ್ದಾರೆ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಸಿಪಿಎಂ ಹಾಗೂ ಸಿಪಿಐ ಮುಖಂಡರನ್ನು ನವದೆಹಲಿಯಲ್ಲಿ ಗುರುವಾರ ಭೇಟಿ ಮಾಡಿ, ಚರ್ಚಿಸಿದ್ದಾರೆ. ಹೀಗಾಗಿ, ಮುಂದಿನ ವರ್ಷ ಲೋಕಸಭೆಗೆ ನಡೆಯುವ ಚುನಾವಣೆ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳ ಒಗ್ಗಟ್ಟು ಸಾಧಿಸುವ ಪ್ರಯತ್ನಗಳಿಗೆ ವೇಗ ಸಿಕ್ಕಂತಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ನಿತೀಶ್ ಚರ್ಚೆ: ನವದೆಹಲಿಯಲ್ಲಿ ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರೊಂದಿಗೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಮಾತುಕತೆ ನಡೆಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ನಿತೀಶ್ ಕುಮಾರ್, 'ಪ್ರಜಾಪ್ರಭುತ್ವ ಹಾಗೂ ಜನರ ರಕ್ಷಣೆಗಾಗಿ ಎಲ್ಲ ಜಾತ್ಯತೀತ–ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡುವುದು ಅಗತ್ಯ' ಎಂದರು.


ಎನ್‌ಸಿಪಿ ವರಿಷ್ಠ ಶರದ್ ಪವಾರ್ ಅವರು ನವದೆಹಲಿಯಲ್ಲಿ ಗುರುವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಇದ್ದರು —ಪಿಟಿಐ ಚಿತ್ರ

ಶಾ ಭೇಟಿಯಾದ ಮಾಂಝಿ

ನವದೆಹಲಿ (ಪಿಟಿಐ) ನಿತೀಶ್ ಕುಮಾರ್ ಆಪ್ತ ಹಾಗೂ ಬಿಹಾರದ ಮಾಜಿ ಮುಖ್ಯಮಂತ್ರಿ ಜಿತನ್‌ರಾಮ್ ಮಾಂಝಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಗುರುವಾರ ಭೇಟಿ ಮಾಡಿ, ಮಾತುಕತೆ ನಡೆಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಬಿಜೆಪಿ ವಿರುದ್ಧ ಎಲ್ಲ ಸಮಾನ ಮನಸ್ಕ ವಿರೋಧ ಪಕ್ಷಗಳನ್ನು ಒಂದುಗೂಡಿಸುವ ಪ್ರಯತ್ನ ನಡೆಯುತ್ತಿರುವಾಗ, ಮಾಂಝಿ ಅವರು ಬಿಜೆಪಿ ಜೊತೆ ಕೈಜೋಡಿಸಲಿದ್ದಾರೆಯೇ ಎಂಬ ಚರ್ಚೆ ಮುನ್ನೆಲೆಗೆ ಬಂದಿದೆ.

> **ಇಡೀ ದೇಶವೇ ಗಲಭೆ ಗ್ರಸ್ತವಾಗಿದೆ. ಬಿಜೆಪಿಯ ದುರಾಡಳಿತದ ವಿರುದ್ಧ ಜನ ಧ್ವನಿ ಎತ್ತುತ್ತಿದ್ದಾರೆ. ಪ್ರಜಾತಂತ್ರ ರಕ್ಷಣೆಗೆ ವಿಪಕ್ಷಗಳ ಒಗ್ಗಟ್ಟು ಅಗತ್ಯವಾಗಿದೆ**
> **ಡಿ.ರಾಜಾ,** ಸಿಪಿಐ ಪ್ರಧಾನ ಕಾರ್ಯದರ್ಶಿ

'ವಿರೋಧ ಪಕ್ಷಗಳನ್ನು ಒಂದೇ ವೇದಿಕೆಯಲ್ಲಿ ತರುವ ಪ್ರಯತ್ನಕ್ಕೆ ವೇಗ ಸಿಕ್ಕಿದೆ. ಇತರ ವಿಪಕ್ಷಗಳ ಜೊತೆಗೂ ಮಾತುಕತೆ ನಡೆಯುತ್ತಿದೆ' ಎಂದು ಯೆಚೂರಿ ಹೇಳಿದರು.

ವಿರೋಧ ಪಕ್ಷಗಳ ಮೈತ್ರಿಕೂಟದ ನೇತೃತ್ವ ಯಾರು ವಹಿಸಿಕೊಳ್ಳುತ್ತಾರೆ ಎಂಬ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದ ಯೆಚೂರಿ, 'ಸಮಯ ಬಂದಾಗ ಒಬ್ಬ ಸರ್ವಸಮ್ಮತ ನಾಯಕ ಹೊರಹೊಮ್ಮುತ್ತಾರೆ. ಅವರೇ ಮೈತ್ರಿಕೂಟವನ್ನು ಮುನ್ನಡೆಸುತ್ತಾರೆ' ಎಂದರು.

'ನಿತೀಶ್ ಕುಮಾರ್ ಅವರು ವಿರೋಧ ಪಕ್ಷಗಳ ಒಗ್ಗಟ್ಟಿಗೆ ಸಂಚಾಲಕರಾಗುವರೇ' ಎಂಬ ಮತ್ತೊಂದು ಪ್ರಶ್ನೆಗೆ, 'ಹೆಚ್ಚಿನ ಸಂಖ್ಯೆಯಲ್ಲಿ ವಿಪಕ್ಷಗಳನ್ನು ಒಂದುಗೂಡಿಸುವುದಷ್ಟೆ ನಮ್ಮ ಮುಂದಿನ ಆದ್ಯತೆಯಾಗಿದೆ' ಎಂದು ಚುಟುಕಾಗಿ ಉತ್ತರಿಸಿದರು.

'ಬಾಲಾರೋಪಿಗಳ ವಯಸ್ಸು ಗುರುತಿಸಲು ಅಸ್ಥಿಭವನ ಪರೀಕ್ಷೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಗಂಭೀರ ಕೃತ್ಯಗಳಲ್ಲಿ ಆರೋಪಿಗಳಾಗಿರುವ 16–18 ವರ್ಷದೊಳಗಿನವರ ಆರೋಪ ಸಾಬೀತಿಗೆ ವಯಸ್ಕ ಆರೋಪಿಗಳಂತೆಯೇ ತನಿಖೆ ನಡೆಸಬೇಕೇ, ಇಂಥ ತನಿಖೆಗೆ ಅವರು ಶಕ್ತರೇ ಎಂದು ಗುರುತಿಸಲು ಅವರ ಅಸ್ಥಿಭವನದ (ಬೋನ್ ಒಸ್ಸಿಫಿಕೇಷನ್) ಪರೀಕ್ಷೆ ನಡೆಸಲು ಕೇಂದ್ರ ಸೂಚಿಸಿದೆ.

ಈ ಕುರಿತು ಹೊಸದಾಗಿ ಮಾರ್ಗದರ್ಶಿ ಸೂತ್ರಗಳನ್ನು ಬಿಡುಗಡೆ ಮಾಡಿರುವ ಕೇಂದ್ರ ಸರ್ಕಾರ, ಅಪ್ರಾಪ್ತ ವಯಸ್ಸಿನ ಆರೋಪಿಗಳ ವಯಸ್ಸಿನ ದೃಢೀಕರಣಕ್ಕೆ ಖಚಿತ ದಾಖಲೆಗಳು ಲಭ್ಯವಿಲ್ಲದಿದ್ದಲ್ಲಿ ದೃಢತೆ ಗುರುತಿಸಲು ಅಸ್ಥಿಭವನ ಪರೀಕ್ಷೆ ನಡೆಸಬೇಕು ಎಂದು ತಿಳಿಸಿದೆ.

ಬಾಲ ನ್ಯಾಯ ಕಾಯ್ದೆ 2015ರ ವಿಧಿ 15ರ ಅನ್ವಯ ಪೂರ್ವ ಪರೀಕ್ಷೆಗಾಗಿ ಈ ಮಾರ್ಗದರ್ಶಿ ಸೂತ್ರ ಬಿಡುಗಡೆ ಮಾಡಲಾಗಿದೆ. 17 ವರ್ಷದ ಬಾಲಕ ಆರೋಪಿಯಾಗಿದ್ದ ಕೊಲೆ ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಪೂರ್ವಭಾವಿ ವಿಶ್ಲೇಷಣೆಯಲ್ಲಿ ಮಾರ್ಗಸೂಚಿಯನ್ನು ಅನುಸರಿಸುವುದು ಕಡ್ಡಾಯ ಎಂದು ಹೇಳಿತ್ತು.

ಪರಿಣತರು, ಸಾರ್ವಜನಿಕರ ಭಾಗೀದಾರರ ಜೊತೆಗೆ ಸುದೀರ್ಘ ಚರ್ಚೆ, ಅವರಿಂದ ಪಡೆದ ಪ್ರತಿಕ್ರಿಯೆಗಳನ್ನು ಆಧರಿಸಿ ಮಾರ್ಗದರ್ಶಿ ಸೂತ್ರಗಳನ್ನು ಈಗಾಗಲೇ ರೂಪಿಸಲಾಗಿದೆ. ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗವು ಗುರುವಾರ ಈ ಬಗ್ಗೆ ಅಧಿಸೂಚನೆ ಹೊರಡಿಸಿದೆ.

ಬಾಲ ನ್ಯಾಯ ಕಾಯ್ದೆಯ ವಿಧಿ 94 (2) ಅನ್ವಯ ಮಕ್ಕಳ ವಯಸ್ಸನ್ನು ಅವರ ಶಾಲೆ ಪ್ರಮಾಣಪತ್ರ ಅಥವಾ ತತ್ಸಮಾನ ಪ್ರಮಾಣಪತ್ರ ಆಧರಿಸಿ ನಿರ್ಧರಿಸಬೇಕು. ಇಲ್ಲಿ ಪೂರಕ ದಾಖಲೆ ಲಭ್ಯವಾಗದೇ ಇದ್ದರೆ, ನಗರ ಸ್ಥಳೀಯ ಸಂಸ್ಥೆಗಳು ನೀಡುವ ಜನ್ಮಪ್ರಮಾಣಪತ್ರ ಆಧರಿಸಬೇಕು. ಇಲ್ಲವೇ ಅಸ್ಥಿಭವನ ಪರೀಕ್ಷೆ ಅಥವಾ ಬಾಲನ್ಯಾಯ ಮಂಡಳಿಯ ಆದೇಶದಂತೆ, ಲಭ್ಯವಿರುವ ಯಾವುದೇ ನೂತನ ವೈದ್ಯಕೀಯ ಚಿಕಿತ್ಸಾ ಕ್ರಮದ ಮೂಲಕ ವಯಸ್ಸು ಗುರುತಿಸಬಹುದು. ಇಂಥ ಪರೀಕ್ಷೆಯನ್ನು 15 ದಿನದ ಅವಧಿಯಲ್ಲಿ ನಡೆಸಬೇಕಾಗಿದೆ.

ಮಕ್ಕಳ ಚಲನವಲನ ಸಾಮರ್ಥ್ಯ ಮತ್ತು ಅವರ ಒಟ್ಟು ಸಾಮರ್ಥ್ಯ ಅಂದರೆ ನಡೆಯುವುದು, ಓಡುವುದು, ಭಾರ ಎತ್ತುವುದು, ಎಸೆಯುವುದರ ಪರೀಕ್ಷೆಯ ಮೂಲಕ ಆರೋಪಿಯ ಕೃತ್ಯ ಎಸಗುವ ಸಾಮರ್ಥ್ಯವನ್ನು ಅಂದಾಜಿಸಬೇಕು. ಮಂಡಳಿ ಎದುರು ಮೊದಲ ಬಾರಿಗೆ ಮಕ್ಕಳು ಹಾಜರಾದ ಮೂರು ತಿಂಗಳಲ್ಲಿ ಪೂರ್ವಭಾವಿ ವಿಶ್ಲೇಷಣೆಯನ್ನು ನಡೆಸಬೇಕು ಎಂದು ಮಾರ್ಗದರ್ಶಿ ಸೂತ್ರವು ತಿಳಿಸಿದೆ.


ಬ್ರಹ್ಮ ರಥೋತ್ಸವ ಬೆಂಗಳೂರಿನ ಇಸ್ಕಾನ್ ದೇವಸ್ಥಾನದಲ್ಲಿ ಗುರುವಾರ ನಡೆದ ಬ್ರಹ್ಮ ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತರು

ಸ್ವಾಧೀನಕ್ಕೆ ಗುರುತಿಸಿದ ಜಮೀನು ಮಾರಾಟಕ್ಕೆ ಅಸ್ತು

ಕ್ಯಾನ್ಸರ್: ಕುಟುಂಬದ ನೆರವಿಗೆ ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದೇ ಕುಟುಂಬದ ಮೂವರು ಸದಸ್ಯರು ಕ್ಯಾನ್ಸರ್ ರೋಗಿಗಳಾಗಿದ್ದಾರೆ ಮತ್ತು ಇನ್ನೊಬ್ಬರು ಮಾನಸಿಕ ಅಸ್ವಸ್ಥರಿದ್ದಾರೆ' ಎಂಬ ಕಾರಣಕ್ಕಾಗಿ ಅವರಿಂದ ಸ್ವಾಧೀನಕ್ಕೆ ಪಡೆಯಲು ಕೆಐಎಡಿಬಿ (ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ) ಗುರುತಿಸಿದ್ದ 2 ಎಕರೆ 3 ಗುಂಟೆ ಜಮೀನಿನ ಪೈಕಿ ಶೇ 50ರಷ್ಟು ಭಾಗವನ್ನು ಮಾರಾಟ ಮಾಡಲು ಹೈಕೋರ್ಟ್ ಅನುಮತಿ ನೀಡಿದೆ.

ನಗರದ ಮತ್ತಿಕೆರೆ ನಿವಾಸಿಗಳಾದ ಟಿ.ಜಿ ಶಾಂತಮ್ಮ ಮತ್ತು ಅವರ ಕುಟುಂಬದ ಸದಸ್ಯರು ಈ ಸಂಬಂಧ ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ದೇಶದ ಯಾವುದೇ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಈತನಕ ನೀಡದ ಅಪರೂಪವೆನ್ನಬಹುದಾದ ತೀರ್ಪೊಂದನ್ನು ನೀಡಿದೆ.

'ಒಂದು ವೇಳೆ ಅರ್ಜಿದಾರರಿಗೆ ಆಸ್ತಿ ಪರಭಾರೆ ಅಥವಾ ವರ್ಗಾವಣೆಗೆ ಅವಕಾಶ ಕಲ್ಪಿಸದೇ ಇದ್ದರೆ ಅವರು ಕಾಯಿಲೆಗೆ ಬಲಿಯಾಗುವ ಸಾಧ್ಯತೆಯಿದೆ. ಹೀಗಾಗಿ ಅವರ ಚಿಕಿತ್ಸೆಗೆ ಹಣದ ತುರ್ತು ಇದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಜಮೀನನ್ನು ಖರೀದಿ ಮಾಡುವವರು ಹೆಸರುಗಳ ಜೊತೆಗೆ ಜಮೀನು ಮಾರಾಟ ಮಾಡಿದ ತಕ್ಷಣ ಈ ಸಂಬಂಧದ ಮಾಹಿತಿಯನ್ನು ರಾಜ್ಯ ಸರ್ಕಾರ ಮತ್ತು ಕೆಐಎಡಿಬಿಗೆ ಒದಗಿಸಬೇಕು' ಎಂದು ನ್ಯಾಯಪೀಠ ಅರ್ಜಿದಾರರಿಗೆ ನಿರ್ದೇಶಿಸಿದೆ.

'ಜಮೀನು ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಹಲವು ತಿಂಗಳುಗಳೇ ಕಳೆದಿದೆ. ಅರ್ಜಿದಾರರಿಂದ ಆಕ್ಷೇಪಣೆ ಆಹ್ವಾನಿಸಿದೆ. ಆದರೆ ಅರ್ಜಿದಾರರ ಕುಟುಂಬದ ಸದಸ್ಯರು ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಚಿಕಿತ್ಸೆಗೆ ಹಣ ಹೊಂದಿಸಲು ಪರದಾಡುತ್ತಿದ್ದಾರೆ. ಈ ಹಂತದಲ್ಲಿ ಅವರು ಆರ್ಥಿಕ ಸಂಕಷ್ಟದಿಂದ ಪಾರಾಗಲು ಅನುಕೂಲವಾಗುವಂತೆ ಈಗಾಗಲೇ ಸ್ವಾಧೀನ ಪಡೆಯಲು ಗುರುತಿಸಲಾದ ಜಮೀನನ್ನು ಅವರು ಮಾರಾಟ ಮಾಡಬಹುದು' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲ ಹೋಬಳಿಯ ಹುಲಿಕುಂಟೆ ಗ್ರಾಮದಲ್ಲಿ ಅರ್ಜಿದಾರರಿಗೆ ಸೇರಿರುವ 2 ಎಕರೆ 3 ಗುಂಟೆ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಲು ಕೆಐಎಡಿಬಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು.

ಏತನ್ಮಧ್ಯೆ, ಶಾಂತಮ್ಮ ಮತ್ತು ಅವರ ಇಬ್ಬರು ಪುತ್ರರು ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಮತ್ತೊಬ್ಬ ಪುತ್ರ ಮಾನಸಿಕ ರೋಗಿಯಾಗಿದ್ದಾರೆ. ಅವರ ಮಗಳು ಹಾಗೂ ಅಳಿಯ ಈ ಎಲ್ಲರನ್ನೂ ಆರೈಕೆ ಮಾಡುತ್ತಿದ್ದಾರೆ. ಚಿಕಿತ್ಸೆಗಾಗಿ ₹ 50 ಲಕ್ಷ ಸಾಲ ಮಾಡಿದ್ದು ಅದನ್ನು ಹಿಂದುರುಗಿಸಲಾಗದೆ ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದಾರೆ. ಮುಂದುವರಿದ ಚಿಕಿತ್ಸೆಗೆ ಹಣ ಹೊಂದಿಸಲು ಸಾಧ್ಯವಾಗದ ಕಾರಣ ಅರ್ಜಿದಾರರು, 'ನಮ್ಮಿಂದ ಸ್ವಾಧೀನಕ್ಕೆ ಪಡೆಯಲು ಉದ್ದೇಶಿಸಿರುವ ಜಾಗವನ್ನು ಮಾರಾಟ ಮಾಡಲು ಅನುಮತಿಸಬೇಕು' ಎಂದು ಕೆಐಎಡಿಬಿಗೆ ಮನವಿ ಸಲ್ಲಿಸಿದ್ದರು. ಆದರೆ, ಕೆಐಎಡಿಬಿ ಈ ಮನವಿಗೆ ಸ್ಪಂದಿಸಿರಲಿಲ್ಲ. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

'ಆಕ್ಸಿಜನ್ ಮಾಸ್ಕ್ ತೆಗೆದಂತೆ'

ಈ ಪ್ರಕರಣದಲ್ಲಿ ಜಮೀನನ್ನು ಸ್ವಾಧೀನಕ್ಕೆ ಪಡೆಯಲು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಇನ್ನೂ ಸಾಕಷ್ಟು ಜಮೀನಿನ ಸ್ವಾಧೀನದ ನಂತರ ಅರ್ಜಿದಾರರಿಗೆ ಪರಿಹಾರ ಪಾವತಿಸಲು ಸಾಧ್ಯ ಎಂದು ಕೆಐಎಡಿಬಿ ಹೇಳಿದೆ. ಆದರೆ ಅಂತಿಮ ಅಧಿಸೂಚನೆ ಹೊರಡಿಸಿ ಪರಿಹಾರ ಪಾವತಿಸಲು ಸಾಕಷ್ಟು ಸಮಯ ತಗುಲುತ್ತದೆ. ಆದರೆ, ಕುಟುಂಬದ ಸದಸ್ಯರು ಕ್ಯಾನ್ಸರ್‌ಗೆ ತುತ್ತಾಗಿರುವ ಕಾರಣ ವೈದ್ಯಕೀಯ ಚಿಕಿತ್ಸೆಗೆ ಹಣ ಹೊಂದಿಸಲು ಜೀವನೋಪಾಯಕ್ಕೆಂದು ಉಳಿಸಿಕೊಂಡ ಜಮೀನನ್ನು ಮಾರಲು ಕೋರಿದ್ದಾರೆ. ಹೀಗಾಗಿ, ಇಂತಹ ಸಂದರ್ಭದಲ್ಲಿ ಅವರನ್ನು ತಡೆದರೆ ಅದು; ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುವ ರೋಗಿಯ 'ಆಕ್ಸಿಜನ್ ಮಾಸ್ಕ್' ತೆಗೆದು ಹಾಕಿದಂತಾಗುತ್ತದೆ ಎಂದು ನ್ಯಾಯಪೀಠ ಕಳವಳ ವ್ಯಕ್ತಪಡಿಸಿದೆ.



> **ಕಾಯಿಲೆಯುಳ್ಳ ವ್ಯಕ್ತಿಗೆ ಚಿಕಿತ್ಸೆ ಪಡೆಯುವ ಅವಕಾಶದಿಂದ ವಂಚಿತಗೊಳಿಸಿದರೆ ಅದು ಸಾಂವಿಧಾನಿಕವಾಗಿ ಕೊಡಮಾಡಲಾದ ಹಕ್ಕಿನ ಉಲ್ಲಂಘನೆಯಾಗಲಿದೆ.**
> **ಕೃಷ್ಣ ಎಸ್.ದೀಕ್ಷಿತ್,** ನ್ಯಾಯಮೂರ್ತಿ

ಕ್ರಿಶ್ಚಿಯನ್ನರ ಮೇಲೆ ದಾಳಿ: ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಕೆಯಾಗಿದ್ದ ಅರ್ಜಿ ವಿಚಾರಣೆ

ಭಾರತದ ಗೌರವಕ್ಕೆ ಕುಂದು ತರುವ ಯತ್ನ: ಕೇಂದ್ರ

ನವದೆಹಲಿ (ಪಿಟಿಐ): ಕ್ರಿಶ್ಚಿಯನ್ ಸಂಸ್ಥೆಗಳ ಹಾಗೂ ಪಾದ್ರಿಗಳ ಮೇಲೆ ದಾಳಿಗಳು ನಡೆಯುತ್ತಿವೆ ಎಂದು ಆರೋಪಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ಉಲ್ಲೇಖಿಸಿರುವ ಅಂಕಿ–ಅಂಶಗಳನ್ನು ಕೇಂದ್ರ ಸರ್ಕಾರ ಅಲ್ಲಗಳೆದಿದೆ. ಅರ್ಜಿದಾರರು ಸಮಾಜದಲ್ಲಿ ಅಶಾಂತಿ ಸೃಷ್ಟಿಸಿ ವಿದೇಶದಲ್ಲಿ ಭಾರತದ ಗೌರವಕ್ಕೆ ಕುಂದು ತರಲು ಬಯಸಿದ್ದಾರೆ ಎಂದು ಕೇಂದ್ರ ಆರೋಪಿಸಿದೆ.

ಕ್ರಿಶ್ಚಿಯನ್ ಸಮುದಾಯದ ಮೇಲೆ ಹಿಂಸಾಚಾರ ನಡೆಯುತ್ತಿದೆ ಎಂದು ಆರೋಪಿಸಿ ನ್ಯಾಷನಲ್ ಸಾಲಿಡಾರಿಟಿ ಫೋರಂನ ರೆವರೆಂಡ್ ಪೀಟರ್ ಮಚಾದೊ ಹಾಗೂ ಇವ್ಯಾಂಜಲಿಕಲ್ ಫೆಲೋಶಿಪ್ ಆಫ್ ಇಂಡಿಯಾದ ರೆವರೆಂಡ್ ವಿಜಯೇಶ್ ಲಾಲ್ ಮತ್ತು ಇತರರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ. ಪಾರ್ದೀವಾಲಾ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು.

'ಅರ್ಜಿಯಲ್ಲಿ ನೀಡಿರುವ ಅಂಕಿ ಅಂಶಗಳು ತಪ್ಪು' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನ್ಯಾಯಾಲಯಕ್ಕೆ ತಿಳಿಸಿದರು.

'2021ರಿಂದ 2022 ಮೇ ತಿಂಗಳಿನವರೆಗೂ ಕ್ರಿಶ್ಚಿಯನ್ ಸಮುದಾಯದ ಮೇಲೆ 700 ಹಿಂಸಾಚಾರ ಪ್ರಕರಣಗಳು ನಡೆದಿವೆ. ಈ ಎಲ್ಲಾ ಪ್ರಕರಣಗಳಲ್ಲಿ ಕ್ರಿಶ್ಚಿಯನ್ ಸಮುದಾಯದವರನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಬಂಧಿಸಲಾಗಿದೆ' ಎಂದು ಅರ್ಜಿದಾರರು ಮುಖ್ಯ ನ್ಯಾಯಮೂರ್ತಿ ಅವರಿಗೆ ತಿಳಿಸಿದರು.

ಈ ವಾದಕ್ಕೆ ಪ್ರತಿಕ್ರಿಯಿಸಿದ ಕೇಂದ್ರ, 'ಕ್ರಿಶ್ಚಿಯನ್ ಸಮುದಾಯದ ಮೇಲೆ ಹಿಂಸಾಚಾರ ನಡೆದಿರುವ ಬಗ್ಗೆ ಕೆಲವು ರಾಜ್ಯಗಳಿಂದ ವರದಿ ತರಿಸಿಕೊಳ್ಳಲಾಗಿದೆ. ಅರ್ಜಿಯಲ್ಲಿ ಉಲ್ಲೇಖಿಸಲಾದ ಹೆಚ್ಚಿನ ಘಟನೆಗಳು ಹಿಂಸಾಚಾರವಾಗಿರಲಿಲ್ಲ. ಅವೆಲ್ಲವೂ ನೆರೆಹೊರೆಯವರ ನಡುವಣ ಜಗಳಗಳಾಗಿದ್ದವು. ಇಂಥ ಜಗಳಗಳಲ್ಲಿ ಒಂದು ಕಡೆಯವರು ಕ್ರಿಶ್ಚಿಯನ್ನರೇ ಆಗಿದ್ದರು ಎನ್ನುವುದು ಕಾಕತಾಳೀಯ ಮಾತ್ರ' ಎಂದು ವಾದಿಸಿತು.

'ಕ್ರಿಶ್ಚಿಯನ್ನರ ಮೇಲೆಯೇ ದಾಳಿಗಳಾದ ಸುಮಾರು 500 ಪ್ರಕರಣಗಳಿವೆ ಎಂದು ಅರ್ಜಿದಾರರು ಹೇಳುತ್ತಿದ್ದಾರೆ. ಈ ಬಗ್ಗೆ ನಾವು ಆಯಾ ರಾಜ್ಯ ಸರ್ಕಾರಗಳಿಂದ ಮಾಹಿತಿ ಪಡೆದಿದ್ದೇವೆ. ಬಿಹಾರದಲ್ಲಿ ನಡೆದ ಘಟನೆಗಳನ್ನೇ ನೋಡೋಣ. ಈ ರಾಜ್ಯದಲ್ಲಿ ನಡೆದಿದೆ ಎಂದು ಅರ್ಜಿಯಲ್ಲಿ ಹೇಳಲಾದ ಎಲ್ಲ ಘಟನೆಗಳೂ ನೆರೆಹೊರೆಯವರ ಜಗಳಗಳಾಗಿವೆ. ಬಿಹಾರದಲ್ಲಿ ಒಟ್ಟು 38 ಇಂಥ ಜಗಳಗಳು ನಡೆದಿವೆ' ಎಂದು ಕೇಂದ್ರ ವಾದಿಸಿತು.

'ಅಂತೆಯೇ, ಛತ್ತೀಸಗಢದಲ್ಲಿ ಕ್ರಿಶ್ಚಿಯನ್ನರ ಹಾಗೂ ಕ್ರಿಶ್ಚಿಯನ್ ಸಂಸ್ಥೆಗಳ ಮೇಲೆ 495 ದಾಳಿಗಳಾಗಿವೆ ಎಂದು ಅರ್ಜಿದಾರರು ಹೇಳುತ್ತಾರೆ. ಆದರೆ, ರಾಜ್ಯದಲ್ಲಿ ಅಂಥ ಯಾವುದೇ ಘಟನೆ ನಡೆದಿಲ್ಲ' ಎಂದು ಕೇಂದ್ರವು ನ್ಯಾಯಾಲಯಕ್ಕೆ ತಿಳಿಸಿತು.

ಅರ್ಜಿದಾರರ ಆರೋಪಗಳ ಬಗ್ಗೆ ಕೇಂದ್ರ ಸರ್ಕಾರ ಸಲ್ಲಿಸಿದ ವರದಿಯನ್ನು ನ್ಯಾಯಾಲಯವು ಪರಿಗಣಿಸಿತು. ಕೇಂದ್ರ ಗೃಹ ಸಚಿವಾಲಯವು ಉತ್ತರ ಪ್ರದೇಶ, ಮಧ್ಯಪ್ರದೇಶ, ಹರಿಯಾಣ, ಕರ್ನಾಟಕ, ಒಡಿಸಾ, ಛತ್ತೀಸಗಢ, ಬಿಹಾರ ಹಾಗೂ ಜಾರ್ಖಂಡ್ ರಾಜ್ಯಗಳಿಂದ ವರದಿ ತರಿಸಿಕೊಂಡಿತ್ತು. ಕೇಂದ್ರದ ವರದಿಯ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಅರ್ಜಿದಾರರಿಗೆ ನ್ಯಾಯಾಲಯವು ಮೂರು ವಾರಗಳ ಕಾಲಾವಕಾಶ ನೀಡಿತು. ಕೋಲಿನ್ ಗೋನ್ಸಾಲ್ವಿಸ್ ಅರ್ಜಿದಾರರ ಪರ ವಾದ ಮಂಡಿಸಿದರು.

ನ್ಯಾಯಾಲಯ ಹೇಳಿದ್ದು

ವ್ಯಕ್ತಿಯೊಬ್ಬನ ಮೇಲೆ ನಡೆದ ಹಿಂಸೆಯು ಒಂದು ಸಮುದಾಯದ ಮೇಲೆ ನಡೆದ ಹಿಂಸೆ ಎನ್ನುವುದಕ್ಕೆ ಸಾಧ್ಯವಿಲ್ಲ. ಆದರೆ, ಅರ್ಜಿದಾರರು ಹೇಳಿರುವ ಪ್ರಕರಣಗಳಲ್ಲಿ ಶೇ 10ರಷ್ಟು ಪ್ರಕರಣಗಳಲ್ಲಾದರೂ ಸತ್ಯಾಂಶ ಇದ್ದರೆ, ಈ ಎಲ್ಲ ಪ್ರಕರಣಗಳ ಬಗ್ಗೆ ನಾವು ಆಳವಾದ ವಿಚಾರಣೆಯನ್ನೇ ಮಾಡಬೇಕಾಗುತ್ತದೆ' ಎಂದು ನ್ಯಾಯಾಲಯ ಹೇಳಿತು.

> **ಕ್ರಿಶ್ಚಿಯನ್ನರು ಅಪಾಯದಲ್ಲಿದ್ದಾರೆ, ಅವರ ಮೇಲೆ ದಾಳಿಗಳಾಗುತ್ತಿವೆ ಎಂದು ತಪ್ಪು ಮಾಹಿತಿಗಳ ಮೂಲಕ ಬಿಂಬಿಸಲಾಗುತ್ತಿದೆ. ಇದು ತಪ್ಪು**
> **ತುಷಾರ್ ಮೆಹ್ತಾ,** ಸಾಲಿಸಿಟರ್ ಜನರಲ್

ಬಿಜೆಪಿ ವರಿಷ್ಠರ ವಿರುದ್ಧ ಲಕ್ಷ್ಮಣ ಸವದಿ ಆಕ್ರೋಶದ ಮಾತು

ಡಿಸಿಎಂ ಸ್ಥಾನ ಏಕೆ ಕಿತ್ತುಕೊಂಡಿರಿ?

ಪ್ರಜಾವಾಣಿ ವಾರ್ತೆ

ಅಥಣಿ (ಬೆಳಗಾವಿ ಜಿಲ್ಲೆ): 'ಯಾವುದೇ ಕಾರಣ ಕೊಡದೇ ನನ್ನನ್ನು ಉಪಮುಖ್ಯ-ಮಂತ್ರಿ ಸ್ಥಾನದಿಂದ ತೆಗೆದರು. ನಾನೇನು ರೇಪ್ ಮಾಡಿದ್ದೀನಾ, ಯಾರದಾದರೂ ಸೆರಗು ಎಳೆದಿದ್ದೀನಾ? ಭ್ರಷ್ಟಾಚಾರ ಮಾಡಿದ್ದೀನಾ? ಹೇಳದೇ ಕೇಳದೇ ಆ ಸ್ಥಾನ ಕಸಿದುಕೊಂಡರು' ಎಂದು ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ ಟೀಕಾ ಪ್ರಹಾರ ಮಾಡಿದರು.

ಪಟ್ಟಣದಲ್ಲಿ ಗುರುವಾರ ಮಾಧ್ಯಮದ ವರೊಂದಿಗೆ ಮಾತನಾಡಿದ ಅವರು, 'ಬಿಜೆಪಿಯಲ್ಲಿ ನನಗೆ ಮಾನಸಿಕವಾಗಿ ಹಿಂಸೆ, ಅವಮಾನ ಮಾಡುತಿದ್ದರು. ಎಲ್ಲ ಸಹಿಸಿಕೊಂಡು ಮುಂದುವರಿದಿದ್ದೆ. ಉಪ ಮುಖ್ಯಮಂತ್ರಿ ಸ್ಥಾನ ಕಿತ್ತುಕೊಂಡಾಗಲೂ ಯಾರಿಗೂ ಏನೂ ಅಂದಿಲ್ಲ. ರಾಜೀನಾಮೆ ಕೊಡು ಎಂದರೆ ಸಂತೋಷದಿಂದ ಕೊಡುತ್ತಿದ್ದೆ. ಅವಮಾನ ಮಾಡುವ ಉದ್ದೇಶದಿಂದ ಏಕಾಏಕಿ ತೆಗೆದರು. ಆದರೆ, ಈಗ ಸಂಯಮ ಕಟ್ಟೆಯೊಡೆದಿದೆ' ಎಂದರು.

'ಗುರುವಾರ ಬೆಳಿಗ್ಗೆ ಬಿ.ಎಲ್. ಸಂತೋಷ ಅವರು ನಾಲ್ಕಾರು ಬಾರಿ ಮೊಬೈಲ್ ಕರೆ ಮಾಡಿದರೂ ನಾನು ಸ್ವೀಕರಿಸಲಿಲ್ಲ. ಅವರು ನನ್ನ ಗುರು. ನಾನೂ ಆವೇಶದಲ್ಲಿ ಏನೋ ಮಾತನಾಡಿ ಅವರಿಗೆ ಬೇಸರ ತರುವುದು ಬೇಡ ಎಂಬ ಕಾರಣಕ್ಕೆ ಮಾತನಾಡಿಲ್ಲ. ಸಂಸದ ಅಣ್ಣಾಸಾಹೇಬ ಜೊಲ್ಲೆ ಕೂಡ ಮಧ್ಯಾಹ್ನ ಭೇಟಿ ಮಾಡಿ ಹೋದರು. ಅವರು ಸೌಜನ್ಯದ ಭೇಟಿಗೆ ಬಂದಿದ್ದರು. ರಾಜಕೀಯ ಏನೂ ಮಾತನಾಡಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಟಿಕೆಟ್ ಸಲುವಾಗಿ ಮಾತ್ರ ನಾನು ಪಕ್ಷ ಬಿಡುತ್ತಿಲ್ಲ. ಸ್ವಾಭಿಮಾನಕ್ಕೆ ಧಕ್ಕೆ ಮಾಡಿದ್ದರಿಂದ ಬಿಡುತ್ತಿದ್ದೇನೆ. ಶುಕ್ರವಾರ ಬೆಳಿಗ್ಗೆ ಬೆಂಗಳೂರಿಗೆ ಹೋಗಿ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೂ, ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೂ ರಾಜೀನಾಮೆ ನೀಡುತ್ತೇನೆ' ಎಂದರು.

'ಆತುರದಲ್ಲಿ ಬಿಜೆಪಿ ಬಿಡಬೇಡಿ'


ರಮೇಶ ಜಾರಕಿಹೊಳಿ

ಗೋಕಾಕ: 'ಲಕ್ಷ್ಮಣ ಸವದಿ ತಮ್ಮ ನಿರ್ಧಾರ ಇನ್ನೊಮ್ಮೆ ಪರಿಶೀಲನೆ ಮಾಡಲಿ. ಆತುರಕ್ಕೆ ಬಿದ್ದು ಯಾವುದೇ ನಿರ್ಧಾರ ತೆಗೆದುಕೊಳ್ಳ-ಬಾರದು. ಪಕ್ಷ ಬಿಡಬಾರದು' ಎಂದು ಶಾಸಕ ರಮೇಶ ಜಾರಕಿಹೊಳಿ ಸಲಹೆ ನೀಡಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ನಾನು– ಲಕ್ಷ್ಮಣ ನಿಜವಾಗಿ ಒಳ್ಳೆಯ ಗೆಳೆಯರು. ಯಾವುದೇ ಭಿನ್ನಾಭಿಪ್ರಾಯ ಇದ್ದರೂ ಕುಳಿತು ಮಾತಾಡೋಣ. ಆದರೆ, ಪಕ್ಷ ಬಿಟ್ಟು ಹೋಗಬೇಡ. ಬೇಕಿದ್ದರೆ ನಾನೇ ಒಂದು ಹೆಜ್ಜೆ ಹಿಂದೆ ಸರಿಯುತ್ತೇನೆ' ಎಂದರು.

'ಟಿಕೆಟ್ ವಿಚಾರದಲ್ಲಿ ಮಹೇಶ ಕುಮಠಳ್ಳಿ ಪರವಾಗಿ ಬ್ಯಾಟಿಂಗ್ ಮಾಡುವುದು ನನ್ನ ಧರ್ಮ. ನಾನು ಮಾಡಿದ್ದೇನೆ. ಆದರೆ, ಲಕ್ಷ್ಮಣ ಸವದಿ ಸ್ಥಾನ ಕಸಿದುಕೊಂಡಿಲ್ಲ. ಹಿಂದೆ ಕಾಂಗ್ರೆಸ್‌ನಲ್ಲಿದ್ದಾಗ ಆ ಪಕ್ಷದ ಅಭ್ಯರ್ಥಿ ಗೆಲ್ಲಿಸುವುದು ನನ್ನ ಗುರಿಯಾಗಿತ್ತು. ಗೆಲ್ಲಿಸಿದ್ದೆ. ಈಗ ನೀನು ವಿಧಾನ ಪರಿಷತ್ ಸದಸ್ಯ. ಇನ್ನೂ ಐದು ವರ್ಷ ಅಧಿಕಾರ ಅವಧಿ ಇದೆ. ವಿಚಾರ ಮಾಡು' ಎಂದೂ ಅವರು ಹೇಳಿದರು.

ಹಾವೇರಿ, ಅರಸೀಕೆರೆಯಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಹಾವೇರಿ/ಹಾಸನ: ಹಾವೇರಿ ಮೀಸಲು ಕ್ಷೇತ್ರದ ಬಿಜೆಪಿ ಟಿಕೆಟ್ ಕೈತಪ್ಪಿದ್ದಕ್ಕೆ ಶಾಸಕ ನೆಹರು ಓಲೇಕಾರ ಹಾಗೂ ಹಾಸನ ಜಿಲ್ಲೆಯ ಅರಸೀಕೆರೆ ಕ್ಷೇತ್ರದಲ್ಲಿ ಟಿಕೆಟ್ ದೊರೆಯದ್ದಕ್ಕೆ ಎನ್.ಆರ್. ಸಂತೋಷ್ ಅವರ ಬೆಂಬಲಿಗರು ಹಾವೇರಿ ಮತ್ತು ಅರಸೀಕೆರೆಯಲ್ಲಿ ಪ್ರತ್ಯೇಕ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಹಾವೇರಿಯ ಹೊಸಮನಿ ಸಿದ್ದಪ್ಪ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಿದ ಓಲೇಕಾರ ಬೆಂಬಲಿಗರು ಮುಖ್ಯಮಂತ್ರಿ ಬವರಾಜ ಬೊಮ್ಮಾಯಿ ಮತ್ತು ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ಧರಾಜ ಕಲಕೋಟಿ ಅವರ ಭಾವಚಿತ್ರ ಹರಿದು ಕಿಡಿಕಾರಿದರು.

ಅರಸೀಕೆರೆಯಲ್ಲಿ ಸಂತೋಷ್ ಬೆಂಬಲಿಗರು ಬಿಜೆಪಿಯ ಬಾವುಟ ಸುಟ್ಟು ಆಕ್ರೋಶ ಹೊರ ಹಾಕಿದರು. ಬಿಜೆಪಿ ಫ್ಲೆಕ್ಸ್‌ಗಳನ್ನು ಹರಿದ ಬೆಂಬಲಿಗರು, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಅವರ ಪುತ್ರ ಬಿ.ವೈ ವಿಜಯೇಂದ್ರ ವಿರುದ್ಧ ಘೋಷಣೆಗಳನ್ನ ಕೂಗಿದರು.


ಅರಸೀಕೆರೆಯಲ್ಲಿ ಗುರುವಾರ ಎನ್‌ಆರ್‌ ಸಂತೋಷ್ ಬೆಂಬಲಿಗರು ಬಿಜೆಪಿ ಬಾವುಟಕ್ಕೆ ಬೆಂಕಿ ಹಾಕಿದರು.

ಸ್ಪರ್ಧೆ ಖಚಿತ: ಬೆಂಬಲಿಗರ ಸಭೆ ನಡೆಸಿದ ಸಂತೋಷ್, 'ಜೆಡಿಎಸ್‌ನಿಂದ ಬಿ.ಫಾರಂ ದೊರೆತರೂ ದೊರೆಯದಿದ್ದರೂ ಸೋಮವಾರ ನಾಮಪತ್ರ ಸಲ್ಲಿಸುವೆ' ಎಂದರು. ಸಭೆಯ ವೇದಿಕೆಗೆ ಏಳು ದಿನದ ತಮ್ಮ ಹಸುಳೆಯೊಂದಿಗೆ ಬಂದಿದ್ದ ಸಂತೋಷ್ ಅವರ ಪತ್ನಿ ಜಾಹ್ನವಿ ಹಾಗೂ ತಾಯಿ ಗಿರಿಜಮ್ಮ ಕಣ್ಣೀರು ಹಾಕಿದರು. ಸಂತೋಷ್ ಸಹ ಗಳಗಳನೆ ಅತ್ತರು.

ಅವರನ್ನು ಸಮಾಧಾನಪಡಿಸಿದ ಕಾರ್ಯಕರ್ತರು, 'ಬಿಜೆಪಿ ಟಿಕೆಟ್ ನೀಡಿರುವ ಜಿ.ವಿ.ಟಿ. ಬಸವರಾಜ್ 5 ಸಾವಿರ ಮತ ಪಡೆಯಲ್ಲ. ಇಡೀ ಕ್ಷೇತ್ರದಲ್ಲಿ ಬಿಜೆಪಿ ಹಾಳು ಮಾಡಿದ್ದಾರೆ' ಎಂದು ಆರೋಪಿಸಿದರು.

ಸಂತೋಷ್ ಲಿಂಗಾಯತ ಸಮುದಾಯಕ್ಕೆ ಸೇರಿದವರಾಗಿದ್ದು, ಅರಸೀಕೆರೆ ಕ್ಷೇತ್ರದಲ್ಲಿ ಲಿಂಗಾಯತ ಮತಗಳು ಹೆಚ್ಚಾಗಿವೆ. ಹಾಗಾಗಿ ಅವರಿಗೇ ಟಿಕೆಟ್ ನೀಡುವ ನಿಟ್ಟಿನಲ್ಲಿ ಮುಖಂಡರೂ ಆಸಕ್ತಿ ತೋರಿದ್ದಾರೆ. ಆದರೆ, ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರದ ಪತನದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರಿಗೆ ಟಿಕೆಟ್ ನೀಡಲು ಎಚ್.ಡಿ.ಕುಮಾರಸ್ವಾಮಿ ಒಪ್ಪುತ್ತಿಲ್ಲ.

'ಕಷ್ಟದಲ್ಲಿ ಕೈ ಹಿಡಿದ ಸಿದ್ದರಾಮಯ್ಯ'

ಪ್ರಜಾವಾಣಿ ವಾರ್ತೆ

ಅಥಣಿ (ಬೆಳಗಾವಿ ಜಿಲ್ಲೆ): 'ನಾನು ವಿಧಾನ ಪರಿಷತ್ ಚುನಾವಣೆಗೆ ನಿಂತಾಗ ಬಿಜೆಪಿಯ ಕೆಲವು ನಾಯಕರೇ ಸಂಚು ರೂಪಿಸಿದ್ದರು. ಆದರೆ, ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಕಷ್ಟದಲ್ಲಿ ಬಂದು ಕೈ ಹಿಡಿದರು' ಎಂದು ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ ಸ್ಮರಿಸಿದರು.

ಪಟ್ಟಣದಲ್ಲಿ ಗುರುವಾರ ಆಯೋಜಿಸಿದ್ದ ಬೃಹತ್ ಸ್ವಾಭಿಮಾನಿ ಸಮಾವೇಶದಲ್ಲಿ ಮಾತನಾಡಿ, 'ನನ್ನ ಮಂತ್ರಿ ಸ್ಥಾನ ಉಳಿಸಿಕೊಳ್ಳಲು ನಾನು ವಿಧಾನ ಪರಿಷತ್‌ಗೆ ಆಯ್ಕೆಯಾಗುವುದು ಅನಿವಾರ್ಯವಾಗಿತ್ತು. 122 ಜನರಿದ್ದೇವೆ, ನಾನು ನಿರಾಯಾಸವಾಗಿ ಗೆಲ್ಲುತ್ತೇನೆ ಎಂದುಕೊಂಡಿದ್ದೆ. ಆದರೆ, ನನ್ನನ್ನು ಕೆಡವಲು ನಮ್ಮವರೇ ಸಂಚು ರೂಪಿಸಿದ್ದರು. ಇದನ್ನು ಗಮನಿಸಿದ ಸಿದ್ದರಾಮಯ್ಯ ಖುದ್ದಾಗಿ ನನ್ನ ನೆರವಿಗೆ ಬಂದರು. ಕಾಂಗ್ರೆಸ್‌ನ ಎಲ್ಲ 79 ಶಾಸಕರಿಂದಲೂ ಮತದಾನ ಬಹಿಷ್ಕಾರ ಮಾಡಿಸಿ, ನಾನು ಗೆಲ್ಲುವಂತೆ ಮಾಡಿದರು' ಎಂದೂ ಹೇಳಿದರು.

'ಜೆಡಿಎಸ್‌ನವರು ವಿಪ್ ನೀಡಿದರೂ ಜಿ.ಟಿ.ದೇವೇಗೌಡ ಆಗ ನನಗೆ ಮತ ಹಾಕಿದರು. ಬಚ್ಚೇಗೌಡ ಅವರೂ ತಮ್ಮ ಪುತ್ರನ ಮತ ಕೊಡಿಸಿದರು. ಅವರನ್ನೆಲ್ಲ ನೆನೆಯುತ್ತೇನೆ' ಎಂದರು.


ಅಥಣಿಯಲ್ಲಿ ಗುರುವಾರ ನಡೆದ ಬೃಹತ್ ಸ್ವಾಭಿಮಾನಿ ಸಮಾವೇಶದಲ್ಲಿ ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ ಮಾತನಾಡಿದರು

'ಈಗಲೂ ನಾನು ಪಕ್ಷ ಬಿಟ್ಟು ಹೊರಟಿಲ್ಲ; ಪಕ್ಷದಿಂದ ಕತ್ತು ಹಿಡಿದು ಹೊರದಬ್ಬಿದ್ದಾರೆ. ಶುಕ್ರವಾರ ಬೆಂಗಳೂರಿಗೆ ಹೋಗಿ ಕಾಂಗ್ರೆಸ್, ಜೆಡಿಎಸ್ ನಾಯಕರೊಂದಿಗೂ ಚರ್ಚಿಸುತ್ತೇನೆ. ಕ್ಷೇತ್ರದ ಅಭಿವೃದ್ಧಿಗೆ ಭರವಸೆ ಕೊಡುವ ಪಕ್ಷ ಸೇರುತ್ತೇನೆ. ಯಾರ ಮೇಲೂ ನಂಬಿಕೆ ಬರದಿದ್ದರೆ ಸ್ವತಂತ್ರ ಅಭ್ಯರ್ಥಿ ಆಗುತ್ತೇನೆ' ಎಂದೂ ಹೇಳಿದರು.

'2004, 2005ರಲ್ಲಿ ಪ್ರವಾಹ ಬಂದಾಗ ಸೋನಿಯಾ ಗಾಂಧಿ ಹಾಗೂ ಮುಖ್ಯಮಂತ್ರಿ ಆಗಿದ್ದ ಧರ್ಮಸಿಂಗ್ ಬೆಳಗಾವಿಗೆ ಬಂದಿದ್ದರು. ನೆರೆಯ ನಡುವೆಯೂ ಅಥಣಿಯ ಒಂದು ಭಾಗ ಬರದಿಂದ ಕೂಡಿತ್ತು. ಅದಕ್ಕೆ ₹45 ಕೋಟಿ ನೀಡಿದ ಧರ್ಮಸಿಂಗ್, 48 ಹಳ್ಳಿಗಳ ನೀರಿನ ಬವಣೆ ತಪ್ಪಿಸಿದ್ದರು' ಎಂದೂ ಸ್ಮರಿಸಿದರು.

ಸ್ಪರ್ಧೆ ಖಚಿತ: ಸೊಗಡು ಶಿವಣ್ಣ

ತುಮಕೂರು: ಬಿಜೆಪಿ ಟಿಕೆಟ್ ಸಿಗದೆ ಮುನಿಸಿಕೊಂಡಿದ್ದ ಮಾಜಿ ಸಚಿವ ಸೊಗಡು ಶಿವಣ್ಣ ಅವರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಗುರುವಾರ ರಾಜೀನಾಮೆ ಸಲ್ಲಿಸಿದ್ದು, ಸ್ಪರ್ಧೆಗೆ ಸಿದ್ಧತೆ ನಡೆಸಿದ್ದಾರೆ.

'ಸ್ವತಂತ್ರವಾಗಿ ಸ್ಪರ್ಧಿಸಬೇಕೆ ಅಥವಾ ಯಾವುದಾದರೂ ಪಕ್ಷದಿಂದ ಸ್ಪರ್ಧಿಸಬೇಕೆ ಎಂಬ ಬಗ್ಗೆ ಒಂದೆರಡು ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು. ಕೆಲವು ರಾಜಕೀಯ ಪಕ್ಷಗಳ ಮುಖಂಡರು ಸಂಪರ್ಕ ಮಾಡಿದ್ದಾರೆ. ಆದರೆ ಜೀವ ಇರುವವರೆಗೂ ಕಾಂಗ್ರೆಸ್‌ಗೆ ಹೋಗುವುದಿಲ್ಲ' ಎಂದರು.

'ಬಿಜೆಪಿಯಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಜನರನ್ನು ಗೌರವದಿಂದ ನಡೆಸಿಕೊಳ್ಳುತ್ತಿಲ್ಲ. ಬಿಜೆಪಿಯಲ್ಲಿ ಎಲ್ಲರೂ ಅಲಿ ಬಾಬಾ ಕಳ್ಳರಾಗಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

'ಟಿಕೆಟ್ ಕೈ ತಪ್ಪಲು ಸಂಸದ ಜಿ.ಎಸ್. ಬಸವರಾಜು, ಶಾಸಕ ಜಿ.ಬಿ.ಜ್ಯೋತಿ ಗಣೇಶ್, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಎಸ್. ರವಿಶಂಕರ್, ಗ್ರಾಮಾಂತರ ಕ್ಷೇತ್ರದ ಮಾಜಿ ಶಾಸಕ ಬಿ.ಸುರೇಶ್‌ಗೌಡ ನೇರ ಕಾರಣ' ಎಂದರು.

'ಕೋಟ್ಯಂತರ ರೂಪಾಯಿ ಕೊಳ್ಳೆ ಹೊಡೆದ ಸಿಎಂ'

ಹಾವೇರಿ: 'ಶಿಗ್ಗಾವಿ ತುಂತುರು ನೀರಾವರಿ ಯೋಜನೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ₹1,500 ಕೋಟಿ ಕೊಳ್ಳೆ ಹೊಡೆದಿದ್ದಾರೆ' ಎಂದು ಶಾಸಕ ನೆಹರು ಓಲೇಕಾರ ಗುರುವಾರ ಗಂಭೀರ ಆರೋಪ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರೈತರಿಗೆ ಒಂದು ಪೈಪ್ ಕೂಡ ನೀಡಿಲ್ಲ. ತುಂತುರು ನೀರಾವರಿ ಯೋಜನೆ ಸಂಪೂರ್ಣ ವಿಫಲವಾಗಿದೆ. ಇತರ ಜಿಲ್ಲೆಯ ರೈತರಿಗೆ ಯೋಜನೆಯಿಂದ ಪ್ರಯೋಜನ ಆಗಿಲ್ಲ' ಎಂದು ದೂರಿದರು.

'ನನ್ನ ಬೆಳವಣಿಗೆ ಸಹಿಸದೇ ಟಿಕೆಟ್ ತಪ್ಪಿಸಿದ್ದಾರೆ. ಬೊಮ್ಮಾಯಿ ಅವರಿಗೆ ದಮ್, ತಾಕತ್ತು ಎಷ್ಟಿದೆ ತೋರಿಸಲಿ. ನಾವು ಕೂಡ ನಮ್ಮ ತಾಕತ್ತು ತೋರಿಸುತ್ತೇವೆ' ಎಂದು ಸವಾಲು ಹಾಕಿದರು.

'ಸಿ.ಎಂ ಬೊಮ್ಮಾಯಿ ಶೇ 40 ಕಮಿಷನ್ ಏಜೆಂಟ್. ಬೊಮ್ಮಾಯಿಂದ ಬಿಜೆಪಿಗೆ ದೊಡ್ಡ ಹೊಡೆತ. ತನಗೆ ಅನುಕೂಲ ಆಗುವವರಿಗೆ ಟಿಕೆಟ್ ಕೊಡಿಸಿದ್ದಾನೆ. ಬೊಮ್ಮಾಯಿ ಬಿಜೆಪಿ ಹಾಳು ಮಾಡುತ್ತಾನೆ; ಉದ್ಧಾರ ಮಾಡಲ್ಲ' ಎಂದು ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

ಬಿಜೆಪಿ ಸದಸ್ಯತ್ವಕ್ಕೆ ರಾಜೀನಾಮೆ: 'ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತೇನೆ. ಸುಮಾರು 1,000 ಬೆಂಬಲಿಗರು ಕಾರ್ಯಕರ್ತರು ನನ್ನ ಜೊತೆ ರಾಜೀನಾಮೆ ನೀಡುತ್ತಾರೆ. ಜೆಡಿಎಸ್‌ನಿಂದ ಆಹ್ವಾನ ಬಂದಿದೆ. ಕಾರ್ಯಕರ್ತರೊಂದಿಗೆ ಚರ್ಚಿಸಿ, ತೀರ್ಮಾನ ತೆಗೆದುಕೊಳ್ಳುತ್ತೇನೆ' ಎಂದರು.

'ಓಲೇಕಾರ ಆರೋಪಕ್ಕೆ ದಾಖಲೆ ಒದಗಿಸಲಿ'

ನೆಹರು ಓಲೇಕಾರ ತಮ್ಮ ವಿರುದ್ಧ ಮಾಡಿರುವ ₹1,500 ಕೋಟಿ ಮೊತ್ತದ ಹಗರಣದ ಆರೋಪಕ್ಕೆ ಪ್ರತಿಕ್ರಿಯಿಸಿದ ಬಸವರಾಜ ಬೊಮ್ಮಾಯಿ, 'ಬರೀ ಹೇಳಿಕೆ ನೀಡಿದ ತಕ್ಷಣ ಹಗರಣ ನಡೆದಿರುವುದು ಸಾಬೀತು ಆಗುವುದಿಲ್ಲ. ಅವರು ಈ ಕುರಿತು ದಾಖಲೆ ಒದಗಿಸಲಿ. ಅದರ ಸತ್ಯಾಸತ್ಯತೆಯ ತನಿಖೆಯಾಗಲಿ' ಎಂದರು.

'ಕಾಂಗ್ರೆಸ್ ಮುಂದಿನ ಪಟ್ಟಿಯಲ್ಲಿ ಅಚ್ಚರಿಯ ಹೆಸರು ಬರುತ್ತದೆ' ಎಂಬ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಸಿ.ಎಂ, 'ಕಾಂಗ್ರೆಸ್ ನಲ್ಲಿ 60-65 ಕಡೆ ಅಭ್ಯರ್ಥಿಗಳೇ ಇರಲಿಲ್ಲ. ಹಾಗಾಗಿ 160 ಕ್ಷೇತ್ರಗಳಿಗಷ್ಟೇ ಅಭ್ಯರ್ಥಿ ಘೋಷಣೆ ಮಾಡಿ ನಿಲ್ಲಿಸಿದ್ದಾರೆ. ಅದರ ಅರ್ಥ ಆಮದು ಮಾಡುವ ರಾಜನೀತಿ. ಅವರಿಗೆ ಸಮರ್ಥವಾದ ಅಭ್ಯರ್ಥಿಗಳೇ ಇಲ್ಲ' ಎಂದರು.

'ಅತೃಪ್ತರನ್ನು ಪಕ್ಷದಲ್ಲಿ ಉಳಿಸಿಕೊಳ್ಳುತ್ತೇವೆ'

ಮಂಗಳೂರು: 'ಪಕ್ಷದ ವತಿಯಿಂದ ಮಾಡಿರುವ ಸರ್ವೆ ಆಧಾರದಲ್ಲಿ ಮೂಡಿಗೆರೆ ಸೇರಿದಂತೆ ಕೆಲವೊಂದು ಕ್ಷೇತ್ರಗಳಲ್ಲಿ ಹಾಲಿ ಶಾಸಕರ ಬದಲಿಗೆ ಬೇರೆ ಅಭ್ಯರ್ಥಿಯನ್ನು ಘೋಷಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಕೆಲವು ಶಾಸಕರಿಗೆ ಟಿಕೆಟ್ ನಿರಾಕರಿಸುವ ಮೂಲಕ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರಯೋಗ ಶಾಲೆಯನ್ನಾಗಿಸಿದೆ ಎನ್ನುವುದು ಸರಿಯಲ್ಲ. ಇದು ಆತುರದ ನಿರ್ಧಾರವೂ ಅಲ್ಲ. ಈಗ ಘೋಷಣೆಯಾಗಿರುವ ಅಭ್ಯರ್ಥಿಗಳು ಸಂಘಟನೆಯಲ್ಲಿ ಪ್ರಬಲ ಹಾಗೂ ಗಟ್ಟಿಯಾದ ನೆಲೆಯನ್ನು ಹೊಂದಿದವರು. ನಾನು ಮುಖ್ಯಮಂತ್ರಿ ಆಗಿರುವುದರಿಂದ ಪಕ್ಷದ ಟಿಕೆಟ್ ನೀಡುವಲ್ಲಿ ಸಹಕರಿಸಿಲ್ಲ ಎನ್ನುವ ಟೀಕೆ ಸಹಜ. ಟೀಕೆಗಳನ್ನು ಧನಾತ್ಮಕವಾಗಿ ಹಾಗೂ ಸ್ಪರ್ಧಾತ್ಮಕವಾಗಿ ತೆಗೆದು-ಕೊಳ್ಳುತ್ತೇನೆ. ಬದಲಾವಣೆ ಸಂಘಟನೆಯ ಒಂದು ಭಾಗ' ಎಂದು ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಬಿಜೆಪಿ: ಕಟ್ಟೆಯೊಡೆದ ಸಿಟ್ಟು

ಒಂದನೇ ಪುಟದಿಂದ...

ಪ್ರತಿಭಟನೆಯ ಕಾವು: ಅಥಣಿಯಲ್ಲಿ ಸವದಿ ಅವರನ್ನು ಭೇಟಿಮಾಡಿ ಮನವೊಲಿಸಲು ಹೋಗಿದ್ದ ಬೆಳಗಾವಿ ಜಿಲ್ಲಾ ಘಟಕದ ಅಧ್ಯಕ್ಷ ರಾಜೇಶ ನೇರ್ಲಿ ಮತ್ತು ಆರ್‌ಎಸ್‌ಎಸ್ ಮುಖಂಡರ ಕಾರಿಗೆ ಸವದಿ ಬೆಂಬಲಿಗರು ಮುತ್ತಿಗೆ ಹಾಕಿ, ತರಾಟೆಗೆ ತೆಗೆದುಕೊಂಡರು. ಮತ್ತೆ ಕೆಲವರು ನೇರ್ಲಿ ಅವರ ಕಾರಿಗೆ ಗುದ್ದಿ ಕಿಡಿಕಾರಿದರು. ಪಕ್ಷಕ್ಕೆ ಮತ್ತು ವಿಧಾನಪರಿಷತ್ ಸದಸ್ಯತ್ವಕ್ಕೆ ಶುಕ್ರವಾರ ರಾಜೀನಾಮೆ ನೀಡುವುದಾಗಿ ಸವದಿ ಘೋಷಿಸಿದ್ದಾರೆ.

ಹಾಸನ ಜಿಲ್ಲೆಯ ಅರಸೀಕೆರೆ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಸಿಗದೇ ಇದ್ದುದರಿಂದ ಎನ್.ಆರ್. ಸಂತೋಷ್ ಬೆಂಬಲಿಗರು ಬಿಜೆಪಿ ಬಾವುಟಕ್ಕೆ ಬೆಂಕಿ ಹಚ್ಚಿದ್ದಲ್ಲದೇ, ಬಿಜೆಪಿ ಫ್ಲೆಕ್ಸ್, ಬ್ಯಾನರ್‌ಗಳನ್ನು ಹರಿದು ಹಾಕಿದರು. ಎನ್.ಆರ್. ಸಂತೋಷ್ ಸೋಮವಾರ ನಾಮಪತ್ರ ಸಲ್ಲಿಸಲಿದ್ದು, ಜೆಡಿಎಸ್‌ನಿಂದ ಅಥವಾ ಪಕ್ಷೇತರವಾಗಿ ಸ್ಪರ್ಧಿಸಲಿದ್ದಾರೆ. ಬಿ.ಎಸ್.ಯಡಿಯೂರಪ್ಪ ಅವರ ಹತ್ತಿರದ ಸಂಬಂಧಿಯಾಗಿರುವ ಸಂತೋಷ್, ಅವರ ಆಪ್ತ ಸಹಾಯಕರಾಗಿದ್ದರು. 2019ರಲ್ಲಿ ನಡೆದ ಆಪರೇಷನ್ ಕಮಲದ ಸಂದರ್ಭದಲ್ಲಿ ಪ್ರಮುಖ ಪಾತ್ರವಹಿಸಿದ್ದ ಅವರು, ಯಡಿಯೂರಪ್ಪ ಮುಖ್ಯ-ಮಂತ್ರಿಯಾದ ಬಳಿಕ ರಾಜಕೀಯ ಕಾರ್ಯದರ್ಶಿ-ಯಾಗಿ ನೇಮಕವಾಗಿದ್ದರು.

ಹಾವೇರಿ ಮೀಸಲು ಕ್ಷೇತ್ರದ ಬಿಜೆಪಿ ಟಿಕೆಟ್ ಕೈತಪ್ಪಿರುವ ಕಾರಣ ಹಾವೇರಿ ನಗರದಲ್ಲಿ ನೆಹರು ಓಲೇಕಾರ ಅವರು ನೂರಾರು ಬೆಂಬಲಿಗರೊಂದಿಗೆ ಪ್ರತಿಭಟನೆ ನಡೆಸಿದರು. ಬೆಂಬಲಿಗರು ಮುಖ್ಯಮಂತ್ರಿ ಬೊಮ್ಮಾಯಿ ಅವರ ಭಾವಚಿತ್ರ ಹರಿದು ಹಾಕಿ ಆಕ್ರೋಶ ವ್ಯಕ್ತಪಡಿ-ಸಿದ್ದಾರೆ. ಬಿಜೆಪಿ ಸದಸ್ಯತ್ವ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಅವರು ಹೇಳಿದ್ದಾರೆ.

ಬಿಜೆಪಿ ಟಿಕೆಟ್ ವಂಚಿತ ಕಲಘಟಗಿ ಕ್ಷೇತ್ರದ ಶಾಸಕ ಸಿ.ಎಂ.ನಿಂಬಣ್ಣವರ, ಬೈಂದೂರು ಶಾಸಕ ಸುಕುಮಾರ ಶೆಟ್ಟಿ ತೀವ್ರವಾಗಿ ಅಸಮಾಧಾನ-ಗೊಂಡಿದ್ದಾರೆ. ನಿಂಬಣ್ಣ ಅವರು ಪಕ್ಷೇತರರಾಗಿ ಸ್ಪರ್ಧಿಸುವ ಸಾಧ್ಯತೆ ಇದೆ. ಸುಕುಮಾರ ಶೆಟ್ಟಿ ಗುರುವಾರ ಸಂಜೆ ಬೆಂಬಲಿಗರ ಸಭೆ ನಡೆಸಿದ್ದಾರೆ. ಎರಡು ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳುವು-ದಾಗಿ ಅವರು, ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎನ್ನಲಾಗಿದೆ.

ಬ್ಯಾಡಗಿ ಕ್ಷೇತ್ರದ ಮಾಜಿ ಶಾಸಕ ಸುರೇಶಗೌಡ ಪಾಟೀಲ, ಈ ಬಾರಿಯ ಬಿಜೆಪಿ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದರು. ಟಿಕೆಟ್ ಕೈತಪ್ಪಿದ ಕಾರಣ ಬೆಂಬಲಿಗರೊಂದಿಗೆ ಬ್ಯಾಡಗಿ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ, ಸಭೆ ನಡೆಸಿದ್ದಾರೆ. ಈ ಸಭೆಯಲ್ಲಿ ಶಾಸಕ ವಿರೂಪಾಕ್ಷಪ್ಪ ಬಳ್ಳಾರಿ ಅವರ ಸಹೋದರ ಸಿ.ಆರ್.ಬಳ್ಳಾರಿ ಸೇರಿದಂತೆ ಇನ್ನುಳಿದ ಟಿಕೆಟ್ ಆಕಾಂಕ್ಷಿಗಳು ಪಾಲ್ಗೊಂಡಿದ್ದರು.

ತುಮಕೂರಿನಲ್ಲಿ ಬಿಜೆಪಿ ಟಿಕೆಟ್ ಸಿಗದೆ ಮುನಿಸಿಕೊಂಡಿದ್ದ ಮಾಜಿ ಸಚಿವ ಸೊಗಡು ಶಿವಣ್ಣ ಪಕ್ಷದ ಪ್ರಾಥಮಿಕ ಸದಸ್ಯತ್ವ-ಕ್ಕೆ ಗುರುವಾರ ರಾಜೀನಾಮೆ ಸಲ್ಲಿಸಿದ್ದಾರೆ. ಇವರು ಚುನಾವಣೆಯಲ್ಲಿ ಪಕ್ಷೇತರ ಅಥವಾ ಯಾವುದಾದರೂ ಪಕ್ಷದಿಂದ ಸ್ಪರ್ಧಿಸುವ ಬಗ್ಗೆ ಚಿಂತನೆ ನಡೆಸಿದ್ದಾರೆ.

ಬೆಂಗಳೂರಿನ ಚಾಮರಾಜಪೇಟೆ ಕ್ಷೇತ್ರದಲ್ಲಿ ಟಿಕೆಟ್ ಸಿಗದೇ ಆಕ್ರೋಶಗೊಂಡಿದ್ದ ಸೈಲಂಟ್ ಸುನಿಲ್ ಬೆಂಬಲಿಗರು ಬುಧವಾರ ಸಂಜೆ ಮಲ್ಲೇ-ಶ್ವರದಲ್ಲಿರುವ ಬಿಜೆಪಿ ಕಚೇರಿಗೆ ನುಗ್ಗಿ ಪ್ರತಿಭಟನೆ ನಡೆಸಿದ್ದರು. ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ಅವರು ಸಮಾಧಾನ ಪಡಿಸಲು ಪ್ರಯತ್ನಿಸಿ ವಿಫಲರಾದರು. ಬಳಿಕ ಪೊಲೀಸರನ್ನು ಕರೆಸಿ ಪ್ರತಿಭಟನಾಕಾರರನ್ನು ಹೊರ ಕಳುಹಿಸಿದರು.

ಪುತ್ತೂರು ಕ್ಷೇತ್ರ: ನಳಿನ್ ವಿರುದ್ಧ ಭುಗಿಲೆದ್ದ ಆಕ್ರೋಶ

ಪ್ರಜಾವಾಣಿ ವಾರ್ತೆ

ಮಂಗಳೂರು/ಉಡುಪಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರ ತವರು ನೆಲ ಪುತ್ತೂರು ಕ್ಷೇತ್ರದಲ್ಲಿ ಅಭ್ಯರ್ಥಿ ಆಯ್ಕೆ ಬಗ್ಗೆ ಎದ್ದಿರುವ ಆಕ್ರೋಶ ಕಟ್ಟೆಯೊಡೆದಿದೆ.

ಗೌಡ ಸಮುದಾಯಕ್ಕೆ ಸೇರಿದ ಸುಳ್ಯ ಕ್ಷೇತ್ರ-ದವರಾದ ಆಶಾ ತಿಮ್ಮಪ್ಪ ಗೌಡ ಅವರಿಗೆ ಟಿಕೆಟ್ ನೀಡಿರುವ ಬಗ್ಗೆ ಹಿಂದುತ್ವ ಕಾರ್ಯಕರ್ತರು ಬಹಿರಂಗವಾಗಿ ಅಸಮಾಧಾನ ಹೊರಹಾಕಿದ್ದಾರೆ. ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಹಿಂದುತ್ವ ಮುಖಂಡ ಅರುಣಕುಮಾರ್ ಪುತ್ತಿಲ ಅವರು ಪಕ್ಷೇತರರಾಗಿ ಕಣಕ್ಕಿಳಿಯಬೇಕು ಎಂಬ ಒತ್ತಡ ಸಾಮಾಜಿಕ ಜಾಲತಾಣಗಳ ಮೂಲಕ ವ್ಯಕ್ತವಾಗು-ತ್ತಿದೆ.

ಸಂಘ ಪರಿವಾರದ ಮುಖಂಡರು ಗುರುವಾರ ಸಂಘದ ಕಾರ್ಯಾಲಯದಲ್ಲಿ ಸಭೆ ನಡೆಸಿ ಅಸಮಾಧಾನ ಶಮನಕ್ಕೆ ಯತ್ನಿಸಿದ್ದಾರೆ. ಪಕ್ಷ ಅಭ್ಯರ್ಥಿ ಘೋಷಣೆ ಮಾಡಿದ ಮೇಲೆ ಪಕ್ಷಕ್ಕಾಗಿ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದ್ದಾರೆ. ಈ ವೇಳೆ ಅಸಮಾಧಾನ ವ್ಯಕ್ತಪಡಿಸಿದ ಹಿಂದುತ್ವ ಕಾರ್ಯಕರ್ತರು 'ಗೌಡ ಸಮುದಾಯ ಹೊರತುಪಡಿಸಿ ಬೇರೆಯವರಿಗೆ ಟಿಕೆಟ್ ನೀಡಬೇಕು, ಕ್ಷೇತ್ರದ ಹೊರಗಿನವರಿಗೆ ಟಿಕೆಟ್ ನೀಡಬಾರದು, ಹಿಂದುತ್ವ ಪ್ರತಿಪಾದಿಸುವವರಿಗೆ ಟಿಕೆಟ್ ನೀಡಬೇಕು ಎಂಬ ಬೇಡಿಕೆಯನ್ನು ಅಭ್ಯರ್ಥಿ ಆಯ್ಕೆ ವೇಳೆ ಮುಂದಿಟ್ಟಿದ್ದರೂ, ಇದನ್ನು ಪರಿಗಣಿಸಿಲ್ಲ' ಎಂದು ಆರೋಪಿಸಿದರು ಎಂದು ಮೂಲಗಳು ತಿಳಿಸಿವೆ.

'ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ವೇಳೆ 'ಕಾರು ಅಲ್ಲಾಡಿಸುವ' ಮೂಲಕ ಬಿಸಿ ತಲುಪಿಸಲಾಗಿತ್ತು. ಈಗ ಪುತ್ತೂರಿಗೆ ಬಂದರೆ ಮತ್ತೆ ಅದನ್ನು ನೆನಪಿಸುವ ಸಂದರ್ಭ ಎದುರಾಗಿದೆ' ಎಂದು ಕೆಲ ಹಿಂದುತ್ವ ಕಾರ್ಯಕರ್ತರು ನಳಿನ್‌ಕುಮಾರ್ ಕಟೀಲ್ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಕಿಡಿಕಾರಿದ್ದಾರೆ.

'ಅಭ್ಯರ್ಥಿ ಬಗ್ಗೆ ವೈಯಕ್ತಿಕವಾಗಿ ಬೇಸರವಿಲ್ಲ. ಅವರಿಗೆ ಟಿಕೆಟ್ ನೀಡುವ ಮೂಲಕ ಅವರನ್ನು ಬಲಿಪಶು ಮಾಡಲಾಗುತ್ತಿದೆ' ಎಂದೂ ಕೆಲವರು ಬರೆದುಕೊಂಡಿದ್ದಾರೆ.

ಅರುಣಕುಮಾರ್ ಪುತ್ತಿಲ ಅವರು ಎರಡು ದಿನಗಳಲ್ಲಿ ನಿರ್ಧಾರ ಕೈಗೊಳ್ಳುವುದಾಗಿ ಹಿಂದೂತ್ವ ಕಾರ್ಯಕರ್ತರ ಸಭೆಯಲ್ಲಿ ತಿಳಿಸಿದ್ದಾರೆ.

ಸುಕುಮಾರ ಶೆಟ್ಟಿ ಅಸಮಾಧಾನ: ಬೈಂದೂರು ಹಾಲಿ ಶಾಸಕ ಸುಕುಮಾರ ಶೆಟ್ಟಿ ಅವರಿಗೆ ಬಿಜೆಪಿ ಟಿಕೆಟ್ ಕೈತಪ್ಪಿದ್ದು, ಆರ್‌ಎಸ್‌ಎಸ್ ಹಿನ್ನೆಲೆಯ ಗುರುರಾಜ ಗಂಟಿಹೊಳೆ ಅವರಿಗೆ ಟಿಕೆಟ್ ನೀಡಲಾಗಿದೆ. ಟಿಕೆಟ್ ವಂಚಿತರಾಗಿರುವ ಶಾಸಕ ಸುಕುಮಾರ ಶೆಟ್ಟಿ ಬೈಂದೂರಿನ ತಮ್ಮ ನಿವಾಸದಲ್ಲಿ ಕಾರ್ಯಕರ್ತರ ಜತೆ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸಿದರು. ಬೈಂದೂರು ಭಾಗದಲ್ಲಿ ಪಕ್ಷವನ್ನು ಬಲಿಷ್ಠವಾಗಿ ಸಂಘಟಿಸಿ, ಸಾವಿರಾರು ಕೋಟಿ ಅನುದಾನ ತಂದು ಅಭಿವೃದ್ಧಿ ಕಾರ್ಯ ಮಾಡಿದ್ದರೂ ಪಕ್ಷ ಯಾವುದೇ ಸೂಚನೆ ನೀಡದೆ ಟಿಕೆಟ್ ನಿರಾಕರಿಸಿರುವುದು ನೋವು ತಂದಿದೆ ಎಂದು ಕಾರ್ಯರ್ತರ ಮುಂದೆ ದುಃಖ ತೋಡಿಕೊಂಡರು.

ಸದ್ಯ ತಟಸ್ಥವಾಗಿ ಉಳಿದು ಕೆಲವೇ ದಿನಗಳಲ್ಲಿ ಕಾರ್ಯಕರ್ತರ ಜತೆ ಮತ್ತೊಮ್ಮೆ ಚರ್ಚಿಸಿ ಚುನಾವಣೆಯಲ್ಲಿ ಯಾರಿಗೆ ಬೆಂಬಲ ನೀಡಬೇಕು ಎಂಬ ನಿರ್ಧಾರ ತೆಗೆದುಕೊಳ್ಳಲು ಸುಕುಮಾರ ಶೆಟ್ಟಿ ನಿರ್ಧರಿಸಿದ್ದಾರೆ ಎಂದು ಅವರ ಆಪ್ತರು ತಿಳಿಸಿದ್ದಾರೆ.

ಟಿಕೆಟ್‌ಗಾಗಿ 'ಕೈ' ಆಕಾಂಕ್ಷಿಗಳ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಇನ್ನೂ ಅಭ್ಯರ್ಥಿ ಘೋಷಿಸದ ಕ್ಷೇತ್ರಗಳ ಆಕಾಂಕ್ಷಿಗಳು ಟಿಕೆಟ್ ಗಿಟ್ಟಿಸಿಕೊಳ್ಳಲು ಪಕ್ಷದ ನಾಯಕರ ಮೂಲಕ ಒತ್ತಡ ತಂತ್ರ ಮುಂದುವರಿಸಿದ್ದು, ತೇರದಾಳ ಕ್ಷೇತ್ರದ ಟಿಕೆಟ್ ನಿರೀಕ್ಷೆಯಲ್ಲಿ-ರುವ ಮಾಜಿ ಶಾಸಕಿ ಹಾಗೂ ನಟಿ ಉಮಾಶ್ರೀ ಗುರುವಾರ ಮತ್ತೊಮ್ಮೆ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ತೇರದಾಳ ಟಿಕೆಟ್‌ಗಾಗಿ ಕಾಂಗ್ರೆಸ್‌ನಲ್ಲಿ ತೀವ್ರ ಪೈಪೋಟಿ ಏರ್ಪಟ್ಟಿದೆ. ಸಿದ್ದು ಕೊಣ್ಣೂರು ಅವರಿಗೆ ಇಲ್ಲಿ ಟಿಕೆಟ್ ಸಿಗುವ ಸಾಧ್ಯತೆಯಿದೆ.

ಮೊದಲ ಅಥವಾ ಎರಡನೇ ಪಟ್ಟಿಯಲ್ಲಿ ತಮಗೆ ಟಿಕೆಟ್ ಘೋಷಣೆ ಆಗಬಹುದೆಂದು ಉಮಾಶ್ರೀ ಭಾವಿಸಿದ್ದರು. ಆದರೆ, ಹೆಸರು ಘೋಷಣೆಯಾಗದ ಕಾರಣ ಆತಂಕಗೊಂಡಿರುವ ಅವರು, ಮುಂದಿನ ಪಟ್ಟಿಯಲ್ಲಾದರೂ ತಮ್ಮ ಹೆಸರು ಘೋಷಿಸುವಂತೆ ಸಿದ್ದರಾಮಯ್ಯ ಬಳಿ ಮನವಿ ಮಾಡಿದರು. ತೇರದಾಳ ಕ್ಷೇತ್ರದಿಂದ ಉಮಾಶ್ರೀ ಮೂರು ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧೆ ಮಾಡಿದ್ದಾರೆ. 2013ರಲ್ಲಿ ಬಿಜೆಪಿಯ ಸಿದ್ದು ಸವದಿ ವಿರುದ್ಧ ಗೆದ್ದಿದ್ದರು. 2008 ಮತ್ತು 2018ರಲ್ಲಿ ಸೋತಿದ್ದರು.

ಕುಂದಗೋಳ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಕೈ ತಪ್ಪಿದ ಯಡಿಯೂರಪ್ಪ ಸಂಬಂಧಿ, ಮಾಜಿ ಶಾಸಕ ಎಸ್.ಐ. ಚಿಕ್ಕನಗೌಡರ ಅವರು ಕಾಂಗ್ರೆಸ್ ಕದ ತಟ್ಟಿದ್ದಾರೆ. ಅವರೂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು.

ಈ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಚಿಕ್ಕನಗೌಡರ, 'ನನ್ನ ಬೆಂಬಲಿಗರು ಸುಮ್ಮನೆ ಇರಬೇಡಿ ಎನ್ನುತ್ತಿದ್ದಾರೆ. ಹೀಗಾಗಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಅವರಿಗೆ ಕುಂದಗೋಳ ಕ್ಷೇತ್ರದ ಬಗ್ಗೆ ವಿವರಿಸಿದ್ದೇನೆ. ಕಾಂಗ್ರೆಸ್ ನಾಯಕರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ನೋಡೋಣ. ಕ್ಷೇತ್ರದ ಜನತೆ ಎಲ್ಲವನ್ನೂ ತೀರ್ಮಾನ ಮಾಡುತ್ತಾರೆ' ಎಂದರು.

ಹರಿಹರ ಶಾಸಕ ರಾಮಪ್ಪ ಅವರು ತಮಗೇ ಟಿಕೆಟ್ ಸಿಗಬಹುದೆಂಬ ನಿರೀಕ್ಷೆಯಲ್ಲಿದ್ದಾರೆ. ಕೆಪಿಸಿಸಿ ಕಚೇರಿಯಲ್ಲಿ ಮಾತನಾಡಿದ ಅವರು, 'ಮೂರನೇ ಪಟ್ಟಿಯಲ್ಲಿ ನನಗೆ ಟಿಕೆಟ್ ಘೋಷಣೆ ಆಗುತ್ತದೆ. ಮೊದಲ ಅಥವಾ ಎರಡನೇ ಪಟ್ಟಿಯಲ್ಲಿ ಘೋಷಣೆ ಆಗಬೇಕಿತ್ತು. ಆದರೆ, ಕೆಲವು ಕಾರಣಗಳಿಂದ ಟಿಕೆಟ್ ಘೋಷಣೆ ಆಗಿಲ್ಲ. ಟಿಕೆಟ್ ಘೋಷಿಸಿದ ಬಳಿಕ ಬಿ ಫಾರಂ ಕೊಡುತ್ತಾರೆ. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸೇರಿದಂತೆ ಎಲ್ಲ ನಾಯಕರು ಕ್ಷೇತ್ರದಲ್ಲಿ ಕೆಲಸ ಮಾಡುವಂತೆ ಈಗಾಗಲೇ ಹೇಳಿದ್ದಾರೆ' ಎಂದರು.

ಹಾಸನ ಜೆಡಿಎಸ್‌ಗೆ ರೇವಣ್ಣನೇ ಶಕ್ತಿ: ಪ್ರೀತಂ ಗೌಡ

ಹಾಸನ: 'ಜಿಲ್ಲೆಯ ಜೆಡಿಎಸ್‌ನಲ್ಲಿ ರೇವಣ್ಣ ಒಂದು ಶಕ್ತಿ. ಅವರಿಂದಲೇ ಪಕ್ಷದ ಅಭ್ಯರ್ಥಿ ಗೆಲ್ಲುತ್ತಿದ್ದರು. ಅವರ ಬೆಂಬಲವಿಲ್ಲದೆ ಸ್ಪರ್ಧಿಸಿದರೆ ಅಭ್ಯರ್ಥಿ ಠೇವಣಿ ಕಳೆದುಕೊ-ಳ್ಳುತ್ತಾರೆ' ಎಂದು ಬಿಜೆಪಿ ಶಾಸಕ ಪ್ರೀತಂ ಗೌಡ ಎಂದರು.

'ರೇವಣ್ಣ ಅವರಿಗೆ ಜಿಲ್ಲೆಯಲ್ಲಿ ಅವರದ್ದೇ ಆದ ಶಕ್ತಿ ಇದೆ. ಇಡೀ ರಾಜ್ಯದಲ್ಲಿ ಪಕ್ಷ ಹಾಸನ ಲೋಕಸಭಾ ಕ್ಷೇತ್ರದಲ್ಲಷ್ಟೇ ಗೆಲ್ಲಲು ಅವರೇ ಕಾರಣ. ಅವರು ಹಿರಿಯ ನಾಯಕರು. ಗೌರವ ಕೊಡುತ್ತೇನೆ. ಸವಾಲೇ ಬೇರೆ, ಅವರ ಶಕ್ತಿಯೇ ಬೇರೆ. ಅದನ್ನು ಯಾರೂ ಅಲ್ಲಗಳೆಯಬಾರದು' ಎಂದರು.

'ರೇವಣ್ಣನ ಕುಟುಂಬದವರು ಸ್ಪರ್ಧಿಸಿದರೆ 50 ಸಾವಿರ ಮತಗಳ ಅಂತರದಿಂದ ಗೆಲ್ಲುತ್ತೇನೆ ಎಂಬ ಸವಾಲನ್ನು 18 ತಿಂಗಳ ಹಿಂದೆ ಹಾಕಿದ್ದೆ. ಆಗ ಉತ್ತರ ಕೊಡಬೇಕಾದವರು ಕೊಟ್ಟಿದ್ದರೆ ಮಾನ್ಯತೆ ಇರುತ್ತಿತ್ತು' ಎಂದರು.

ಸಂಕ್ಷಿಪ್ತ ಸುದ್ದಿ

ಶಾಸಕ ಸ್ಥಾನಕ್ಕೆ ಗೂಳಿಹಟ್ಟಿ ಶೇಖರ್ ರಾಜೀನಾಮೆ

ಶಿರಸಿ: 'ಸಾಮಾನ್ಯ ಕ್ಷೇತ್ರದಲ್ಲಿ ಸಾಮಾಜಿಕ ನ್ಯಾಯ ಒದಗಿಸಲು ವಿಫಲವಾದ ಕಾರಣ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ' ಎಂದು ಹೊಸದುರ್ಗ ಶಾಸಕ ಗೂಳಿಹಟ್ಟಿ ಶೇಖರ್ ಗುರುವಾರ ಹೇಳಿದರು.

ಶಿರಸಿಯಲ್ಲಿರುವ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಕಚೇರಿಯಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಈ ವೇಳೆ ಶಾಸಕರ ಮನವೊಲಿಸಲು ಮುಚ್ಚಿದ ಬಾಗಿಲ ಹಿಂದೆ ಕಾಗೇರಿ ಅವರು ಪ್ರಯತ್ನ ಕೂಡ ನಡೆಸಿದರು ಎನ್ನಲಾಗಿದೆ.

ಪಕ್ಷೇತರರಾಗಿ ಸ್ಪರ್ಧಿಸಲು ಶ್ರೀನಾಥ್ ನಿರ್ಧಾರ

ಗಂಗಾವತಿ (ಕೊಪ್ಪಳ ಜಿಲ್ಲೆ): ಗಂಗಾವತಿ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಕೈ ತಪ್ಪಿದ ಹಿನ್ನೆಲೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಲು ಎಚ್.ಆರ್. ಶ್ರೀನಾಥ್ ನಿರ್ಧರಿಸಿದ್ದಾರೆ.

'ಗಂಗಾವತಿ ಅಥವಾ ಯಲಬುರ್ಗಾ ಕ್ಷೇತ್ರದಿಂದ ಸ್ಪರ್ಧಿಸಲು ನಿರ್ಧರಿಸಿರುವೆ. ಬೆಂಬಲಿಗರ ಜೊತೆ ಸಭೆ ನಡೆಸಿ ಯಾವ ಕ್ಷೇತ್ರದಲ್ಲಿ ಸ್ಪರ್ಧಿಸಿದರೆ ಸೂಕ್ತ ಎಂಬುದನ್ನು ಒಂದೆರೆಡು ದಿನಗಳಲ್ಲಿ ಅಂತಿಮಗೊಳಿಸುವೆ' ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಎರಡು ದಿನದಲ್ಲಿ ನಿರ್ಧಾರ ಪ್ರಕಟ: ನಿಂಬಣ್ಣವರ

ಧಾರವಾಡ: 'ಮೂರು ದಿನಗಳ ಹಿಂದೆ ಪಕ್ಷ ಸೇರಿದವರಿಗಾಗಿ 30 ವರ್ಷಗಳಿಂದ ಪಕ್ಷಕ್ಕಾಗಿ ದುಡಿದವನನ್ನು ಕಡೆಗಣಿಸಿ ಅವಮಾನಿಸಿರುವುದು ಸರಿಯಲ್ಲ' ಎಂದು ಕಲಘಟಗಿ ಬಿಜೆಪಿ ಶಾಸಕ ಸಿ.ಎಂ.ನಿಂಬಣ್ಣವರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗುರುವಾರ ಪಕ್ಷದ ಬೆಂಬಲಿಗರ ಸಭೆ ನಡೆಸಿ ಮಾತನಾಡಿದ ಅವರು, 'ಮುಂದಿನ ಎರಡು ದಿನಗಳಲ್ಲಿ ನನ್ನ ನಿಲುವು ಪ್ರಕಟಿಸುತ್ತೇನೆ' ಎಂದರು.

ಕೆಜಿಎಫ್ ಬಾಬು ಆಸ್ತಿ ₹ 1,621 ಕೋಟಿ: ಪತ್ನಿ ಪಕ್ಷೇತರ ಅಭ್ಯರ್ಥಿ

ಬೆಂಗಳೂರು: ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಆಕಾಂಕ್ಷಿ ಕೆಜಿಎಫ್ ಬಾಬು ಉರುಫ್ ಯೂಸೂಫ್ ಷರೀಫ್ ಅವರ ಪತ್ನಿ ಶಾಜಿಯಾ ತರನ್ನಮ್ (37) ಗುರುವಾರ ನಾಮಪತ್ರ ಸಲ್ಲಿಸಿದ್ದಾರೆ. ಅವರ ಚರಾಸ್ತಿ ₹ 40.59 ಲಕ್ಷ ಇದ್ದರೆ, ಅವರ ಪತಿಯ ಆಸ್ತಿ ₹ 1,621 ಕೋಟಿ ಎಂದು ಘೋಷಿಸಿಕೊಂಡಿದ್ದಾರೆ.

ಟಿಕೆಟ್ ತಪ್ಪಲು ಸಿ.ಟಿ. ರವಿ ಕಾರಣ: ಕುಮಾರಸ್ವಾಮಿ

ಮೂಡಿಗೆರೆ: ಟಿಕೆಟ್ ಕೈತಪ್ಪಿರುವುದರಿಂದ ಶಾಸಕ ಎಂ.ಪಿ. ಕುಮಾರಸ್ವಾಮಿ ಅವರು ಬಿಜೆಪಿಯ ಪ್ರಾಥಮಿಕ ಸದಸ್ಯತ್ವ, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಗುರುವಾರ ಮೂಡಿಗೆರೆಯ ನಿವಾಸದಲ್ಲಿ ಬೆಂಬಲಿಗರು ಮತ್ತು ಅಭಿಮಾನಿಗಳ ಸಭೆ ನಡೆಸಿ, ಮುಂದಿನ ನಡೆ ಕುರಿತು ಅಭಿಪ್ರಾಯ ಸಂಗ್ರಹಿಸಿದರು. ಜೆಡಿಎಸ್ ಸೇರುವಂತೆ ಹಲವರು ಸಲಹೆ ನೀಡಿದರು. ಕುಮಾರಸ್ವಾಮಿ ಇದೇ 14ರಂದು ಮುಂದಿನ ನಿರ್ಧಾರ ಪ್ರಕಟಿಸಲಿದ್ದಾರೆ ಎಂದು ಆಪ್ತ ಮೂಲಗಳು ತಿಳಿಸಿವೆ.

'ನನಗೆ ಬಿಜೆಪಿ ಟಿಕೆಟ್ ಕೈತಪ್ಪಲು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಮತ್ತು ಅವರ ಪಟಾಲಂ ಷಡ್ಯಂತ್ರವೇ ಕಾರಣ' ಎಂದು ಕುಮಾರಸ್ವಾಮಿ ಅವರು ಹೇಳಿದರು.

ವೈಎಸ್‌ವಿ ದತ್ತ ಭೇಟಿ ಮಾಡಿದ ರೇವಣ್ಣ, ಪ್ರಜ್ವಲ್ • ಕಡೂರಿನ ಯಗಟಿ ಗ್ರಾಮದಲ್ಲಿ ಸಭೆ

ಟಿಕೆಟ್ ಭರವಸೆ: ಜೆಡಿಎಸ್‌ನತ್ತ ಮರಳಿ ದತ್ತ

ಪ್ರಜಾವಾಣಿ ವಾರ್ತೆ

ಕಡೂರು (ಚಿಕ್ಕಮಗಳೂರು ಜಿಲ್ಲೆ): ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ, ಸಂಸದ ಪ್ರಜ್ವಲ್ ರೇವಣ್ಣ ಅವರು ವೈಎಸ್‌ವಿ ದತ್ತ ಅವರ ಮನೆಗೆ ಗುರುವಾರ ಭೇಟಿ ನೀಡಿ, 'ದೇವೇಗೌಡರು ಜೆಡಿಎಸ್ ಟಿಕೆಟ್ ನಿಮಗೇ ನೀಡಲು ನಿರ್ಧರಿಸಿದ್ದಾರೆ' ಎಂದು ಹೇಳಿ ಅವರನ್ನು ಪಕ್ಷಕ್ಕೆ ಆಹ್ವಾನಿಸಿದರು. ಅದಕ್ಕೆ ಸಮ್ಮತಿಸಿದ ದತ್ತ ಜೆಡಿಎಸ್‌ಗೆ ಮರಳಿದರು.

ತಾಲ್ಲೂಕಿನ ಯಗಟಿ ಗ್ರಾಮದಲ್ಲಿನ ದತ್ತ ಅವರ ನಿವಾಸದ ಆವರಣದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿದ ರೇವಣ್ಣ, 'ಜೆಡಿಎಸ್ ಪಕ್ಷವು ದತ್ತ ಅವರ ಮನೆ. ಅವರು ಮನೆಗೆ ಮರಳಿದ್ದು, ಜೆಡಿಎಸ್ ಟಿಕೆಟ್ ನೀಡುವುದು ಖಚಿತ. ನಾಮಪತ್ರ ಸಲ್ಲಿಸುವ ದಿನ ಅವರ ಜೊತೆ ಇರುವುದಾಗಿ ದೇವೇಗೌಡರು ಹೇಳಿದ್ದಾರೆ' ಎಂದರು.

'ಜೆಡಿಎಸ್ ಪಕ್ಷ ಕಟ್ಟುವಲ್ಲಿ ದತ್ತ ಅವರ ಪಾತ್ರ ಮುಖ್ಯವಾದುದು. ನಡು-ರಾತ್ರಿಯಲ್ಲಿಯೂ ದತ್ತ ಅವರನ್ನು ದೇವೇಗೌಡರು ಕರೆಸಿಕೊಂಡು ಚರ್ಚೆ ಮಾಡುತ್ತಿದ್ದರು. ಬುದ್ಧಿವಂತ ಸಮಾಜವಾದ ಬ್ರಾಹ್ಮಣರನ್ನು ಜೊತೆಗಿಟ್ಟುಕೊಳ್ಳಬೇಕೆಂಬುದು ನಮ್ಮ ಆಸೆಯೂ ಹೌದು' ಎಂದು ರೇವಣ್ಣ ಚಟಾಕಿ ಹಾರಿಸಿದರು.

'ಸಿ.ಎಂ.ಧನಂಜಯ ಅವರಿಗೆ ಕಡೂರು ಕ್ಷೇತ್ರದ ಜೆಡಿಎಸ್ ಟಿಕೆಟ್ ಈಗಾಗಲೇ ಘೋಷಿಸಲಾಗಿದೆ. ಎಚ್.ಡಿ.ದೇವೇಗೌಡ, ಎಚ್.ಡಿ. ಕುಮಾರಸ್ವಾಮಿ ಮೊದಲಾದವರು ಧನಂಜಯ ಅವರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತಾರೆ' ಎಂದು ಅವರು ಹೇಳಿದರು.

ದತ್ತ ಮಾತನಾಡಿ, 'ಬುಧವಾರ ದೇವೇಗೌಡರನ್ನು ಭೇಟಿಯಾಗಿದ್ದೆ. ನಿನ್ನನ್ನು ಪಕ್ಷೇತರನಾಗಿ ಚುನಾವಣೆಗೆ ನಿಲ್ಲಿಸಲು ನಾನಿನ್ನೂ ಸತ್ತಿಲ್ಲ ಎಂದು ದೇವೇಗೌಡರು ಹೇಳಿ, ಜೆಡಿಎಸ್‌ನಿಂದಲೇ ಸ್ಪರ್ಧಿಸು ಎಂದರು. ಅಭಿಮಾನಿಗಳು ಒಪ್ಪುವುದಿಲ್ಲ ಎಂದೆ. ಗೌಡರು ರೇವಣ್ಣ ಮತ್ತು ಪ್ರಜ್ವಲ್ ಇಬ್ಬರೂ ನಿಮ್ಮನೆಗೇ ಬಂದು ಅಭಿಮಾನಿಗಳ ಜೊತೆ ಮಾತನಾಡುತ್ತಾರೆ. ನಾಮಪತ್ರ ಸಲ್ಲಿಸುವಾಗ ನಾನು ಮಾಜಿ ಪ್ರಧಾನಿಯಾಗಿ ಅಲ್ಲ, ಮಗ ನಾಮಪತ್ರ ಸಲ್ಲಿಸುತ್ತಾನೆಂದು ಬರುವೆ ಎಂದಿದ್ದಾರೆ. ದೇವೇಗೌಡರು ಮತ್ತು ನನ್ನ ನಡುವಿನ ಸಂಬಂಧ ರಾಜಕೀಯವನ್ನು ಮೀರಿದ್ದು' ಎಂದು ಭಾವುಕರಾದರು.


ಕಡೂರು ತಾಲ್ಲೂಕಿನ ಯಗಟಿಯಲ್ಲಿ ನಡೆದ ಸಭೆಯಲ್ಲಿ ಸಂಸದ ಪ್ರಜ್ವಲ್ ರೇವಣ್ಣ ಮಾತನಾಡಿದರು. ಶಾಸಕ ಎಚ್‌.ಡಿ.ರೇವಣ್ಣ , ವೈ.ಎಸ್‌.ವಿ. ದತ್ತ ಇದ್ದರು

ದತ್ತ ಅವರು ಮರಳಿ ಜೆಡಿಎಸ್ ಸೇರುವುದು ಹಾಸನ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರ. ರೇವಣ್ಣ ಮತ್ತು ಪ್ರಜ್ವಲ ರೇವಣ್ಣ ಜೊತೆ ಚರ್ಚಿಸಿದ್ದಾರೆ. ನಿನ್ನೆ ದತ್ತ ಅವರು ದೇವೇಗೌಡರನ್ನು ಭೇಟಿಯಾಗಿದ್ದು, ನನ್ನನ್ನು ಭೇಟಿ ಆಗಿಲ್ಲ. ಸಂಪರ್ಕದಲ್ಲೂ ಇಲ್ಲ. ಮೊದಲಿನಿಂದಲೂ ಅವರು ನನ್ನೊಂದಿಗೆ ಅಷ್ಟಕ್ಕೆ ಅಷ್ಟೆ. ಜೆಡಿಎಸ್‌ಗೆ ಬರುವುದಾದರೆ ಬರಲಿ. ಟಿಕೆಟ್ ನೀಡುವುದನ್ನು ದೇವೇಗೌಡರು ನಿರ್ಧರಿಸುತ್ತಾರೆ.
ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ವೈಎಸ್‌ವಿ ದತ್ತ ಅವರು ಸಭೆ ನಡೆಸಿ ಪಕ್ಷೇತರನಾಗಿ ಸ್ಪರ್ಧಿಸುತ್ತೇನೆ ಎಂದು ಘೋಷಿಸಿದ್ದರು. ಅವರಿಗೆ ತಾಕತ್ತು ಇದ್ದರೆ ಪಕ್ಷೇತರನಾಗಿ ಸ್ಪರ್ಧಿಸಿ ಗೆದ್ದು ಅವರ ಶಕ್ತಿ ಸಾಬೀತುಪಡಿಸಲಿ.
ಎಸ್.ಎಲ್.ಭೋಜೇಗೌಡ
ಪ್ರಧಾನ ಕಾರ್ಯದರ್ಶಿ, ಜೆಡಿಎಸ್ ರಾಜ್ಯ ಘಟಕ

ಬೆಂಗಳೂರಿನಲ್ಲಿ ಎಚ್. ಡಿ.ಕುಮಾರಸ್ವಾಮಿ ಅವರನ್ನು ಶುಕ್ರವಾರ ಭೇಟಿ ಮಾಡುತ್ತೇನೆ. ಅವರೊಂದಿಗೆ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳುತ್ತೇನೆ.
ಸಿ.ಎಂ.ಧನಂಜಯ
ಜೆಡಿಎಸ್ ಘೋಷಿತ ಅಭ್ಯರ್ಥಿ, ಕಡೂರು ಕ್ಷೇತ್ರ

ಅಭಿಮಾನಿಗಳ ತೀರ್ಮಾನವೇ ಅಂತಿಮ. ಇದೇ 18ರಂದು ಜೆಡಿಎಸ್‌ನಿಂದ ನಾಮಪತ್ರ ಸಲ್ಲಿಸಲು ನಿರ್ಧರಿಸಿದ್ದೇನೆ.
ವೈ.ಎಸ್.ವಿ ದತ್ತ
ಮಾಜಿ ಶಾಸಕ



FASHION FACTORY
BRANDS FOR LESS
Reliance
Growth is Life
NOW OPEN IN BENGALURU
FASHION FACTORY BRANDS FOR LESS
NO CONDITIONS SALE
FLAT 50% OFF
ON ALL APPARELS, LUGGAGE AND FOOTWEAR
+
GET ANY GIFT WORTH ₹1000 @ ₹249 ONLY
ON SHOPPING OF ₹3999 ONLY*
*GIFT OFFER VALID TILL STOCK LASTS
Till 23rd April
LEVI'S
PUMA
spykar
Pepe Jeans LONDON
Raymond
adidas
Lee
SKECHERS
PARK AVENUE
Lee Cooper SINCE 1908
KILLER this is us
Wrangler
Scan for store location
STORES IN BENGALURU: BANNERGHATTA ROAD, OPP. NAGARJUNA HOTEL BANSHANKARI, 3RD STAGE, 100 FT ROAD | ELECTRONIC CITY, PHASE 1, NEELADRI ROAD, NEXT TO KARNATAKA BANK | HOSUR ROAD, BESIDES RNS MOTORS | HSR LAYOUT, SECTOR 7, 17TH CROSS, NEXT TO CANARA BANK | KANAKPURA ROAD, OPP. A2B RESTAURANT MALLESHWARAM, 5TH CROSS, BESIDE BBMP OFFICE | ROCKLINE MALL, JALAHALLI CROSS RR NAGAR, GOPALAN ARCADE MALL, MYSORE ROAD | SARJAPURA ROAD, BELOW BARBEQUE NATION | WHITE FIELD, MAHADEVAPURA, OPP DECATHLON
STORE MANAGER : 6360600162 / 8104917753
@rel_fashionfactory
@FashionF_IND
@rel.fashionfactory

ಶುಕ್ರದೆಸೆಯಲ್ಲಿ ಕೋಮಲ್

ಹಾಸ್ಯ, ಗಂಭೀರ ಪಾತ್ರಗಳಲ್ಲಿ ಮಿಂಚಿ, ಚಿತ್ರ ನಿರ್ಮಾಣದಲ್ಲೂ ತಮ್ಮದೇ ಛಾಪು ಮೂಡಿಸಿದವರು ನಟ ಕೋಮಲ್. ಕೆಲಕಾಲ ಚಿತ್ರರಂಗದಿಂದ ದೂರವಿದ್ದು ಅಧ್ಯಾತ್ಮ, ಯೋಗ ಇತ್ಯಾದಿಗಳಲ್ಲಿ ಮಗ್ನರಾಗಿದ್ದ ಅವರು ಇದೀಗ ಬೆಳ್ಳಿತೆರೆಗೆ ಮರಳಿದ್ದಾರೆ. ಹಲವು ಚಿತ್ರಗಳು ಅವರ ಕೈಯಲ್ಲಿವೆ. 'ಉಂಡೆನಾಮ' ಬಿಡುಗಡೆಯ ಹೊತ್ತಿನಲ್ಲಿ ಕೋಮಲ್ ಮನದಾಳ ಹೀಗಿದೆ...

ಪೂರ್ಣ ಸಂದರ್ಶನ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ವೈದೇಹಿ ಬಾಟಿ


ಕೋಮಲ್

- **ಕೋಮಲ್ ಅವರ ಬದುಕು ಹೇಗಿದೆ?**

ಲಯಬದ್ಧವಾಗಿದೆ. ಜೀವನ ಅಂದ ಮೇಲೆ ಒಂದಿಷ್ಟು ಮೆಲೋಡ್ರಾಮಾ, ಥ್ರಿಲ್, ಸಸ್ಪೆನ್ಸ್ ಇರಬೇಕು. ಎಲ್ಲ ನವರಸಗಳು ಇದ್ದಾಗಲೇ ಮಜಾ ಇರುತ್ತದೆ.

- **ಹಿಂದಿನ ಮತ್ತು ಇಂದಿನ ಕೋಮಲ್‌ಗೂ ಆಗಿರುವ ಬದಲಾವಣೆ ಕುರಿತು ಹೇಳಿ...**

ನನ್ನ ದೈಹಿಕ ಸ್ವರೂಪವನ್ನು ನೋಡಿ ಕೆಲವರು ನನ್ನನ್ನು ನೋಯಿಸಿದ್ದುಂಟು. ನನಗೆ ಥೈರಾಯ್ಡ್ ಸಮಸ್ಯೆ ಇತ್ತು. ಅದೂ ಅಂಥ ವ್ಯತ್ಯಾಸಕ್ಕೆ ಕಾರಣವಾಗಿತ್ತು. ಈ ಹೊತ್ತಿನಲ್ಲಿ ನನಗೆ ಮೂವರು ಯೋಗ ಗುರುಗಳು ಸಿಕ್ಕಿದರು. ಅವರೆಲ್ಲರ ನೆರವಿನಿಂದ ಗಾಢವಾಗಿ ಯೋಗ, ಅಧ್ಯಾತ್ಮದಲ್ಲಿ ತೊಡಗಿಕೊಂಡೆ. ಹಾಗಾಗಿ ಈಗಿನ ಕೋಮಲ್ ಕಾಣುತ್ತಿದ್ದಾನೆ. ಇನ್ನು ಜ್ಯೋತಿಷದ ಪ್ರಕಾರ ಹೇಳಬೇಕೆಂದರೆ, ಗ್ರಹಗಳ ಚಲನೆ ಮನುಷ್ಯರ ಮೇಲೆ ಪರಿಣಾಮ ಬೀರುತ್ತದೆ. ನನಗೆ ಈಗ ಶುಕ್ರದೆಸೆ ನಡೆಯುತ್ತಿದೆ. ಈಗ ಎಲ್ಲವೂ ಒಳ್ಳೆಯದೇ ಆಗುತ್ತಿದೆ.

- **ಚಿತ್ರರಂಗದಿಂದ ದಿಢೀರ್ ದೂರವಾದ ಬಗ್ಗೆ ಹೇಳಿ?**

ಜ್ಯೋತಿಷ ಇತ್ಯಾದಿಗಳನ್ನು ಶೇ 50ರಷ್ಟು ಮಾತ್ರ ನಂಬುತ್ತಿದ್ದೆ. ಉದಾಹರಣೆಗೆ 'ಕೆಂಪೇಗೌಡ' ಚಿತ್ರವನ್ನು ಅದ್ಭುತವಾಗಿ ಮಾಡಿದ್ದೆವು. ಆದರೆ, ಅದು ಫಲಿತಾಂಶ ಕೊಡಲಿಲ್ಲ. ಕೇತು ದೆಸೆಯಲ್ಲಿ ಹೀಗೇ ಆಗುತ್ತದೆ. ಇದನ್ನೆಲ್ಲಾ ನೋಡಿ ನಮ್ಮ ಅಣ್ಣ ಜಗ್ಗೇಶ್, 'ಮೂರು ವರ್ಷ ಸುಮ್ಮನೆ ತಳ್ಳಿಬಿಡು' ಅಂದಿದ್ದರು. ಆಗ ನಾನು ಕೇವಲ ಅಧ್ಯಾತ್ಮದತ್ತ ಹೊರಳಿದ್ದೆ. ಆ ಕಾಲ ಕಳೆದ ಬಳಿಕ 'ಕಾಲಾಯ ನಮಃ' ಸೆಟ್ಟೇರಿತು. ಆ ಸಿನಿಮಾ ಸೆಟ್ಟೇರುತ್ತಿದ್ದಂತೆಯೆ ಹಲವಾರು ನಿರ್ಮಾಪಕರು ಬಂದು ಕಥೆ ಕೇಳಿ ಮುಂಗಡ ನೀಡಿದರು. ಒಂದೇ ದಿನ ಆರು ಸಿನಿಮಾಗಳಿಗೆ ಬುಕ್ ಮಾಡಿಕೊಂಡರು. ಹೀಗೆ ಗ್ರಹಗತಿಗಳು ಮನುಷ್ಯರ ಮೇಲೆ ಅಗಾಧವಾದ ಪರಿಣಾಮ ಬೀರುತ್ತವೆ.

- **'ಕೆಂಪೇಗೌಡ' ಸಿನಿಮಾ ಬಂದಾಗ ನಿಮಗೆ ಗಂಭೀರ ಪಾತ್ರಗಳು ಹೊಂದುವುದಿಲ್ಲ ಎಂದವರೂ ಇದ್ದರಲ್ವಾ?**

ನೋಡಿ, ಅದು ನಮ್ಮ ಮನಃಸ್ಥಿತಿ. ಒಬ್ಬ ಹೀರೋ ಮಾಡಿದರೆ ಹೀರೋನೇ ಆಗಬೇಕು. ವಿಲನ್ ಆದರೆ ಅದೇ ಆಗಬೇಕು ಅನ್ನುವುದು ನಮ್ಮ ಮೈಂಡ್‌ಸೆಟ್. ಉದಾಹರಣೆಗೆ ಬಿರಾದಾರ್ ಅವರಂತಹ ಪ್ರಶಸ್ತಿ ಪುರಸ್ಕೃತ ಅದ್ಭುತ ನಟರನ್ನು ಭಿಕ್ಷುಕ, ಹುಚ್ಚನ ಪಾತ್ರಕ್ಕೆ ಸೀಮಿತ ಮಾಡಿಬಿಟ್ಟಿರುವುದೂ ಇದೇ ಕಾರಣದಿಂದ. ಅವರು ಬೇರೆ ಅದ್ಭುತ ಪಾತ್ರಗಳನ್ನು ಮಾಡಬಲ್ಲರು ಅನ್ನುವುದನ್ನು ಗುರುತಿಸಲೇ ಇಲ್ಲ. ಇಂಥದ್ದೇ ಪರಿಣಾಮ ನನ್ನ ಮೇಲೂ ಆಗಿದೆ.

- **ಮತ್ತೆ ಕಾಮಿಡಿ ಪ್ರಕಾರಕ್ಕೆ ಹೋಗುತ್ತಿದ್ದೀರಿ. ಎಷ್ಟರಮಟ್ಟಿಗೆ ಜನರನ್ನು ತಲುಪಲಿದ್ದೀರಿ?**

ನಾನು ಸಿನಿಕ್ಷೇತ್ರಕ್ಕೆ ಬಂದಿದ್ದೇ ಒಬ್ಬ ವಿತರಕನಾಗಿ. ಆ ಬಳಿಕ ಪ್ರದರ್ಶಕನಾದೆ. ಒಂಬತ್ತು ಚಿತ್ರಗಳನ್ನು ನಿರ್ಮಿಸಿದ್ದೇನೆ. ಒಂದು ರೆಕಾರ್ಡಿಂಗ್ ಸ್ಟುಡಿಯೋ ಇದೆ. ಹೀಗೆ ಸಿನಿಮಾ ಅನ್ನುವುದೇ ನನಗೊಂದು ಸಂಸಾರ. ಉದಾಹರಣೆಗೆ 'ನಮೋ ಭೂತಾತ್ಮ' ಚಿತ್ರವನ್ನು ಕನ್ನಡದಲ್ಲಿ ರೀಮೇಕ್ ಮಾಡಿದೆ. ಆದರೆ, ಅದರ ಹಿಂದಿ ಡಬ್ಬಿಂಗ್ ಹಕ್ಕು ಕೇಳಿದರು. ಡಬ್ ಆದ ಚಿತ್ರವನ್ನು ಯುಟ್ಯೂಬ್‌ನಲ್ಲಿ 1.2 ಕೋಟಿ ಜನ ನೋಡಿದರು. ಹಾಗಾಗಿ ಈಗಿನ ಚಿತ್ರಗಳ ಮೇಲೂ ನನಗೆ ನಂಬಿಕೆ ಇದೆ.

- **ಹಾಸ್ಯ ನಟನಿಂದ ನಾಯಕ ಆಗಿ ಬದಲಾಗುವ ಹೊತ್ತು ನಿಮ್ಮ ತಯಾರಿ ಹೇಗಿದೆ?**

ಬರೀ ಹಾಸ್ಯ ಪಾತ್ರ ಮಾಡಿದಾಗ ನಾವು ಖಾಲಿ ಜಾಗಗಳನ್ನು ತುಂಬುವವರಾಗಿರುತ್ತೇವೆ. ಆದರೆ, ನಾಯಕ ಪಾತ್ರ ನಿರ್ವಹಿಸುವಾಗ ನಮಗೆ ನಿಜವಾಗಿಯೂ ಸವಾಲು ಇರುತ್ತದೆ. ಭಾವನಾತ್ಮಕತೆ ತುಂಬಬೇಕಾಗುತ್ತದೆ. ಥ್ರಿಲ್, ಕಾಮಿಡಿ ಎಲ್ಲವನ್ನೂ ಸಮ್ಮಿಳಿತಗೊಳಿಸಿಕೊಡಬೇಕಾಗುತ್ತದೆ. ಅಂಥ ಒಂದು ಫುಲ್‌ಮೀಲ್ಸ್ ಕೊಡುವ ಸಾಮರ್ಥ್ಯ ಇರುವಂಥದ್ದೇ ನಾಯಕ ಅನ್ನುವ ಪಾತ್ರ. ಅದೊಂದು ಪಟ್ಟವಂತೂ ಅಲ್ಲ.

- **ಹಾಸ್ಯ ಕಲಾವಿದರನ್ನು ಕಡಿಮೆ ಸಂಭಾವನೆಗೆ ದುಡಿಸಿಕೊಳ್ಳುವ ಬಗ್ಗೆ?**

ನನ್ನ ಮೊದಲ ಸಂಭಾವನೆ ಅನ್ನುವುದಕ್ಕಿಂತಲೂ ಕಾಣಿಕೆ ರೂಪದಲ್ಲಿ ಸಿಕ್ಕಿದ್ದು ₹ 200. ಕೊಟ್ಟವರೆಲ್ಲಾ ಪ್ರೀತಿಯಿಂದ ಕೊಟ್ಟು ಆಶೀರ್ವದಿಸಿದ್ದಾರೆ. ಹಾಸ್ಯ ಕಲಾವಿದರಿಗೆ ಒಳ್ಳೆಯ ಸಂಭಾವನೆ ಸಿಗುವ ಹಾಗೆ ಟ್ರೆಂಡ್ ಸೆಟ್ ಮಾಡಿದ್ದೂ ನಾನೇ.

- **ಅಣ್ಣ ಜಗ್ಗೇಶ್ ಅವರ ಬೆಂಬಲದ ಬಗ್ಗೆ?**

ದೊಡ್ಡಣ್ಣ ಅಂದರೆ ತಂದೆಯ ಜಾಗದಲ್ಲಿ ನಿಲ್ಲುತ್ತಾರೆ. ಇಬ್ಬರಲ್ಲೂ ಕೊಡು–ಕೊಳ್ಳುವಿಕೆ ಇದೆ. ಯಾವುದೋ ಸ್ಕ್ರಿಪ್ಟ್, ಹಾಡು ಬೇಕು ಅಂದರು ಕೊಟ್ಟಿದ್ದೇನೆ. ಅವರೂ ನನಗೆ ಸಾಕಷ್ಟು ಬೆಂಬಲ, ಮಾರ್ಗದರ್ಶನ ನೀಡಿದ್ದಾರೆ. ಸಾಕಷ್ಟು ವಿಚಾರ ವಿನಿಮಯ ಮಾಡುತ್ತೇವೆ.

- **ಹೊಸದಾಗಿ ಈ ಕ್ಷೇತ್ರಕ್ಕೆ ಬರುವವರಿಗೆ ನಿಮ್ಮ ಸಲಹೆ?**

ಸಾಕಷ್ಟು ಪ್ರತಿಭೆಗಳು ನಮ್ಮ ಸುತ್ತಮುತ್ತ ಇದ್ದಾರೆ. ಚಿಕ್ಕ ವಯಸ್ಸಿನಿಂದಲೂ ನಾವು ಅಂಥ ಪ್ರವೃತ್ತಿ ಬೆಳೆಸಬೇಕು. ಒಬ್ಬ ಪ್ರತಿಭೆಯ ಸುತ್ತಮುತ್ತ ಅದೆಷ್ಟೋ ಜನರೂ ಕೆಲಸ ಮಾಡುತ್ತಾರೆ. ನಟಿಸುತ್ತಿದ್ದಾರೆ. ಒಟ್ಟಿನಲ್ಲಿ ಪ್ರತಿಭೆ ಹೊರಬರಬೇಕು ಅಷ್ಟೇ.

- **'ಉಂಡೆನಾಮ' ಶೀರ್ಷಿಕೆ ಬಗ್ಗೆ?**

'ಉಂಡೆನಾಮ'ದ ಟ್ರೈಲರ್ ಟ್ರೆಂಡಿಂಗ್‌ನಲ್ಲಿದೆ. ಅದೊಂದು ಖುಷಿಯ ವಿಚಾರ. ಈ ಮೊದಲು 2020 ಎಂದು ವರ್ಕಿಂಗ್ ಟೈಟಲ್ (ತಾತ್ಕಾಲಿಕವಾಗಿ) ಇಟ್ಟಿದ್ದೆವು. 'ಉಂಡೆನಾಮ' ಎಂದರೆ ಮೋಸ ಮಾಡುವುದು ಎಂಬ ಅರ್ಥವೂ ಆಡುಮಾತಿನಲ್ಲಿದೆ. ಈ ಪ್ರಪಂಚಕ್ಕೆ ಕೊರೊನಾ ಬಂದು ಎಲ್ಲರಿಗೂ 'ಉಂಡೆನಾಮ' ಹಾಕಿತ್ತಲ್ಲ; ಈ ಚಿತ್ರದಲ್ಲಿ ನಾಯಕನಿಗೆ ಕೊರೊನಾ ಹೇಗೆ ಉಂಡೆನಾಮ ಹಾಕಿತು ಮತ್ತು ಅದರಿಂದ ಅವನು ಹೇಗೆ ಬಂದ ಅನ್ನುವುದೇ ಕತೆ.

- **ಚಿತ್ರರಂಗದಲ್ಲಿನ ಮರೆಯದ ಭಾವನಾತ್ಮಕ ಅನುಭವ? ನೆನಪು?**

ನಮ್ಮದೇನಿದ್ದರೂ ಫ್ರೈಡೇ ಎಮೋಷನ್ಸ್ (ಶುಕ್ರವಾರ ಭಾವತೀವ್ರತೆ) ಅಷ್ಟೇ. ಸಿನಿಮಾ ಹಿಟ್ ಅಥವಾ ಫ್ಲಾಪ್ ಎರಡೇ ಗೊತ್ತಿರುವುದು. ಒಟ್ಟಿನಲ್ಲಿ ಪ್ರೇಕ್ಷಕರು ಚಿತ್ರಮಂದಿರಕ್ಕೆ ಬಂದು ಚಿತ್ರ ನೋಡಿದರೆ ಅದೇ ಖುಷಿ.

ಸಿನಿಮಾತು ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಮಾತಾಡಿದ ರಾಘವ


ರೇಚಲ್ ಡೇವಿಡ್

ವಿಭಿನ್ನ ಶೀರ್ಷಿಕೆಯಿಂದಲೇ ಗಮನ ಸೆಳೆದಿರುವ 'ಅನ್‌ಲಾಕ್ ರಾಘವ' ಚಲನಚಿತ್ರದ ಡಬ್ಬಿಂಗ್ ಪಿ.ಆರ್.ಕೆ. ಆಡಿಯೋ ಸ್ಟುಡಿಯೋದಲ್ಲಿ ಆರಂಭವಾಗಿದೆ. ಈ ಸಿನಿಮಾದ ನಾಯಕಿ ರೇಚಲ್ ಡೇವಿಡ್ ತಮ್ಮ ಪಾತ್ರಕ್ಕಾಗಿ ಕನ್ನಡ ಪದಗಳ ಉಚ್ಚಾರಣೆ ಕಲಿತು, ತಮ್ಮ ಪಾತ್ರಕ್ಕೆ ತಾವೇ ಡಬ್ ಮಾಡುತ್ತಿದ್ದಾರೆ.

'ಅನ್‌ಲಾಕ್ ರಾಘವ' ಚಿತ್ರತಂಡ ಚಿತ್ರದುರ್ಗ ಹಾಗೂ ಬೆಂಗಳೂರಿನಲ್ಲಿ 60 ದಿನಗಳ ಕಾಲ ಶೂಟಿಂಗ್ ನಡೆಸಿದೆ. ಈ ಚಿತ್ರದಲ್ಲಿ ಸಿನಿಗೀತೆ ಪ್ರೇಮಿಗಳಿಗಾಗಿಯೇ ಕುಣಿಸಿ-ತಣಿಸುವ ಮೂರು ಹಾಡುಗಳಿವೆ. ಆ್ಯಕ್ಷನ್ ಪ್ರಿಯರಿಗಾಗಿ ನಾಲ್ಕು ಫೈಟ್‌ಗಳಿವೆ ಎಂದಿದ್ದಾರೆ ಚಿತ್ರದ ನಿರ್ದೇಶಕ ದೀಪಕ್ ಮಧುವನಹಳ್ಳಿ. ಜೊತೆಗೆ ನಿರ್ದೇಶಕ, ಫೈಟ್ ಮಾಸ್ಟರ್, ನೃತ್ಯ ನಿರ್ದೇಶಕರು ಮೂವರೂ ಒಂದು ವಿಶೇಷ ಗೀತೆಯನ್ನು ವಿಭಿನ್ನವಾಗಿ ಒಟ್ಟಾಗಿ ಸಂಯೋಜಿಸಿದ್ದಾರಂತೆ.

ಇತ್ತೀಚೆಗಷ್ಟೇ ಯುಗಾದಿ ವಿಶೇಷವಾಗಿ 'ಅನ್ ಲಾಕ್ ರಾಘವ' ಚಿತ್ರತಂಡ ಎರಡನೇ ಪೋಸ್ಟರ್ ಬಿಡುಗಡೆ ಮಾಡಿದೆ. ಚಿತ್ರ ಜುಲೈ ತಿಂಗಳಲ್ಲಿ ಬಿಡುಗಡೆಯಾಗಲಿದೆ ಎಂದಿದೆ ಚಿತ್ರತಂಡ.

ಈ ಚಿತ್ರವನ್ನು ಸತ್ಯ ಹಾಗೂ ಮಯೂರ ಪಿಕ್ಚರ್ಸ್ ಬ್ಯಾನರ್ ನಡಿ ಮಂಜುನಾಥ್ ದಾಸೇಗೌಡ, ಡಿ. ಸತ್ಯಪ್ರಕಾಶ್ ಹಾಗೂ ಗಿರೀಶ್ ಕುಮಾರ್ ಜಂಟಿಯಾಗಿ ನಿರ್ಮಿಸುತ್ತಿದ್ದಾರೆ. ಸತ್ಯಪ್ರಕಾಶ್ ಕಥೆ-ಚಿತ್ರಕಥೆ-ಸಂಭಾಷಣೆ ಬರೆದಿದ್ದಾರೆ. ಲವಿತ್ ಛಾಯಾಗ್ರಹಣ, ಅನೂಪ್ ಸೀಳಿನ್ ಸಂಗೀತ, ಅಜಯ್ ಕುಮಾರ್ ಸಂಕಲನ ಚಿತ್ರಕ್ಕಿದೆ. ಧನಂಜಯ್ ಮಾಸ್ಟರ್ ಹಾಗೂ ಮುರಳಿ ಮಾಸ್ಟರ್ ನೃತ್ಯನಿರ್ದೇಶನದಲ್ಲಿ ಹಾಡುಗಳು ಮೂಡಿಬಂದಿವೆ. ವಿನೋದ್ ಮಾಸ್ಟರ್ ಮತ್ತು ಅರ್ಜುನ್ ಮಾಸ್ಟರ್ ಸಾಹಸ ದೃಶ್ಯಗಳನ್ನು ಸಂಯೋಜಿಸಿದ್ದಾರೆ. ಈ ಚಿತ್ರದ ನಾಯಕ ಮಿಲಿಂದ್ ನಾಯಕ. ಸಾಧುಕೋಕಿಲ, ಅವಿನಾಶ್, ಶೋಭರಾಜ್, ರಮೇಶ್ ಭಟ್, ವೀಣಾ ಸುಂದರ್, ಸುಂದರ್, ಧರ್ಮಣ್ಣ ಕಡೂರು, ಸಾಯಿ ಕುಡ್ಲ, ಭೂಮಿ ಶೆಟ್ಟಿ, ಮೂಗೂರು ಸುರೇಶ್, ಅಥರ್ವ ಪ್ರಕಾಶ್, ಶ್ರೀದತ್ತ, ಬೃಂದಾ ವಿಕ್ರಮ್ ತಾರಾಗಣದಲ್ಲಿದ್ದಾರೆ.

'ಶ್ರೀಮಂತ'ನ ಜೊತೆ ನಾಯಕರು



ಹಿರಿಯ ರಾಜಕಾರಣಿಗಳಾದ ಎಚ್.ಡಿ.ದೇವೆಗೌಡ, ಬಿ.ಎಸ್.ಯಡಿಯೂರಪ್ಪ, ಬಸವರಾಜ್ ಹೊರಟ್ಟಿ, ಈಶ್ವರ ಖಂಡ್ರೆ ಅವರೇ ನಿಜ ಪಾತ್ರಗಳಾಗಿ ಕಾಣಿಸಿಕೊಂಡರೆ ಹೇಗಿರಬಹುದು? ಅಂಥದ್ದೊಂದು ಪ್ರಯೋಗ ಮಾಡಿದೆ 'ಶ್ರೀಮಂತ' ಚಿತ್ರ.

ನಟ ಸೋನು ಸೂದ್ ಅಭಿನಯದ 'ಶ್ರೀಮಂತ' ಚಿತ್ರದ ಒಂದು ಲುಕ್ ಇದು. ಇತ್ತೀಚೆಗಷ್ಟೇ 'ಎಳೆ ಹಲಸಿನ ತೊಳೆ' ಎಂಬ ಹಾಡು ಬಿಡುಗಡೆಗೊಂಡಿದೆ. ಈ ಹಾಡೂ ಚೆನ್ನಾಗಿಯೇ ಮೂಡಿಬಂದಿದೆ. ಮಿಸ್ ಇಂಡಿಯಾ ಯೂನಿವರ್ಸ್ ರನ್ನರ್ ಅಪ್ ಆಗಿರುವ ವೈಷ್ಣವಿ ಪಟವರ್ಧನ್ ಹಾಡಿನಲ್ಲಿ ಹಳ್ಳಿ ರೈತರ ಎದುರಿಗೆ ಬಂದಿದ್ದಾರೆ. ರೈತನೇ ನಿಜವಾದ ಶ್ರೀಮಂತ ಎಂಬ ಆಶಯ ಹೊಂದಿರುವ ಈ ಚಿತ್ರದಲ್ಲಿ ಹಳ್ಳಿಗಾಡಿನ ಬದುಕು ತೋರಿಸಲಾಗಿದೆ. ಈ ಹಾಡಿಗೆ ಮದನ್ ಹರಿಣಿ ನೃತ್ಯ ಸಂಯೋಜನೆ ಮಾಡಿದ್ದಾರೆ. ವಿಜಯ್ ಪ್ರಕಾಶ್, ನವೀನ್ ಸಜ್ಜು ಈ ಹಾಡು ಹಾಡಿದ್ದಾರೆ. ಹಂಸಲೇಖ ಅವರ ಸಂಗೀತ, ಸಾಹಿತ್ಯವಿದೆ.

ಚಿತ್ರದ ಶೀರ್ಷಿಕೆ ಗೀತೆಯನ್ನು ದಿವಂಗತ ಎಸ್.ಪಿ.ಬಾಲಸುಬ್ರಹ್ಮಣ್ಯಂ ಹಾಡಿದ್ದಾರೆ. ಇದು ಅವರು ಹಾಡಿದ ಕೊನೆಯ ಹಾಡಾಗಿತ್ತಂತೆ. ರವಿಕುಮಾರ್ ಅವರ ಛಾಯಾಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನವಿದೆ. ಕೋವಿಡ್ ಕಷ್ಟಕಾಲದಲ್ಲಿ ಸೋನು ಸೂದ್ ಅವರು ಸಾವಿರಾರು ಜನರಿಗೆ ನೆರವು ನೀಡಿದ್ದರು. ಸಿನಿಮಾ ರಂಗದಲ್ಲೂ ಉತ್ತಮ ಹೆಸರು ಮಾಡಿರುವುದರಿಂದ ನಾಯಕ ನಟನಾಗಿ ಅವರನ್ನು ಆಯ್ಕೆ ಮಾಡಲು ಮುಖ್ಯ ಕಾರಣ ಎಂದರು ನಿರ್ದೇಶಕ ರಮೇಶ್ ಹಾಸನ್. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಈ ವಾರ ತೆರೆಗೆ ಬರಬೇಕಿತ್ತು. ಆದರೆ ರಾಜಕಾರಣಿಗಳು ಭಾಗವಹಿಸಿರುವ ಕಾರಣ ಈ ಚಿತ್ರ ಪ್ರದರ್ಶನಕ್ಕೆ ಚುನಾವಣಾ ನೀತಿ ಸಂಹಿತೆ ಅಡ್ಡಿಯಾಗಿ ಪರಿಣಮಿಸಿದೆಯಂತೆ. ಹಾಗಾಗಿ ಈ ಚಿತ್ರ ಮೇ 19ರಂದು ಬಿಡುಗಡೆಯಾಗಲಿದೆ. ಕ್ರಾಂತಿ, ವೈಷ್ಣವಿ ಚಂದ್ರನ್ ಮೆನನ್, ರಮೇಶ್ ಭಟ್, ರವಿಶಂಕರ್ ಗೌಡ, ಸಾಧು ಕೋಕಿಲ, ಚರಣ್ ರಾಜ್, ಕಲ್ಯಾಣಿ, ಗಿರಿ, ರಾಜು ತಾಳಿಕೋಟೆ ತಾರಾಗಣದಲ್ಲಿದ್ದಾರೆ.

ಮಾಯಾವಿಯ ಹುಡುಕಾಟ


ಶಿವಾಜಿ ಸುರತ್ಕಲ್ 2
ರಮೇಶ್ ಅರವಿಂದ್

2020ರಲ್ಲಿ ಬಿಡುಗಡೆಯಾಗಿ ಜನಮನ್ನಣೆ ಗಳಿಸಿದ್ದ ನಟ ರಮೇಶ್ ಅರವಿಂದ್ ಅಭಿನಯದ ಪತ್ತೇದಾರಿ ಚಿತ್ರ 'ಶಿವಾಜಿ ಸುರತ್ಕಲ್'ನ ಮುಂದುವರಿದ ಭಾಗ 'ಶಿವಾಜಿ ಸುರತ್ಕಲ್ – ದಿ ಮಿಸ್ಟೀರಿಯಸ್ ಕೇಸ್ ಆಫ್ ಮಾಯಾವಿ' ಇದೇ ಶುಕ್ರವಾರ (ಏಪ್ರಿಲ್ 14) ರಾಜ್ಯದಾದ್ಯಂತ ಬಿಡುಗಡೆಯಾಗುತ್ತಿದೆ.

'ಮೊದಲ ಭಾಗದಂತೆಯೇ ಈ ಚಿತ್ರವು ಸಹ ಒಂದು ಕೊಲೆ ಪ್ರಕರಣದ ಸುತ್ತ ನಡೆಯುವ ಕುತೂಹಲಕಾರಿ ಕಥಾಹಂದರದಿಂದ ಕೂಡಿದೆ. ಚಿತ್ರದಲ್ಲಿ ನಡೆಯುವ ಕೊಲೆಗಳಿಗೂ, ನಾಯಕ ಶಿವಾಜಿಗೂ ಒಂದು ನಂಟಿರುತ್ತದೆ. ಆ ನಂಟೇನು? ಕೊಲೆಗಳ ಹಿಂದಿರುವ ರಹಸ್ಯವೇನು? ಮತ್ತು ಕೊಲೆಗಾರ ಯಾರು? ಮತ್ತು 'ಮಾಯಾವಿ' ಪಾತ್ರ ಯಾವುದು ಎಂಬುದೇ ಈ ಚಿತ್ರದ ಹೂರಣ' ಎಂದರು ಚಿತ್ರದ ನಿರ್ದೇಶಕ ಆಕಾಶ್ ಶ್ರೀವತ್ಸ.

'ಮೊದಲ ಭಾಗ ನೋಡಿದವರಿಗೆ ಈ ಚಿತ್ರವು ಖಂಡಿತಾ ಇಷ್ಟವಾಗುತ್ತದೆ. ಇಲ್ಲಿ ಕೊಲೆಗಳ ಜೊತೆಗೆ ಮನರಂಜನೆ ಮತ್ತು ಭಾವನಾತ್ಮಕ ಸನ್ನಿವೇಶಗಳು ಸಹ ಇದೆ. ಚಿತ್ರ ನೋಡುತ್ತಿದ್ದಂತೆ ಇಲ್ಲಿ ಎರಡು ಪಾತ್ರಗಳಿವೆಯೋ ಅಥವಾ ನಾಯಕನ ಮನಸ್ಸಿನಲ್ಲಿ ಆಗುವ ತಳಮಳಗಳೋ ಎಂಬ ಪ್ರಶ್ನೆ ಪ್ರೇಕ್ಷಕರಿಗೆ ಕಾಡುತ್ತದೆ. ಕನ್ನಡದಲ್ಲಿ ಇದೊಂದು ವಿಭಿನ್ನವಾದ ಪ್ರಯತ್ನ ಎಂಬ ನಂಬಿಕೆ ಇದೆ' ಎಂದರು ನಿರ್ದೇಶಕರು.

'ಶಿವಾಜಿ ಸುರತ್ಕಲ್ 2' ಚಿತ್ರದಲ್ಲಿ ರಮೇಶ್ ಅರವಿಂದ್, ರಾಧಿಕಾ ನಾರಾಯಣ್, ಮೇಘನಾ ಗಾಂವ್ಕರ್, ಸಂಗೀತಾ ಶೃಂಗೇರಿ ಮುಂತಾದ ಕಲಾವಿದರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಬೆಂಗಳೂರು, ಮೈಸೂರು, ಹೈದರಾಬಾದ್, ಸುರತ್ಕಲ್, ಕಾಪು, ಹೊನ್ನಾವರ ಮುಂತಾದ ಕಡೆ ಚಿತ್ರೀಕರಣ ಮಾಡಲಾಗಿದೆ. ಗುರುಪ್ರಸಾದ್ ಮತ್ತು ಮಧು ಅಂಬಟ್ ಅವರ ಛಾಯಾಗ್ರಹಣ ಹಾಗೂ ಜೂಡಾ ಸ್ಯಾಂಡಿ ಸಂಗೀತವಿದೆ.

ಕಾಲೆಳೆಯುತ್ತಾರೆ ರಾಗಿಣಿ ದ್ವಿವೇದಿ


ನಟಿ ರಾಗಿಣಿ ದ್ವಿವೇದಿ

ನಟಿ ರಾಗಿಣಿ ದ್ವಿವೇದಿ, ಚಂದನ್ ಶೆಟ್ಟಿ ಜತೆ 'ಎಲ್ರ ಕಾಲೆಳೆಯತ್ತೆ ಕಾಲ'ತಂಡ ಸೇರಿಕೊಂಡಿದ್ದಾರೆ. ಕಾಲೆಳೆಯಲು ಇಬ್ಬರು ನಾಯಕಿಯರಾ ಎಂಬ ಅನುಮಾನ ಬೇಡ. ಚಿತ್ರದ ಪ್ರಚಾರಕ್ಕಾಗಿ ಹಾಡೊಂದು ಇತ್ತೀಚೆಗೆ ಬಿಡುಗಡೆಯಾಗಿದೆ. ಅದರಲ್ಲಿ ನಟ ಚಂದನ್ ಶೆಟ್ಟಿ ಮತ್ತು ರಾಗಿಣಿ ಜತೆಯಾಗಿ ನಟಿಸಿದ್ದಾರೆ.

ಉಷಾ ಗೋವಿಂದರಾಜು ನಿರ್ಮಾಣದ ಚಿತ್ರವನ್ನು ಸುಜಯ್ ಶಾಸ್ತ್ರಿ ನಿರ್ದೇಶಿಸುತ್ತಿದ್ದಾರೆ. ಈ ಪ್ರಚಾರ ಗೀತೆಯನ್ನು ಚಂದನ್ ಶೆಟ್ಟಿ ಅವರೇ ಬರೆದಿದ್ದು, ಮಂಗ್ಲಿ ಹಾಗೂ ಚಂದನ್ ಶೆಟ್ಟಿ ಹಾಡಿದ್ದಾರೆ. ಮುರಳಿ ಮಾಸ್ಟರ್ ನೃತ್ಯ ನಿರ್ದೇಶನ ಮಾಡಿದ್ದಾರೆ. ಈ ಹಾಡಿಗೆ ಮಾತ್ರ ಚಂದನ್ ಶೆಟ್ಟಿ ಅವರೆ ಸಂಗೀತ ನೀಡಿದ್ದಾರೆ. ಪ್ರವೀಣ್-ಪ್ರದೀಪ್ ಈ ಚಿತ್ರದ ಸಂಗೀತ ನಿರ್ದೇಶಕರು.

'ನಾನು 'ಕೆಂಪೇಗೌಡ' ಚಿತ್ರದಿಂದಲೂ ರಾಗಿಣಿ ಅವರ ಅಭಿಮಾನಿ. ಈಗ ಅವರ ಜತೆ ಹಾಡೊಂದರಲ್ಲಿ ನಟಿಸಿರುವುದು ಸಂತೋಷವಾಗಿದೆ. ಹಾಡು ಹಾಗೂ ಚಿತ್ರ ಎಲ್ಲರ ಮನ ಗೆಲಲ್ಲಿದೆ. ಇದು ನಾನು ನಾಯಕನಾಗಿ ಅಭಿನಯಿಸಿರುವ ಮೊದಲ ಚಿತ್ರ' ಎಂದರು ನಾಯಕ ಚಂದನ್ ಶೆಟ್ಟಿ.

'ಈ ಹಾಡು ಚೆನ್ನಾಗಿದೆ. ಚಂದನ್ ಶೆಟ್ಟಿ ಪ್ರತಿಭಾವಂತ. ಅವರು ಸಂಗೀತ ನೀಡಿ, ಹಾಡುವ ಹಾಡುಗಳು ನನಗೆ ಇಷ್ಟ. ಬಹಳ ದಿನಗಳಿಂದ ಅವರ ಜೊತೆ ನಟಿಸುವ ಕುರಿತು ಮಾತುಕತೆ ನಡೆಯುತ್ತಿತ್ತು. ಈಗ ಈ ಚಿತ್ರದ ಪ್ರಮೋಷನ್ ಸಾಂಗ್‌ನಲ್ಲಿ ಒಟ್ಟಿಗೆ ಅಭಿನಯಿಸಿದ್ದೇವೆ' ಎಂದು ತಿಳಿಸಿದ ನಟಿ ರಾಗಿಣಿ ದ್ವಿವೇದಿ, ಚಿತ್ರಕ್ಕೆ ಶುಭ ಕೋರಿದರು. ಬಳಿಕ ಚಿತ್ರತಂಡ ಒಟ್ಟಾಗಿ ಹಾಡಿಗೆ ಹೆಜ್ಜೆ ಹಾಕಿತು.

'ಇದು 80/90 ರ ಕಾಲಘಟ್ಟದಲ್ಲಿ ನಡೆಯುವ ಕಥೆ. ಚಿತ್ರದ ಬಹುತೇಕ ಕೆಲಸ ಮುಗಿದಿದ್ದು, ಸದ್ಯದಲ್ಲೇ ನಿಮ್ಮ ಮುಂದೆ ಬರುತ್ತೇವೆ' ಎಂದು ನಿರ್ದೇಶಕ ಸುಜಯ್ ಶಾಸ್ತ್ರಿ ತಿಳಿಸಿದರು.

ನಾಯಕಿ ಅರ್ಚನಾ ಕೊಟ್ಟಿಗೆ, ರಜನಿಕಾಂತ್, ರಾಕೇಶ್ ಪೂಜಾರಿ, ಕಥೆ ಬರೆದಿರುವ ರಾಜ್ ಗುರು, ಛಾಯಾಗ್ರಹಕ ವಿಶ್ವಜಿತ್ ರಾವ್ ಚಿತ್ರದ ಕುರಿತು ಮಾತನಾಡಿದರು.

ಡಿ.ಕೆ.ಶಿವಕುಮಾರ್ ಅಕ್ರಮ ಆಸ್ತಿ ಗಳಿಕೆ ಪ್ರಕರಣದ ವಿಚಾರಣೆ


ಹೈಕೋರ್ಟ್–ಸಿಬಿಐ ಮಧ್ಯೆ ವಾಗ್ಯುದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಮಗೆ ಬೇಕೆಂದಾಗ ಬಂದು ವಾದ ಮಾಡಲು ಕೋರ್ಟ್ ಅನ್ನು ಏನೆಂದು ತಿಳಿದಿದ್ದೀರಿ' ಎಂದು ಹೈಕೋರ್ಟ್, ಸಿಬಿಐ ಅನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಬೆನ್ನಲ್ಲೇ, ಈ ಮಾತಿಗೆ ಅಷ್ಟೇ ಬಿರುಸಾಗಿ ತಿರುಗೇಟು ನೀಡಿರುವ ಸಿಬಿಐ, 'ವಾದ ಮಾಡಲು ನೀವು ಅದು ಹೇಗೆ ಅವಕಾಶ ನೀಡುವುದಿಲ್ಲ ನೋಡೇಬಿಡುವ' ಎಂಬ ಬಿಗಿ ನಿಲುವನ್ನು ಪ್ರದರ್ಶಿಸುವ ಮೂಲಕ ಪರಸ್ಪರ ಮಾತಿನ ಚಕಮಕಿಗೆ ಮತ್ತೊಮ್ಮೆ ಸಾಕ್ಷಿಯಾಯಿತು.

ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕನಕಪುರ ಶಾಸಕ ಡಿ.ಕೆ.ಶಿವಕುಮಾರ್ ವಿರುದ್ಧದ ಪ್ರಕರಣದಲ್ಲಿ; ಸಿಬಿಐ ತನಿಖೆಗೆ ಶಿಫಾರಸು ಮಾಡಿದ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಲಾದ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣ'ಗಳ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಮಧ್ಯಾಹ್ನ ಪ್ರಕರಣದ ವಿಚಾರಣೆಯ ಕ್ರಮಸಂಖ್ಯೆ 100 ಎಂದು ನಿಗದಿಯಾಗಿದ್ದರೂ ರಾಜ್ಯ ಪ್ರಾಸಿಕ್ಯೂಟರ್ ಕೋರಿಕೆಯ ಮೇರೆಗೆ ನ್ಯಾಯಮೂರ್ತಿಗಳು ನಿಗದಿತ ಕ್ರಮಾಂಕಕ್ಕೆ ಬದಲಾಗಿ (ಔಟ್ ಆಫ್ ಟರ್ನ್) ಅರ್ಜಿ ವಿಚಾರಣೆಗೆ ಮುಂದಾದರು. ಈ ಸಮಯದಲ್ಲಿ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ಕೋರ್ಟ್ ಹಾಲ್



10ರಲ್ಲಿನ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಹಾಗೂ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯರೂರು ಅವರಿದ್ದ ವಿಶೇಷ ವಿಭಾಗೀಯ ನ್ಯಾಯಪೀಠದ ಮತ್ತೊಂದು ಪ್ರಕರಣದ ವಿಚಾರಣೆಯಲ್ಲಿ ವಾದ ಮಂಡಿಸುತ್ತಿದ್ದರು.

ಹೀಗಾಗಿ, ಪ್ರಸನ್ನ ಕುಮಾರ್ ಪರ ಕಿರಿಯ ವಕೀಲೆ, 'ನಮ್ಮ ಹಿರಿಯ ವಕೀಲರು ವಿಭಾಗೀಯ ನ್ಯಾಯಪೀಠದ ಮತ್ತೊಂದು ಗಂಭೀರ ಪ್ರಕರಣದ ವಿಚಾರಣೆಯಲ್ಲಿ ವಾದ ಮಂಡಿಸುತ್ತಿದ್ದಾರೆ. ಆದ್ದರಿಂದ, ಒಂದಷ್ಟು ಸಮಯ ನೀಡಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಸಿಬಿಐ ವಕೀಲರು ಏನೋ ವಾದ ಮಾಡುವುದಿದೆ ಎಂದು ಈ ಹಿಂದಿನ ವಿಚಾರಣೆಯಲ್ಲೇ ಹೇಳಿದ್ದರು. ಹಾಗಾಗಿ, ಅವರೂ ಬರಲಿ ನೋಡೋಣ' ಎಂದು ಮುಂದೂಡಿತು. ಮತ್ತೊಮ್ಮೆ ವಿಚಾರಣೆಗೆ ಕರೆದಾಗ ಸಿಬಿಐ ವಕೀಲರು ಕೋರ್ಟ್ ಹಾಲ್ 10ರಲ್ಲೇ ಕೆಜಿ–ಹಳ್ಳಿ ಹಾಗೂ ಡಿಜಿ–ಹಳ್ಳಿ ಗಲಭೆ ಪ್ರಕರಣದ ವಿಚಾರಣೆಯಲ್ಲಿ ವಾದ ಮುಂದುವರಿಸಿದ್ದರು. ಅಷ್ಟೊತ್ತಿಗಾಗಲೇ, ರಾಜ್ಯ ಸರ್ಕಾರ ಮತ್ತು ಡಿ.ಕೆ. ಶಿವಕುಮಾರ್ ಪರ ಹಾಜರಿದ್ದ ಹಿರಿಯ ವಕೀಲ ಉದಯ ಹೊಳ್ಳ ಅವರ ವಾದದ ಆಲಿಕೆಯನ್ನು ಪೂರ್ಣಗೊಳಿಸಿದ್ದ ನ್ಯಾಯಮೂರ್ತಿ ನಟರಾಜನ್ ಆದೇಶ ಕಾಯ್ದಿರಿಸಿರುವುದಾಗಿ ಪ್ರಕಟಿಸಿದರು.

ಈ ವಿಷಯ ಗೊತ್ತಾಗುತ್ತಿದ್ದಂತೆಯೇ ಕೋರ್ಟ್ ಹಾಲ್ 10ರಲ್ಲಿನ ವಿಚಾರಣೆಯಿಂದ ಮಧ್ಯಕ್ಕೇ ಎದ್ದು ಓಡಿ ಬಂದ ಪ್ರಸನ್ನ ಕುಮಾರ್, 'ಸ್ವಾಮಿ, ವಾದ ಮಂಡಿಸಲು ಅವಕಾಶ ನೀಡಬೇಕು. ತಾವು ಆದೇಶ ಕಾಯ್ದಿರಿಸಿರುವುದಾಗಿ ಪ್ರಕಟಿಸಿರುವುದನ್ನು ಹಿಂಪಡೆಯಬೇಕು' ಎಂದು ಕೋರಿದರು.

ಈ ಮನವಿಗೆ ಕೆರಳಿ ಕೆಂಡವಾದ ನ್ಯಾಯಮೂರ್ತಿ ನಟರಾಜನ್, 'ಈಗಾಗಲೇ ಸಮಯ 4.35 ಆಗಿದೆ. ಈಗ ಬಂದು ವಾದ ಮಂಡನೆಗೆ ಅವಕಾಶ ಬೇಕು ಎಂದು ಕೋರುತ್ತಿದ್ದೀರಲ್ಲಾ? ನಿಮಗೆ ತಿಳಿದಾಗ ಬಂದು ವಾದ ಮಾಡುತ್ತೇನೆ ಎನ್ನಲು ಇದನ್ನು ಏನೆಂದುಕೊಂಡಿದ್ದೀರಿ' ಎಂದು ಗರಂ ಆದರು. ಈ ಮಾತಿಗೆ ಅಷ್ಟೇ ಪ್ರತಿಯಾಗಿ ಕನಲಿ ನಿಂತ ಪ್ರಸನ್ನಕುಮಾರ್, 'ಸ್ವಾಮಿ ತಾವು ಈ ರೀತಿ ಹೇಳಲು ಬರುವುದಿಲ್ಲ. ನನ್ನ ವಾದ ಕೇಳಲೇ ಬೇಕು' ಎಂದು ಪಟ್ಟು ಹಿಡಿದರು.

ಇದಕ್ಕೆ ಪ್ರತಿಯಾಗಿ ನ್ಯಾಯಮೂರ್ತಿಗಳು, 'ಇಲ್ಲಾ ನಾನು ವಾದಕ್ಕೆ ಅವಕಾಶ ಕೊಡುವುದಿಲ್ಲ. ಬೇಕಿದ್ದರೆ, ನೀವು ಹೇಳಬೇಕು ಎಂದುಕೊಂಡಿರುವುದನ್ನು ಲಿಖಿತವಾಗಿ ನ್ಯಾಯಪೀಠಕ್ಕೆ ಸಲ್ಲಿಸಿ' ಎಂದು ಖಡಕ್ಕಾದ ಧ್ವನಿಯಲ್ಲಿ ನಿರ್ದೇಶಿಸಿದರು. ಇದನ್ನು ಸುತಾರಾಂ ಒಪ್ಪದ ಪ್ರಸನ್ನಕುಮಾರ್, 'ಸಾಧ್ಯವಿಲ್ಲ, ತಾವು ನನ್ನ ಮೌಖಿಕ ವಾದ ಆಲಿಸಲೇಬೇಕು. ಆಲಿಸಲು ಸಾಧ್ಯವಿಲ್ಲ ಎಂಬುದೇ ನಿಮ್ಮ ತೀರ್ಮಾನವಾಗಿದ್ದರೆ ಅದನ್ನು ನೀವು ಬರೆಯಿಸುವ ನ್ಯಾಯಾಂಗದ ಲಿಖಿತ ಆದೇಶದಲ್ಲಿ ಉಲ್ಲೇಖಿಸಿ ಮುಂದುವರಿಯಿರಿ' ಎಂದು ಸವಾಲೆಸೆದರು.

ಈ ಸಂದರ್ಭದಲ್ಲಿ ಕೋರ್ಟ್ ಹಾಲ್‌ನಲ್ಲಿ ಒಂದಷ್ಟು ಕ್ಷಣಗಳ ಕಾಲ ಗಾಢ ಮೌನ ಆವರಿಸುತ್ತಿದ್ದಂತೆಯೇ, ನ್ಯಾಯಮೂರ್ತಿ ನಟರಾಜನ್, 'ಆಲ್‌ರೈಟ್ ಸೋಮವಾರ ನಿಮ್ಮ ವಾದ ಮಂಡಿಸಿ' ಎಂದು ಆದೇಶಿಸಿ ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿದರು. ಅಂತೆಯೇ, ಸಿಬಿಐ ತನಿಖೆಗೆ ನೀಡಿರುವ ಮಧ್ಯಂತರ ತಡೆ ಆದೇಶವನ್ನು ಶಿವಕುಮಾರ್ ಪರ ಹಾಜರಿದ್ದ ಹಿರಿಯ ವಕೀಲ ಸಿ.ಎಚ್. ಜಾಧವ್ ಅವರ ಕೋರಿಕೆಯ ಮೇರೆಗೆ ಮುಂದಿನ ವಿಚಾರಣೆವರೆಗೆ ವಿಸ್ತರಿಸಿ ಆದೇಶಿಸಿದರು.

ಪ್ರಕರಣವೇನು?

ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 13 (2), 13 (1) (ಇ) ಅಡಿಯಲ್ಲಿ ಸಿಬಿಐ 2020ರ ಅಕ್ಟೋಬರ್ 3ರಂದು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದು ಈ ಸಂಬಂಧ ರಾಜ್ಯ ಸರ್ಕಾರ ಸಿಬಿಐ ತನಿಖೆಗೆ ನೀಡಿರುವ ಸಮ್ಮತಿಯನ್ನು ಶಿವಕುಮಾರ್ ಪ್ರಶ್ನಿಸಿದ್ದಾರೆ.



ಸುಧಾ, ಮಯೂರ ಓದಿರಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಇತರರ ಭಾವನೆಗಳೊಂದಿಗೆ ಎಂದಿಗೂ ಆಟವಾಡಬೇಡಿ. ಅದರಿಂದ ನೀವು ಗೆಲ್ಲಬಹುದು, ಆದರೆ ಆ ವ್ಯಕ್ತಿಯನ್ನು ನಿಮ್ಮ ಬದುಕಿನಿಂದ ಶಾಶ್ವತವಾಗಿ ಕಳೆದುಕೊಳ್ಳುವ ಅಪಾಯ ಇರುತ್ತದೆ.

-ವಿಲಿಯಂ ಷೇಕ್ಸ್‌ಪಿಯರ್

ಸಿಆರ್‌ಪಿಎಫ್ ಪರೀಕ್ಷೆ: ರಾಜ್ಯ ಭಾಷೆಗಳಲ್ಲಿ ನಡೆಸಲು ಪಕ್ಷಾತೀತ ಹೋರಾಟ ಅಗತ್ಯ

ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿ ಪರೀಕ್ಷೆಯನ್ನು ಕನ್ನಡ ಸೇರಿದಂತೆ ಎಲ್ಲ ರಾಜ್ಯ ಭಾಷೆಗಳಲ್ಲಿ ಬರೆಯಲು ಅವಕಾಶ ಕಲ್ಪಿಸಬೇಕು ಎಂದು ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಕೆಲವು ರಾಜಕೀಯ ಮುಖಂಡರು ಧ್ವನಿ ಎತ್ತಿರುವುದು ಸ್ವಾಗತಾರ್ಹ. ಸಿಆರ್‌ಪಿಎಫ್ ನೇಮಕಾತಿ ಪರೀಕ್ಷೆಯನ್ನು ಹಿಂದಿ ಮತ್ತು ಇಂಗ್ಲಿಷ್‌ನಲ್ಲಷ್ಟೇ ಬರೆಯಲು ಅವಕಾಶ ಕಲ್ಪಿಸಿರುವುದರ ವಿರುದ್ಧ ಕರ್ನಾಟಕದ ವಿರೋಧ ಪಕ್ಷಗಳ ಮುಖಂಡರು ಹಾಗೂ ತಮಿಳುನಾಡು ಮುಖ್ಯಮಂತ್ರಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಿಆರ್‌ಪಿಎಫ್ ನೇಮಕಾತಿ ಪರೀಕ್ಷೆಯನ್ನು ಹಿಂದಿ ಅಥವಾ ಇಂಗ್ಲಿಷ್‌ನಲ್ಲಷ್ಟೇ ಬರೆಯಲು ಅವಕಾಶ ಕಲ್ಪಿಸುವುದರಿಂದ ಹಿಂದಿಯೇತರ ರಾಜ್ಯಗಳ ಆಕಾಂಕ್ಷಿಗಳನ್ನು ಉದ್ಯೋಗದಿಂದ ವಂಚಿಸಿದಂತಾಗುತ್ತದೆ ಎನ್ನುವ ಆತಂಕ ಸಹಜವಾದುದು ಹಾಗೂ ದೇಶದ ಎಲ್ಲ ರಾಜ್ಯ ಭಾಷೆಗಳಲ್ಲೂ ಪರೀಕ್ಷೆ ಬರೆಯಲು ಅವಕಾಶ ಇರಬೇಕು ಎನ್ನುವ ಒತ್ತಾಯ ನ್ಯಾಯಸಮ್ಮತವಾದುದು. ರಾಜ್ಯ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡುವುದರಿಂದ ಸಿಆರ್‌ಪಿಎಫ್‌ನಲ್ಲಿ ಎಲ್ಲ ರಾಜ್ಯಗಳ ನಾಗರಿಕರು ಪ್ರಾತಿನಿಧ್ಯ ಪಡೆಯುವುದು ಸಾಧ್ಯವಾಗುತ್ತದೆ. ಉತ್ತಮ ದೇಹದಾರ್ಢ್ಯ ಹಾಗೂ ಶೈಕ್ಷಣಿಕ ಅರ್ಹತೆ ಹೊಂದಿದ್ದರೂ ಭಾಷೆಯ ಕಾರಣದಿಂದ ಸಿಆರ್‌ಪಿಎಫ್ ನೇಮಕಾತಿ ಪರೀಕ್ಷೆಯಲ್ಲಿ ಹೆಚ್ಚಿನ ಯಶಸ್ಸು ಪಡೆಯುವುದು ಕನ್ನಡವೂ ಸೇರಿದಂತೆ ಹಿಂದಿಯೇತರ ಭಾಷೆಗಳ ಅಭ್ಯರ್ಥಿಗಳಿಗೆ ಸಾಧ್ಯವಾಗುತ್ತಿಲ್ಲ. ಸದ್ಯದ ಪರೀಕ್ಷಾ ಪ್ರಕ್ರಿಯೆಯು ಹಿಂದಿ ಭಾಷಿಕ ರಾಜ್ಯಗಳ ಅಭ್ಯರ್ಥಿಗಳ ಹಿತಾಸಕ್ತಿ ರಕ್ಷಿಸುವಂತಿದೆ. ಯಾವುದೋ ಒಂದು ರಾಜ್ಯಭಾಷೆಯಲ್ಲಿ ದೇಶದ ಎಲ್ಲ ಅಭ್ಯರ್ಥಿಗಳೂ ಪರೀಕ್ಷೆ ಎದುರಿಸಬೇಕೆಂದು ಬಯಸುವುದು ಸರಿಯಲ್ಲ, ಅಂಥ ಅಪೇಕ್ಷೆ ಪ್ರಜಾಸತ್ತಾತ್ಮಕವಾದುದೂ ಅಲ್ಲ. ಸಂವಿಧಾನ ಅನುಮೋದಿಸಿರುವ ಎಲ್ಲ ಭಾಷೆಗಳಲ್ಲೂ ಪರೀಕ್ಷೆ ಬರೆಯಲು ಅವಕಾಶ ಇರಬೇಕು. ತನ್ನ ರಾಜ್ಯ ಭಾಷೆಯಲ್ಲಿ ಪರೀಕ್ಷೆ ಬರೆಯುವುದು ಪರೀಕ್ಷಾರ್ಥಿಯ ಸಾಂವಿಧಾನಿಕ ಹಕ್ಕು. ಸಿಆರ್‌ಪಿಎಫ್‌ನ ಸದ್ಯದ ಪರೀಕ್ಷಾ ಪ್ರಕ್ರಿಯೆ ಈ ಹಕ್ಕನ್ನು ಮೊಟಕುಗೊಳಿಸುತ್ತಿದೆ. ಕೇಂದ್ರ ಸರ್ಕಾರದ ಯಾವುದೇ ಸೇವಾಕ್ಷೇತ್ರವು ದೇಶದ ವೈವಿಧ್ಯ ಹಾಗೂ ಬಹುತ್ವವನ್ನು ಪ್ರತಿನಿಧಿಸುವಂತಿರಬೇಕು. ವಿವಿಧ ರಾಜ್ಯ ಭಾಷೆಗಳ ಅಭ್ಯರ್ಥಿಗಳ ಪ್ರಾತಿನಿಧ್ಯವನ್ನು ಪ್ರಜ್ಞಾಪೂರ್ವಕವಾಗಿ ಒಳಗೊಳ್ಳುವ ರೀತಿಯಲ್ಲಿ ಆಯ್ಕೆ ಪ್ರಕ್ರಿಯೆ ರೂಪುಗೊಳ್ಳುವುದು ಅಗತ್ಯ.



ಸಂವಿಧಾನ ಅನುಮೋದಿಸಿರುವ ಎಲ್ಲ ಭಾಷೆಗಳಲ್ಲೂ ಪರೀಕ್ಷೆ ಬರೆಯಲು ಅವಕಾಶವಿರಬೇಕು

ಹಿಂದಿಯೇತರ ಭಾಷಿಕರು ಇಂಗ್ಲಿಷ್ ಅಥವಾ ಹಿಂದಿಯಲ್ಲಿಯೇ ಪರೀಕ್ಷೆ ಬರೆಯಬೇಕೆನ್ನುವ ನಿಯಮವನ್ನು ಹಿಂದಿ ಹೇರಿಕೆಯ ರೂಪದಲ್ಲೂ ನೋಡಬಹುದು. ಅವಕಾಶ ದೊರೆತಾಗಲೆಲ್ಲ ಕೇಂದ್ರ ಸರ್ಕಾರದ 'ಹಿಂದಿ ಒಲವು' ದಕ್ಷಿಣದ ರಾಜ್ಯಗಳ ಮೇಲೆ ಹೇರಿಕೆಯ ರೂಪದಲ್ಲಿ ಪ್ರಕಟಗೊಳ್ಳುತ್ತಿರುತ್ತದೆ. ರಾಜ್ಯ ಭಾಷೆಗಳ ಮೇಲೆ ಹಿಂದಿ ಸವಾರಿ ನಡೆಸುವ ಕೇಂದ್ರ ಸರ್ಕಾರದ ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರಯತ್ನಗಳಿಗೆ ದಕ್ಷಿಣದ ರಾಜ್ಯಗಳಲ್ಲಿ ತೀವ್ರ ವಿರೋಧವೂ ದಾಖಲಾಗಿದೆ. ಉದ್ಯಮ, ಉದ್ಯೋಗ, ಶಿಕ್ಷಣ ಕ್ಷೇತ್ರಗಳಲ್ಲಿ ಇಂಗ್ಲಿಷ್‌ನೊಂದಿಗೆ ಹಿಂದಿಯನ್ನು ಎತ್ತಿ ನಿಲ್ಲಿಸುವ ಪ್ರಯತ್ನಗಳನ್ನು ಸಹಿಸಿಕೊಳ್ಳಲಾಗದು. ಸಿಆರ್‌ಪಿಎಫ್ ನೇಮಕಾತಿ ಪರೀಕ್ಷೆ ಮಾತ್ರವಲ್ಲ; ಕೇಂದ್ರ ಸರ್ಕಾರದ ಹುದ್ದೆಗಳಿಗೆ ನಡೆಸುವ ಬಹುತೇಕ ಪರೀಕ್ಷೆಗಳು ಹಿಂದಿ ಭಾಷಿಕರ ಹಿತಾಸಕ್ತಿಯನ್ನು ರಕ್ಷಿಸುವಂತಿವೆ. ಬಹುತೇಕ ಬ್ಯಾಂಕ್‌ಗಳಲ್ಲಿ ಹಿಂದಿ ಭಾಷಿಕರು ತುಂಬಿಕೊಂಡಿರುವುದಕ್ಕೆ ಹಿಂದಿಯೇತರ ಭಾಷೆಗಳ ಬಗೆಗಿನ ತಾರತಮ್ಯ ಧೋರಣೆಯೇ ಕಾರಣ. ಸಿಬ್ಬಂದಿ ನೇಮಕಾತಿ ಆಯೋಗ (ಎಸ್‌ಎಸ್‌ಸಿ) ಕೂಡ ಇತ್ತೀಚಿನವರೆಗೂ ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿರಲಿಲ್ಲ. ನಿರಂತರ ಪ್ರತಿಭಟನೆಯ ನಂತರ ಕನ್ನಡವೂ ಸೇರಿದಂತೆ ಹದಿಮೂರು ಪ್ರಾದೇಶಿಕ ಭಾಷೆಗಳಲ್ಲಿ ಅಭ್ಯರ್ಥಿಗಳು ಪರೀಕ್ಷೆಗಳನ್ನು ಬರೆಯಲು ಎಸ್‌ಎಸ್‌ಸಿ ಅವಕಾಶ ಕಲ್ಪಿಸಿದೆ. ಈ ಮಾದರಿಯು ಸಿಆರ್‌ಪಿಎಫ್ ನೇಮಕಾತಿಗೂ ಅನ್ವಯವಾಗಬೇಕು. ಸಿಆರ್‌ಪಿಎಫ್ ಪರೀಕ್ಷೆಗಳ ಭಾಷಾನೀತಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ತಕ್ಷಣ ಮಧ್ಯಪ್ರವೇಶಿಸಬೇಕು ಹಾಗೂ ಸಿಆರ್‌ಪಿಎಫ್ ಪರೀಕ್ಷೆಯನ್ನು ಈ ಬಾರಿಯಿಂದಲೇ ಎಲ್ಲ ರಾಜ್ಯ ಭಾಷೆಗಳಿಗೆ ಮುಕ್ತಗೊಳಿಸಬೇಕು. ಈ ದಿಸೆಯಲ್ಲಿ ರಾಜಕೀಯ ಪಕ್ಷಗಳು ಹಾಗೂ ಮುಖಂಡರು ಕೇಂದ್ರ ಸರ್ಕಾರದ ಮೇಲೆ ಪಕ್ಷಾತೀತವಾಗಿ ಒತ್ತಡ ಹೇರಬೇಕು. ಈ ಒತ್ತಡ ಕರ್ನಾಟಕದಿಂದಲೇ ಆರಂಭವಾಗುವುದು ಒಳ್ಳೆಯದು. ಮುಖ್ಯಮಂತ್ರಿ ಹಾಗೂ ರಾಜ್ಯದ ಎಲ್ಲ ಸಂಸದರು ಸಿಆರ್‌ಪಿಎಫ್ ಪರೀಕ್ಷೆಗಳ ಭಾಷಾನೀತಿಯನ್ನು ಪರಿಷ್ಕರಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ದಿಸೆಯಲ್ಲಿ ಎಲ್ಲ ರಾಜ್ಯ ಭಾಷೆಗಳನ್ನು ಸಮಾನವಾಗಿ ನಡೆಸಿಕೊಳ್ಳುವುದು ಕೇಂದ್ರ ಸರ್ಕಾರದ ಕರ್ತವ್ಯವೂ ಹೌದು.

ದಿನದ ಟ್ವೀಟ್

ಮಾರ್ಗಸೂಚಿಗೆ ವ್ಯತಿರಿಕ್ತ?



ಕೊರೊನಾ ಲಕ್ಷಣಗಳಿರುವ ಎಲ್ಲರಿಗೆ ಮತ್ತು ಅವರ ಸಂಪರ್ಕಕ್ಕೆ ಬಂದವರಿಗೆ ಕೂಡಾ ಕೊರೊನಾ ಪರೀಕ್ಷೆ ಮಾಡಬೇಕೆಂದು ಕರ್ನಾಟಕ ಆರೋಗ್ಯ ಇಲಾಖೆ ಆದೇಶಿಸಿರುವುದಕ್ಕೆ ಆಧಾರವೇನು, ಉದ್ದೇಶವೇನು? ಇದು ಐಸಿಎಂಆರ್ ಮಾರ್ಗಸೂಚಿಗೆ ವ್ಯತಿರಿಕ್ತವಾಗಿದೆಯಲ್ಲವೇ?

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

ಕಿಡಿನುಡಿ



ಬೆಂಗಳೂರು ವಿಭಾಗದಲ್ಲಿ ಮೈಸೂರು- ಚೆನ್ನೈ ನಡುವಿನ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಕಲ್ಲು ತೂರಾಡಿದ ಮತ್ತೊಂದು ಪ್ರಕರಣ ನಡೆದಿದ್ದು, ನಾಲ್ಕು ಬೋಗಿಗಳ ಕಿಟಕಿ ಗಾಜುಗಳಿಗೆ ಹಾನಿಯಾಗಿದೆ. ಸಂಘಟಿತವಾಗಿ ಕಲ್ಲು ತೂರಾಟ ನಡೆಸಿರುವಂತೆ ತೋರುತ್ತಿದೆ. ಅದೃಷ್ಟವಶಾತ್, ಯಾವ ಪ್ರಯಾಣಿಕರಿಗೂ ಗಾಯವಾಗಿಲ್ಲ! ದುಃಖದ ದಿನ!

ಅನಂತ್ ರೂಪನಗುಡಿ, ರೈಲ್ವೆ ಅಧಿಕಾರಿ

25 ವರ್ಷಗಳ ಹಿಂದೆ

ಮಂಗಳವಾರ, 14-4-1998

• ಪರಿಷ್ಕೃತ ರಫ್ತು- ಆಮದು ನೀತಿ ಜಾರಿ

ನವದೆಹಲಿ, ಏ. 13 (ಪಿಟಿಐ)- ಹಲವಾರು ವಸ್ತುಗಳ ಮೇಲಿನ ಆಮದು ಮತ್ತು ರಫ್ತು ನಿರ್ಬಂಧ ಸಡಿಲ, ರಫ್ತು ಉತ್ತೇಜನಕ್ಕೆ ಪ್ರಾಶಸ್ತ್ಯ, ಸುರಿ ವಿರೋಧಿ ನಿರ್ದೇಶನಾಲಯ ಸ್ಥಾಪನೆ, ದೇಶೀಯ ಕಂಪನಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಪ್ರೋತ್ಸಾಹ ನೀಡುವುದು ಸೇರಿದಂತೆ ಹಲವಾರು ಕ್ರಾಂತಿಕಾರಿ ಬದಲಾವಣೆಗಳನ್ನು ಒಳಗೊಂಡ ಪರಿಷ್ಕೃತ 'ರಫ್ತು-ಆಮದು ನೀತಿ'ಯನ್ನು ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಅವರು ಇಂದು ಪ್ರಕಟಿಸಿದರು.

ಇದುವರೆಗೆ ನಿರ್ಬಂಧಿತ ವಸ್ತುಗಳ ಪಟ್ಟಿಯಲ್ಲಿದ್ದ 340 ವಸ್ತುಗಳನ್ನು 'ಮುಕ್ತ ಸಾಮಾನ್ಯ ಲೈಸೆನ್ಸ್' ಪಟ್ಟಿಗೆ ಸೇರಿಸಿರುವ ನೂತನ ನೀತಿ, ರಫ್ತು ಉತ್ತೇಜನಕ್ಕೆ ಪ್ರಾಧಾನ್ಯ ನೀಡಿದೆ. ವಸ್ತುಗಳ ರಫ್ತಿನ ಮೇಲಿನ ನಿರ್ಬಂಧವನ್ನು ಮತ್ತಷ್ಟು ಸಡಿಲಿಸಲು ಕೂಡಾ ಉದ್ದೇಶಿಸಿದೆ. ಆದರೆ ಸುಂಕ ವಾಪಸಾತಿ ಸೌಲಭ್ಯಕ್ಕಾಗಿ ಇರುವ ಪಾಸ್‌ಬುಕ್ ಪದ್ಧತಿಯನ್ನು (ಡಿಇಪಿಬಿ) ಮುಂದುವರಿಸಲು ನಿರ್ಧರಿಸಿದೆ.

• ಕೃಷ್ಣಾ ಮೇಲ್ದಂಡೆ: ಮುಳುಗಡೆ ಆಸ್ತಿಗೆ ಅಧಿಕ ಪರಿಹಾರ

ಬೆಂಗಳೂರು, ಏ. 13- ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಸ್ವಾಧೀನಪಡಿಸಿಕೊಂಡ ಒಣ, ನೀರಾವರಿ ಹಾಗೂ ಎರಡು ಬೆಳೆ ತೆಗೆಯುವ ಜಮೀನುಗಳಿಗೆ ಮತ್ತು ಮುಳುಗಡೆಯಾಗುವ ಮನೆಗಳಿಗೆ ನೀಡುವ ಪರಿಹಾರದ ಹಣದ ಪ್ರಮಾಣವನ್ನು ಹೆಚ್ಚಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಮೊದಲ ಕಂತಿನಲ್ಲಿ ಈ ತಿಂಗಳು 25 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ.

ಕಳೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಆಗಿರುವಂತೆ, ಯೋಜನೆಗಾಗಿ ಸರ್ಕಾರ ಸ್ವಾಧೀನಪಡಿಸಿಕೊಂಡಿರುವ ಒಣ ಭೂಮಿಗೆ ಪ್ರತೀ ಎಕರೆಗೆ ರೂ. 54,000. ಇದೇ ಪ್ರಮಾಣದ ನೀರಾವರಿ ಭೂಮಿಗೆ ಹಾಗೂ ಎರಡು ಬೆಳೆ ತೆಗೆಯುವ ನೀರಾವರಿ ಜಮೀನಿಗೆ ಕ್ರಮವಾಗಿ ರೂ. 90,000 ಹಾಗೂ ರೂ. 1,00,000 ನೀಡಲಾಗುವುದು. ಮುಳುಗಡೆ ಮನೆಗಳಿಗೆ ಯಾವುದೇ ಸವಕಳಿ ಇಲ್ಲದೆ ಪೂರ್ಣ ದರವನ್ನು ಕೊಡಲಿದೆ.

50 ವರ್ಷಗಳ ಹಿಂದೆ

ಶನಿವಾರ, 14-4-1973

• ಸಿಕ್ಕಿಂ ಆಡಳಿತ ಸುಧಾರಣೆಗೆ ಚೋಗ್ಯಾಲ್ ಸಮ್ಮತಿ: ಮೇನಲ್ಲಿ ಸರ್ವ ಪಕ್ಷ ಸಭೆ

ಗಾಂಗ್‌ಟೋಕ್, ಏ. 13- ಸಿಕ್ಕಿಂನಲ್ಲಿ ಇತ್ತೀಚೆಗೆ ಸಾಮೂಹಿಕ ಕ್ಷೋಭೆ ಕಿಡಿ ಹಾರಿಸಿದ ಹೆಚ್ಚಿನ ರಾಜಕೀಯ ಬೇಡಿಕೆಗಳನ್ನು ಪೂರೈಸಲು ಭಾರತ ಸರ್ಕಾರ ಮತ್ತು ಸಿಕ್ಕಿಂ ರಾಜ ಚೋಗ್ಯಾಲ್ ಅವರ ನಡುವೆ ಇಂದು ಇಲ್ಲಿ ಪರಸ್ಪರ ಒಪ್ಪಂದಕ್ಕೆ ಬರಲಾಯಿತು.

ಭಾರತದ ವಿದೇಶಾಂಗ ಕಾರ್ಯದರ್ಶಿ ಕೇವಲ್‌ಸಿಂಗ್ ಮತ್ತು ಭಾರತದ ರಾಜಕೀಯ ಅಧಿಕಾರಿ ಕೆ.ಎಸ್.ಬಾಜಪೈ ಅವರಿಬ್ಬರೂ ಸೇರಿ ಸಿಕ್ಕಿಂ ನ್ಯಾಷನಲ್ ಕಾಂಗ್ರೆಸ್ ಮತ್ತು ಜನತಾ ಕಾಂಗ್ರೆಸ್ ಜಂಟಿ ಕ್ರಿಯಾ ಸಮಿತಿ ನಾಯಕರ ಜತೆ ನಡೆಸಿದ ಚರ್ಚೆ ಅಂತ್ಯದಲ್ಲಿ ಮಾಡಿಕೊಂಡ ರಾಜಿ ಒಪ್ಪಂದವನ್ನು ಅಧಿಕೃತವಾಗಿ ಪ್ರಕಟಿಸಲಾಯಿತು.

• ಪ್ರಾದೇಶಿಕ ಭಾವನೆ ಹತ್ತಿಕ್ಕಲು ವಿದ್ಯಾರ್ಥಿಗಳಿಗೆ ಇಂದಿರಾ ಕರೆ

ಹರಿದ್ವಾರ, ಏ. 13- ರಾಷ್ಟ್ರದಲ್ಲಿ ಹೆಚ್ಚುತ್ತಿರುವ ಪ್ರಾದೇಶಿಕ ಮನೋಭಾವನೆ ಮತ್ತು ಕೋಮು ಪ್ರವೃತ್ತಿ ಹತ್ತಿಕ್ಕುವ ಹೊಣೆಗಾರಿಕೆಯನ್ನು ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಭಾರತೀಯ ಯುವಕರ ಮೇಲೆ ಹೊರಿಸಿದರು.

ಗುರುಕುಲ ಕಾಂಗ್ಡಿ ಮಹಾವಿದ್ಯಾಲಯದ ಘಟಿಕೋತ್ಸವ ಭಾಷಣ ಮಾಡಿದ ಇಂದಿರಾ ಗಾಂಧಿ, ಎಲ್ಲಾ ಭಾಷೆಗಳು, ಧರ್ಮ, ವರ್ಗಗಳ ಮೇಲೆ ಸರಿಸಮಾನ ಗೌರವ ತೋರಿಸಬೇಕೆಂದು ವಿದ್ಯಾರ್ಥಿ ವೃಂದಕ್ಕೆ ಮನವಿ ಮಾಡಿದರು.

ರಾಜಕೀಯಕ್ಕೆ ಮಹೋದ್ದೇಶ, ಅಧ್ಯಯನ, ತರಬೇತಿ ಅತ್ಯಗತ್ಯವೆಂದು ಬಾಬಾಸಾಹೇಬ್ ನಂಬಿದ್ದರು

ಅಂಬೇಡ್ಕರ್ ದೃಷ್ಟಿಯಲ್ಲಿ ರಾಜಕೀಯ ಅಧಿಕಾರ



ವಿಶ್ಲೇಷಣೆ

ನಟರಾಜ್ ಹುಳಿಯಾರ್

ರಾಜಕೀಯ, ಸಮಾಜ, ಸಂಸ್ಕೃತಿ, ಆರ್ಥಿಕತೆ ಎಲ್ಲವನ್ನೂ ಒಟ್ಟಾಗಿ ನೋಡಿದ ಪರಿಪೂರ್ಣ ಚಿಂತಕರಾದ ಬಾಬಾಸಾಹೇಬ್ ಅಂಬೇಡ್ಕರ್ ಮಂಡಿಸಿರುವ ಸಾಮಾಜಿಕ ಚಿಂತನೆಗಳನ್ನು ಹೆಚ್ಚು ಚರ್ಚಿಸುವ ನಾವು, ಅವರ ರಾಜಕೀಯ ಚಿಂತನೆ-ಕ್ರಿಯೆಗಳಿಗೆ ಹೆಚ್ಚು ಗಮನ ಕೊಟ್ಟಂತಿಲ್ಲ. ಚುನಾವಣೆಯ ಗಡಿಬಿಡಿಯ ನಡುವೆ ನಡೆಯುತ್ತಿರುವ ಈ ಸಲದ ಅಂಬೇಡ್ಕರ್ ದಿನಾಚರಣೆಯ ನೆಪದಲ್ಲಾದರೂ ಗಟ್ಟಿಯಾದ ಪ್ರಜಾಪ್ರಭುತ್ವವನ್ನು ರೂಪಿಸುವ ಹಾಗೂ ರಾಜಕೀಯ ಅಧಿಕಾರವನ್ನು ಅರ್ಥಪೂರ್ಣವಾಗಿ ಬಳಸುವ ಅಂಬೇಡ್ಕರ್ ಮಾದರಿಯನ್ನು ಸರಿಯಾಗಿ ಅರಿಯುವ ಅಗತ್ಯವಿದೆ.

ಅಂಬೇಡ್ಕರ್ ರಂಗಪ್ರವೇಶ ಮಾಡುವ ಹೊತ್ತಿಗಾಗಲೇ ದೇಶದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗೆ ಕಾಂಗ್ರೆಸ್ ನೇತೃತ್ವದಲ್ಲಿ ಸ್ವಾತಂತ್ರ್ಯ ಚಳವಳಿ ನಡೆಯುತ್ತಿತ್ತು. ಆದರೆ ಸಾವಿರಾರು ವರ್ಷಗಳಿಂದ ದೇಶಿ ರಾಜರು, ವಿದೇಶಿ ಸುಲ್ತಾನರು, ಪಾಳೆಗಾರರು, ಜಮೀನ್ದಾರರು, ಪುರೋಹಿತರು, ಪ್ರಬಲ ಜಾತಿಗಳು ಹಾಗೂ ಬ್ರಿಟಿಷ್ ಪ್ರಭುತ್ವ ಇವೆಲ್ಲದರ ಗುಲಾಮಗಿರಿಗೆ ಒಗ್ಗಿಹೋಗಿದ್ದ ಜನರಿಗೆ ತಮ್ಮನ್ನೇ ತಾವು ಆಳಿಕೊಳ್ಳುವ ಪ್ರಜಾಪ್ರಭುತ್ವವನ್ನು ಕಲಿಸುವುದು ಹೇಗೆ ಎಂಬ ಸವಾಲು ಅಂಬೇಡ್ಕರ್ ಅವರ ಎದುರಿಗಿತ್ತು. ಈ ಸವಾಲಿಗೆ ಉತ್ತರ ಹುಡುಕಿ ಅವರು ಆಳವಾದ ಅಧ್ಯಯನ, ಚಿಂತನೆಗಳನ್ನು ನಡೆಸಿದರು, ಪೂರಕವಾದ ಕ್ರಿಯೆಗಳನ್ನು ರೂಪಿಸಲಾರಂಭಿಸಿದರು. ಪ್ರಜಾಪ್ರಭುತ್ವದ ಆಶಯಗಳಿಗೆ ಪ್ರಬಲ ಅಡ್ಡಿಯಾಗಿದ್ದ ಭಾರತೀಯರ ಜಾತಿಪೀಡಿತ ಮಿದುಳನ್ನು ಸ್ವಚ್ಛಗೊಳಿಸುವ ಕೆಲಸ ಶುರು ಮಾಡಿದರು. ಜಾತಿಪದ್ಧತಿಯ ಸರ್ವಾಧಿಕಾರವನ್ನು ಹಿಮ್ಮೆಟ್ಟಿಸದಿದ್ದರೆ, ವ್ಯಕ್ತಿ ಜಾತಿಪ್ರಜ್ಞೆಯಿಂದ ಬಿಡುಗಡೆ ಪಡೆಯದಿದ್ದರೆ, ಭಾರತೀಯರಿಗೆ ವ್ಯಕ್ತಿಸ್ವಾತಂತ್ರ್ಯವಾಗಲೀ ಸಾಮಾಜಿಕ ಪ್ರಜಾಪ್ರಭುತ್ವವಾಗಲೀ ದಕ್ಕುವುದಿಲ್ಲ ಎಂಬುದನ್ನು 'ಜಾತಿ ವಿನಾಶ' ಪುಸ್ತಕದಲ್ಲಿ ತೋರಿಸಿಕೊಟ್ಟರು.

ಇಲ್ಲಿಂದಾಚೆಗೆ ರಾಜಕೀಯವಾಗಿಯೂ ಕ್ರಿಯಾಶೀಲರಾದ ಅಂಬೇಡ್ಕರ್, 1930ರಲ್ಲಿ ದಲಿತರಿಗೆ ತಕ್ಕ ಪ್ರಾತಿನಿಧ್ಯಕ್ಕಾಗಿ ಒತ್ತಾಯಿಸಿ 'ಆಲ್ ಇಂಡಿಯಾ ಡಿಪ್ರೆಸ್ಡ್ ಕ್ಲಾಸಸ್ ಅಸೋಸಿಯೇಷನ್' ಶುರು ಮಾಡಿದರು. 1936ರಲ್ಲಿ ಅವರು ಸ್ಥಾಪಿಸಿದ 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ' ಅವರ ಮಹತ್ವದ ರಾಜಕೀಯ ಹೆಜ್ಜೆ. ಸಮಾಜಶಾಸ್ತ್ರಜ್ಞರು ಹೇಳುವಂತೆ ಜಾತಿ ಪದ್ಧತಿ 'ಶ್ರಮ ವಿಭಜನೆ' ಅಲ್ಲ; ಅದು 'ಶ್ರಮಿಕರ ವಿಭಜನೆ' ಎಂದಿದ್ದ ಅಂಬೇಡ್ಕರ್, ವಿವಿಧ ಜಾತಿಗಳ ಶ್ರಮಿಕರು ಒಂದಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಡಲು ಕೂಡ ಜಾತಿಪದ್ಧತಿ ತಡೆಯೊಡ್ಡಿದೆ ಎಂಬುದನ್ನು ಸ್ಪಷ್ಟವಾಗಿ ಅರಿತಿದ್ದರು. ಆದ್ದರಿಂದಲೇ ವಿವಿಧ ಜಾತಿಗಳ ಬಡವರನ್ನು, ಕಾರ್ಮಿಕ, ರೈತ ವರ್ಗಗಳನ್ನು ಒಟ್ಟಿಗೆ ತರಬಲ್ಲ ಲೇಬರ್ ಪಾರ್ಟಿಯನ್ನು ಸ್ಥಾಪಿಸಿದರು.

1936ರಲ್ಲಿ ಸ್ಥಳೀಯ ಸರ್ಕಾರಗಳನ್ನು ರಚಿಸುವ ಘೋಷಣೆಯಾದಾಗ, ಚುನಾವಣಾ ರಾಜಕೀಯಕ್ಕೆ ಇಳಿದರು. ಅವರು ರೂಪಿಸಿದ ಲೇಬರ್ ಪಾರ್ಟಿಯ ಪ್ರಣಾಳಿಕೆಯಲ್ಲಿ ಹಳೆಯ ಕಸುಬುಗಳ ಆಧುನೀಕರಣ, ಹೊಸ ಉದ್ಯೋಗ ಸೃಷ್ಟಿ, ಗೇಣಿ ಪದ್ಧತಿಯ ಶೋಷಣೆಗೆ ಕೊನೆ, ಭೂಹೀನರಿಗೆ ಜಮೀನು ಮುಂತಾಗಿ ಎಲ್ಲ ದುಡಿಯುವ ವರ್ಗಗಳ ಸಮಸ್ಯೆಗಳಿಗೂ ಪರಿಹಾರ ಹುಡುಕುವ ಗುರಿಗಳಿದ್ದವು.

ಸ್ವಾತಂತ್ರ್ಯಕ್ಕೆ ಸಜ್ಜಾಗುತ್ತಿದ್ದ ದೇಶಕ್ಕೆ ಅತ್ಯಗತ್ಯವಾಗಿದ್ದ ಕಾರ್ಯಕ್ರಮಾಧಾರಿತ ರಾಜಕೀಯ ದಿಕ್ಕುಗಳನ್ನು ನೀಡಲೆತ್ನಿಸಿದ ಲೇಬರ್ ಪಾರ್ಟಿಯಿಂದ 1937ರ ಮುಂಬೈ ಪ್ರಾಂತ ಚುನಾವಣೆಯಲ್ಲಿ 17 ಜನ ಸ್ಪರ್ಧಿಸಿದರು. ಅವರಲ್ಲಿ ಅಂಬೇಡ್ಕರ್ ಸೇರಿದಂತೆ 14 ಜನ ಗೆದ್ದರು. ಚುನಾವಣಾ ಫಲಿತಾಂಶ ಬಂದ ಒಂದು ತಿಂಗಳಲ್ಲೇ ಮಹಾಡ್ ಕೆರೆಯ ಸಿಹಿನೀರು ಬಳಸುವ ದಲಿತರ ಹಕ್ಕನ್ನು ಎತ್ತಿ ಹಿಡಿದ ಹೈಕೋರ್ಟ್ ತೀರ್ಪು ಬಂತು! 1927ರಲ್ಲಿ ದಲಿತರು ಮಹಾಡ್ ಕೆರೆಯ ಸಿಹಿನೀರು ಬಳಸುವ ಹಕ್ಕಿಗಾಗಿ ಅಂಬೇಡ್ಕರ್ ನೇತೃತ್ವದಲ್ಲಿ ನಡೆಸಿದ್ದ ಹೋರಾಟ ಪ್ರಕರಣದ ತೀರ್ಪು ಇದು.

ಮೇಲ್ನೋಟಕ್ಕೆ ಇವೆರಡೂ ಬೆಳವಣಿಗೆಗಳಿಗೆ ಪರಸ್ಪರ ಸಂಬಂಧ ಕಾಣದಿರಬಹುದು, ಆದರೆ ರಾಜಕೀಯಾಧಿಕಾರಕ್ಕೂ ಸಾಮಾಜಿಕ ಅಧಿಕಾರಕ್ಕೂ ಇರುವ ಸಂಬಂಧದ ಸಣ್ಣ ಸೂಚನೆ ಇಲ್ಲಿದೆ.

ಲೇಬರ್ ಪಾರ್ಟಿಯ ಅನುಭವವು ಮುಂದೆ ಅಂಬೇಡ್ಕರ್ ಮುಂಬೈ ಪ್ರಾಂತ ಸರ್ಕಾರದಲ್ಲಿ ಕಾರ್ಮಿಕ ಸಚಿವರಾದಾಗ ಖಚಿತ ಫಲ ಕೊಟ್ಟಿತು. 1942-46ರ ನಡುವೆ ಕಾರ್ಮಿಕ ಖಾತೆಯ ಜೊತೆಗೇ ಗಣಿ ಖಾತೆ, ಗೃಹ ನಿರ್ಮಾಣ, ಸೈನ್ಯ ಭರ್ತಿ ಮುಂತಾದ ಹಲವು ಖಾತೆಗಳನ್ನು ನಿರ್ವಹಿಸಿದ ಅಂಬೇಡ್ಕರ್, ಕಾರ್ಮಿಕರ ವಸತಿ ಪ್ರದೇಶದಲ್ಲಿ ಇದ್ದು, ಗಣಿಗಳಲ್ಲಿ ಇಳಿದು ನೋಡಿ, ಕಾರ್ಮಿಕರ ಕಷ್ಟಗಳಿಗೆ ಪರಿಹಾರ ರೂಪಿಸಿದರು. ಮುಂದೆ ಸ್ವತಂತ್ರ ಭಾರತದಲ್ಲಿ ಕಾನೂನು ಮಂತ್ರಿಯಾಗಿ ಅಂಬೇಡ್ಕರ್ ರೂಪಿಸಿದ ಸಂವಿಧಾನದ ಫಲಗಳು ನಮ್ಮೆಲ್ಲರಿಗೂ ದಕ್ಕಿವೆ. ಮಹಿಳೆಯರಿಗೆ ಆಸ್ತಿಯ ಹಕ್ಕನ್ನು ದೊರಕಿಸಲು ಅವರು ಅಪಾರ ಶ್ರಮದಿಂದ ತಯಾರಿಸಿದ 'ಹಿಂದೂ ಕೋಡ್ ಬಿಲ್' ಸನಾತನಿಗಳ ಒತ್ತಡದಿಂದ ಹಿಂದೆ ಸರಿಯಿತು. ಆದರೆ ಮುಂದೆ ಕರ್ನಾಟಕದಲ್ಲಿ ವೀರಪ್ಪ ಮೊಯಿಲಿ ನೇತೃತ್ವದ ಸರ್ಕಾರ ಹಾಗೂ ಕೇಂದ್ರದಲ್ಲಿ ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರ ಮಹಿಳೆಯರಿಗೆ ಸಮಾನ ಆಸ್ತಿಯ ಹಕ್ಕನ್ನು ಜಾರಿಗೊಳಿಸಿದವು. ಅಂಬೇಡ್ಕರ್ ತೆರೆದ ಹಾದಿಯ ಮೂಲಕವೇ ಇವತ್ತು ಶೇಕಡ 50ಕ್ಕೂ ಮೀರಿರುವ ಮೀಸಲಾತಿಯ ಫಲವನ್ನು ದೇಶದ ಹಲವು ಜಾತಿಗಳ ಹಲವು ತಲೆಮಾರುಗಳು ಪಡೆಯುತ್ತಿವೆ.




ಎಸ್‌ಸಿ, ಎಸ್‌ಟಿ ಫೆಡರೇಷನ್ ಅಂಬೇಡ್ಕರ್ ರಾಜಕೀಯ ಹೆಜ್ಜೆಯ ಮುಂದಿನ ಘಟ್ಟ. ಅಂಬೇಡ್ಕರ್ ತಮ್ಮ ಜೀವಿತದ ಕೊನೆಯಲ್ಲಿ ಎದುರಿಸಿದ ಎರಡು ಚುನಾವಣೆಗಳಲ್ಲಿ ಸೋತಿದ್ದರ ಹಿನ್ನೆಲೆಯಲ್ಲಿ ಸವರ್ಣೀಯರ ಹಿಡಿತಕ್ಕೆ ಒಳಪಟ್ಟ ಪಕ್ಷಗಳ, ಶಕ್ತಿಗಳ ಕೈವಾಡವಿತ್ತು. ಆದರೆ ಅಂಬೇಡ್ಕರ್ ಚಿಂತನೆ, ಕಾರ್ಯಯೋಜನೆ ಹಾಗೂ ಸಂವಿಧಾನದ ರಕ್ಷಣಾಬಲದಿಂದ ಭಾರತದ ಪ್ರಜಾಪ್ರಭುತ್ವ ಇಷ್ಟಾದರೂ ಉಳಿದಿದೆ ಎಂಬುದು ಹೊಸ ತಲೆಮಾರಿನ ಹುಡುಗ, ಹುಡುಗಿಯರಿಗಾದರೂ ಅರಿವಾಗಬೇಕು. ಸೋಲಿನಿಂದ ಹಿಮ್ಮೆಟ್ಟದ ಅಂಬೇಡ್ಕರ್ 1956ರಲ್ಲಿ 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' ಕಟ್ಟಲೆತ್ನಿಸಿ ಭಾರತದ ರಾಜಕೀಯಕ್ಕೇ ಹೊಸ ದಿಕ್ಕು ನೀಡಲೆತ್ನಿಸಿದರು. 'ದ ಟ್ರೈನಿಂಗ್ ಸ್ಕೂಲ್ ಫಾರ್ ಎಂಟ್ರೆನ್ಸ್ ಟು ಪಾಲಿಟಿಕ್ಸ್' ಸಂಸ್ಥೆಯ ಮೂಲಕ ರಿಪಬ್ಲಿಕ್ ಪಾರ್ಟಿಯ ನಾಯಕ-ಕಾರ್ಯಕರ್ತರಿಗಾಗಿ ರೂಪಿಸಿದ ಸಮಗ್ರ ರಾಜಕೀಯ ತರಬೇತಿಯಲ್ಲಿ 15 ಜನ ತಯಾರಾದರು.

ಅಂಬೇಡ್ಕರ್ ನಿರ್ಗಮನದ ನಂತರ ಈ ರಾಜಕೀಯ ತರಬೇತಿಯ ಆದರ್ಶ ಮಾದರಿ ವ್ಯವಸ್ಥಿತವಾಗಿ ಮುಂದುವರಿದಿದ್ದರೆ, ದಕ್ಷ ರಾಜಕೀಯ ತರಬೇತಿ ಪಡೆದ ನಾಯಕರು ದೇಶವನ್ನು ವೃತ್ತಿಪರವಾಗಿ ಮುನ್ನಡೆಸುವ ಸಾಧ್ಯತೆ ಇರುತ್ತಿತ್ತು. ಆದ್ದರಿಂದಲೇ ಅಂಬೇಡ್ಕರ್ ರಾಜಕೀಯದ ಗೊತ್ತು ಗುರಿ, ಅವರು ಅಧ್ಯಯನ, ಬದ್ಧತೆಗಳ ಮೂಲಕ ಅಧಿಕಾರದ ಹೊಣೆಗಳನ್ನು ನಿರ್ವಹಿಸಿದ ರೀತಿ ಇವತ್ತು ಅಧಿಕಾರಕ್ಕಾಗಿ ಹಾತೊರೆಯುತ್ತಿರುವ ಒಳ್ಳೆಯ ರಾಜಕಾರಣಿಗಳಿಗಾದರೂ ಅರ್ಥವಾಗಬೇಕು. ಆರಂಭದಲ್ಲಿ ದಲಿತರ ಬದುಕನ್ನು ಬದಲಿಸಲು ಜೀವನವನ್ನು ಮುಡಿಪಾಗಿಟ್ಟಿದ್ದ ಅಂಬೇಡ್ಕರ್ ಮುಂದೆ ತಮಗೆ ದೊರೆತ ಅಧಿಕಾರ ಸ್ಥಾನಗಳನ್ನು ಎಲ್ಲ ವರ್ಗಗಳ ಏಳಿಗೆಗಾಗಿ ಬಳಸಿದ ರೀತಿ ಎಲ್ಲರಿಗೂ ಮಾದರಿಯಾಗಬೇಕು. ಇವತ್ತು ಮತ ಕೇಳಲು ಬರುತ್ತಿರುವ ನಾಯಕ, ನಾಯಕಿಯರಿಗೆ ತಾವು ಯಾಕೆ ರಾಜಕೀಯಾಧಿಕಾರ ಹಿಡಿಯಬೇಕು ಎಂಬ ಬಗ್ಗೆ ಅಂಬೇಡ್ಕರ್ ಅವರಿಗಿದ್ದ ಸ್ಪಷ್ಟತೆ, ದಿಕ್ಕು ಇರಲೇಬೇಕೆಂದು ಒತ್ತಾಯಿಸುವ ತಾಕತ್ತು ಮತದಾರರಿಗಿರಬೇಕು.

ಪ್ರತೀ ಏಪ್ರಿಲ್ 14ರಂದು ತಮ್ಮ ನಾಯಕ ಬಾಬಾಸಾಹೇಬರ ಹುಟ್ಟುಹಬ್ಬವನ್ನು ಸ್ವಇಚ್ಛೆಯಿಂದ ಆಚರಿಸುವಷ್ಟು ದೊಡ್ಡ ಪ್ರಮಾಣದ ಅಭಿಮಾನಿ-ಅನುಯಾಯಿಗಳು ಭಾರತದ ಬೇರಾವ ನಾಯಕರಿಗೂ ಈಗ ಇಲ್ಲ. ಭಕ್ತರು ಆಚರಿಸುವ ದೇವರುಗಳ ಜಯಂತಿಗಳು ಕೂಡ ಈ ಪ್ರಮಾಣದಲ್ಲಿಲ್ಲ! ದೇಶದ ಸಂಪೂರ್ಣ ವಿಮೋಚನೆಗಾಗಿ ದುಡಿದ ವೈಚಾರಿಕ ನಾಯಕನಿಗೆ ಸಲ್ಲುತ್ತಿರುವ ಇಂಥ ಗೌರವ ಜಗತ್ತಿನಲ್ಲೇ ಅಪೂರ್ವವಾದುದು. ರಾಜಕೀಯವನ್ನು ಗಂಭೀರವಾಗಿ ತೆಗೆದುಕೊಂಡ ಅಂಬೇಡ್ಕರ್ ರೀತಿಯಿಂದಾಗಿಯೇ ಅವರ ಅನುಯಾಯಿಗಳಲ್ಲಿ ಇವತ್ತಿಗೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಬತ್ತಿಲ್ಲ. ಇವತ್ತಿಗೂ ಸಮಾಜದಲ್ಲಿ ನ್ಯಾಯಯುತ ಬದಲಾವಣೆ ಮಾಡುವ ಸಂಘಟಿತ ಶಕ್ತಿ ಅಂಬೇಡ್ಕರ್‌ವಾದವನ್ನು ನಂಬಿದ ಸಂಘಟನೆಗಳಲ್ಲೇ ಹೆಚ್ಚು ಇದೆ.

ರಾಜಕೀಯ ಅಧಿಕಾರದ ಸಾಮಾಜಿಕ ಮಹತ್ವವನ್ನು ಇತರರಿಗಿಂತ ದಲಿತರು ಸಮರ್ಥವಾಗಿ ಅರಿತಿದ್ದಾರೆ. ಆಧುನಿಕ ರಾಜಕೀಯ ಪ್ರಜ್ಞೆಯೇ ಇಲ್ಲದ ದೇಶದ ಒಟ್ಟು ಜನಕೋಟಿಯ ಸಾಮಾಜಿಕ ಬದಲಾವಣೆಯ ರಥದ ಜೊತೆಜೊತೆಗೇ ರಾಜಕೀಯ ರಥವನ್ನು ಕೂಡ ಅಂಬೇಡ್ಕರ್ ಮುಂದೊಯ್ದಿದ್ದಾರೆ ಎಂಬ ಕೃತಜ್ಞತೆಯಿಂದ ಅಂಬೇಡ್ಕರ್ ಜಯಂತಿಯನ್ನು ಇಡೀ ದೇಶವೇ ಅರ್ಥಪೂರ್ಣವಾಗಿ ಆಚರಿಸಬೇಕು.

ಚುರುಮುರಿ



ಸಿಂಬಲ್ ಸಮಸ್ಯೆ!

• ಬಿ.ಎನ್.ಮಲ್ಲೇಶ್

'ಗುರೂ... ದಾವಣಗೆರೇಲಿ ಫುಟ್ಬಾಲ್ ಪ್ರತಿಕೃತಿಗೆ ಚುನಾವಣೆ ಅಧಿಕಾರಿಗಳು ಬಟ್ಟೆ ಮುಚ್ಚಿದಾರಂತಪ. ಅಲ್ಲ, ಅದನ್ನ ನೋಡಿ ಜನ ವೋಟ್ ಹಾಕ್ತಿದ್ರಾ?' ಗುಡ್ಡೆ ಕೇಳಿದ.

'ಫುಟ್ಬಾಲು ಈಗ ಒಂದು ಪಕ್ಷದ ಸಿಂಬಲ್ ಆಗೇತಲ್ಲಲೆ, ಅದ್ಕೆ ಮುಚ್ಚಿದಾರೆ ಅನ್ಸುತ್ತೆ...' ದುಬ್ಬೀರ ಸ್ಪಷ್ಟಪಡಿಸಿದ.

'ಹಂಗಾದ್ರೆ ಬಾಳ ಕಡಿ ಕೆರೆಗಳಲ್ಲಿ ಕಮಲದ ಹೂ ಬಿಟ್ಟಿರ್ತಾವಪ, ಅದೂ ಒಂದು ಪಕ್ಷದ ಸಿಂಬಲ್ಲು ಅಂತ ಕಿತ್ತಾಕ್ತಾರಾ?'

'ಏನೋಪ್ಪ, ಗೊತ್ತಿಲ್ಲ...'

'ಆಮೇಲೆ ಹಳ್ಳಿ ಕಡೆ ಹೆಣ್ಮಕ್ಳು ರಾಗಿ, ಭತ್ತದ ತೆನೆ ಕೊಯ್ಲು ಮಾಡಿ ತಲೆ ಮೇಲೆ ಹೊತ್ಕಂಡು ಕಣಕ್ಕೆ ತರ್ತಾರಪ, ಅದೂ ಒಂದು ಪಕ್ಷದ ಸಿಂಬಲ್ಲು. ಹಂಗಂತ ಅವರನ್ನ ತೆನೆ ಹೊತ್ಕಂಡ್ ಬರ್ಬೇಡಿ ಅಂದ್ರೆ ಸುಮ್ನಿರ್ತಾರಾ?' ಕೊಟ್ರೇಶಿ ಕೊಕ್ಕೆ.

'ನುಗ್ಗರಿಯಂಗೆ ಒದೀತಾರೆ ಅಷ್ಟೇ...'

'ಮತ್ತೆ ಇವರಿಗೆ ಮಾಡಾಕೆ ಕೆಲ್ಸ ಇಲ್ವಾ? ಜನ ಈ ತರದ ಸಿಂಬಲ್ ನೋಡಿ ವೋಟ್ ಹಾಕ್ತಾರಾ? ಅವರು ನೋಡೋದೇ ಬೇರೆ ಅಲ್ವಾ?'

'ಕರೆಕ್ಟ್, ಅವರು ನೋಡೋದೇ ಬೇರೆ. ಚಿನ್ನ, ಬೆಳ್ಳಿ, ಕ್ಯಾಶು ವಗೈರೆ...'

ಏನೂ ಕೆಲ್ಸ ಮಾಡದ ಅಭ್ಯರ್ಥಿಯೊಬ್ಬ ಮೊನ್ನೆ ವೋಟ್ ಕೇಳಾಕೆ ಹೋದಾಗ ಜನ ಪೊರಕೆ ತೋರ್ಸಿ ಓಡಿಸಿದ್ರಂತೆ. ಪೊರಕೇನೂ ಒಂದು ಪಕ್ಷದ ಸಿಂಬಲ್ ಅಲ್ವಾ? ತೋರಿಸ್ಬೋದಾ? ಆಮೇಲೆ 'ಕೈ'ನು ಒಂದು ಪಕ್ಷದ ಸಿಂಬಲ್ಲಪ. ಹಂಗಂತ ಜನರೆಲ್ಲ ಕೈ ಮುಚ್ಕಂಡು ಓಡಾಡಿ ಅಂದ್ರೆ ಆಗುತ್ತಾ?'

'ಒಳ್ಳೆ ಪ್ರಶ್ನೆ, ಆದ್ರೆ ಉತ್ತರ ಇಲ್ಲ'.

'ಇಷ್ಟೇ ನಿಂದು. ಹೋಗ್ಲಿ ನಮ್ ನಂದಿನಿ ಹಾಲಿನ ಕತೆ ಏನಾತು?'

'ಈ ಹಾಲಿಂದು, ನೀರಿಂದು ಗಲಾಟೆ ಇದ್ದದ್ದೇ ಬಿಡಲೆ, ಆದ್ರೆ ನಮ್ ಗುಡ್ಡೆ ಹಾಕೋ ಗುಂಡು ನೋಡು, ಯಾವ ಬ್ರ್ಯಾಂಡೇ ಆಗ್ಲಿ, ಎಲ್ಲಿಂದಾದ್ರು ಬರ್ಲಿ, ಗಲಾಟೇನೇ ಇಲ್ಲ!'

ದುಬ್ಬೀರನ ಕೀಟಲೆಗೆ ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ನಂದಿನಿ: ಕಂಟಕಕ್ಕೆ ಕಾರಣ ಬೇರೆ

ನಂದಿನಿ ಉತ್ಪನ್ನಗಳ ಮಾರುಕಟ್ಟೆ ಪಾಲು ಕುಸಿಯದಂತೆ ನೋಡಿಕೊಳ್ಳಬೇಕಿದ್ದರೆ ಲಭ್ಯತೆ ಖಾತರಿಪಡಿಸಬೇಕು

• ಡಾ. ಮುರಳೀಧರ ಕಿರಣಕೆರೆ

ನಮ್ಮ ದೇಶದ ಹೆಮ್ಮೆಯ ಎರಡು ಹೈನು ಬ್ರ್ಯಾಂಡ್‌ಗಳಾದ ನಂದಿನಿ ಮತ್ತು ಅಮೂಲ್ ಉತ್ಪನ್ನಗಳ ಆರೋಗ್ಯಕರ ಪೈಪೋಟಿಗೆ ವಿವಾದದ ಸ್ವರೂಪ ನೀಡಲಾಗಿದೆ. ರಾಜ್ಯವು ಚುನಾವಣೆಯ ಹೊಸ್ತಿಲಿನಲ್ಲಿರುವ ಈ ಹೊತ್ತಿನಲ್ಲಿ, ಸಮಸ್ಯೆಯ ಆಳಕ್ಕಿಳಿಯದೆ ರಾಜಕೀಯ ಕೆಸರೆರಚಾಟವಷ್ಟೇ ನಡೆಯುತ್ತಿರುವುದು ದುರದೃಷ್ಟಕರ.

ವರ್ಷದ ಹಿಂದೆ 96 ಲಕ್ಷ ಕೆ.ಜಿ.ವರೆಗೆ ಏರಿ ದಾಖಲೆ ಬರೆದಿದ್ದ ಕೆಎಂಎಫ್‌ನ ಪ್ರತಿನಿತ್ಯದ ಹಾಲು ಸಂಗ್ರಹ ಪ್ರಮಾಣ ಈಗ 76 ಲಕ್ಷ ಕೆ.ಜಿಗೆ ಕುಸಿದಿರುವ ಬಗ್ಗೆ ಕಾರಣಗಳನ್ನು ಹುಡುಕಿ ಪರಿಹಾರ ಕಂಡುಕೊಳ್ಳುವತ್ತ ಸಾಗಬೇಕಾದ ಚರ್ಚೆ ಭಾವನಾತ್ಮಕವಾಗಿ ಕೆರಳಿಸುವ ಹಾದಿ ಹಿಡಿದಿರುವುದು ಆತಂಕಕಾರಿ. ಹಾಲು ಸಂಗ್ರಹದ ಇಂದಿನ ಕಳವಳಕಾರಿ ಸ್ಥಿತಿಗೆ ಬಹುಮುಖ್ಯ ಕಾರಣವಾಗಿರುವುದು ಮಾರುಕಟ್ಟೆಯಲ್ಲಿನ ಪೈಪೋಟಿಯಲ್ಲ, ಬದಲಿಗೆ ಪಶುಆಹಾರ ಮತ್ತು ಹುಲ್ಲಿನ ಬೆಲೆಯಲ್ಲಾಗುತ್ತಿರುವ ಭಾರಿ ಹೆಚ್ಚಳ.

ಹೌದು, ಹಾಲಿನ ಉತ್ಪಾದನಾ ವೆಚ್ಚ ಏರುತ್ತಲೇ ಇದೆ. ಭತ್ತ ಬೆಳೆಯುವುದು ನಷ್ಟದ ಬಾಬ್ತು ಎಂಬುದು ರೈತರ ಒಕ್ಕೊರಲಿನ ಮಾತು. ಹಾಗಾಗಿಯೇ ವಾಣಿಜ್ಯ ಬೆಳೆಗಳತ್ತ ಹೊರಳುತ್ತಿದ್ದಾರೆ. ಭತ್ತದ ಗದ್ದೆಗಳು ಅಡಿಕೆ ತೋಟಗಳಾಗಿ ಪರಿವರ್ತಿತವಾಗುತ್ತಿವೆ. ಕೆಲವೆಡೆ ಸಾಗುವಳಿಯಿಲ್ಲದೆ ಹಾಳು ಬಿದ್ದಿವೆ. ಇದರ ನೇರ ಪರಿಣಾಮ ಆಗುತ್ತಿರುವುದು ಪಶುಪಾಲನೆ ಮೇಲೆ. ಮೂರ್ನಾಲ್ಕು ಕೆ.ಜಿ.ಯಷ್ಟಿರುವ ಒಂದು ಪಿಂಡಿ ಹುಲ್ಲಿನ ದರ ಈಗ ಎಂಬತ್ತರಿಂದ ನೂರು ರೂಪಾಯಿ! ರಾಗಿಹುಲ್ಲು, ಜೋಳದ ದಂಟಿನ ಕತೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಜಾನುವಾರುಗಳ ಸಾಂಪ್ರದಾಯಿಕ ಮೇವಿನ ತಾಣಗಳೆಲ್ಲಾ ಅತಿಕ್ರಮಣಗೊಂಡು ಮೇಯಲು ಕರಡವೂ ಸಿಗದಾಗಿದೆ.

ಒಣಮೇವಿನ ಪರಿಸ್ಥಿತಿ ಇದಾದರೆ, ಹಸಿಮೇವನ್ನು ಬೆಳೆಯಲು ಜಾಗ, ನೀರಿನ ಸಮಸ್ಯೆ. ಹೆಚ್ಚಾಗಿ ಕೆಳ ಮಧ್ಯಮವರ್ಗದವರು, ಬಡವರೇ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದು ಹಸಿರು ಮೇವು ಬೆಳೆಯಲು ಸ್ಥಳಾಭಾವ ಎದುರಿಸುತ್ತಿದ್ದಾರೆ. ಮೇವಿನ ಕೊರತೆಯ ಜೊತೆಗೆ ದುಬಾರಿ ಪಶುಆಹಾರವೂ (ಹಿಂಡಿ) ಗೋಪಾಲಕರನ್ನು ಹೈರಾಣ ಮಾಡುತ್ತಿದೆ. ಕೆ.ಜಿ. ಪಶುಆಹಾರದ ಬೆಲೆ ₹ 40 ದಾಟಿದೆ. ಕೆಎಂಎಫ್ ಪಶುಆಹಾರದ ಬೆಲೆ ತುಸು ಕಡಿಮೆಯಿದ್ದರೂ ಇದು ಸಿಗುವುದು ಹಾಲು ಉತ್ಪಾದಕರ ಸಂಘದ ಸದಸ್ಯರಿಗಷ್ಟೇ. ಸಂಘಕ್ಕೆ ಹಾಲು ಹಾಕದೆ ಮನೆಬಳಕೆ, ಸ್ಥಳೀಯ ಮಾರಾಟಕ್ಕಾಗಿ ಜಾನುವಾರು ಸಾಕುವವರು ದುಬಾರಿ ಹಿಂಡಿಯಲ್ಲಿಯೇ ಹೈನುಗಾರಿಕೆ ಮಾಡಬೇಕಿದೆ.

ಇಷ್ಟೆಲ್ಲಾ ಕಷ್ಟದಲ್ಲಿ ಗೋಪಾಲನೆ ಮಾಡಿದರೂ ಲೀಟರ್ ಹಾಲಿಗೆ ಸಿಗುವುದು 35ರಿಂದ 40 ರೂಪಾಯಿ ಮಾತ್ರ, ಅದೂ ಉತ್ಪಾದಕರಿಗೆ ಸರ್ಕಾರ ನೀಡುವ ಸಹಾಯಧನ ಸೇರಿ. ಹಾಲು ಸೊಸೈಟಿಗಳಿಗೆ ಸದಸ್ಯರು ಹಾಕುವ ಪ್ರತೀ ಲೀಟರ್ ಹಾಲಿಗೆ ಸರ್ಕಾರ ₹ 5 ಪ್ರೋತ್ಸಾಹಧನ ನೀಡದಿದ್ದರೆ ಹಾಲು ಸಂಗ್ರಹ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಗಿರುತ್ತಿತ್ತು!

ಚರ್ಮಗಂಟು ರೋಗವೆಂಬ ಸಾಂಕ್ರಾಮಿಕವೂ ಗಾಯದ ಮೇಲೆ ಬರೆ ಎಳೆದಿದೆ. ನಿಧಾನವಾಗಿ ಸುಧಾರಿಸಿಕೊಂಡ ಹಸುಗಳಲ್ಲಿನ್ನೂ ಉತ್ಪಾದನೆ ಹಿಂದಿನ ಮಟ್ಟಕ್ಕೆ ಮರಳಿಲ್ಲ. ಗರ್ಭ ಕಟ್ಟದಿರುವುದು, ಗರ್ಭಪಾತ ಸಾಮಾನ್ಯವಾಗಿದೆ. ಈ ಕಷ್ಟ ನಷ್ಟಗಳಿಗೆ ಹೆದರಿರುವ ಬಹಳಷ್ಟು ರೈತರು ತಮ್ಮ ಜಾನುವಾರುಗಳನ್ನು ಮಾರುತ್ತಿದ್ದಾರೆ. ಜೊತೆಗೆ ಬೇಸಿಗೆಯ ಉರಿಬಿಸಿಲೂ ಇಳುವರಿ ಕುಸಿತಕ್ಕೆ ಕೊಡುಗೆ ನೀಡಿದೆ.

ಕರ್ನಾಟಕದ ಅಸ್ಮಿತೆ ನಂದಿನಿ ಬ್ರ್ಯಾಂಡಿಗೆ ಅಮೂಲ್‌ನಿಂದ ಕಂಟಕ ಎದುರಾಗುವ ಸಾಧ್ಯತೆ ಖಂಡಿತಾ ಇಲ್ಲ. ಕಾರಣ, ನಂದಿನಿ ಉತ್ಪನ್ನಗಳ ಗುಣಮಟ್ಟ ಮತ್ತು ಸ್ಪರ್ಧಾತ್ಮಕ ಬೆಲೆ. ಹಾಗಾಗಿ ನಮ್ಮ ನೆರೆಯ ರಾಜ್ಯಗಳಲ್ಲದೆ ಹೊರ ದೇಶಗಳಲ್ಲೂ ನಂದಿನಿ ಜನಪ್ರಿಯ. ಆದರೆ, ಬೇಡಿಕೆಯಷ್ಟು ಪೂರೈಕೆಯಾಗದಾಗ ಇತರ ನಂಬಿಕೆಯ ಬ್ರ್ಯಾಂಡ್‌ನತ್ತ ಹೊರಳುವುದು ಗ್ರಾಹಕನಿಗೆ ಅನಿವಾರ್ಯ. ಆಗ ಉತ್ತಮ ಗುಣಮಟ್ಟ ಕಾಯ್ದುಕೊಂಡಿರುವ ಅಮೂಲ್ ಆಯ್ಕೆಯಾಗಬಹುದು. ಇದೂ ಅಷ್ಟು ಸುಲಭವಲ್ಲ. ಅಮೂಲ್ ಹಾಲು ನಂದಿನಿಗಿಂತ ದುಬಾರಿ. ಲೀಟರ್‌ಗೆ ₹ 14 ಹೆಚ್ಚಿಗೆ ಕೊಡಬೇಕು. ಇನ್ನು ಮುಕ್ತ ಮಾರುಕಟ್ಟೆ ಮತ್ತು ಒಕ್ಕೂಟ ವ್ಯವಸ್ಥೆಯಲ್ಲಿ ಸಹೋದರ ರಾಜ್ಯಕ್ಕೆ ತನ್ನ ಉತ್ಪನ್ನಗಳನ್ನು ಮಾರುವುದಕ್ಕೆ ನಿರ್ಬಂಧ ಹೇರುವುದೂ ಸಾಧ್ಯವಿಲ್ಲದ ಮಾತು.

ಹೌದು, ನಂದಿನಿ ಉತ್ಪನ್ನಗಳ ಮಾರುಕಟ್ಟೆ ಪಾಲಿನ ಕುಸಿತವನ್ನು ತಡೆಯಬೇಕಿದ್ದರೆ ಲಭ್ಯತೆ ಖಾತರಿಪಡಿಸಬೇಕು. ಉತ್ಪಾದನೆಯನ್ನು ಹೆಚ್ಚಿಸಲು ಉತ್ತೇಜಕ ಕ್ರಮ ಕೈಗೊಳ್ಳುವುದು ಈಗಿನ ತುರ್ತು. ಹಾಲಿನ ಉತ್ಪಾದನಾ ವೆಚ್ಚ ಕಡಿತಗೊಳಿಸಲು ಸರ್ಕಾರವೇ ಎಲ್ಲ ಜಿಲ್ಲೆಗಳಲ್ಲೂ ಪಶುಆಹಾರ ಘಟಕಗಳನ್ನು ಸ್ಥಾಪಿಸಿ ಈಗಿನ ಅರ್ಧ ಬೆಲೆಗಾದರೂ ಹಿಂಡಿ ಸಿಗುವಂತೆ ಮಾಡಬೇಕು. ಲಭ್ಯವಿರುವ ಜಾಗದಲ್ಲೆಲ್ಲಾ ಮೇವಿನ ಬೆಳೆಗಳನ್ನು ಬೆಳೆಯಲು ಮೇವಿನ ಬೀಜ, ಸಸಿಗಳ ವಿತರಣೆಗೆ ಆದ್ಯತೆ ನೀಡಬೇಕು. ಗ್ರಾಹಕರಿಗೂ ಹೊರೆಯಾಗದೆ ಉತ್ಪಾದಕ ರೈತರಿಗೂ ನ್ಯಾಯೋಚಿತ ಉತ್ತಮ ಬೆಲೆ ಸಿಗುವಂತಹ ಕಾರ್ಯಸಾಧು ಯೋಜನೆಯನ್ನು ಸರ್ಕಾರ ರೂಪಿಸಬೇಕು. ಹಾಲು ಒಕ್ಕೂಟಗಳೂ ತಮ್ಮ ಆಡಳಿತಾತ್ಮಕ ವೆಚ್ಚವನ್ನು ಕಡಿಮೆಗೊಳಿಸಿ ಲಾಭವನ್ನು ಉತ್ಪಾದಕರಿಗೆ ವರ್ಗಾಯಿಸಬೇಕಿದೆ.



ಚುನಾವಣೆಯ ಹೊತ್ತಿನಲ್ಲಿ ಈ ವಿಚಾರಗಳು ಚರ್ಚೆಯಾಗಿ, ಪಕ್ಷಗಳ ಪ್ರಣಾಳಿಕೆಯಲ್ಲಿ ಸೇರಿ ಮುಂದೆ ಅನುಷ್ಠಾನಗೊಂಡಾಗ ಮಾತ್ರ ನಂದಿನಿ ವಿಚಾರದಲ್ಲಿ ಗೋಪಾಲಕರ ಹಿತಾಸಕ್ತಿ ಕಾಪಾಡಬಹುದೇ ವಿನಾ ಭಾವನಾತ್ಮಕ ಪ್ರತಿಕ್ರಿಯೆಗಳಿಂದಲ್ಲ!

ವಾಚಕರ ವಾಣಿ

ಕೊಟ್ಟ ಮಾತಿಗೆ ಬದ್ಧರಾಗದವರು

ಪಕ್ಷ ಎಂದರೆ ತಾಯಿ, ತಾಯಿ ಎಂದರೆ ಪಕ್ಷ ಎನ್ನುತ್ತಿದ್ದ, ಪಕ್ಷ ಮೊದಲು ಎಂದು ಎದೆ ತಟ್ಟಿಕೊಳ್ಳುತ್ತಿದ್ದ, ಸಿದ್ಧಾಂತ, ತತ್ವ ಪಾಲಿಸುವೆ, ಒಂದೇ ಕುಟುಂಬದ ಸದಸ್ಯರಂತೆ ನಡೆದುಕೊಳ್ಳುವೆವು ಎಂದೆಲ್ಲ ಆಣೆ ಪ್ರಮಾಣ ಮಾಡಿದ ಹಾಲಿ, ಮಾಜಿ ಜನಪ್ರತಿನಿಧಿಗಳು ಟಿಕೆಟ್ ಸಿಗದ ಕೂಡಲೇ ತಮ್ಮ ವರಸೆ ಬದಲಾಯಿಸಿದ್ದಾರೆ.

ತಾಯಿ ಸ್ಥಾನದ ಪಕ್ಷಕ್ಕೆ ಇವರು ಮಾಡುತ್ತಿರುವ ಅನ್ಯಾಯವನ್ನು ನೋಡಿದರೆ ಇಂತಹವರು ಗೆದ್ದ ಮೇಲೆ ಅಭಿವೃದ್ಧಿ ಮಾಡುತ್ತಾರೆ ಎಂದು ಜನ ಹೇಗಾದರೂ ನಂಬಿಯಾರು? ತಾವೇ ಕೊಟ್ಟ ಮಾತಿಗೆ ಬದ್ಧರಾಗದ ಇವರು ಜನರಿಗೆ ಕೊಟ್ಟ ಮಾತನ್ನು ಹೇಗೆ ಉಳಿಸಿಕೊಂಡಾರು?

ಬಸನಗೌಡ ಮಂಜುನಾಥಗೌಡ ಪಾಟೀಲ, ಯರಗುಪ್ಪಿ

ಮಾನಸಿಕ ಶಿಕ್ಷೆ ಸಲ್ಲದು

ವರದಕ್ಷಿಣೆ ತರುವಂತೆ ಪೀಡಿಸಿ ದೈಹಿಕ ಕಿರುಕುಳ ನೀಡಿರುವ ಆರೋಪದಡಿ ಐಎಎಸ್ ಅಧಿಕಾರಿಯೊಬ್ಬರ ವಿರುದ್ಧ ಅವರ ಪತ್ನಿ ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಾಗಿರುವ ವರದಿಯ ಬಗ್ಗೆ ಮೋನಿಕಾ ಆರ್. ಆಕ್ರೋಶ ವ್ಯಕ್ತಪಡಿಸಿದ್ದಾರೆ (ವಾ.ವಾ., ಏ. 12). ಒಂದು ವೇಳೆ ಅಧಿಕಾರಿಯ ವಿರುದ್ಧದ ಆರೋಪ ಸುಳ್ಳಾಗಿದ್ದಲ್ಲಿ ಅವರ ಮನೋಸ್ಥೈರ್ಯವನ್ನು ಕುಗ್ಗಿಸಿದಂತೆ ಆಗುತ್ತದೆ. ಯಾವುದೇ ದೂರಿನ ಬಗ್ಗೆ ಎರಡೂ ಕಡೆಯ ಅಭಿಪ್ರಾಯ ತಿಳಿದ ನಂತರವಷ್ಟೇ ಪ್ರತಿಕ್ರಿಯಿಸುವುದು ಸಮಂಜಸವಾಗುತ್ತದೆ. ಕೆಲವೊಮ್ಮೆ ವೈಯಕ್ತಿಕ ಕಾರಣಕ್ಕೆ, ಇನ್ನು ಕೆಲವೊಮ್ಮೆ ನೀತಿ, ನಿಷ್ಠೆ, ಸಿದ್ಧಾಂತಕ್ಕೆ ಒಗ್ಗಿಕೊಳ್ಳಲಾಗದೆಯೂ ಸಂಗಾತಿಗಳ ನಡುವೆ ಭಿನ್ನಾಭಿಪ್ರಾಯ ತಲೆದೋರುವ ಸಾಧ್ಯತೆಗಳಿರುತ್ತವೆ.

ಹೀಗಾಗಿ, ಇಂತಹ ಸಂದರ್ಭಗಳಲ್ಲಿ ಅಧಿಕಾರಿಯ ಮನೋಸ್ಥೈರ್ಯ ಕುಗ್ಗುವಂತೆ ಸಮಾಜ ವರ್ತಿಸಬಾರದು. ತಪ್ಪು ಮಾಡಿದ್ದಲ್ಲಿ ಖಂಡಿತ ಕಾನೂನು ಅದನ್ನು ನಿರೂಪಿಸುತ್ತದೆ, ಶಿಕ್ಷೆ ಇದ್ದೇ ಇರುತ್ತದೆ. ಅದಕ್ಕೂ ಮುನ್ನ ಮಾನಸಿಕವಾಗಿ ಶಿಕ್ಷೆ ನೀಡುವ ಕೆಲಸ ಆಗಬಾರದು.

ಕೆ.ಎಂ.ನಾಗರಾಜು, ಮೈಸೂರು

ಶಾಶ್ವತ ಕಾರ್ಯಗಳಿಗೆ ಸಿಗಲಿ ಆದ್ಯತೆ

ಪ್ರಧಾನಿಯವರ ಬಂಡೀಪುರ ಭೇಟಿ ಸಂಬಂಧ ವಿರೋಧ ಪಕ್ಷದವರ ಪ್ರತಿಕ್ರಿಯೆಗೆ ಆಡಳಿತ ಪಕ್ಷದವರಿಂದ ಪ್ರತಿರೋಧ ವ್ಯಕ್ತವಾಗಿದೆ. ಈ ಪರಿಪಾಟ ಹೊಸದೇನಲ್ಲ. ಆದರೆ ಯಾರ ಮಾತೇ ಆದರೂ ಒಂದಿಷ್ಟು ತರ್ಕಬದ್ಧವಾಗಿಯೂ ಸಾಮಾಜಿಕ ಹಿತಾಸಕ್ತಿಯದೂ ಆಗಿರಬೇಕೆಂಬುದು ನಾಗರಿಕರ ನಿರೀಕ್ಷೆ. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಟೀಕೆಗಳಿಗೆ ಸಂಸದ ಪ್ರತಾಪಸಿಂಹ ಅವರ ವಾಗ್ದಾಳಿಯ ನುಡಿಗಳು (ಪ್ರ.ವಾ., ಏ. 11) ಔಚಿತ್ಯಪೂರ್ಣ ಎನಿಸದೆ ಪ್ರಶ್ನಾರ್ಹವಾಗಿವೆ. ಸಿದ್ದರಾಮಯ್ಯ ಅವರದು 'ಚರ್ಬಿ ತಿಂದ ಕೊಬ್ಬಿನ ಮಾತುಗಳು' ಎನ್ನುವುದಾದರೆ ಸಂಸದರದು ಯಾವ ಬಗೆಯದು? ಅವರು ಎಷ್ಟು ಬಾರಿ ಕಾಡಿಗೆ ಹೋಗಿ ಅಲ್ಲಿನ ಕುಂದುಕೊರತೆಗಳಿಗೆ ಪರಿಹಾರ ಒದಗಿಸಿದ್ದಾರೆ ಎಂಬ ಪ್ರಶ್ನೆ ಮೂಡುವುದೂ ಸಹಜವಲ್ಲವೇ?

ಪ್ರಧಾನಿಯವರು ಕಾಡಿಗೆ ಹೋಗುವುದಾಗಲೀ ವ್ಯವಸ್ಥಿತ ರೀತಿಯಲ್ಲಿ ಫೋಟೊ ತೆಗೆಸಿಕೊಳ್ಳುವುದಾಗಲೀ ತಪ್ಪೇನಲ್ಲ. ಆನೆ ಸಾಕಿ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದ ಬೊಮ್ಮ ದಂಪತಿಗೆ ಒಂದಿಷ್ಟು ಹಣ ನೀಡಿರುವುದೂ ಸುದ್ದಿಯಾಗಿದೆ. ಇವೆಲ್ಲಾ ತಾತ್ಕಾಲಿಕ. ಬದಲಿಗೆ, ಅನೇಕ ದಶಕಗಳಿಂದ ದಿನಗೂಲಿ ಮೇಲೆ ಜೀತ ಮಾಡುತ್ತಿರುವ ಕಾವಾಡಿಗಳು, ಕಾಡುಗಳ್ಳರ ವಿರುದ್ಧ ಜೀವದ ಹಂಗು ತೊರೆದು ಕಾಡಿನಲ್ಲಿ ಹಗಲಿರುಳು ಕಾವಲು ಕಾಯುವ, ಅನೇಕ ವೇಳೆ ಪ್ರಾಣಿಗಳ ದಾಳಿಗೂ ತುತ್ತಾಗಿ ಜೀವ ತೆತ್ತಿರುವ ವಾಚರ್ಸ್ ನೌಕರಿ ಕಾಯಂ ಮಾಡುವ, ಅಗತ್ಯ ಸೌಲಭ್ಯ ನೀಡುವ, ವನ್ಯಜೀವಿಗಳ ಸಂರಕ್ಷಣೆಗೆ ತೀರಾ ಅಗತ್ಯವಾದ ಯೋಜನೆಗಳಿಗೆ ಆದೇಶಿಸುವ ಕೆಲಸವೂ ಆಗಿದ್ದರೆ ಅದರ ಬೆಲೆಯೇ ಬೇರೆಯಾಗುತ್ತಿತ್ತಲ್ಲವೇ?

ಡಾ. ಟಿ.ಗೋವಿಂದರಾಜು, ಬೆಂಗಳೂರು

ನಂದಿನಿಯನ್ನು ಹೋಲಿಸುವುದಾದರೆ...

ರಾಜ್ಯದಲ್ಲಿ ಹಾಲು ಉತ್ಪಾದನೆಗೆ ಸಂಬಂಧಿಸಿದ ಡಾ. ಕೇಶವ ಕೊರ್ಸೆ ಅವರ ಲೇಖನ (ಪ್ರ.ವಾ., ಏ. 10), ನಂತರದ ಪ್ರದರ್ಶನ, ಸ್ಪಷ್ಟೀಕರಣ, ರಾಜಕಾರಣಿಗಳ ಹೇಳಿಕೆಗಳು ಮುಂದುವರಿದಿವೆ. ನಂದಿನಿಯನ್ನು ಹೋಲಿಕೆ ಮಾಡಬಹುದಾದರೆ ತಮಿಳುನಾಡಿನ 'ಆವಿನ್' ಹಾಗೂ ಕೇರಳದ 'ಮಿಲ್ಮಾ'ಗಳೊಂದಿಗೆ ಸಾಧ್ಯ. ತೂತ್ತುಕುಡಿ ಒಳಗೊಂಡಂತೆ ದಕ್ಷಿಣ ತಮಿಳುನಾಡಿನ ಜಿಲ್ಲೆಗಳಲ್ಲಿ ಹಾಲು ಸಂಗ್ರಹ ಹಾಗೂ ಪೂರೈಕೆಯಲ್ಲಿ ಕೊರತೆ ಉಂಟಾಗಿದೆ.

ಕೇರಳದಲ್ಲಿ ಬೇಸಿಗೆ ತಾಪಮಾನ ಏರಿಕೆ ಒಂದು ಸಮಸ್ಯೆ. ಮಿಲ್ಮಾ ಇದಕ್ಕಾಗಿ ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಯೊಂದಿಗೆ ಒಂದು ಒಪ್ಪಂದಕ್ಕೆ ಬಂದು, ಜಿಲ್ಲಾವಾರು ತಾಪಮಾನ ಆಧಾರಿತ ಪಾಲಿಸಿ ನೀಡಲಿದೆ. ಕೆಎಂಎಫ್ ಇವೆರಡಕ್ಕಿಂತ ಉತ್ತಮ ಸ್ಥಿತಿಯಲ್ಲಿದ್ದರೂ ಸಮಸ್ಯೆ ಪರಿಹಾರದಲ್ಲಿ ವೇಗ, ದಕ್ಷತೆ ತೋರುತ್ತಿಲ್ಲ. ಸರ್ಕಾರಗಳೂ ಕುತ್ತಿಗೆಗೆ ಬಂದಾಗ ನಿರ್ಧಾರ ಕೈಗೊಳ್ಳುವ ಚಾಳಿ ಮುಂದುವರಿಸಿವೆ. ಉದಾಹರಣೆಗೆ, ಡಬಲ್ ಟೋನ್ಡ್ (ಹಳದಿ ಪ್ಯಾಕೆಟ್) ಹಾಲು ಬೇಗ ಕೆಡುತ್ತದೆ, ತರಿಸಲು ಏಜೆಂಟರು ಹಿಂಜರಿಯುತ್ತಾರೆ. ಆದರೆ ಕಾಫಿ, ಟೀಗೆ ಇದು ಸಾಕು, ಬೆಲೆ ಕಡಿಮೆ. ಕೂಲಿಂಗ್ ಎಲ್ಲ ಕಡೆ ಒಂದೇ ರೀತಿ ಇರುವುದಿಲ್ಲ. ಬೇಸಿಗೆಯ ತಿಂಗಳುಗಳಲ್ಲಿ ಮೇಲುಸ್ತುವಾರಿ ಉತ್ತಮಗೊಳ್ಳಬೇಕು. ಹಾಲಿನ ಉತ್ಪನ್ನಗಳಲ್ಲಿ ಕೆಲವದರಲ್ಲಿ 'ಚಲನೆ' ಇರುತ್ತದೆ. ಅಮುಲ್ ಅನ್ನು ಸರಿಗಟ್ಟಲಾಗದಿದ್ದರೂ ಸೂಕ್ತ ಮಾರುಕಟ್ಟೆ ಸಂಶೋಧನೆ ನಡೆಸಿದರೆ ಸ್ಟಾಕ್ ಕಡಿಮೆ ಮಾಡಿಕೊಳ್ಳಲು ಸಾಧ್ಯ.

ಕೊರ್ಸೆಯವರು ಉದಾರೀಕರಣ, ಗೋಮಾಳ ಅಳಿವಿನಂತಹ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಮಾನವರಿಗೂ ಹೊಸ ಹೊಸ ರೋಗಗಳು ಬರುತ್ತಿವೆಯಲ್ಲ. ಹೈನುಗಾರಿಕೆಯನ್ನು ಯಾವ ಮಟ್ಟದಲ್ಲಿ ಕೈಗೊಳ್ಳಬೇಕು- ಕಮರ್ಷಿಯಲ್ ಡೈರಿ ಯುನಿಟ್ ಅಥವಾ ಕೃಷಿಗೆ ಪೂರಕ ಚಟುವಟಿಕೆಯಾಗಿಯೋ ಎಂಬ ನಿರ್ಧಾರವೂ ಮುಖ್ಯ. ಒಟ್ಟಿನಲ್ಲಿ ಅಮುಲ್‌ನ ಆನ್‌ಲೈನ್ ಮಾರುಕಟ್ಟೆ ಪ್ರವೇಶದಿಂದ ನಂದಿನಿಗೆ ಅಪಾಯವಿಲ್ಲ. ಈ ವಿವಾದಕ್ಕೆ ಮೂಲವಾದ ಹೇಳಿಕೆ ನೀಡಿದ್ದ ಅಮಿತ್ ಶಾ ಅವರು ಅಂತಿಮ ಸ್ಪಷ್ಟೀಕರಣ ನೀಡಿದರೆ ಅನಗತ್ಯ ಸಂಘರ್ಷ ನಿಲ್ಲಬಹುದು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮತ್ತೆ ಏರುತ್ತಿದೆ ಕೋವಿಡ್

ಎಚ್ಚರ ಇರಲಿ ಭೀತಿಯ ಅಗತ್ಯ ಇಲ್ಲ




ಕೋವಿಡ್ ಅಲೆ ಈಗ ಕಾಣಿಸಿಕೊಂಡಿಲ್ಲ. ಈ ಅವಧಿಯಲ್ಲಿ ಸಹಜವಾಗಿ ಉಸಿರಾಟಕ್ಕೆ ಸಂಬಂಧಿಸಿದ ವಿವಿಧ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಕೋವಿಡ್‌ಗಿಂತ ಎಚ್1ಎನ್1, ಎಚ್3ಎನ್2ನಂತಹ ಸೋಂಕು ಹೆಚ್ಚಾಗಿ ಪತ್ತೆಯಾಗುತ್ತಿದೆ. ಆದ್ದರಿಂದ ಕೆಮ್ಮು, ಜ್ವರ ಇರುವವರು ಮುಖಗವಸು ಹಾಕಿಕೊಳ್ಳಬೇಕು. ಶ್ವಾಸಕೋಶ, ಹೃದಯ ಸೇರಿ ವಿವಿಧ ಅಂಗಾಂಗಗಳ ಅಸ್ವಸ್ಥತೆ ಸಮಸ್ಯೆ ಇರುವವರು ಸೋಂಕಿನಿಂದ ರಕ್ಷಿಸಿಕೊಳ್ಳಲು ಮುನ್ನೆಚ್ಚರಿಕೆ ಕ್ರಮವನ್ನು ಅನುಸರಿಸಬೇಕು. ಕೋವಿಡ್ ಪ್ರಕರಣಗಳ ಹೆಚ್ಚಳದ ಬಗ್ಗೆ ನಿಗಾ ಇಡಬೇಕು.

ಡಾ.ಸಿ.ಎನ್. ಮಂಜುನಾಥ್, ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

ಪ್ರಜಾವಾಣಿ ವಾರ್ತೆ

ದೇಶದಲ್ಲಿ ಕೋವಿಡ್‌ನ ಹೊಸ ಪ್ರಕರಣಗಳ ಸಂಖ್ಯೆ ಮತ್ತೆ ಏರಿಕೆಯಾಗುತ್ತಿದೆ. ಮಾರ್ಚ್ ಮೂರನೇ ವಾರದ ವೇಳೆಗೆ ಪ್ರತಿದಿನ ದಾಖಲಾಗುವ ಹೊಸ ಪ್ರಕರಣಗಳ ಸಂಖ್ಯೆ ಒಂದು ಸಾವಿರದ ಆಸುಪಾಸಿನಲ್ಲಿತ್ತು. ಈಗ ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸಂಖ್ಯೆ 10,000ದ ಗಡಿ ದಾಟಿದೆ. ಭಾರತ ಮಾತ್ರವಲ್ಲ ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ಹಲವು ದೇಶಗಳಲ್ಲಿ ಕೋವಿಡ್‌ನ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಆದರೆ, ರೋಗಿಗಳಲ್ಲಿ ಕೋವಿಡ್ ಉಂಟುಮಾಡುತ್ತಿರುವ ಆರೋಗ್ಯದ ಸಮಸ್ಯೆಗಳ ತೀವ್ರತೆ ಕಡಿಮೆ ಇದೆ. ಹೀಗಿದ್ದೂ ಕೋವಿಡ್ ಹರಡುವುದನ್ನು ತಡೆಯಲು ಮುನ್ನೆಚ್ಚರಿಕೆ ವಹಿಸಬೇಕು ಎಂದು ತಜ್ಞರು ಹೇಳಿದ್ದಾರೆ.



- ಕೋವಿಡ್ ಪ್ರಕರಣಗಳ ತೀವ್ರ ಏರಿಕೆಗೆ ಓಮೈಕ್ರಾನ್‌ನ ಉಪತಳಿ ಎಕ್ಸ್‌ಬಿಬಿ.1.16 ಕಾರಣ ಎನ್ನಲಾಗಿದೆ
- ಏಪ್ರಿಲ್ ತಿಂಗಳ ಮೊದಲ 12 ದಿನಗಳಲ್ಲಿ ದೇಶದಾದ್ಯಂತ ದಾಖಲಾದ ಕೋವಿಡ್ ಪ್ರಕರಣಗಳ ಸಂಖ್ಯೆ 67,379
- ತಿಂಗಳ ಆರಂಭದಲ್ಲಿ, ಏಪ್ರಿಲ್ 1ರಂದು 3,824 ಪ್ರಕರಣಗಳು ವರದಿಯಾಗಿದ್ದವು. ಏ.12ರ ಹೊತ್ತಿಗೆ ನಿತ್ಯ ವರದಿಯಾಗುವ ಪ್ರಕರಣಗಳ ಸಂಖ್ಯೆ 10 ಸಾವಿರದ ಗಡಿಯನ್ನು ದಾಟಿದೆ
- 12 ದಿನಗಳಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಶೇ 165ರಷ್ಟು ಏರಿಕೆಯಾಗಿದೆ
- ಕಳೆದ ವರ್ಷದ ಇದೇ ಅವಧಿಯಲ್ಲಿ ಅಂದರೆ, 2022ರ ಏಪ್ರಿಲ್ ತಿಂಗಳ ಆರಂಭದ ಅವಧಿಯಲ್ಲಿ ನಿತ್ಯ ವರದಿಯಾಗುತ್ತಿದ್ದ ಕೋವಿಡ್ ಪ್ರಕರಣಗಳ ಸಂಖ್ಯೆ ಸರಿಸುಮಾರು ಸಾವಿರದ ಆಸುಪಾಸಿನಲ್ಲಿತ್ತು. ಈ ವರ್ಷ ಮೂರು ಸಾವಿರದಿಂದ ಆರಂಭವಾಗಿ, 10 ಸಾವಿರಕ್ಕೆ ಏರಿಕೆಯಾಗಿದೆ

ದೇಶದಲ್ಲಿ ಕೋವಿಡ್‌ನ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯು ಮಾರ್ಚ್ ಕೊನೆಯ ವಾರದಲ್ಲಿಯೇ ಆರಂಭವಾಗಿತ್ತು. ನಂತರದ ದಿನಗಳಲ್ಲಿ ಏರಿಕೆ ಪ್ರಮಾಣ ಹೆಚ್ಚುತ್ತಲೇ ಹೋಯಿತು. ಅನಂತರದಲ್ಲಿ ದೇಶದಾದ್ಯಂತ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಏರಿಸಲಾಯಿತು. ಹೀಗಾಗಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿರುವುದು ಪತ್ತೆಯಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಹೇಳಿದೆ.


ಬುಧವಾರ ಒಂದೇ ದಿನ 10,158 ಹೊಸ ಪ್ರಕರಣಗಳು ದಾಖಲಾಗಿವೆ. ಅದೇ ದಿನ ದೇಶದಾದ್ಯಂತ ಕೋವಿಡ್‌ನಿಂದ ಒಟ್ಟು 19 ಜನರು ಮೃತಪಟ್ಟಿದ್ದಾರೆ. 2022ರ ಏಪ್ರಿಲ್‌ನಲ್ಲಿ ಕೋವಿಡ್ ದೃಢಪಡುವ ಪ್ರಮಾಣ ಶೇ 0.6ರಷ್ಟು ಇತ್ತು. ಅಂದರೆ 1,000 ಜನರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಿದರೆ, ಅವರಲ್ಲಿ ಆರು ಮಂದಿಯಲ್ಲಷ್ಟೇ ಕೋವಿಡ್ ದೃಢಪಡುತ್ತಿತ್ತು. ಈಗ ಕೋವಿಡ್ ದೃಢಪಡುವ ಪ್ರಮಾಣ ಶೇ 4.42ಕ್ಕೆ ಏರಿಕೆಯಾಗಿದೆ. ಮಾರ್ಚ್‌ನಲ್ಲಿ ಈ ಪ್ರಮಾಣ ಶೇ



2.06ರಷ್ಟು ಇತ್ತು. ಏಪ್ರಿಲ್ ಎರಡನೇ ವಾರದಲ್ಲಿ ಶೇ 3.4ಕ್ಕೆ ಏರಿಕೆಯಾಗಿತ್ತು. ಕೊರೊನಾ ಸೋಂಕು ಮತ್ತೆ ಹರಡುತ್ತಿದೆ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ. ತಜ್ಞರ ಅಂದಾಜಿನ ಪ್ರಕಾರ ಏಪ್ರಿಲ್ ಕೊನೆಯ ವಾರದ ವೇಳೆಗೆ ದೇಶದಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಗರಿಷ್ಠಮಟ್ಟವನ್ನು ಮುಟ್ಟಲಿದೆ. ಅನಂತರ ಅವುಗಳ ಸಂಖ್ಯೆಯಲ್ಲಿ ಇಳಿಕೆಯಾಗಲಿದೆ. ಆದರೆ, ಕೋವಿಡ್ ಮೊದಲ ಅಲೆ ಮತ್ತು ಎರಡನೇ ಅಲೆಯ ಸಂದರ್ಭದಲ್ಲಿ ಉಂಟಾಗಿದ್ದಂತಹ ಸ್ಥಿತಿ ತಲೆದೋರುವ ಸಾಧ್ಯತೆಗಳು ಇಲ್ಲವೇ ಇಲ್ಲ ಎಂದು ತಜ್ಞರು ಹೇಳಿದ್ದಾರೆ.

ಈಗ ಕೋವಿಡ್ ದೃಢಪಟ್ಟಿರುವವರಲ್ಲೂ ರೋಗ ಲಕ್ಷಣಗಳು ಸೌಮ್ಯ ರೂಪದ್ದಾಗಿವೆ. ಗಂಟಲು ನೋವು ಮತ್ತು ಕೆರೆತ, ನೆಗಡಿ, ಜ್ವರ ಮತ್ತು ಮೈ-ಕೈ ನೋವಿನಂತಹ ಲಕ್ಷಣಗಳು ಈ ಕೋವಿಡ್ ರೋಗಿಗಳಲ್ಲಿ ಕಾಣಿಸಿಕೊಳ್ಳಲಿದೆ. ಇಷ್ಟೇ ಲಕ್ಷಣಗಳು ಇದ್ದರೆ, ಅಂತಹವರು ಆಸ್ಪತ್ರೆಗೆ ದಾಖಲಾಗುವ ಅಗತ್ಯ ಇಲ್ಲ. ಹೊರರೋಗಿಗಳಾಗಿ ಚಿಕಿತ್ಸೆ ಪಡೆದು ಕೋವಿಡ್‌ನಿಂದ ಗುಣಮುಖರಾಗಬಹುದು. ತೀವ್ರವಾದ ಕೆಮ್ಮು, ಉಸಿರಾಟದ ಸಮಸ್ಯೆ, ಆಮ್ಲಜನಕದ ಪ್ರಮಾಣ ಕಡಿಮೆಯಾಗುವಂತಹ ಲಕ್ಷಣಗಳು ಕಾಣಿಸಿಕೊಂಡರೆ ಅಂತಹ ರೋಗಿಗಳು ಆಸ್ಪತ್ರೆಗೆ ದಾಖಲಾಗಿ, ಅಗತ್ಯ ಚಿಕಿತ್ಸೆ ಪಡೆಯಬೇಕು ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ತನ್ನ ಪ್ರಕಟಣೆಯಲ್ಲಿ ಹೇಳಿದೆ. ದೇಶದ ವಿವಿಧ ಉನ್ನತ ಆಸ್ಪತ್ರೆಗಳ ವೈದ್ಯರೂ ಇದೇ ಸಲಹೆಯನ್ನು ನೀಡಿದ್ದಾರೆ. ಕೋವಿಡ್‌ನ ಮೊದಲ ಮತ್ತು ಎರಡನೇ ಅಲೆಯ ವೇಳೆ ಹಲವರಿಗೆ ಕೋವಿಡ್ ತಗುಲಿತ್ತು. ಇದರಿಂದ ಜನರಲ್ಲಿ ಕೋವಿಡ್ ನಿರೋಧಕ ಶಕ್ತಿ ಸೃಷ್ಟಿಯಾಗಿದೆ. ಹಾಗಾಗಿ ಈಗ ಕೋವಿಡ್ ಬಂದರೂ ರೋಗದ ತೀವ್ರತೆ ಕಡಿಮೆ ಇದೆ.

ಈಗ ಕೋವಿಡ್‌ನಿಂದ ಮೃತಪಡುವವರ ಸಂಖ್ಯೆ ಏರಿಕೆಯಾಗಿದ್ದರೂ ಒಟ್ಟು ಪ್ರಕರಣಗಳಲ್ಲಿ ಸಾವಿನ ಪ್ರಮಾಣ ಕಡಿಮೆ ಇದೆ. ಆದ್ದರಿಂದ ಕೋವಿಡ್‌ಗೆ ಹೆದರುವ ಅಗತ್ಯವಿಲ್ಲ. ಆದರೆ, ಅದು ಹರಡದಂತೆ ಮುನ್ನೆಚ್ಚರಿಕೆ ವಹಿಸುವುದು ಅಗತ್ಯ ಎಂದು ತಜ್ಞರು ಹೇಳಿದ್ದಾರೆ. ಹೀಗಿದ್ದೂ ದೇಶದ ಹಲವು ರಾಜ್ಯಗಳಲ್ಲಿ ಕೋವಿಡ್ ತಪಾಸಣೆ ಮತ್ತು ತಡೆ ಕ್ರಮಗಳನ್ನು ಜಾರಿಗೊಳಿಸಲಾಗಿದೆ. ಹಲವು ರಾಜ್ಯಗಳು ಕೋವಿಡ್ ನಿರ್ವಹಣಾ ಅಣಕು ಕಾರ್ಯಾಚರಣೆ ನಡೆಸಿವೆ. ಕೋವಿಡ್ ಘಟಕಗಳು, ಆಮ್ಲಜನಕ ಉತ್ಪಾದಕಾ ಘಟಕಗಳನ್ನು ಸಜ್ಜುಗೊಳಿಸಿವೆ. ಕೆಲವು ರಾಜ್ಯಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದನ್ನು ಕಡ್ಡಾಯ ಮಾಡಲಾಗಿದೆ. ತಜ್ಞರು ಸಹ, ಮಾಸ್ಕ್ ಧರಿಸುವುದು, ಕೈಗಳನ್ನು ಪದೇ-ಪದೇ ಸ್ವಚ್ಛಗೊಳಿಸುವುದರ ಮೂಲಕ ಕೋವಿಡ್ ಹರಡುವುದನ್ನು ತಡೆಯಬಹುದು ಎಂದು ಸಲಹೆ ನೀಡಿದ್ದಾರೆ.



ಏಪ್ರಿಲ್ ತಿಂಗಳ ಮೊದಲ 12 ದಿನಗಳಲ್ಲಿ ದೇಶದಲ್ಲಿ ಒಟ್ಟು 149 ಜನರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಪ್ರತೀ ದಿನ ಬೆರಳೆಣಿಕೆಯ ಜನರಷ್ಟೇ ಕೋವಿಡ್‌ಗೆ ಬಲಿಯಾಗಿದ್ದಾರೆ. ಕೋವಿಡ್ ತೀವ್ರವಾಗಿದ್ದ ಅವಧಿಯಲ್ಲಿ ಸಾವಿನ ಸಂಖ್ಯೆ ಸಾವಿರದ ಲೆಕ್ಕದಲ್ಲಿತ್ತು. ಆದರೆ, ಈಗಿನ ಸಾವಿನ ಸಂಖ್ಯೆಯು ತೀರಾ ಕಡಿಮೆಯಿದೆ. ಕೋವಿಡ್ ಲಸಿಕೆಯ ಪರಿಣಾಮವಾಗಿ ಸಾವಿನ ಪ್ರಕರಣಗಳು ಅಷ್ಟಾಗಿ ವರದಿಯಾಗುತ್ತಿಲ್ಲ ಎಂದು ತಜ್ಞರು ಅಂದಾಜಿಸಿದ್ದಾರೆ. ಈಗ ಮೃತಪಡುತ್ತಿರುವ ಕೋವಿಡ್ ರೋಗಿಗಳ ಸಾವಿಗೆ ಕೋವಿಡ್ ಒಂದೇ ಕಾರಣ ಅಲ್ಲ ಎಂದು ತಜ್ಞ ವೈದ್ಯರು ಹೇಳಿದ್ದಾರೆ. ಕ್ಯಾನ್ಸರ್, ಶ್ವಾಸಕೋಶ ಸೋಂಕು, ಕ್ಷಯ ಸೇರಿದಂತೆ ಗಂಭೀರವಾದ ಆರೋಗ್ಯ ಸಮಸ್ಯೆಗಳನ್ನು ಈಗಾಗಲೇ ಎದುರಿಸುತ್ತಿರುವ ರೋಗಿಗಳು ಕೋವಿಡ್‌ನಿಂದ ಮೃತಪಟ್ಟಿದ್ದಾರೆ ಎಂದು ಹೇಳಿದ್ದಾರೆ. ಕೋವಿಡ್ ತಗುಲಿದ್ದರು ಸಹ, ಇತರ ಗಂಭೀರ ಆರೋಗ್ಯ ಸಮಸ್ಯೆಗಳೇ ಸಾವಿನ ಹಿಂದಿರುವ ಕಾರಣಗಳು ಎಂದು ವಿಶ್ಲೇಷಿಸಿದ್ದಾರೆ.



ರಾಜ್ಯದಲ್ಲಿ ಚುನಾವಣೆ ನಡೆಯುತ್ತಿರುವುದರಿಂದ ಚುನಾವಣಾ ಆಯೋಗವೇ ಕೋವಿಡ್‌ಗೆ ಸಂಬಂಧಿಸಿದ ಮಾರ್ಗಸೂಚಿ ಹೊರಡಿಸಿದೆ. ಕೋವಿಡ್ ನಿಯಮಗಳ ಪಾಲನೆ ಬಗ್ಗೆ ಆಯೋಗವೇ ಬಿಬಿಎಂಪಿ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡುತ್ತದೆ. ಈಗ ಎಕ್ಸ್‌ಬಿಬಿ ತಳಿ ಕಾಣಿಸಿಕೊಂಡಿದ್ದು, ಸೋಂಕು ಎಲ್ಲೆಡೆ ವ್ಯಾಪಿಸಿಕೊಳ್ಳುವ ಸಾಧ್ಯತೆಯಿದೆ. ಚುನಾವಣೆ, ಐಪಿಎಲ್ ಪಂದ್ಯಾವಳಿ, ಬೇಸಿಗೆ ರಜೆ ಸೇರಿ ವಿವಿಧ ಕಾರಣಗಳಿಂದ ಕೋವಿಡ್ ಪ್ರಕರಣ ಮೇ ಅಂತ್ಯದವರೆಗೂ ಏರುಗತಿಯಲ್ಲಿಯೇ ಇರುವ ಸಾಧ್ಯತೆಯಿದೆ. ಆದ್ದರಿಂದ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು.

ಡಿ. ರಂದೀಪ್, ಆರೋಗ್ಯ ಇಲಾಖೆ ಆಯುಕ್ತ

ಆಧಾರ: ಆರೋಗ್ಯ ಸಚಿವಾಲಯದ ಪ್ರಕಟಣೆಗಳು, ಪಿಟಿಐ, ಕೋವಿನ್ ಪೋರ್ಟಲ್, ಕೋವಿಡ್–19 ಪೋರ್ಟಲ್




ಶ್ರೀನಗರದ ಬೋಟ್‌ಹೌಸ್‌ಗಳು ಮರೆಯಾಗುವ ಆತಂಕ

• ಝುಲ್ಫೀಕರ್ ಮಜೀದ್

ಕಾಶ್ಮೀರದ ಆಕರ್ಷಣೆಗಳಲ್ಲಿ ಒಂದಾದ 'ಬೋಟ್‌ಹೌಸ್'ಗಳು ಇತಿಹಾಸದ ಪುಟ ಸೇರುವ ಪರಿಸ್ಥಿತಿ ಎದುರಾಗಿದೆ. ಹೊಸ ಬೋಟ್‌ಹೌಸ್‌ಗಳ ನಿರ್ಮಾಣ ಮತ್ತು ಹಳೆಯ ಬೋಟ್‌ಹೌಸ್‌ಗಳ ದುರಸ್ತಿಗೆ ನಿರ್ಬಂಧ ಇರುವ ಕಾರಣ, ಈಗಿರುವ ದೋಣಿಗಳು ಮೂಲೆ ಸೇರುತ್ತಿವೆ. ಹೀಗಾಗಿ ಕೆಲವೇ ವರ್ಷಗಳಲ್ಲಿ ಇವು ನೆನಪು ಮಾತ್ರವಾಗಿ ಉಳಿಯಬಹುದು.

ಕಾಶ್ಮೀರದಲ್ಲಿ ಬೋಟ್‌ಹೌಸ್‌ಗಳ ಸಂಸ್ಕೃತಿ ಆರಂಭವಾದದ್ದು, ಬ್ರಿಟಿಷರ ಕಾಲದಲ್ಲಿ. ಬ್ರಿಟಿಷರು ಬೇಸಿಗೆಯ ಧಗೆಯಿಂದ ತಪ್ಪಿಸಿಕೊಳ್ಳಲು ಕಾಶ್ಮೀರಕ್ಕೆ ಬರುತ್ತಿದ್ದರು. ಆದರೆ, ಆಗ ಕಾಶ್ಮೀರದಲ್ಲಿ ಪ್ರವಾಸಿಗರಿಗೆ ಉಳಿದುಕೊಳ್ಳುವ ವ್ಯವಸ್ಥೆ ಇರಲಿಲ್ಲ ಮತ್ತು ಹೊರಗಿನವರು ಜಮೀನು ಖರೀದಿಸಿ, ಮನೆ ನಿರ್ಮಿಸಲು ಇಲ್ಲಿನ ರಾಜ ಅನುಮತಿ ನೀಡುತ್ತಿರಲಿಲ್ಲ. ಹೀಗಾಗಿ ಬೋಟ್‌ಹೌಸ್‌ಗಳನ್ನು ನಿರ್ಮಿಸಿ, ಅವುಗಳಲ್ಲಿ ಪ್ರವಾಸಿಗರಿಗೆ ಉಳಿದುಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಬಣ್ಣ-ಬಣ್ಣದ, ಚಿತ್ತಾರದ ಈ ಬೋಟ್‌ಹೌಸ್‌ಗಳು ಅಂದಿನಿಂದ ಇಂದಿನವರೆಗೂ ಪ್ರವಾಸಿಗರ ಆಕರ್ಷಣೆಯಾಗಿ ಉಳಿದುಕೊಂಡು ಬಂದಿವೆ.

ಆದರೆ ಬೋಟ್‌ಹೌಸ್‌ಗಳ ಸಂಖ್ಯೆ ಹೆಚ್ಚಾಯಿತು ಎಂಬ ಸ್ಥಿತಿಯೇ ಅವುಗಳಿಗೆ ಮುಳುವಾಯಿತು. ಬೋಟ್‌ಹೌಸ್ ಸಂಸ್ಕೃತಿಯ ಉತ್ತುಂಗದ ಕಾಲದಲ್ಲಿ ದಾಲ್ ಮತ್ತು ನಿಗೀನ್ ಸರೋವರಗಳಲ್ಲಿ ಒಟ್ಟು 3,500 ಬೋಟ್‌ಹೌಸ್‌ಗಳಿದ್ದವು. ನಿರ್ವಹಣೆ ಮತ್ತು ದುರಸ್ತಿ ಇಲ್ಲದ ಕಾರಣ ಅವುಗಳ ಸಂಖ್ಯೆ ಈಗ 900ಕ್ಕೆ ಇಳಿದಿದೆ. ಹೊಸ ಬೋಟ್‌ಹೌಸ್‌ಗಳನ್ನು ನಿರ್ಮಿಸಬಾರದು ಎಂದು ಜಮ್ಮು-ಕಾಶ್ಮೀರ ಹೈಕೋರ್ಟ್ ನಿಷೇಧ ಹೇರಿದೆ. ಹೀಗಾಗಿ ಹೊಸ ಬೋಟ್‌ಹೌಸ್‌ಗಳ ನಿರ್ಮಾಣ ಕಾರ್ಯ ನಡೆಯುತ್ತಿಲ್ಲ.



ದಾಲ್ ಸರೋವರದಲ್ಲಿ ದುರಸ್ತಿಗೆ ಕಾದುನಿಂತಿರುವ ಬೋಟ್‌ಹೌಸ್‌ಗಳು

ಹಳೆಯ ಬೋಟ್‌ಹೌಸ್‌ಗಳ ದುರಸ್ತಿಗೂ ನಿರ್ಬಂಧವಿದೆ. ಈ ಬೋಟ್‌ಹೌಸ್‌ಗಳ ನಿರ್ಮಾಣಕ್ಕೆ ದೇವದಾರು ಮರಗಳನ್ನು ಬಳಸಲಾಗುತ್ತದೆ. ಈ ಮರಗಳು ನೀರಿನಲ್ಲಿದ್ದರೂ ದೀರ್ಘಕಾಲದವರೆಗೆ ಹಾಳಾಗದೇ ಇರುವ ಕಾರಣ, ಬೋಟ್‌ಹೌಸ್‌ಗಳ ನಿರ್ಮಾಣದಲ್ಲಿ ಅವನ್ನೇ ಬಳಸಲಾಗುತ್ತದೆ. ಈಗ ಈ ಮರಗಳು ಲಭ್ಯ ಇಲ್ಲ. ಲಭ್ಯವಿದ್ದರೂ ಅವುಗಳ ಬೆಲೆ ವಿಪರೀತ ಎನ್ನುವಷ್ಟಾಗಿದೆ. ಹೀಗಾಗಿ ಹಳೆಯ ಬೋಟ್‌ಹೌಸ್‌ಗಳ ದುರಸ್ತಿ ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದ ಅವು ಮೂಲೆ ಸೇರುತ್ತಿವೆ.

ನಿರ್ಮಾಣಕ್ಕೆ ನಿಷೇಧ ಮತ್ತು ದುರಸ್ತಿಗೆ ನಿರ್ಬಂಧ ಇರುವ ಕಾರಣ ಬೋಟ್‌ಹೌಸ್ ನಿರ್ಮಾಣ ಕುಶಲಕರ್ಮಿಗಳಿಗೆ ಕೆಲಸ ಇಲ್ಲದಂತಾಗಿದೆ. 'ನಾನು ಈ ಹಿಂದೆ 50ಕ್ಕೂ ಹೆಚ್ಚು ಬೋಟ್‌ಹೌಸ್‌ಗಳನ್ನು ನಿರ್ಮಿಸಿದ್ದೇನೆ. ನನ್ನ ಪೂರ್ವಜರೂ ಇದೇ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದರು. ಆದರೆ, ಅವರೆಂದೂ ಇಂತಹ ಸ್ಥಿತಿ ಎದುರಿಸಿರಲಿಲ್ಲ. ನನಗೆ ಈಗ ಕೆಲಸವೇ ಇಲ್ಲದಂತಾಗಿದೆ. ಶ್ರೀನಗರದಲ್ಲಿರುವ ಬೋಟ್‌ಹೌಸ್‌ಗಳಲ್ಲಿ ಶೇ 90ರಷ್ಟು ಬೋಸ್‌ಹೌಸ್‌ಗಳನ್ನು ತಕ್ಷಣವೇ ರಿಪೇರಿ ದುರಸ್ತಿ ಕುಶಲಕರ್ಮಿಗಳ ಸ್ಥಿತಿಯೂ ಇದೇ ರೀತಿ ಇದೆ.

ಕಾಶ್ಮೀರಿ ಬೋಸ್‌ಹೌಸ್ ಮಾಲೀಕರ ಪುನರ್ವಸತಿಗಾಗಿ ಒಂದು ನೀತಿಯನ್ನು ರೂಪಿಸಬೇಕು ಸಂಸದೀಯ ಸಮಿತಿಯು 2022ರ ಡಿಸೆಂಬರ್‌ನಲ್ಲಿ ಶಿಫಾರಸು ಮಾಡಿತ್ತು. ಜತೆಗೆ ಬೋಸ್‌ಹೌಸ್‌ಗಳ ದುರಸ್ತಿಗೆ ರಿಯಾಯಿತಿ ದರದಲ್ಲಿ ದೇವದಾರು ಮರಗಳನ್ನು ಒದಗಿಸಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು. ಆದರೆ, ನಾಲ್ಕು ತಿಂಗಳು ಕಳೆದರೂ ಯಾವುದೇ ಪ್ರಗತಿ ಆಗಿಲ್ಲ. ದುರಸ್ತಿ ಎದುರು ನೋಡುತ್ತಿರುವ ಬೋಟ್‌ಹೌಸ್‌ಗಳು ದಾಲ್ ಮತ್ತು ನಿಗೀನ್ ಸರೋವರಗಳ ದಂಡೆಗಳಲ್ಲಿ ಲಂಗರು ಹಾಕಿವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಾ.30ರಂದು ಹೌರಾದ ಶಿವಪುರದಲ್ಲಿ ವಿಶ್ವಹಿಂದೂ ಪರಿಷತ್ ಹಾಗೂ ಸ್ಥಳೀಯ ಹಿಂದೂ ಸಂಘಟನೆಯೊಂದು ಮೆರವಣಿಗೆ ನಡೆಸುತ್ತಿದ್ದ ವೇಳೆ ಗಲಭೆ ಉಂಟಾಗಿತ್ತು. ಗ್ರಾಂಡ್ ಟ್ರಂಕ್ ರಸ್ತೆಯಲ್ಲಿ ನಡೆದ ಹಿಂಸಾಚಾರದಲ್ಲಿ ಅಂಗಡಿಗಳು ಹಾಗೂ ರಸ್ತೆಬದಿಯಲ್ಲಿದ್ದ ಬೈಕ್‌ಗಳು ಬೆಂಕಿಗೆ ಆಹುತಿಯಾಗಿದ್ದವು. ಮರುದಿನ ಇದೇ ಜಾಗದಲ್ಲಿ ಕಲ್ಲುತೂರಾಟವೂ ನಡೆದಿತ್ತು. ಶಿವನ ದೇವಸ್ಥಾನಕ್ಕೆ ಬೆಂಕಿ ಹಚ್ಚಲಾಗಿದೆ ಎಂದು ಹೇಳಲಾಗುವ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಪಶ್ಚಿಮ ಬಂಗಾಳದ ಬಿಜೆಪಿ ಘಟಕದ ಮುಖ್ಯಸ್ಥ ಸುಕಾಂತಾ ಮಜುಂದಾರ್, ಗೋಪಾಲ್ ಗೋಸ್ವಾಮಿ ಎಂಬವರು ಈ ವಿಡಿಯೊಗಳನ್ನು ಹಂಚಿಕೊಂಡಿದ್ದಾರೆ. 'ಜಿಹಾದಿಗಳು ದೇವಸ್ಥಾನಕ್ಕೆ ಬೆಂಕಿ ಹಚ್ಚಿದ್ದಾರೆ, ದೀದಿ ಅವರು ರಾಹುಲ್ ಭಜನೆಗಳನ್ನು ಹಾಡುತ್ತಿದ್ದಾರೆ' ಎಂದು ಗೋಪಾಲ್ ಆರೋಪಿಸಿದ್ದಾರೆ. ಆದರೆ ದೇವಸ್ಥಾನಕ್ಕೆ ಬೆಂಕಿ ಹಚ್ಚಿದ ಆರೋಪ ಸತ್ಯವಲ್ಲ.

ದೇವಸ್ಥಾನಕ್ಕೆ ಬೆಂಕಿ ಹಚ್ಚಲಾಗಿದೆ ಎಂಬುದು ಸತ್ಯಕ್ಕೆ ದೂರುವಾದುದು ಎಂದು 'ಆಲ್ಟ್ ನ್ಯೂಸ್' ವರದಿ ಮಾಡಿದೆ. ದೇವಸ್ಥಾನದ ಹಿಂಭಾಗದ ರಸ್ತೆಯಲ್ಲಿ ಮೆರವಣಿಗೆ ವೇಳೆ ಹಣ್ಣಿನ ಬುಟ್ಟಿಗಳು, ಬಿದಿರಿನ ಸಾಮಗ್ರಿಗಳಿಗೆ ಬೆಂಕಿ ಹಚ್ಚಲಾಗಿತ್ತು. ಜ್ವಾಲೆಯು ದೇವಸ್ಥಾನದ ಒಂದು ಪಾರ್ಶ್ವಕ್ಕೆ ಸ್ವಲ್ಪ ಹಾನಿ ಮಾಡಿತ್ತು ಎಂದು ಘಟನಾ ಸ್ಥಳಕ್ಕೆ ಭೇಟಿ ನೀಡಿದ ಬಳಿಕ ವರದಿ ಮಾಡಿದೆ. 'ಮುಸ್ಲಿಮ್ ವ್ಯಾಪಾರಿಗಳು ನಿತ್ಯವೂ ಬಳಸುತ್ತಿದ್ದ ಹಣ್ಣಿನ ಬುಟ್ಟಿಗಳು, ಬಿದಿರಿನ ಸಾಮಗ್ರಿಗಳನ್ನು ತಂದು ಬೆಂಕಿಗೆ ಸುರಿಯಲಾಗಿತ್ತು. ಕೇಸರಿ ಧ್ವಜ ಹಿಡಿದಿದ್ದ ಕೆಲವರು ಈ ಕೆಲಸ ಮಾಡಿರುವುದು ವಿಡಿಯೊದಲ್ಲಿ ಕಂಡುಬಂದಿದೆ' ಎಂದು ವರದಿ ತಿಳಿಸಿದೆ. ಈ ವಿಡಿಯೊವನ್ನೂ ಆಲ್ಟ್ ನ್ಯೂಸ್ ತನ್ನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದೆ. ಹಿಂಸಾಚಾರ ಘಟನೆಯ ಬಗ್ಗೆ ತನಿಖೆ ನಡೆಯುತ್ತಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಲೋಕಗಳ ಬಾಂಧವ್ಯ

ಇರುವುದರೊಳಾದನಿತು ಸೊಗವ ಪಡೆವೊಡೆ ಲೋಗರ್ |
ಅರಿಗೆ ಮೊದಲ್ ಇಹಕೆ ಪರದಾವರಣವಿಹುದನ್ ||
ಪರಮಾರ್ಥಗಣಿತದಿಂದಹದರ್ಥಗಳನೆಣಿಸೆ |
ಸರಿ ಲೋಕ ಬಾಂಧವ್ಯ – ಮಂಕುತಿಮ್ಮ || 862 ||

ಪದ-ಅರ್ಥ: ಇರುವುದರೊಳಾದನಿತು = ಇರುವುದರೊಳು + ಆದನಿತು(ಆದಷ್ಟು), ಪಡೆವೊಡೆ = ಪಡೆಯುವುದಾದರೆ, ಲೋಗರ್ = ಜನರು, ಅರಿಗೆ + ಅರಿತರೆ, ಇಹಕೆ = ಭೂಮಿಯ ಬದುಕಿಗೆ, ಪರದಾವರಣವಿಹುದನ್ = ಪರದ + ಆವರಣ + ಇಹುದನ್(ಇರುವುದನ್ನು) , ಪರಮಾರ್ಥಗಣಿತದಿಂದಿಹದರ್ಥಗಳನೆಣಿಸೆ = ಪರಮಾರ್ಥ + ಗಣಿತದಿಂದ + ಇಹದ + ಅರ್ಥಗಳನು + ಎಣಿಸೆ.

ವಾಚ್ಯಾರ್ಥ: ಇರುವ ಬದುಕಿನಲ್ಲಿ ಸಂತೋಷ ಪಡೆಯಬೇಕಾದರೆ, ಮೊದಲು ಇಹಕ್ಕೆ ಪರದ ಆವರಣವಿರುವುದನ್ನು ತಿಳಿಯಬೇಕು. ಪರಮಾರ್ಥದ ಯೋಚನೆಗಳಿಂದಂ ಇಹದ ಬದುಕನ್ನು ತಿಳಿದು ಬಾಳಿದರೆ ಲೋಕಗಳ ಬಾಂಧವ್ಯದ ಅರಿವಾಗುತ್ತದೆ.

ವಿವರಣೆ: ನಮ್ಮ ಸುತ್ತಮುತ್ತಲಿನ ಜಗತ್ತು, ಇಹದ ಜಗತ್ತು, ಅನುಭವದ ಜಗತ್ತು. ಅದು ನಮ್ಮ ಕಣ್ಣು ಕಾಣುವ ಸತ್ಯದ ಅಭಿವ್ಯಕ್ತಿ. ಅದು ಹೊರಗಣ್ಣಿನ ನೋಟ. ಅದನ್ನು ಮುಚ್ಚಿ ಮನದ ಒಳಕಣ್ಣನ್ನು ತೆರೆದಾಗ ಅಲೌಕಿಕವಾದ ದರ್ಶನವಾಗುತ್ತದೆ. ಅದೂ ಸತ್ಯವೇ, ಪರಮಸತ್ಯ. ಹೀಗೆ ನಮಗೆ ಎರಡು ಸತ್ಯಗಳು. ಒಂದು, ಭಗವಂತ ನಮ್ಮ ಕಣ್ಣಿಗೆ ರೂಪವಾಗಿ, ಕಿವಿಗೆ ಶಬ್ದವಾಗಿ, ನಾಲಿಗೆಗೆ ರುಚಿಯಾಗಿ,ಮನಸ್ಸಿಗೆ ಭಾವನೆಯಾಗಿ, ಮಾತಿಗೆ ವಿಚಾರವಾಗಿ, ಇಹದಲ್ಲಿ ತೋರುತ್ತಾನೆ. ಮನದ ಕಣ್ಣಿಂದ ನೋಡಿದರೆ ಇಹಲೋಕದ ಸತ್ಯವನ್ನು ಆವರಿಸಿದ ಸರ್ವತ್ರ ಸತ್ಯ ಗೋಚರಿಸುತ್ತದೆ. ಇದೇ ಜ್ಞಾನದೃಷ್ಟಿ. ಹಾಗೆಂದರೆ ಇಹಲೋಕದ ಸತ್ಯಕ್ಕೆ ಪರರ ಪರಮಸತ್ಯದ ಆವರಣವಿದೆ. ಇದನ್ನು ಅರಿತರೆ ಮಾತ್ರ ಬದುಕಿನಲ್ಲಿ ಸೊಗಸು, ಸಂತೋಷ. ಹಾಗೆ ಅರಿತವನಿಗೆ ಜಗತ್ತು ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ, ಅದೊಂದು ದಿವ್ಯತೆಯ ಅನುಭವ. ಏಕನಾಥರು ಮಹಾರಾಷ್ಟ್ರದ ಸಂತರು. ಅವರು ಬಾಲ್ಯದಲ್ಲಿ ಜನಾರ್ದನ ಗೋಸ್ವಾಮಿಯವರ ಶಿಷ್ಯ. ಗುರುಸೇವೆಯೇ ಏಕನಾಥರ ಪರಮ ಗುರಿಯಾಗಿತ್ತು. ಒಂದು ದಿನ ಗುರುಗಳು ಶಿಷ್ಯನಿಗೆ, ಕೂಡಿದ್ದ ಹಣದ ಲೆಕ್ಕ ಇಡಲು ಹೇಳಿದರು. ಅದು ಹತ್ತೇ ನಿಮಿಷದಲ್ಲಿ ಮುಗಿಯಬಹುದಾದ ಕೆಲಸ. ಆದರೆ ಏಕನಾಥರು ಮಧ್ಯರಾತ್ರಿಯವರೆಗೆ ಲೆಕ್ಕವನ್ನು ಮಾಡುತ್ತಲೇ ಇದ್ದರು. ಯಾಕೆಂದರೆ ಲೆಕ್ಕದಲ್ಲಿ ಒಂದು ಪೈಸೆ ಕಡಿಮೆಯಾಗಿತ್ತು. ಮಧ್ಯರಾತ್ರಿಯ ಹೊತ್ತಿಗೆ ಆ ಪೈಸೆಯ ಲೆಕ್ಕ ಸಿಕ್ಕಿತು. ಬಾಲಕ ಏಕನಾಥ ಸಂತೋಷದಿಂದ "ಸಿಕ್ಕಿಬಿಟ್ಟಿತು" ಎಂದು ಕೂಗಿದ. ಗುರುಗಳು ಬಂದು "ಏನು ಸಿಕ್ಕಿತು?" ಎಂದು ಕೇಳಿದರು. "ಲೆಕ್ಕದಲ್ಲಿ ಕಳೆದ ಹೋದ ಪೈಸೆ ಸಿಕ್ಕಿತು" ಎಂದ ಏಕನಾಥ. ಗುರುಗಳು ಹೇಳಿದರು, ಇದೇ ಏಕಾಗ್ರತೆಯಿಂದ ಪರಮಾತ್ಮನನ್ನು ಹುಡುಕು, ಪೈಸೆಯನ್ನು ಹುಡುಕಬೇಡ", ಏಕನಾಥ ಹಾಗೆಯೇ ಮಾಡಿದ. ಪೈಸೆಯನ್ನು ಕಳೆದುಕೊಂಡು ಪರಮಾತ್ಮನನ್ನು ಪಡೆದ. ಕಗ್ಗ ಅದನ್ನು ತಿಳಿಸುತ್ತದೆ. ಪರಮಾರ್ಥದ, ಪರಮಸತ್ಯದ ಕಣ್ಣಳತೆಯಲ್ಲಿ ಇಹದ ಅರ್ಥವನ್ನು ತಿಳಿದು ಬದುಕಿದರೆ, ಎರಡೂ ಲೋಕಗಳ ನಡುವಿನ ಬಾಂಧವ್ಯ ಸರಿಯಾಗಿರುತ್ತದೆ ಮತ್ತು ಇಹದ ಬದುಕು ಅಸಹನೀಯವೆನ್ನಿಸುವುದಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಏಪ್ರಿಲ್ 14, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಕೃಷ್ಣ ನವಮಿ ಗಂ. 23-14 ನಕ್ಷತ್ರ: ಉತ್ತರಾಷಾಢ ಗಂ. 09-14 ಯೋಗ: ಸಿದ್ಧ ಗಂ. 09-37, ಕರಣ: ತೈತಿಲ ಗಂ. 12-26, ಮೀನ ಮಾಸದ 30 ನೇ ದಿನ, ಮಳೆನಕ್ಷತ್ರ: ರೇವತಿ 4, ರಾಹುಕಾಲ : ಬೆಳಿಗ್ಗೆ 10-30 –12-00, ಸೂರ್ಯೋದಯ : 06-23 ಸೂರ್ಯಾಸ್ತ : 06-40, ಮುಸ್ಲಿಂ ದಿನಾಂಕ : 22 ರಂಜಾನ್, ದಿನ ವಿಶೇಷ : ವೈಶಾಖಿ (ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ ,ದೆಹಲಿ, ಒರಿಸ್ಸಾ), ಮೇಷ ಸಂಕ್ರಾಂತಿ, ಚೈತ್ರ ಸಂಕ್ರಾಂತಿ, ಚಡಕ ಪೂಜಾ (ಬಂಗಾಳ), ಚೈರೋಬ (ಮಣಿಪುರ), ಮೇಷಾದಿ (ತ.ನಾಡು), ತಮಿಳು ವರ್ಷಾರಂಭ, ವಿಶು (ಕೇರಳ), ಡಾ|| ಬಿ.ಆರ್. ಅಂಬೇಡ್ಕರ್ ಜಯಂತಿ, ನಿರಯನ ಕಲಿ.ಶಕ 5124 ಪ್ರಾರಂಭ. ಅದೃಷ್ಟ ಸಂಖ್ಯೆ : 4, 11

ಮೇಷ: ಅಕ್ಕ-ಪಕ್ಕದವರಲ್ಲಿ ಸ್ನೇಹಪರ ಸ್ವಭಾವ ತೋರುವುದರಿಂದಾಗಿ ವೈಯಕ್ತಿಕ ಸ್ಥಾನ ಮಾನಗಳು ಲಭಿಸುವುದು. ವಿದ್ಯಾರ್ಥಿಗಳ ವಿದ್ಯಾಭ್ಯಾಸದಲ್ಲಿನ ಅತೀವ ಆಸಕ್ತಿಗೆ ಮೋಡ ಮುಸುಕಿ ಗ್ರಹಣ ಬಂದಂತಾಗಬಹುದು.

ವೃಷಭ: ಕಾರ್ಯದೊತ್ತಡದ ನಡುವೆಯೂ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದು ಅನಿವಾರ್ಯ. ಯಾವುದೇ ಹೊಸ ಉದ್ಯೋಗ ಒಪ್ಪಿಕೊಳ್ಳುವಾಗ ಅಥವಾ ಕರಾರಿಗೆ ಸಹಿ ಮಾಡುವಾಗ ತಾಳ್ಮೆಯಿಂದ ಒಪ್ಪಿಕೊಳ್ಳಿ.

ಮಿಥುನ: ವ್ಯವಹಾರದ ವಿಷಯಗಳಿಂದಾಗಿ ಬಿಡುವಿಲ್ಲದ ಕೆಲಸಗಳು. ಬರವಣಿಗೆಗಳಿಂದ ವರಮಾನ ಹೆಚ್ಚಲಿದೆ. ಭೂ ವ್ಯವಹಾರಗಳು ಲಾಭದಾಯಕವೆನಿಸುವುದು. ಸಂಘ-ಸಂಸ್ಥೆಗಳಲ್ಲಿ ಸ್ಥಾನ ಮಾನಗಳು ದೊರೆಯಲಿದೆ.

ಕರ್ಕಾಟಕ: ಅಪ್ತರ ಮನೆಯಲ್ಲಿ ನಡೆಯುವ ಸಮಾರಂಭಗಳಿಗಾಗಿ ಜವಾಬ್ದಾರಿ, ಓಡಾಟ ಹೆಚ್ಚಲಿದೆ. ವ್ಯವಹಾರದಲ್ಲಿ ಉತ್ತಮ ಲಾಭವಿರುವುದು. ರೇಷ್ಮೇ ಬೆಳೆಗಾರರಿಗೆ ಉತ್ತಮ ಆದಾಯ ಪ್ರಾಪ್ತಿಯಾಗಲಿದೆ.

ಸಿಂಹ: ಸ್ವಂತ ಉದ್ಯೋಗಸ್ಥರಿಗೆ ಬಿಡುವಿಲ್ಲದೆ ಕೆಲಸಗಳು ಪೂರ್ತಿಗೊಳಿಸಬೇಕಾದ ಸಂದರ್ಭ ಎದುರಾಗುವುದು. ಸಿದ್ಧ ಉಡುಪಗಳ ರಫ್ತು ವ್ಯಾಪಾರದಿಂದ ಹೇರಳ ಲಾಭ ಸಿಗುತ್ತದೆ. ಷೇರು ವ್ಯವಹಾರದಲ್ಲಿ ಹೆಚ್ಚಿನ ಕಮಿಷನ್ ಲಭ್ಯ.

ಕನ್ಯಾ: ಮೇಲಧಿಕಾರಿಗಳು, ಹಿರಿಯರು ಇಂದಿನ ಕೆಲಸಗಳಲ್ಲಿ ಸಹಕಾರ ನೀಡುತ್ತಾರೆ. ಹಿರಿಯರ ಆರೋಗ್ಯ ಸುಧಾರಿಸುವುದರಿಂದ ಸಂತಸವಿರುವುದು. ಈ ದಿನ ಸ್ನೇಹಿತರೊಂದಿಗೆ ಭೂಮಿ ಖರೀದಿಗಾಗಿ ಪ್ರಯತ್ನ ನಡೆಸುವಿರಿ.

ತುಲಾ: ಮನದಲ್ಲಿರುವ ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಲು ಬೇಕಾದ ಸಕಲ ಸಿದ್ಧತೆ ಮಾಡಿಕೊಳ್ಳಿರಿ. ಕಚೇರಿ ಕೆಲಸಗಳು ಸುಗಮವಾಗಿ ನೆರವೇರಬಹುದು. ಸರ್ವತೋಮುಖ ಅಭಿವೃದ್ಧಿ ಕಂಡುಬರುವುದು.

ವೃಶ್ಚಿಕ: ಸದ್ಯ ಎದುರಾಗಿರುವ ಸಮಸ್ಯೆಗಳು ಪರಿಹಾರ ಕಾಣಲಿವೆ. ಯಾವುದೇ ವಿಚಾರದಲ್ಲಿಯೂ ಆತುರದ ನಿರ್ಧಾರ ಒಳ್ಳೆಯದಲ್ಲ. ಅಲೆದಾಟ ಹೆಚ್ಚಿ ದಣಿವಾದರೂ ಕೆಲಸ ಕೈಗೂಡಿದ್ದಕ್ಕೆ ಮನಸ್ಸಿಗೆ ಸಮಾಧಾನ ಸಿಗುವುದು.

ಧನು: ಕೆಲಸ ಕಾರ್ಯಗಳಲ್ಲಿ ಉತ್ಸಾಹ ಕಾಣುವಿರಿ. ಉದ್ಯೋಗದಲ್ಲಿ ಒತ್ತಡಗಳಿಗೆ ಸಿಲುಕಬೇಡಿ. ಗುಣಾತ್ಮಕ ಕಾರ್ಯಗಳಿಗೆ ಮಹತ್ವ ನೀಡಬಹುದು. ವಿವಾಹ ಪ್ರಸ್ತಾಪಗಳು ಬಲಗೊಂಡು ಕಂಕಣ ಭಾಗ್ಯದ ಸಾಧ್ಯತೆ ಇದೆ.

ಮಕರ: ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಈ ದಿನ ಹೆಚ್ಚಿನ ಸಂಪಾದನೆ ಇರುವುದು. ಕೋರ್ಟು ವ್ಯವಹಾರಗಳಿಗೆ ಓಡಾಟ ತಪ್ಪಲಿದೆ. ಪರಿಸ್ಥಿತಿ ನಿಭಾಯಿಸುವ ಸಾಮರ್ಥ್ಯ ಪ್ರದರ್ಶಿಸುವಿರಿ. ಜಮೀನು ಖರೀದಿಸುವ ಯೋಚನೆ ಬರಲಿದೆ.

ಕುಂಭ: ದಿನದ ಆರಂಭದಲ್ಲಿ ವಿಪರೀತ ಶ್ರಮ ಪಡಬೇಕಾಗಿ ಬರುವುದು. ಆಪ್ತರೊಬ್ಬರು ನೆರವಿಗೆ ನಿಲ್ಲಲಿದ್ದಾರೆ. ಜೀವನ ಶೈಲಿಯಲ್ಲಿ ಕೆಲವೊಂದು ಬದಲಾವಣೆಗೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ.

ಮೀನ: ಮನೆಯವರೆಲ್ಲರೂ ಕೆಲಸ ಕಾರ್ಯಗಳಲ್ಲಿ ನಿಮ್ಮಿಚ್ಛೆಯಂತೆ ನಡೆದುಕೊಳ್ಳುವರು. ಚಿನ್ನ, ಬೆಳ್ಳಿ ವ್ಯಾಪಾರಿಗಳು ಈ ದಿನ ಹೆಚ್ಚಿನ ಅಭಿವೃದ್ಧಿ ಹೊಂದುವರು. ಷೇರು ಪೇಟೆಯಲ್ಲಿ ಹಣ ಹೂಡಲು ಸೂಕ್ತ ಸಮಯ.

ಪದಬಂಧ 5288


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಈ ಸಲ ಸೂಚನೆಯನ್ನು ಹೀಗೆ ಕೊಡಿ! (3)
3. ಹಕ್ಕಿ ಪ್ರಾಣಿಗಳನ್ನು ಇಡುವ ಗೂಡು (3)
6. ರೀತಿಯೊಡನೆ ಜೊತೆಗೂಡುವ ಪದ್ಧತಿ (3)
7. ಕಚೇರಿಯ ನೌಕರ ವರ್ಗ (3)
8. ಜಾಳು ಜಾಳಾಗಿರುವ ಬಟ್ಟೆಯ ಬಲೆ (3)
10. ಕವಿತೆಯೊಳಗಿರುವ ನಡೆದ ಅಥವಾ ಕಲ್ಪಿತಸಂಗತಿ (2)
11. ಜೈನರ ದೇವಾಲಯ (3)
13. ನಗರದಲ್ಲಿರುವ ಮನುಷ್ಯ (2)
15. ಈತ ದುಡ್ಡಿಲ್ಲದವನು (3)
16. ಹವಳವನ್ನು ಹೀಗೂ ಹೇಳುವರು (3)
17. ಇದು ಮಣ್ಣಿಗೆ ಸಂಬಂಧಿಸಿದ್ದು (3)
18. ಒನಪು ತೋರಿದಾಗ ಬಂದಿರುವ ಸ್ಮರಣೆ (3)
19. ಬವಣೆ ಪಟ್ಟು ಬೆಳೆದ ಈ ಧಾನ್ಯ ಉಲ್ಟಾ ಕಾಣುತ್ತಿದೆಯಲ್ಲಾ? (3)

ಮೇಲಿಂದ ಕೆಳಕ್ಕೆ

1. ಮಜಾವನ್ನಿಟ್ಟು ಒಪ್ಪಿಸುವಿಕೆ! (5)
2. ಪ್ರಸವಕ್ಕೊಂದು ಪರ್ಯಾಯ ಪದ (3)
3. ದೀವಟಿಗೆ ಇಲ್ಲಿ ಕಾಣುತ್ತಿದೆ (2)
4. ವಿಲಾಸಪ್ರಿಯತೆಯಿದು (4)
5. ಮಂದಿ ಪ್ರವೇಶಿಸಿರುವ ದೇವಾಲಯ (3)
9. ಬರವಿದ್ದಾಗ ನೋಡಿದ ಆಕಾಶ (3)
10. ಕರುವಿನಲ್ಲಿರುವ ಧಾನ್ಯದ ತೆನೆ (3)
12. ತುರಗದ ಮೊಗವಿದು (5)
13. ಹಜಾರವನ್ನು ಹೀಗೂ ಕರೆವರು (4)
14. ನಮ್ಮ ರಾಷ್ಟ್ರ ಪಕ್ಷಿ (3)
15. ಬಣವೆ ಹಾಕುವಾಗ ಪಟ್ಟಿರುವ ತೊಂದರೆ (3)
17. ಚಿಕ್ಕ ಮಗುವನ್ನು ಹೀಗೂ ಕರೆಯುತ್ತಾರೆ (2)



5287ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಭಿಮಾನ 3.ಕಿಡಿಗೇಡಿ 5.ನರ್ತಕಿ 6.ತವಕ 8.ಸಂಕರ 9.ವಿಯೋಗ 10.ಕಲಹ 12.ಕುಣಿಕೆ 14.ಕಳೆಬರ 15.ರುಷುವತ್ತು

ಮೇಲಿಂದ ಕೆಳಕ್ಕೆ: 1.ಅವಿರತ 2.ನಯನ 3.ಕಿಟಕಿ 4.ಡಿಹೇಣರ 7.ಕರಗ 8.ಸಂದೂಕ 9.ವಿದೂಷಕ 11.ಹಕೀಕತ್ತು 12.ಕುಠಾರ 13.ಕೆಸರು

ಸುಡೊಕು 5674

1		3	5		6		4	
				4			8	
7		4	9			5		3
9	1							8
		7		9			1	
	2							4
8		1		5			6	
	5		1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5673 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಸಂಕ್ಷಿಪ್ತ ಸುದ್ದಿ

ಯುಜಿಸಿ– ನೆಟ್ ಫಲಿತಾಂಶ ಪ್ರಕಟ

ನವದೆಹಲಿ: ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ವಿಶ್ವವಿದ್ಯಾಲಯಗಳ ಹಾಗೂ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಕ್ಕೆ ಕಳೆದ ಫೆಬ್ರುವರಿಯಲ್ಲಿ ನಡೆಸಿದ್ದ ಪರೀಕ್ಷೆಯ (ಯುಜಿಸಿ– ನೆಟ್) ಫಲಿತಾಂಶವನ್ನು ಗುರುವಾರ ಪ್ರಕಟಿಸಲಾಗಿದೆ.

ಎನ್‌ಟಿಎ ವೆಬ್‌ಸೈಟ್ ugcnet.nta.nic.in ನಲ್ಲಿ ಫಲಿತಾಂಶ ನೋಡಬಹುದು.

2ಜಿ: ಪ್ರತಿಕ್ರಿಯೆ ದಾಖಲಿಸಲು ಕೋರ್ಟ್ ಸೂಚನೆ

ನವದೆಹಲಿ (ಪಿಟಿಐ): 2ಜಿ ತರಂಗಾಂತರ ಹಂಚಿಕೆ ಹಗರಣದ ಆರೋಪಿಗಳನ್ನು ದೋಷಮುಕ್ತಗೊಳಿಸಿದ್ದನ್ನು ಪ್ರಶ್ನಿಸಿದ್ದ ಅರ್ಜಿಗಳಿಗೆ ಸಂಬಂಧಿಸಿ ಪ್ರತಿಕ್ರಿಯಿಸಲು ಸಿಬಿಐ, ಇ.ಡಿ ಹಾಗೂ ಮಾಜಿ ಸಚಿವ ಎ.ರಾಜಾ ಅವರಿಗೆ ದೆಹಲಿ ಹೈಕೋರ್ಟ್ ಆದೇಶಿಸಿದೆ.

ಸಂಬಂಧಿತ ಅರ್ಜಿದಾರರು ಗರಿಷ್ಠ ಐದು ಪುಟಗಳಿಗೆ ಮೀರದಂತೆ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ನ್ಯಾಯಮೂರ್ತಿ ದಿನೇಶ್ ಕುಮಾರ್ ಶರ್ಮಾ ಅವರು ಸೂಚಿಸಿದರು. ಸಿಬಿಐ ಪರ ವಕೀಲರು, ಆದಷ್ಟು ಬೇಗನೆ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಬೇಕು ಎಂದು ಮನವಿ ಮಾಡಿದರು.

ಪಾಕ್ ಡ್ರೋನ್ ಉರುಳಿಸಿದ ಸೇನೆ

ರಾಜೋರಿ/ಜಮ್ಮು (ಪಿಟಿಐ): ಗಡಿ ನಿಯಂತ್ರಣ ರೇಖೆಯನ್ನು ದಾಟಿಬಂದಿದ್ದ ಪಾಕಿಸ್ತಾನದ ಡ್ರೋನ್ ಅನ್ನು ರಾಜೋರಿ ಜಿಲ್ಲೆಯಲ್ಲಿ ಸೇನಾಪಡೆ ಹೊಡೆದುರುಳಿಸಿದೆ. ಅಲ್ಲದೆ, ಈ ಭಾಗದಲ್ಲಿ ತೀವ್ರ ಶೋಧ ಕಾರ್ಯಾಚರಣೆಯನ್ನೂ ನಡೆಸಲಾಗಿದೆ.

ಎಕೆ–47 ರೈಫಲ್‌ನ ಐದು ಗುಂಡು ಸೇರಿಸುವ ಕೋಶಗಳು, 131 ಗುಂಡುಗಳು, ₹ 2 ಲಕ್ಷ ನಗದು ಹಾಗೂ ಇತರ ವಸ್ತುಗಳು ಡ್ರೋನ್‌ನಲ್ಲಿ ಪತ್ತೆಯಾಗಿವೆ. ಗಡಿಗುಂಟ ಇನ್ನಷ್ಟು ಡ್ರೋನ್‌ಗಳು ಹಾರಾಟ ನಡೆಸಿ, ಶಸ್ತ್ರಾಸ್ತ್ರಗಳು ಹಾಗೂ ಮದ್ದುಗುಂಡುಗಳನ್ನು ತೂರಿಬಿಟ್ಟಿರುವ ಸಾಧ್ಯತೆ ಎಂದೂ ಸಂಶಯ ವ್ಯಕ್ತಪಡಿಸಲಾಗಿದೆ.

ಮಾಲೀಕನಿಂದಲೇ ವ್ಯವಸ್ಥಾಪಕನ ಹತ್ಯೆ

ಷಹಜಹಾನ್‌ಪುರ (ಉತ್ತರ ಪ್ರದೇಶ) (ಪಿಟಿಐ): ಕಳವು ಆರೋಪದ ಹಿನ್ನೆಲೆಯಲ್ಲಿ ಮಾಲೀಕನಿಂದಲೇ ಚಿತ್ರಹಿಂಸೆಗೆ ಗುರಿಯಾದ ಇಲ್ಲಿನ ಖಾಸಗಿ ಸಾರಿಗೆ ಕಂಪನಿಯ ವ್ಯವಸ್ಥಾಪಕರೊಬ್ಬರು ಬುಧವಾರ ಮೃತಪಟ್ಟಿದ್ದಾರೆ.

ಶಿವಂ ಜೊಹ್ರಿ(33) ಮೃತಪಟ್ಟವರು. ಈತ ಸೂರಿ ಟ್ರಾನ್ಸ್‌ಪೋರ್ಟ್ ಕಂಪನಿಯಲ್ಲಿ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಕಂಪನಿಯಲ್ಲಿ ಶಿವಂ ಕಳವು ಮಾಡಿದ್ದಾರೆ ಎಂದು ಮಾಲೀಕ ನೀರಜ್ ಗುಪ್ತ ಆರೋಪಿಸಿದ್ದರು.

ವ್ಯವಸ್ಥಾಪಕನನ್ನು ಅರೆನಗ್ನ ಸ್ಥಿತಿಯಲ್ಲಿ ಕಂಬಕ್ಕೆ ಕಟ್ಟಿ ಹಾಕಿ ವಿದ್ಯುತ್ ಶಾಕ್ ನೀಡಿ ಆತನ ಬೆಲ್ಟ್‌ನಿಂದಲೇ ಥಳಿಸುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ತೀವ್ರ ಅಸ್ವಸ್ಥಗೊಂಡ ಅವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಝಾನ್ಸಿಯಲ್ಲಿ ಉತ್ತರ ಪ್ರದೇಶ ಪೊಲೀಸರ ಕಾರ್ಯಾಚರಣೆ ವೇಳೆ ಎನ್‌ಕೌಂಟರ್

ಅತೀಕ್ ಪುತ್ರ ಅಸಾದ್, ಸಹಚರನ ಹತ್ಯೆ

ಲಖನೌ/ಝಾನ್ಸಿ (ಪಿಟಿಐ): 'ಉಮೇಶ್ ಪಾಲ್ ಕೊಲೆ ಪ್ರಕರಣದಲ್ಲಿ ಬೇಕಾಗಿದ್ದ, ಪಾತಕಿ–ಮಾಜಿ ಸಂಸದ ಅತೀಕ್ ಅಹ್ಮದ್ ಪುತ್ರ ಅಸಾದ್, ಆತನ ಸಹಚರ ಗುಲಾಮ್‌ನನ್ನು ಉತ್ತರ ಪ್ರದೇಶ ಪೊಲೀಸರೊಂದಿಗೆ ಝಾನ್ಸಿಯಲ್ಲಿ ಗುರುವಾರ ನಡೆದ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.


ಅಸಾದ್

'ಅಸಾದ್ ಹಾಗೂ ಗುಲಾಮ್ ಅವರ ಬಗ್ಗೆ ಸುಳಿವು ಕೊಟ್ಟವರಿಗೆ ತಲಾ ₹ 5 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಉತ್ತರ ಪ್ರದೇಶ ಎಸ್‌ಟಿಎಫ್ ತಂಡ ನಡೆಸಿದ ಎನ್‌ಕೌಂಟರ್‌ನಲ್ಲಿ ಈ ಇಬ್ಬರನ್ನು ಹತ್ಯೆ ಮಾಡಲಾಗಿದೆ' ಎಂದು ವಿಶೇಷ ಡಿಜಿ (ಕಾನೂನು–ಸುವ್ಯವಸ್ಥೆ) ಪ್ರಶಾಂತ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಡಿಎಸ್ಪಿಗಳಾದ ನವೇಂದು ಕುಮಾರ್ ಹಾಗೂ ವಿಮಲ್ ಕುಮಾರ್ ಈ ವಿಶೇಷ ಕಾರ್ಯ ಪಡೆ (ಎಸ್‌ಟಿಎಫ್) ನೇತೃತ್ವ ವಹಿಸಿದ್ದರು' ಎಂದರು.

'ಆರೋಪಿಗಳಿಂದ ಅತ್ಯಾಧುನಿಕ, ವಿದೇಶಿ ಆಯುಧಗಳನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಬಳಿಕ ಮತ್ತಷ್ಟು ವಿವರಗಳು ಲಭ್ಯವಾಗಲಿವೆ' ಎಂದು ಅವರು ಹೇಳಿದರು.

ಬೈಕ್‌ನಲ್ಲಿ ಗುರುವಾರ ಪರಾರಿಯಾಗಲು ಯತ್ನಿಸುತ್ತಿದ್ದ ಇಬ್ಬರನ್ನು ಎಸ್‌ಟಿಎಫ್ ತಂಡ ತಡೆಯಿತು. ಆಗ ಅವರು ಪೊಲೀಸರತ್ತ ಗುಂಡು ಹಾರಿಸಿದರು. ಇದಕ್ಕೆ ಪ್ರತಿಯಾಗಿ ನಡೆಸಿದ ಗುಂಡಿನ ದಾಳಿಯಲ್ಲಿ ಇಬ್ಬರನ್ನು ಹೊಡೆದುರುಳಿಸಲಾಯಿತು ಎಂದರು.

ಕೊಲೆ ಪ್ರಕರಣವೊಂದಕ್ಕೆ ಸಂಬಂಧಿಸಿ, ಅತೀಕ್ ಅಹ್ಮದ್‌ನನ್ನು ಪ್ರಯಾಗ್‌ರಾಜ್ ಕೋರ್ಟ್‌ನಲ್ಲಿ ಹಾಜರುಪಡಿಸಿದ ದಿನವೇ ಈ ಎನ್‌ಕೌಂಟರ್ ನಡೆದಿದೆ. ವಿಚಾರಣೆ ನಂತರ, ಅತೀಕ್ ಅಹ್ಮದ್‌ಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಲಾಯಿತು.

ಎನ್‌ಕೌಂಟರ್ ನಡೆದಿತ್ತು ಎನ್ನಲಾದ ಸ್ಥಳದಲ್ಲಿ ಬೈಕ್‌ವೊಂದರ ಪಕ್ಕದಲ್ಲಿ ಅಸಾದ್ ಹಾಗೂ ಗುಲಾಮ್ ಮೃತದೇಹಗಳು ಬಿದ್ದಿದ್ದ ದೃಶ್ಯಗಳು ವಿಡಿಯೊದಲ್ಲಿ ಸೆರೆಯಾಗಿವೆ. ನಂತರ, ಆಂಬುಲೆನ್ಸ್‌ನಲ್ಲಿ ಶವಗಳನ್ನು ಸಾಗಿಸಲಾಯಿತು ಎಂದು ಮೂಲಗಳು ಹೇಳಿವೆ.

ಬಿಎಸ್‌ಪಿಯ ಮಾಜಿ ಶಾಸಕ ರಾಜು ಪಾಲ್ ಅವರ ಹತ್ಯೆ ಪ್ರಕರಣದ ಪ್ರಮುಖ ಸಾಕ್ಷಿ ಉಮೇಶ್ ಪಾಲ್ ಕೊಲೆ ಪ್ರಕರಣದಲ್ಲಿ ಈ ಇಬ್ಬರು ಪೊಲೀಸರಿಗೆ ಬೇಕಾಗಿದ್ದರು.

ಫೆಬ್ರುವರಿ 24ರಂದು ಉಮೇಶ್ ಪಾಲ್ ಹತ್ಯೆಯಾದ ನಂತರ ಅಸಾದ್ ಹಾಗೂ ಗುಲಾಮ್ ತಲೆಮರೆಸಿಕೊಂಡಿದ್ದರು. ಇಬ್ಬರ ಪತ್ತೆಗಾಗಿ ಎಸ್‌ಟಿಎಫ್‌ನ ಹಲವು ತಂಡಗಳನ್ನು ರಚಿಸಲಾಗಿತ್ತು.

ಅಭಿನಂದನೆ ಸಲ್ಲಿಸಿದ ಉಪಮುಖ್ಯಮಂತ್ರಿ: ಉಮೇಶ್ ಪಾಲ್ ಕೊಲೆ ಪ್ರಕರಣದ ಇಬ್ಬರು ಆರೋಪಿಗಳನ್ನು ಎನ್‌ಕೌಂಟರ್‌ನಲ್ಲಿ ಹತ್ಯೆಮಾಡಿದ ಉತ್ತರ ಪ್ರದೇಶ ಪೊಲೀಸರು ಹಾಗೂ ಎಸ್‌ಟಿಎಫ್ ಸಿಬ್ಬಂದಿಗೆ ಉಪಮುಖ್ಯಮಂತ್ರಿ ಕೇಶವಪ್ರಸಾದ್ ಮೌರ್ಯ ಅಭಿನಂದನೆ ಸಲ್ಲಿಸಿದ್ದಾರೆ. 'ನೀವು ಯಾವುದೇ ಅಪರಾಧ ಎಸಗಿರದಿದ್ದಲ್ಲಿ ಯಾರೂ ನಿಮ್ಮನ್ನು ಮುಟ್ಟುವುದಿಲ್ಲ. ಅಪರಾಧ ಎಸಗಿದವರನ್ನು ಬಿಡುವುದಿಲ್ಲ' ಎಂದು ಅವರು ಪಿಟಿಐಗೆ ಪ್ರತಿಕ್ರಿಯಿಸಿದ್ದಾರೆ.

ಅತೀಕ್ ಅಹ್ಮದ್ ಕೂಡ 2005ರಲ್ಲಿ ನಡೆದ ರಾಜು ಪಾಲ್ ಹತ್ಯೆ ಪ್ರಕರಣದ ಆರೋಪಿ.

ಎನ್‌ಕೌಂಟರ್: ಸಮಗ್ರ ತನಿಖೆಗೆ ಎಸ್‌ಪಿ, ಬಿಎಸ್‌ಪಿ ಆಗ್ರಹ

ಪಾತಕಿ– ಮಾಜಿ ಸಂಸದ ಅತೀಕ್ ಅಹ್ಮದ್ ಪುತ್ರ ಅಸಾದ್ ಸಾವಿನ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಸಮಾಜವಾದಿ ಪಕ್ಷ (ಎಸ್‌ಪಿ) ಹಾಗೂ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಗುರುವಾರ ಆಗ್ರಹಿಸಿವೆ.

ಉತ್ತರ ಪ್ರದೇಶ ಪೊಲೀಸರು ನಡೆಸಿದ ಈ ಕಾರ್ಯಾಚರಣೆ ನಕಲಿ ಎನ್‌ಕೌಂಟರ್ ಎಂದೂ ಈ ಪಕ್ಷಗಳು ಟೀಕಿಸಿವೆ.

'ರಾಜ್ಯದ ಜ್ವಲಂತ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ಸಲುವಾಗಿ ಬಿಜೆಪಿ ನೇತೃತ್ವದ ಸರ್ಕಾರ ನಕಲಿ ಎನ್‌ಕೌಂಟರ್‌ಗಳನ್ನು ನಡೆಸುತ್ತಿದೆ' ಎಂದು ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಆರೋಪಿಸಿದ್ದಾರೆ.

'ಬಿಜೆಪಿಗೆ ನ್ಯಾಯಾಂಗ ವ್ಯವಸ್ಥೆ ಮೇಲೆ ನಂಬಿಕೆ ಇಲ್ಲ. ಅದು ಭ್ರಾತೃತ್ವದ ವಿರೋಧಿಯೂ ಆಗಿದೆ. ಯಾವುದು ಸರಿ, ಯಾವುದು ತಪ್ಪು ಎಂದು ನಿರ್ಣಯಿಸುವ ಅಧಿಕಾರ ಸರ್ಕಾರಕ್ಕೆ ಇಲ್ಲ' ಎಂದು ಯಾದವ್ ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಎನ್‌ಕೌಂಟರ್ ಕುರಿತು ಪ್ರತಿಕ್ರಿಯಿಸಿರುವ ಬಿಎಸ್‌ಪಿ ನಾಯಕಿ ಮಾಯಾವತಿ, 'ವಿಕಾಸ್ ದುಬೆಯನ್ನು ಹೊಡೆದುರುಳಿಸಿದ ರೀತಿಯಂತೆಯೇ ಈ ಘಟನೆಯೂ ನಡೆದಿದೆ ಎಂದು ಜನರು ಆತಂಕ ವ್ಯಕ್ತಪಡಿಸಿದ್ದಾರೆ. ಸತ್ಯಸಂಗತಿ ಹೊರಬರಬೇಕಾದರೆ ಉನ್ನತ ಮಟ್ಟದ ತನಿಖೆ ಅಗತ್ಯ' ಎಂದು ಟ್ವೀಟ್ ಮಾಡಿದ್ದಾರೆ.


ಎನ್‌ಕೌಂಟರ್ ನಡೆದ ಸ್ಥಳದಲ್ಲಿ ಪೊಲೀಸರು ಅಸಾದ್ ಸಂಚರಿಸುತ್ತಿದ್ದ ದ್ವಿಚಕ್ರ ವಾಹನದ ಪರಿಶೀಲನೆ ನಡೆಸಿದರು –ಪಿಟಿಐ ಚಿತ್ರ

ಅತೀಕ್‌ಗೆ ನ್ಯಾಯಾಂಗ ಬಂಧನ

ಪ್ರಯಾಗರಾಜ್, ಉತ್ತರ ಪ್ರದೇಶ (ಪಿಟಿಐ): ಉಮೇಶ್ ಪಾಲ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಪಾತಕಿ ಹಾಗೂ ಮಾಜಿ ಸಂಸದ ಅತೀಕ್ ಅಹ್ಮದ್, ಆತನ ಸಹೋದರ ಅಶ್ರಫ್ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಇಲ್ಲಿನ ನ್ಯಾಯಾಲಯ ಗುರುವಾರ ಆದೇಶಿಸಿದೆ.

ಅಲ್ಲದೇ, ಇಬ್ಬರು ಆರೋಪಿಗಳನ್ನು ಐದು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳಲು ಮುಖ್ಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ದಿನೇಶ್ ಗೌತಮ್ ಅನುಮತಿ ನೀಡಿದರು.

'ಅಹ್ಮದ್ ಹಾಗೂ ಅಶ್ರಫ್ ಅಲಿಯಾಸ್ ಖಾಲಿದ್ ಅಜಿಮ್ ಅವರನ್ನು ಏಪ್ರಿಲ್ 26ರ ವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಉಮೇಶ್ ಪಾಲ್ ಪತ್ನಿ ಜಯಾ ಅವರ ವಕೀಲ ವಿಕ್ರಮ್ ಸಿಂಗ್ ಸುದ್ದಿಗಾರರಿಗೆ ತಿಳಿಸಿದರು.

'ವಾದ–ಪ್ರತಿವಾದ ಆಲಿಸಿದ ಕೋರ್ಟ್, ಪೊಲೀಸರ ಮನವಿಯಂತೆ ಆರೋಪಿಗಳನ್ನು ಏ.17ರ ವರೆಗೆ ಪೊಲೀಸ್ ಕಸ್ಟಡಿಗೆ ನೀಡಲು ಒಪ್ಪಿಗೆ ನೀಡಿತು. ಪೊಲೀಸ್ ಕಸ್ಟಡಿ ಅವಧಿ ಅಂತ್ಯಗೊಂಡ ಬಳಿಕ ಅಹ್ಮದ್‌ನನ್ನು ಸಬರ್‌ಮತಿ ಜೈಲಿಗೆ ಹಾಗೂ ಅಶ್ರಫ್‌ನನ್ನು ಬರೇಲಿ ಜೈಲಿಗೆ ಕಳುಹಿಸಲಾಗುತ್ತದೆ' ಎಂದು ವಕೀಲ ಸಿಂಗ್ ತಿಳಿಸಿದರು.

ಸುದ್ದಿ 2 ನಿಮಿಷ

ಬೇಷರತ್ ಕ್ಷಮೆಯಾಚಿಸಲು ಲಲಿತ್ ಮೋದಿಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ನ್ಯಾಯಾಂಗವನ್ನು ನಿಂದಿಸುವಂಥ ಹೇಳಿಕೆಯನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ ಐಪಿಎಲ್ ಕ್ರಿಕೆಟ್ ಟೂರ್ನಿಯ ಮಾಜಿ ಅಧ್ಯಕ್ಷ ಲಲಿತ್ ಮೋದಿ ಅವರಿಗೆ ಬೇಷರತ್ ಕ್ಷಮೆಯಾಚಿಸುವಂತೆ ಸುಪ್ರೀಂ ಕೋರ್ಟ್ ಗುರುವಾರ ಸೂಚಿಸಿದೆ.

ಲಲಿತ್ ಅವರು ಮಾರ್ಚ್ 30ರಂದು ನ್ಯಾಯಾಂಗದ ಘನತೆಗೆ ಧಕ್ಕೆ ತರುವಂತೆ ಟ್ವೀಟ್ ಮಾಡಿದ್ದರು. ಅದನ್ನು ಪ್ರಶ್ನಿಸಿ ಹಿರಿಯ ವಕೀಲ ಸಿ.ಯು. ಸಿಂಗ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಸಿ.ಟಿ. ರವಿಕುಮಾರ್ ಅವರಿದ್ದ ಪೀಠವು, ಸಾಮಾಜಿಕ ಜಾಲತಾಣಗಳು ಮತ್ತು ರಾಷ್ಟ್ರ ಮಟ್ಟದ ಸುದ್ದಿಪತ್ರಿಕೆಗಳಲ್ಲಿ ಕ್ಷಮೆ ಕೋರುವಂತೆ ಅವರಿಗೆ ನಿರ್ದೇಶಿಸಿತು.

'ಲಲಿತ್ ಸಲ್ಲಿಸಿರುವ ಪ್ರಮಾಣಪತ್ರದ ಕುರಿತು ತಮಗೆ ತೃಪ್ತಿಯಿಲ್ಲ. ಅವರು ನೀಡಿರುವ ಸ್ಪಷ್ಟೀಕರಣವೂ ನ್ಯಾಯಾಂಗದ ಘನತೆಗೆ ಚ್ಯುತಿ ತರುವಂತಿದೆ' ಎಂದು ಕೋರ್ಟ್ ಅಭಿಪ್ರಾಯಪಟ್ಟಿತು.

ಕ್ಷಮೆ ಕೋರಿ ಪುನಃ ಅಫಿಡವಿಟ್ ಸಲ್ಲಿಸುವಂತೆ ಮತ್ತು ಭವಿಷ್ಯದಲ್ಲಿ ಭಾರತೀಯ ನ್ಯಾಯಾಂಗದ ಘನತೆಗೆ ಚ್ಯುತಿ ತರುವಂತಹ ಹೇಳಿಕೆಗಳನ್ನು ನೀಡುವುದಿಲ್ಲ ಎಂದು ಅದರಲ್ಲಿ ನಮೂದಿಸುವಂತೆ ಸೂಚಿಸಿತು.

ಪ್ರಕರಣದ ಮುಂದಿನ ವಿಚಾರಣೆಯನ್ನು ಏಪ್ರಿಲ್ 24ಕ್ಕೆ ಕೋರ್ಟ್ ನಿಗದಿಪಡಿಸಿತು.



ಬಿಬಿಸಿ ಇಂಡಿಯಾ ವಿರುದ್ಧ ಪ್ರಕರಣ ದಾಖಲಿಸಿದ ಇ.ಡಿ

ನವದೆಹಲಿ(ಪಿಟಿಐ): ವಿದೇಶಿ ವಿನಿಮಯದ ಕಾಲಕ್ಕೆ ನಿಯಮ ಉಲ್ಲಂಘನೆ ಮಾಡಿದ ಆರೋಪದ ಮೇಲೆ ಬಿಬಿಸಿ ಇಂಡಿಯಾ ಸುದ್ದಿವಾಹಿನಿ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಎಫ್‌ಇಎಂಎ) ಅಡಿ ಪ್ರಕರಣವನ್ನು ದಾಖಲಿಸಿಕೊಂಡಿದೆ.

ಸಂಸ್ಥೆಯ ಉಪ ವ್ಯವಸ್ಥಾಪಕ ಸಂಪಾದಕರು ಜಾರಿ ನಿರ್ದೇಶನಾಲಯದ ಮುಂದೆ ಹಾಜರಾಗಿ, ಹೇಳಿಕೆ ದಾಖಲಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಾಖಲೆಗಳನ್ನು ಸಲ್ಲಿಸುವ ಜತೆಗೆ ಹೇಳಿಕೆಗಳನ್ನೂ ದಾಖಲಿಸಲು ಬಿಬಿಸಿಯ ಕೆಲ ಅಧಿಕಾರಿಗಳಿಗೆ ಇ.ಡಿ ಸೂಚನೆ ನೀಡಿತ್ತು. ವಿದೇಶಿ ನೇರ ಹೂಡಿಕೆಗೆ (ಎಫ್‌ಡಿಐ) ಸಂಬಂಧಿಸಿದಂತೆ ಈ ಸಂಸ್ಥೆಯಿಂದ ನಡೆದಿದೆ ಎನ್ನಲಾದ ಉಲ್ಲಂಘನೆಗಳ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಸಂಸ್ಥೆಯ ಆದಾಯ ಮತ್ತು ಲಾಭಕ್ಕೂ, ಅದು ಭಾರತದಲ್ಲಿ ನಡೆಸುತ್ತಿರುವ ವ್ಯವಹಾರದ ಪ್ರಮಾಣಕ್ಕೂ ತಾಳೆಯಾಗುತ್ತಿಲ್ಲ. ಸಂಸ್ಥೆಯು ತನ್ನ ವಿದೇಶಿ ಕಂಪನಿಗಳಿಗೆ ಮಾಡಿದ್ದ ಕೆಲ ಪಾವತಿಗಳಿಗೆ ಸಂಬಂಧಿಸಿ ತೆರಿಗೆ ಸಂದಾಯ ಮಾಡದಿರುವುದು ಪರಿಶೀಲನೆ ವೇಳೆ ಪತ್ತೆಯಾಗಿತ್ತು ಎಂದು ಆದಾಯ ತೆರಿಗೆ ಇಲಾಖೆ ಹೇಳಿತ್ತು.

ರಾಜಸ್ಥಾನ: ಕಾದು ನೋಡಲು ಹೈಕಮಾಂಡ್ ತೀರ್ಮಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಹೈಕಮಾಂಡ್‌ನ ಸೂಚನೆ ನಂತರವೂ ಮಾಜಿ ಉಪಮುಖ್ಯಮಂತ್ರಿ ಸಚಿನ್ ಪೈಲಟ್ ನಿರಶನ ಕೈಗೊಂಡಿದ್ದರಿಂದ ರಾಜಸ್ಥಾನದಲ್ಲಿ ಮೂಡಿರುವ ಬಿಕ್ಕಟ್ಟು ಶಮನಕ್ಕೆ ಕಾಂಗ್ರೆಸ್‌ನ ಹೈಕಮಾಂಡ್ ತರಾತುರಿ ತೋರುತ್ತಿಲ್ಲ. ಈ ವಿಷಯದಲ್ಲಿ ಎಚ್ಚರಿಕೆಯ ಹೆಜ್ಜೆ ಇಡಲು ತೀರ್ಮಾನಿಸಿದೆ.


ಸಚಿನ್ ಪೈಲಟ್

ಸಚಿನ್ ಪೈಲಟ್ ಅವರು ತಮ್ಮದೇ ಪಕ್ಷದ, ಮುಖ್ಯಮಂತ್ರಿ ಅಶೋಕ್ ಗೆಹಲೋತ್ ನೇತೃತ್ವದ ಸರ್ಕಾರದ ವಿರುದ್ಧ ನಿರಶನ ನಡೆಸಿದ್ದರು.

ಈಚಿನ ಬೆಳವಣಿಗೆ ಕುರಿತು ಪಕ್ಷದ ರಾಜ್ಯ ಉಸ್ತುವಾರಿ ಸುಖ್ವಿಂದರ್ ಸಿಂಗ್ ರಾಂಧವ ಅವರು ಪಕ್ಷದ ಹಿರಿಯ ನಾಯಕರೊಂದಿಗೆ ಸರಣಿ ಸಭೆ ನಡೆಸಿದರು. ಪೈಲಟ್ ನಿರಶನ ಮತ್ತು ಗೆಹಲೋತ್ ಸುದ್ದಿಗೋಷ್ಠಿ ನಂತರದ ರಾಜ್ಯದಲ್ಲಿನ ಬೆಳವಣಿಗೆಗಳನ್ನು ಕುರಿತು ಮಾಹಿತಿ ಪಡೆದರು.

ಮುಖ್ಯಾಂಶಗಳು

- ಹಿರಿಯ ನಾಯಕರ ಜೊತೆ ಎಐಸಿಸಿ ಉಸ್ತುವಾರಿ ಸುಖ್ವಿಂದರ್ ಸಿಂಗ್ ಸಭೆ
- ಸಚಿನ್ ವಿರುದ್ಧ ಕ್ರಮ ಕೈಗೊಳ್ಳಲು ಮೀನಮೇಷ

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತು ರಾಂಧವ ಮೊದಲು ಭೇಟಿಯಾಗಿ ಚರ್ಚಿಸಿದರು. ಬಳಿಕ ಈ ಇಬ್ಬರೂ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿದ್ದು, ಪರಿಸ್ಥಿತಿಯನ್ನು ವಿವರಿಸಿದರು.

ರಾಂಧವ ಕಳೆದ ಎರಡು ದಿನದಲ್ಲಿ 2ನೇ ಬಾರಿಗೆ ಖರ್ಗೆ ಅವರನ್ನು ಭೇಟಿಯಾಗಿದ್ದಾರೆ. ಸಚಿನ್ ಈ ಹಂತದಲ್ಲಿ ಕಾಂಗ್ರೆಸ್ ಬಿಡುವುದನ್ನು ಬಯಸದ ಹಾಗೂ ಅವರ ಕಾರ್ಯಶೈಲಿ ನೋಡಿಯೂ ಸುಮ್ಮನಿರಲಾಗದ ಸ್ಥಿತಿಯಲ್ಲಿ ಕಾಂಗ್ರೆಸ್‌ನ ಹೈಕಮಾಂಡ್ ಇದೆ.

ಏ.11ರಂದು ನಿರಶನದ ಬಳಿಕ ಪೈಲಟ್ ದೆಹಲಿಗೆ ತೆರಳಿದ್ದರು. ಆರು–ಏಳು ತಿಂಗಳಲ್ಲಿ ರಾಜ್ಯದಲ್ಲಿ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಪಕ್ಷದ ಹೈಕಮಾಂಡ್ ಎಚ್ಚರಿಕೆ ಹೆಜ್ಜೆ ಇಡುತ್ತಿದೆ. ನಿರಶನ ಹಿನ್ನೆಲೆಯಲ್ಲಿ ಪೈಲಟ್‌ಗೆ ಎಚ್ಚರಿಕೆ ನೀಡಿದ್ದರೂ, ಶಿಸ್ತು-ಕ್ರಮಕ್ಕೆ ಪಕ್ಷ ಮುಂದಾಗಿಲ್ಲ.

ಕಾಂಗ್ರೆಸ್ ಪಕ್ಷ ನಿರಶನವನ್ನು ಪಕ್ಷ ವಿರೋಧಿ ಚಟುವಟಿಕೆ ಎಂದು ಹೇಳಿರುವುದಕ್ಕೆ ಪೈಲಟ್ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಇನ್ನೊಂದೆಡೆ, ರಾಂಧವ ಅವರು ನಿರಶನ ಕೈಬಿಡಲು ತಿಳಿಸಿಲ್ಲ, ಕೇವಲ ದೆಹಲಿಗೆ ಮಾತುಕತೆಗೆ ಬರುವಂತೆ ತಿಳಿಸಿದ್ದಾರೆ ಎಂದು ಪ್ರತಿಕ್ರಿಯಿಸಿದ್ದಾರೆ.

ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಈ ನಿರಶನ ಕುರಿತು ಸಾರ್ವಜನಿಕವಾಗಿ ಹೇಳಿಕೆ ನೀಡಿಲ್ಲ. ಈ ಹಿಂದೆ ವಸುಂಧರಾ ರಾಜೆ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವ ಭ್ರಷ್ಟಾಚಾರ ಪ್ರಕರಣಗಳ ತನಿಖೆಗೆ ಆಗ್ರಹಿಸಿ ಸಚಿನ್ ಪೈಲಟ್ ನಿರಶನ ನಡೆಸಿದ್ದರು. ಹೀಗಾಗಿ ಸಚಿನ್ ವಿರುದ್ಧ ಕ್ರಮ ಜರುಗಿಸಲು ಗೆಹಲೋತ್ ಹೈಕಮಾಂಡ್‌ಗೆ ಕೋರಿದ್ದಾರೆ ಎನ್ನಲಾಗಿದೆ.

ಇಪಿಎಫ್‌ಗೆ ಹೆಚ್ಚುವರಿ ಹಣ ಕಡಿತ ಆನ್‌ಲೈನ್‌ನಲ್ಲಿ ಅವಕಾಶ

ಕೊಚ್ಚಿ (ಪಿಟಿಐ): ಪೂರ್ವ ಸಮ್ಮತಿಯಾಗಿ ಯಾವುದೇ ಪೂರಕ ದಾಖಲೆಯನ್ನು ಸಲ್ಲಿಸದೇ ಉದ್ಯೋಗಿಯು, ಆನ್‌ಲೈನ್ ಮೂಲಕ ಇಪಿಎಫ್ ಖಾತೆಗೆ ಹೆಚ್ಚುವರಿ ಮೊತ್ತ ಕಡಿತದ ಆಯ್ಕೆಗೆ ಅವಕಾಶ ಕಲ್ಪಿಸಬೇಕು ಎಂದು ಕೇರಳ ಹೈಕೋರ್ಟ್, ಇಪಿಎಫ್‌ಒಗೆ ಆದೇಶಿಸಿದೆ.

ನ್ಯಾಯಮೂರ್ತಿ ಜಿಯಾದ್ ರೆಹಮಾನ್ ಅವರು ನೌಕರರ ಭವಿಷ್ಯನಿಧಿ ಸಂಘಟನೆಗೆ (ಇಪಿಎಫ್‌ಒ) ಈ ಸಂಬಂಧ ಬುಧವಾರ ಮಧ್ಯಂತರ ಆದೇಶ ನೀಡಿದರು. ದಾಖಲೆ ಸಲ್ಲಿಸಲು ತೊಡಕಾಗುತ್ತಿದೆ ಎಂದು ನೌಕರರು, ಪಿಂಚಣಿದಾರರು ಅರ್ಜಿ ಸಲ್ಲಿಸಿದ್ದರು.


ಪ್ರಸ್ತುತ 1952ರ ಇಪಿಎಫ್ ಯೋಜನೆಯನ್ವಯ ಪೂರ್ವಾನುಮತಿ ದಾಖಲೆ ಸಲ್ಲಿಸುವುದು ಕಡ್ಡಾಯವಾಗಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಪೂರ್ವಾನುಮತಿ ದಾಖಲೆ ಅಪ್‌ಲೋಡ್ ಮಾಡಲು ಆಗುತ್ತಿಲ್ಲ. ಇದನ್ನು ಭರ್ತಿ ಮಾಡದೇ ಅರ್ಜಿ ಯಶಸ್ವಿಯಾಗಿ ಸ್ವೀಕೃತಿಯಾಗುತ್ತಿಲ್ಲ. ನಿಗದಿತ ಗಡುವಾದ ಮೇ 3ರ ಒಳಗೆ ಅರ್ಜಿ ಸಲ್ಲಿಸದಿದ್ದಲ್ಲಿ ಯೋಜನೆಯ ಲಾಭದಿಂದ ವಂಚಿತರಾಗಬೇಕಾಗುತ್ತದೆ ಎಂದು ಅರ್ಜಿದಾರರು ಆತಂಕ ವ್ಯಕ್ತಪಡಿಸಿದ್ದರು. ಮೇ 3ರ ಗಡುವನ್ನು ಸುಪ್ರೀಂ ಕೋರ್ಟ್ ನಿಗದಿಪಡಿಸಿದೆ.

ಆದರೆ, ಈ ಕೋರಿಕೆಯನ್ನು ವಿರೋಧಿಸಿದ ಇಪಿಎಫ್‌ಒ, ಸೌಲಭ್ಯವನ್ನು ಪಡೆಯಲು ಪೂರ್ವಾನುಮತಿಯ ದಾಖಲೆ ಸಲ್ಲಿಸುವುದು ಮಹತ್ವದ ಅಗತ್ಯವಾಗಿದೆ. ಅರ್ಜಿದಾರರ ಅರ್ಜಿಯನ್ನು ಪರಿಶೀಲಿಸಲು ಇದು ಅಗತ್ಯವೂ ಹೌದು ಎಂದು ಪ್ರತಿಪಾದಿಸಿತು. ಅರ್ಜಿದಾರರ ವಾದದಲ್ಲಿ ಅರ್ಥವಿದೆ ಎಂದು ಪರಿಗಣಿಸಿದ ನ್ಯಾಯಾಲಯ, ಅವರ ಪರವಾಗಿ ಮಧ್ಯಂತರ ಆದೇಶ ನೀಡಿತು.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಕೇಂದ್ರ ಸರ್ಕಾರ ಕಳೆದ ವರ್ಷ ಹಲವು ಮಾರ್ಗಗಳಲ್ಲಿ 'ವಂದೇ ಭಾರತ್' ಸೇವೆ ಆರಂಭಿಸಿತು. ಇದು, ದೇಶದಲ್ಲಿ ರೈಲು ಪ್ರಯಾಣದಲ್ಲಿ ಗಮನಾರ್ಹ ಬದಲಾವಣೆ ತಂದಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಮುಸ್ಲಿಮರ ಮೀಸಲಾತಿ ರದ್ದು ದೋಷಪೂರಿತ ಎಂದ 'ಸುಪ್ರೀಂ'

ಒಂದನೇ ಪುಟದಿಂದ....

ಸರ್ಕಾರದ ಪರವಾಗಿ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಈ ಆದೇಶದ ಆಧಾರದಲ್ಲಿ ಯಾವುದೇ ಪ್ರವೇಶಾತಿ ನೀಡುವುದಿಲ್ಲ ಅಥವಾ ಉದ್ಯೋಗಕ್ಕೆ ನೇಮಕಾತಿ ಮಾಡಿಕೊಳ್ಳುವುದಿಲ್ಲ' ಎಂದು ಸ್ಪಷ್ಟನೆ ನೀಡಿದರು.

ಅರ್ಜಿದಾರರ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲರಾದ ಕಪಿಲ್ ಸಿಬಲ್, ದುಷ್ಯಂತ್ ದವೆ, ರವಿವರ್ಮ ಕುಮಾರ್ ಹಾಗೂ ಗೋಪಾಲ್ ಶಂಕರನಾರಾಯಣನ್, 'ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಧ್ಯಂತರ ವರದಿ ಆಧರಿಸಿ ಈ ನಿರ್ಧಾರ ಕೈಗೊಂಡಿರುವುದರಿಂದ ದೋಷಪೂರಿತವಾಗಿದೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತಿದೆ' ಎಂದು ವಾದ ಮಂಡಿಸಿದರು.

ಆಗ ನ್ಯಾಯಪೀಠ, 'ಸರ್ಕಾರದ ಈ ಒಂದು ನಿರ್ಧಾರದಿಂದ ದೊಡ್ಡ ಪ್ರಮಾಣದ ಜನರು ಮೀಸಲಾತಿಯ ಲಾಭದಿಂದ ವಂಚಿತರಾಗಿದ್ದಾರೆ. ಮೇಲ್ನೋಟಕ್ಕೇ ಈ ಆದೇಶದ ತಳಪಾಯ ಅಸ್ಥಿರವಾಗಿದ್ದು, ಪ್ರಮಾದದಿಂದ ಕೂಡಿದೆ ಎಂಬುದು ಕಂಡುಬರುತ್ತಿದೆ' ಎಂದು ಹೇಳಿತು.

ನಂತರ ಸರ್ಕಾರದ ಆದೇಶಕ್ಕೆ ಮಧ್ಯಂತರ ತಡೆಯಾಜ್ಞೆ ನೀಡಲು ನ್ಯಾಯಪೀಠ ಮುಂದಾಗುತ್ತಿದ್ದಂತೆ ರಾಜ್ಯ ಸರ್ಕಾರ ಹಾಗೂ ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯಗಳ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ, ಅದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ಇವೆಲ್ಲ ಸ್ಪರ್ಧಾತ್ಮಕ ಅಂಶಗಳು. ಇದರಲ್ಲಿ ಯಾವುದೇ ತೊಂದರೆ ಆಗದಿದ್ದರೂ ಆದೇಶಕ್ಕೆ ತಡೆಯಾಜ್ಞೆ ನೀಡುವುದು ಅನುಚಿತವಾಗುತ್ತದೆ' ಎಂದು ರೋಹಟಗಿ ವಾದಿಸಿದರು. ತುಷಾರ್ ಮೆಹ್ತಾ, 'ಒಬಿಸಿ ವರ್ಗಕ್ಕೆ ಸೇರಿರುವ ಮುಸ್ಲಿಮರು ಈಗಾಗಲೇ ಮೀಸಲಾತಿ ಪಡೆಯುತ್ತಿದ್ದಾರೆ. ಮುಸ್ಲಿಮರಿಗೆ ಶೇ 4, ಒಕ್ಕಲಿಗರು ಹಾಗೂ ಲಿಂಗಾಯತರಿಗೆ ತಲಾ ಶೇ 2 ಮೀಸಲಾತಿ ನೀಡುವ ಆದೇಶವನ್ನು ಆಧರಿಸಿ ಬದಲಾಯಿಸಲಾಗದಂತಹ ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ' ಎಂದು ಮತ್ತೊಮ್ಮೆ ಸ್ಪಷ್ಟನೆ ನೀಡಿದರು.

ಅರ್ಜಿದಾರರು, 'ಕರ್ನಾಟಕದಲ್ಲಿ 1921ರಿಂದಲೇ ಮುಸ್ಲಿಮ್ ಸಮುದಾಯವನ್ನು ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದವರು ಎಂದು ಪರಿಗಣಿಸಲಾಗುತ್ತಿದೆ. ಅವರು ಈ ವಲಯದಲ್ಲಿ ಮುಂದುವರಿದವರು ಎಂದು ಸಾಬೀತುಪಡಿಸುವ ಯಾವುದೇ ದತ್ತಾಂಶಗಳು ಲಭ್ಯ ಇಲ್ಲ' ಎಂದರು.

ಪ್ರಕರಣ ಸಂಬಂಧ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿ ಸೋಮವಾರದೊಳಗೆ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಏಪ್ರಿಲ್ 18ಕ್ಕೆ ಮುಂದೂಡಿತು.

ಮುಸ್ಲಿಮರಿಗೆ ಇದ್ದ ಶೇ 4ರಷ್ಟು ಮೀಸಲಾತಿಯನ್ನು ಕಿತ್ತುಕೊಂಡು, ಅದನ್ನು ಲಿಂಗಾಯತರಿಗೆ ಹಾಗೂ ಒಕ್ಕಲಿಗರಿಗೆ ತಲಾ ಶೇ 2ರಷ್ಟು ಹಂಚುವ ನಿರ್ಣಯವನ್ನು ಕರ್ನಾಟಕ ಸರ್ಕಾರ ಸಚಿವ ಸಂಪುಟ ಮಾರ್ಚ್ 27ರಂದು ಮಾಡಿತ್ತು. ಮುಸ್ಲಿಮರನ್ನು ಆರ್ಥಿಕವಾಗಿ ದುರ್ಬಲ ವರ್ಗದ (ಇಡಬ್ಲ್ಯುಎಸ್) ಪಟ್ಟಿಗೆ ಸೇರಿಸುವ ನಿರ್ಧಾರವನ್ನೂ ತೆಗೆದುಕೊಂಡಿತ್ತು.

'2ಬಿಯಲ್ಲಿ ಮುಸ್ಲಿಮರಿದ್ದರು. ಧಾರ್ಮಿಕ ಅಲ್ಪಸಂಖ್ಯಾತರಿಗೆ ಮೀಸಲಾತಿ ನೀಡಲು ಸಂವಿಧಾನದಲ್ಲಿ ಅವಕಾಶ ಇಲ್ಲ. ಅದಕ್ಕಾಗಿ, ಮುಸ್ಲಿಮರನ್ನು ಆರ್ಥಿಕವಾಗಿ ದುರ್ಬಲ ವರ್ಗದ ಪಟ್ಟಿಗೆ ಸೇರಿಸಲಾಗಿದೆ. 2 ಬಿಯಲ್ಲಿ ಶೇ 4ರಷ್ಟಿದ್ದ ಮೀಸಲಾತಿಯನ್ನು ಶೇ 2ರಷ್ಟು ಒಕ್ಕಲಿಗರಿಗೆ, ಶೇ 2ರಷ್ಟನ್ನು ಲಿಂಗಾಯತರಿಗೆ ಹಂಚುವ ತೀರ್ಮಾನ ಮಾಡಲಾಗಿದೆ' ಎಂದು ರಾಜ್ಯ ಸರ್ಕಾರ ತಿಳಿಸಿತ್ತು.

ದೇಶದ ಪ್ರಥಮ ಶಿಕ್ಷಣ ಮಂತ್ರಿ ಉಲ್ಲೇಖವನ್ನೇ ಕೈಬಿಟ್ಟ ಎನ್‌ಸಿಇಆರ್‌ಟಿ


11ನೇ ತರಗತಿ ಪಠ್ಯದಿಂದ 'ಮೌಲಾನಾ'ಗೆ ಕೊಕ್

ನವದೆಹಲಿ (ಪಿಟಿಐ): ದೇಶದ ಪ್ರಥಮ ಶಿಕ್ಷಣ ಸಚಿವ, ಸ್ವಾತಂತ್ರ್ಯ ಹೋರಾಟಗಾರ ಮೌಲಾನಾ ಅಬ್ದುಲ್ ಕಲಾಂ ಅಜಾದ್ ಅವರನ್ನು ಕುರಿತ ಪಠ್ಯವನ್ನು 11ನೇ ತರಗತಿಯ ರಾಜ್ಯಶಾಸ್ತ್ರ ಪಠ್ಯಪುಸ್ತಕದಿಂದ ಎನ್‌ಸಿಇಆರ್‌ಟಿ ಕೈಬಿಟ್ಟಿದೆ.

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಕಳೆದ ಶೈಕ್ಷಣಿಕ ವರ್ಷವೂ 'ಪುನರಾವರ್ತನೆ' ಮತ್ತು 'ಅಪ್ರಸ್ತುತ' ಎಂಬ ಕಾರಣ ನೀಡಿ ಗುಜರಾತ್ ಗಲಭೆ, ಮೊಗಲರ ಕೋರ್ಟ್, ತುರ್ತು ಪರಿಸ್ಥಿತಿ, ಶೀತಲ ಸಮರ ಹಾಗೂ ನಕ್ಸಲ್ ಆಂದೋಲನದ ಉಲ್ಲೇಖವಿದ್ದ ಪಠ್ಯಗಳನ್ನು ಕೈಬಿಟ್ಟಿತ್ತು. ಪಠ್ಯ ಬದಲಾವಣೆ ಕುರಿತ ಹೇಳಿಕೆಯಲ್ಲಿ ಈ ಕುರಿತ ಯಾವುದೇ ಉಲ್ಲೇಖವಿರಲಿಲ್ಲ.

ಆದರೆ ಎನ್‌ಸಿಇಆರ್‌ಟಿಯು, ಹೊಸ ಶೈಕ್ಷಣಿಕ ವರ್ಷದಲ್ಲಿ ಯಾವುದೇ ಪಠ್ಯ ಪರಿಷ್ಕರಣೆ ಮಾಡಿಲ್ಲ. ಕಳೆದ ಜೂನ್‌ನಲ್ಲೇ ಪರಿಷ್ಕರಣೆ ಬಗ್ಗೆ ನಿರ್ಧಾರ ಮಾಡಲಾಗಿತ್ತು. ಆ ಪೈಕಿ ಕೆಲ ತೀರ್ಮಾನಗಳನ್ನು ಈ ವರ್ಷದಲ್ಲಿ ಜಾರಿಗೊಳಿಸಲಾಗಿದೆ ಎಂದು ಹೇಳಿದೆ.

'ಪಠ್ಯ ಪರಿಷ್ಕರಣೆಗೆ ಸಂಬಂಧಿಸಿದ ಹೇಳಿಕೆಯಲ್ಲಿ, ಪಠ್ಯಕ್ರಮದಲ್ಲಿ ಜಾರಿಗೊಳಿಸಲು ಉದ್ದೇಶಿಸಿದ್ದ ಕೆಲವೊಂದು ಬದಲಾವಣೆಗಳ ಉಲ್ಲೇಖವು 'ಕಣ್ತಪ್ಪಿ'ನಿಂದ ಬಿಟ್ಟುಹೋಗಿತ್ತು' ಎಂದು ಎನ್‌ಸಿಇಆರ್‌ಟಿ ನಿರ್ದೇಶಕ ದಿನೇಶ್ ಸಕ್ಲಾನಿ ಅವರು ಪ್ರತಿಕ್ರಿಯಿಸಿದ್ದಾರೆ.



11ನೇ ತರಗತಿಯ ರಾಜ್ಯಶಾಸ್ತ್ರ ಪಠ್ಯಪುಸ್ತಕದ 'ಸಂವಿಧಾನ: ಏಕೆ ಮತ್ತು ಹೇಗೆ' ಶೀರ್ಷಿಕೆ ಕುರಿತ ಮೊದಲ ಅಧ್ಯಾಯದ ಮೊದಲ ಸಾಲು ಪರಿಷ್ಕರಿಸಿ, ಸಂವಿಧಾನ ಸಮಿತಿ ಸಭೆ ಕುರಿತ ವರದಿಯಲ್ಲಿ ಮೌಲಾನಾ ಅಜಾದ್ ಹೆಸರು ಕೈಬಿಡಲಾಗಿದೆ.

ಪರಿಷ್ಕೃತವಾಗಿರುವ ಪಠ್ಯದ ಸಾಲಿನಲ್ಲಿ '...ಸಾಮಾನ್ಯವಾಗಿ ಸಭೆಯ ಅಧ್ಯಕ್ಷತೆಯನ್ನು ಜವಾಹರಲಾಲ್ ನೆಹರೂ, ರಾಜೇಂದ್ರ ಪ್ರಸಾದ್, ಸರ್ದಾರ್ ಪಟೇಲ್ ಅಥವಾ ಬಿ.ಆರ್. ಅಂಬೇಡ್ಕರ್ ವಹಿಸುತ್ತಿದ್ದರು' ಎಂದು ಉಲ್ಲೇಖಿಸಲಾಗಿದೆ.

ಇದೇ ಪಠ್ಯಪುಸ್ತಕದ 'ಸಂವಿಧಾನದ ಸಿದ್ಧಾಂತ' ಶೀರ್ಷಿಕೆಯ ಪಠ್ಯದಲ್ಲಿ 'ಷರತ್ತುಬದ್ಧವಾಗಿ ಭಾರತ ಒಕ್ಕೂಟದಲ್ಲಿ ಜಮ್ಮು ಮತ್ತು ಕಾಶ್ಮೀರದ ಸೇರ್ಪಡೆ' ಕುರಿತ ಉಲ್ಲೇಖ ಕೈಬಿಡಲಾಗಿದೆ. ಈ ಹಿಂದೆ '...ಉದಾಹರಣೆಗೆ ಭಾರತದ ಒಕ್ಕೂಟದಲ್ಲಿ ಜಮ್ಮು ಮತ್ತು ಕಾಶ್ಮೀರದ ಸೇರ್ಪಡೆಯನ್ನು, ಸಂವಿಧಾನದ 370ನೇ ವಿಧಿ ಅನುಸಾರ ಅದರ ಸ್ವಾಯತ್ತೆ ರಕ್ಷಣೆ ಷರತ್ತಿನೊಂದಿಗೆ ಮಾಡಲಾಗಿತ್ತು' ಎಂದಿತ್ತು.

ಕಳೆದ ವರ್ಷ ಕೇಂದ್ರ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ ಮೌಲಾನಾ ಅಜಾದ್ ಫೆಲೋಷಿಪ್ ಕೈಬಿಟ್ಟಿತ್ತು. ಆರು ಅಧಿಸೂಚಿತ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳಿಗೆ ಐದು ವರ್ಷ ಆರ್ಥಿಕ ನೆರವು ಒದಗಿಸಲು 2008ರಲ್ಲಿ ಈ ಫೆಲೋಷಿಪ್ ಆರಂಭಿಸಲಾಗಿತ್ತು.

'ಗಾಂಧೀಜಿಯವರ ಸಾವು ದೇಶದ ಕೋಮು ಪರಿಸ್ಥಿತಿಯ ಮೇಲೆ ಭಾವನಾತ್ಮಕ ಪರಿಣಾಮ ಬೀರಿತ್ತು', 'ಹಿಂದೂ ಮುಸ್ಲಿಮರ ಏಕತೆಗೆ ಗಾಂಧೀಜಿ ಕೈಗೊಂಡಿದ್ದ ಯತ್ನವು ಹಿಂದೂ ಮತೀಯವಾದಿಗಳನ್ನು ಪ್ರಚೋದಿಸಿತ್ತು', 'ಆರ್‌ಎಸ್‌ಎಸ್‌ನಂತಹ ಕೆಲ ಸಂಘಟನೆಗಳನ್ನು ಕೆಲ ಕಾಲ ನಿಷೇಧಿಸಲಾಗಿತ್ತು' ಇತ್ಯಾದಿ ಸಾಲುಗಳನ್ನು ಈಗ 12ನೇ ತರಗತಿಯ ರಾಜ್ಯಶಾಸ್ತ್ರ ಪಠ್ಯಪುಸ್ತಕದಿಂದ ಕೈಬಿಡಲಾಗಿದೆ.

ಗುಜರಾತ್ ಗಲಭೆಯ ಉಲ್ಲೇಖವಿದ್ದ ಅಂಶಗಳನ್ನು 11ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಿಂದ ಕೈಬಿಡಲಾಗಿತ್ತು. ಅದಕ್ಕೂ ಹಿಂದೆ ಎನ್‌ಸಿಇಆರ್‌ಟಿ 12ನೇ ತರಗತಿಯ ಪಠ್ಯಪುಸ್ತಕದಿಂದ 2022ರ ಕೋಮುಗಲಭೆಯ ಉಲ್ಲೇಖವಿದ್ದ ಅಡಕಗಳನ್ನು ಕೈಬಿಡಲಾಗಿತ್ತು.

ಇತಿಹಾಸ ಮರುರಚನೆ: ಕಾಂಗ್ರೆಸ್ ಟೀಕೆ

ಪಠ್ಯಪುಸ್ತಕದಿಂದ ಪ್ರಥಮ ಶಿಕ್ಷಣ ಸಚಿವ ಮೌಲಾನಾ ಅವರ ಉಲ್ಲೇಖವನ್ನು ಕೈಬಿಟ್ಟಿರುವ ಕ್ರಮಕ್ಕೆ ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ. 'ಇತಿಹಾಸ ಮರುರಚಿಸುವ, ಸುಳ್ಳುಗಳ ಮೇಲೆ ಕಟ್ಟಿದ ವಿಕೃತ ಪರಂಪರೆಯನ್ನು ದಾಟಿಸುವ ಯತ್ನ ನಡೆದಿದೆ' ಎಂದು ಹೇಳಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ವಕ್ತಾರ ಅನ್ಶುಲ್ ಅವಿಜಿತ್ ಅವರು, ಕೇಂದ್ರ ಸರ್ಕಾರದಿಂದ ಇತಿಹಾಸ ಮರುರಚಿಸುವ ವ್ಯವಸ್ಥಿತ ಯತ್ನ ನಡೆದಿದೆ. ಅಸತ್ಯ, ಸುಳ್ಳುಗಳನ್ನು ಆಧರಿಸಿ ರಚಿಸಿದ ವಿಕೃತ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕಲಿಸಲಾಗುತ್ತಿದೆ ಎಂದರು.

'ಎನ್‌ಸಿಇಆರ್‌ಟಿ ಕ್ರಮವನ್ನು ನಾನು ಕಟುವಾಗಿ ಖಂಡಿಸುತ್ತೇನೆ. ಅವರು ದೇಶದ ಪ್ರಥಮ ಶಿಕ್ಷಣ ಮಂತ್ರಿ 14 ವರ್ಷದೊಳಗಿನವರಿಗೆ ಕಡ್ಡಾಯ ಶಿಕ್ಷಣ ನೀಡಬೇಕು ಎಂಬ ಚಿಂತನೆಗೆ ಅಡಿಪಾಯ ಹಾಕಿದವರು. ಅವರ ಹೆಸರನ್ನೇ ಕೈಬಿಟ್ಟಿರುವುದು ನಾಚಿಕೆಗೇಡು, ವಿಪರ್ಯಾಸದ ಕ್ರಮ. ಸ್ವಾತಂತ್ರ್ಯ ಹೋರಾಟಕ್ಕೆ ಮೌಲಾನಾ ಅವರ ಕೊಡುಗೆ ಅನನ್ಯ. ಗಾಂಧಿ ಸಿದ್ಧಾಂತಗಳ ಪ್ರತಿಪಾದಕ, ಚಿಂತಕ. ಸಂವಿಧಾನ ಸಮಿತಿಗಳ ಸದಸ್ಯರಾಗಿದ್ದವರು. ಇತಿಹಾಸ ಮರುರಚನೆಯ ಕ್ರಿಯೆಯಲ್ಲಿ ಯಾರೊಬ್ಬರೂ ಸುರಕ್ಷಿತವಲ್ಲ ಎಂಬುದು ಸಾಬೀತಾಗಿದೆ' ಎಂದರು.

ಗಿಲ್, ಮೋಹಿತ್ ಮಿಂಚು: ಪಂಜಾಬ್‌ಗೆ ಸೋಲು

ಗುಜರಾತ್ ಟೈಟನ್ಸ್‌ಗೆ ಗೆಲುವು

ಮೊಹಾಲಿ (ಪಿಟಿಐ): ಶುಭಮನ್ ಗಿಲ್ ಅವರ ಅರ್ಧಶತಕ ಹಾಗೂ ಬೌಲರ್‌ಗಳ ಬಿಗು ದಾಳಿಯ ಬಲದಿಂದ ಗುಜರಾತ್ ಟೈಟನ್ಸ್ ತಂಡದವರು ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಆರು ವಿಕೆಟ್‌ಗಳಿಂದ ಮಣಿಸಿದರು.

ಮೊಹಾಲಿಯ ಪಿಸಿಎ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಶಿಖರ್ ಧವನ್ ಬಳಗ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 153 ರನ್ ಗಳಿಸಿತು.

ಗುರಿ ಬೆನ್ನತ್ತಿದ ಗುಜರಾತ್ 19.5 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಗೆಲುವು ಸಾಧಿಸಿತು.

ಶುಭಮನ್ ಗಿಲ್ (67, 49ಎ, 4X7, 6X1), ವೃದ್ಧಿಮಾನ್ ಸಹಾ (30) ಗುಜರಾತ್ ಬ್ಯಾಟಿಂಗ್‌ನಲ್ಲಿ ಮಿಂಚಿದರು. ಸಾಯಿ ಸುದರ್ಶನ್ (19) ಮತ್ತು ಡೇವಿಡ್ ಮಿಲ್ಲರ್ (ಔಟಾಗದೆ 17) ಉಪಯುಕ್ತ ಕೊಡುಗೆ ನೀಡಿದರು.

ಪರಿಣಾಮಕಾರಿ ಬೌಲಿಂಗ್: ಟಾಸ್ ಗೆದ್ದ ಟೈಟನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅವರು ಬೌಲಿಂಗ್ ಮಾಡಲು ನಿರ್ಧರಿಸಿದರು. ಮೋಹಿತ್ ಶರ್ಮಾ (18ಕ್ಕೆ 2) ಮತ್ತು ರಶೀದ್ ಖಾನ್ (26ಕ್ಕೆ 1) ಶಿಸ್ತಿನ ಬೌಲಿಂಗ್ ನಡೆಸಿದರು. ಇತರ ಬೌಲರ್‌ಗಳಿಂದಲೂ ಅವರಿಗೆ ತಕ್ಕ ಬೆಂಬಲ ಲಭಿಸಿತು. 2020ರ ಬಳಿಕ ಮೊದಲ ಐಪಿಎಲ್ ಪಂದ್ಯವನ್ನಾಡಿದ ಮೋಹಿತ್ ತಮ್ಮ ಪುನರಾಗಮನವನ್ನು ಸ್ಮರಣೀಯವನ್ನಾಗಿಸಿಕೊಂಡರು.



ಪಂಜಾಬ್ ತಂಡದ ಮ್ಯಾಥ್ಯೂ ಶಾರ್ಟ್ ವಿಕೆಟ್ ಪಡೆದ ರಶೀದ್ ಖಾನ್ (ಬಲದಿಂದ ಎರಡನೆಯವರು) ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಎಎಫ್‌ಪಿ ಚಿತ್ರ

ಪಂಜಾಬ್ ತಂಡದ ಪರ ಮ್ಯಾಥ್ಯೂ ಶಾರ್ಟ್ (36 ರನ್, 24 ಎ) ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಮಧ್ಯಮ ಕ್ರಮಾಂಕದಲ್ಲಿ ಸ್ಯಾಮ್ ಕರನ್ ಮತ್ತು ಶಾರುಕ್ ಖಾನ್ ಅವರು ಅಲ್ಪ ಹೋರಾಟ ನಡೆಸಿದ್ದರಿಂದ ತಂಡದ ಮೊತ್ತ 150ರ ಗಡಿ ದಾಟಿತು.

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್ 8ಕ್ಕೆ 153 (20 ಓವರ್‌ಗಳಲ್ಲಿ)

ಪ್ರಭ್‌ಸಿಮ್ರನ್ ಸಿ ರಶೀದ್ ಬಿ ಶಮಿ 0 (2 ಎ), ಶಿಖರ್ ಸಿ ಜೋಸೆಫ್ ಬಿ ಲಿಟ್ಲ್ 8 (8 ಎ., 4X2), ಶಾರ್ಟ್ ಬಿ ರಶೀದ್ 36 (24 ಎ., 4X6, 6X1), ರಾಜಪಕ್ಸ ಸಿ ಗಿಲ್ ಬಿ ಜೋಸೆಫ್ 20 (26 ಎ., 4X1) ಜಿತೇಶ್ ಸಿ ಸಹಾ ಬಿ ಶರ್ಮಾ 25 (23 ಎ., 4X5), ಕರನ್ ಸಿ ಗಿಲ್ ಬಿ ಶರ್ಮಾ 22 (22 ಎ., 4X1, 6X1), ಶಾರುಕ್ ರನೌಟ್ (ಮಿಲ್ಲರ್/ಸಹಾ) 22 (9 ಎ., 4X1, 6X2), ಹರ್‌ಪ್ರೀತ್ ಔಟಾಗದೆ 8 (5 ಎ., 6X1), ರಿಷಿ ರನೌಟ್ (ಸಹಾ) 1 (1 ಎ)

ಇತರೆ: 11 (ಲೆಗ್‌ಬೈ 2, ವೈಡ್ 9)

ವಿಕೆಟ್ ಪತನ: 1–0 (ಪ್ರಭ್‌ಸಿಮ್ರನ್ ಸಿಂಗ್; 0.2), 2–28 (ಶಿಖರ್ ಧವನ್; 3.2), 3–55 (ಮ್ಯಾಥ್ಯೂ ಶಾರ್ಟ್; 6.4), 4–92 (ಜಿತೇಶ್ ಶರ್ಮಾ; 12.2), 5–115 (ಭಾನುಕ ರಾಜಪಕ್ಸ; 16.5), 6–136 (ಸ್ಯಾಮ್ ಕರನ್; 18.1), 7–152 (ಶಾರುಖ್ ಖಾನ್; 19.4), 8–153 (ರಿಷಿ ಧವನ್; 19.6)

ಬೌಲಿಂಗ್: ಮೊಹಮ್ಮದ್ ಶಮಿ 4–0–44–1, ಜೋಶ್ ಲಿಟ್ಲ್ 4–0–31–1, ಅಲ್ಜರಿ ಜೋಸೆಫ್ 4–0–32–1, ರಶೀದ್ ಖಾನ್ 4–0–26–1, ಮೋಹಿತ್ ಶರ್ಮಾ 4–0–18–2

ಗುಜರಾತ್ ಟೈಟನ್ಸ್ 4ಕ್ಕೆ 154 (19.5 ಓವರ್‌ಗಳಲ್ಲಿ)

ಸಹಾ ಸಿ ಶಾರ್ಟ್ ಬಿ ರಬಾಡ 30 (19 ಎ., 4X5), ಗಿಲ್ ಬಿ ಕರನ್ 67 (49 ಎ., 4X7, 6X1), ಸುದರ್ಶನ್ ಸಿ ಪ್ರಭ್‌ಸಿಮ್ರನ್ ಬಿ ಅರ್ಷದೀಪ್ 19 (20 ಎ., 4X2), ಹಾರ್ದಿಕ್ ಸಿ ಕರನ್ ಬಿ ಹರ್‌ಪ್ರೀತ್ 8 (11 ಎ., 4X1), ಮಿಲ್ಲರ್ ಔಟಾಗದೆ 17 (18 ಎ., 4X1), ತೆವಾಟಿಯಾ ಔಟಾಗದೆ 5 (2 ಎ., 4X1)

ಇತರೆ: 8 (ಲೆಗ್ ಬೈ 8)

ವಿಕೆಟ್ ಪತನ: 1–48 (ವೃದ್ಧಿಮಾನ್ ಸಹಾ; 4.4), 2–89 (ಸಾಯಿ ಸುದರ್ಶನ್; 11.2), 3–106 (ಹಾರ್ದಿಕ್ ಪಾಂಡ್ಯ; 14.2), 4–148 (ಶುಭಮನ್ ಗಿಲ್; 19.2)

ಬೌಲಿಂಗ್: ಅರ್ಷದೀಪ್ ಸಿಂಗ್ 4-0-33-1, ಕಗಿಸೊ ರಬಾಡ 4-0-36-1, ಹರ್‌ಪ್ರೀತ್ ಬ್ರಾರ್ 4–0–20–1, ಸ್ಯಾಮ್ ಕರನ್ 3.5–0–25–1, ರಾಹುಲ್ ಚಾಹರ್ 3–0–24–0, ಮ್ಯಾಥ್ಯೂ ಶಾರ್ಟ್ 1–0–8–0

ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 6 ವಿಕೆಟ್ ಗೆಲುವು

ಸಂಜು ಸ್ಯಾಮ್ಸನ್, ಅಶ್ವಿನ್‌ಗೆ ದಂಡ

ಚೆನ್ನೈ (ಪಿಟಿಐ): ಚೆನ್ನೈ ವಿರುದ್ಧ ಬುಧವಾರ ನಡೆದಿದ್ದ ಪಂದ್ಯದಲ್ಲಿ ರಾಜಸ್ತಾನ ರಾಯಲ್ಸ್ ತಂಡ ನಿಧಾನಗತಿಯಲ್ಲಿ ಓವರುಗಳನ್ನು ಮಾಡಿದ್ದಕ್ಕೆ ನಾಯಕ ಸಂಜು ಸ್ಯಾಮ್ಸನ್ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ.

ಐಪಿಎಲ್ ನಿಯಮ ಉಲ್ಲಂಘಿಸಿದ್ದಕ್ಕೆ ರಾಯಲ್ಸ್ ತಂಡದ ಸ್ಪಿನ್ನರ್ ಆರ್.ಅಶ್ವಿನ್ ಅವರಿಗೆ ಪಂದ್ಯದ ಸಂಭಾವನೆಯ ಶೇ 25ರಷ್ಟು ಮೊತ್ತ ದಂಡ ವಿಧಿಸಲಾಗಿದೆ. ಆದರೆ ನಿಯಮ ಉಲ್ಲಂಘನೆಯ ಸ್ವರೂಪವನ್ನು ಬಹಿರಂಗಪಡಿಸಿಲ್ಲ.

ಸೂಪರ್ ಕಿಂಗ್ಸ್ ಇನಿಂಗ್ಸ್ ವೇಳೆ ಭಾರೀ ಇಬ್ಬನಿ ಬೀಳುತ್ತಿದ್ದರಿಂದ ಅಂಪೈರ್‌ಗಳು ಚೆಂಡನ್ನು ಬದಲಿಸಿದ್ದರು. ಈ ಕ್ರಮವನ್ನು ಅಶ್ವಿನ್ ಟೀಕಿಸಿದ್ದರು.

ಹ್ಯಾಟ್ರಿಕ್ ಜಯದತ್ತ ಕೆಕೆಆರ್ ಚಿತ್ತ

ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಹಣಾಹಣಿ ಇಂದು

ಕೋಲ್ಕತ್ತ (ಪಿಟಿಐ): ಸತತ ಮೂರನೇ ಗೆಲುವಿನ ಮೇಲೆ ಕಣ್ಣಿಟ್ಟಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡದವರು ಶುಕ್ರವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಸವಾಲು ಎದುರಿಸಲಿದ್ದಾರೆ.

ಟೂರ್ನಿಯ ಮೊದಲ ಪಂದ್ಯವನ್ನು ಸೋತಿದ್ದ ನಿತೀಶ್ ರಾಣಾ ಬಳಗ, ಇಬ್ಬರು 'ಹೀರೊ'ಗಳ ನೆರವಿನಿಂದ ಬಳಿಕದ ಎರಡು ಪಂದ್ಯಗಳನ್ನು ಗೆದ್ದಿದೆ.

ಮೊದಲು ಆರ್‌ಸಿಬಿ ತಂಡವನ್ನು ಮಣಿಸಿದ್ದರೆ, ಬಳಿಕದ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಸೋಲಿಸಿತ್ತು. ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ 29 ಎಸೆತಗಳಲ್ಲಿ 68 ರನ್ ಸಿಡಿಸಿದ್ದ ಶಾರ್ದೂಲ್ ಠಾಕೂರ್ ಅವರು ಗೆಲುವಿನ ರೂವಾರಿ ಎನಿಸಿದ್ದರು.

ಟೈಟನ್ಸ್ ಎದುರಿನ ಪಂದ್ಯದಲ್ಲಿ ರಿಂಕು ಸಿಂಗ್ ಹೀರೊ ಆಗಿ ಮೆರೆದಿದ್ದರು. ಕೊನೆಯ ಓವರ್‌ನಲ್ಲಿ ಅವರು ಐದು ಸಿಕ್ಸರ್‌ಗಳನ್ನು ಸಿಡಿಸಿ ತಂಡಕ್ಕೆ ರೋಚಕ ಜಯ ತಂದಿತ್ತಿದ್ದರು. ಆ ಗೆಲುವು ಕೆಕೆಆರ್ ಆಟಗಾರರ ಆತ್ಮವಿಶ್ವಾಸವನ್ನು ಸಹಜವಾಗಿ ಹೆಚ್ಚಿಸಿದೆ.

ಶ್ರೇಯಸ್ ಅಯ್ಯರ್ ಮತ್ತು ಶಕೀಬ್ ಅಲ್ ಹಸನ್ ಅವರಂತಹ ಪ್ರಮುಖರು ಈ ಬಾರಿಯ ಟೂರ್ನಿಗೆ ಅಲಭ್ಯರಾದ್ದರಿಂದ ಕೋಲ್ಕತ್ತ ತಂಡ ಒತ್ತಡಕ್ಕೆ ಸಿಲುಕಿತ್ತು. ಆದರೂ ಲಭ್ಯವಿರುವ ಆಟಗಾರರ ನೆರವಿನಿಂದ ಬಲಿಷ್ಠ ತಂಡವಾಗಿ ಹೊರಹೊಮ್ಮುವ ಸೂಚನೆ ನೀಡಿದೆ. ಪ್ರಮುಖ ಆಟಗಾರರಾದ ಆ್ಯಂಡ್ರೆ ರಸೆಲ್ ಮತ್ತು ನಾಯಕ ನಿತೀಶ್ ಅವರಿಂದ ಹೆಚ್ಚಿನ 'ಕೊಡುಗೆ' ದೊರೆಯದಿದ್ದರೂ, ಗೆಲ್ಲಲು ಸಾಧ್ಯ ಎಂಬುದನ್ನು ಕೆಕೆಆರ್ ತೋರಿಸಿಕೊಟ್ಟಿದೆ. ರಸೆಲ್ ಲಯಕ್ಕೆ ಮರಳಿದರೆ, ಎದುರಾಳಿ ಬೌಲರ್‌ಗಳ ಒತ್ತಡ ಹೆಚ್ಚಲಿದೆ.

ಮತ್ತೊಂದೆಡೆ ಏಡನ್ ಮರ್ಕರಂ ನಾಯಕತ್ವದ ಸನ್‌ರೈಸರ್ಸ್, ಸತತ 2ನೇ ಗೆಲುವಿನ ನಿರೀಕ್ಷೆಯಲ್ಲಿದೆ. ಮೊದಲ ಎರಡು ಪಂದ್ಯಗಳನ್ನು ಸೋತಿದ್ದ ಈ ತಂಡ, ಕಳೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಮಣಿಸಿತ್ತು.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	4	3	1	0	6	1.588
ಲಖನೌ	4	3	1	0	6	1.048
ಗುಜರಾತ್	4	3	1	0	6	0.341
ಕೋಲ್ಕತ್ತ	3	2	1	0	4	1.375
ಚೆನ್ನೈ	4	2	2	0	4	0.225
ಪಂಜಾಬ್	4	2	2	0	4	-0.226
ಬೆಂಗಳೂರು	3	1	2	0	2	-0.800
ಮುಂಬೈ	3	1	2	0	2	-0.879
ಹೈದರಾಬಾದ್	3	1	2	0	2	-1.502
ಡೆಲ್ಲಿ	4	0	4	0	0	-1.576

*ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket


ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಶಿಖರ್	ಪಂಜಾಬ್	233

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಚಾಹಲ್	ರಾಜಸ್ಥಾನ	10

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,812
ಇಂದಿನ ಅಂತ್ಯ	17,828
▲	16
ದಿನದ ಗರಿಷ್ಠ	17,842

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹410

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1700 (1700)
ಸೋಯಾ (ರಿಫೈನ್ಡ್)	₹1030 (1040)
ಸೂರ್ಯಕಾಂತಿ (ರಿಫೈನ್ಡ್)	₹1060(1060)
ಪಾಮೋಲಿನ್	₹942 (955)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹141
ಗುಡ್ ಲಾಟ್	₹131

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹365-535
ದ್ವಿತಳಿ (ಬಿ.ವಿ)	₹315-621

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1500
ಮಧ್ಯಮ	₹700-1000
ಸಣ್ಣ	₹300-700

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ತುಮಕೂರು	₹3800-4450
ಕೆ.ಆರ್.ಪೇಟೆ	---
ತುರುವೇಕೆರೆ	₹9000-9000

ಸಂಕ್ಷಿಪ್ತ ಸುದ್ದಿ

ಇ–ಇನ್‌ವಾಯ್ಸ್ ಅಪ್‌ಲೋಡ್‌ಗೆ ಕಾಲಮಿತಿ

ನವದೆಹಲಿ (ಪಿಟಿಐ): ವಾರ್ಷಿಕ ₹100 ಕೋಟಿಗೂ ಅಧಿಕ ಮೊತ್ತದ ವಹಿವಾಟು ನಡೆಸುವ ಉದ್ದಿಮೆಗಳು ಮೇ 1ರಿಂದ ಜಾರಿಗೆ ಬರುವಂತೆ ಇ–ಇನ್‌ವಾಯ್ಸ್ ಪಡೆದ ಒಂದು ವಾರದ ಒಳಗಾಗಿ ಅದನ್ನು ಪೋರ್ಟಲ್‌ಗೆ (ಐಆರ್‌ಪಿ) ಅಪ್‌ಲೋಡ್ ಮಾಡಬೇಕು ಎಂದು ಜಿಎಸ್‌ಟಿ ನೆಟ್‌ವರ್ಕ್ ಹೇಳಿದೆ.

ಇ–ಇನ್‌ವಾಯ್ಸ್ ಅಪ್‌ಲೋಡ್ ಮಾಡಲು ಕಾಲಮಿತಿ ನಿಗದಿಪಡಿಸಲು ಸರ್ಕಾರವು ನಿರ್ಧರಿಸಿದೆ. ಇ–ಇನ್‌ವಾಯ್ಸ್ ಪಡೆದು ಏಳು ದಿನಗಳ ಕಳೆದಿದ್ದರೆ ಅಂತಹ ಇನ್‌ವಾಯ್ಸ್ ಅಪ್‌ಲೋಡ್ ಮಾಡಲು ಅವಕಾಶ ಇರುವುದಿಲ್ಲ ಎಂದು ತೆರಿಗೆದಾರರಿಗೆ ಸೂಚನೆ ನೀಡಿದೆ.

ಈ ಕಾಲಮಿತಿಯು ಇನ್‌ವಾಯ್ಸ್‌ಗೆ ಮಾತ್ರವೇ ಅನ್ವಯಿಸಲಿದೆ. ಸಾಲ ಪತ್ರಗಳಿಗೆ ಅನ್ವಯಿಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಜಿಎಸ್‌ಟಿ ಕಾಯ್ದೆಯ ಪ್ರಕಾರ, ಐಆರ್‌ಪಿಗೆ ಇನ್‌ವಾಯ್ಸ್ ಅಪ್‌ಲೋಡ್ ಮಾಡದೇ ಇದ್ದರೆ ಇನ್‌ಪುಟ್ ಟ್ಯಾಕ್ಸ್ ಪ್ರಯೋಜನ ಪಡೆಯಲು ಆಗುವುದಿಲ್ಲ.

ಪ್ರಯಾಣಿಕ ವಾಹನ ಮಾರಾಟ ಶೇ 27 ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನಗಳ ಸಗಟು ಮಾರಾಟವು 2022–23ನೇ ಹಣಕಾಸು ವರ್ಷದಲ್ಲಿ ದಾಖಲೆಯ 38.9 ಲಕ್ಷಕ್ಕೆ ತಲುಪಿದ್ದು, 2021–22ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 26.73ರಷ್ಟು ಹೆಚ್ಚಳ ಆಗಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ಮಾಹಿತಿ ನೀಡಿದೆ.

2021–22ನೇ ಹಣಕಾಸು ವರ್ಷದಲ್ಲಿ 30.69 ಲಕ್ಷ ವಾಹನಗಳು ಮಾರಾಟ ಆಗಿದ್ದವು. ಈ ಹಿಂದೆ 2018–19ರಲ್ಲಿ ಪ್ರಯಾಣಿಕ ವಾಹನ ಮಾರಾಟವು ದಾಖಲೆಯ 33.77 ಲಕ್ಷಗೆ ತಲುಪಿತ್ತು.

ವಾಣಿಜ್ಯ ವಾಹನಗಳು, ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ವಿಭಾಗದ ಮಾರಾಟವು ಇನ್ನಷ್ಟೇ ಕೋವಿಡ್ ಪೂರ್ವದ ಮಟ್ಟವನ್ನು ತಲುಪಬೇಕಿದೆ ಎಂದು ಒಕ್ಕೂಟದ ಪ್ರಧಾನ ನಿರ್ದೇಶಕ ರಾಜೇಶ್ ಮೆನನ್ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ 13-4-2023

ಜಾವಾ 70/80(ಹೊಸ)	11550-11600
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1710 (1710)
ಒಂದು ವಾರದ ಡೆಲಿವರಿ	1705 (1705)
ಸೋಯಾ ಕಚ್ಚಾ	925 (937)
ಪಾಮ್ ವಾರದ ಡೆಲಿವರಿ	940 (953)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,900 (60,600)
ಬೆಳ್ಳಿ ಕೆ.ಜಿ 76,000 (75,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಗೋಯಲ್ ಮಾಹಿತಿ

ಸರಕು, ಸೇವೆಗಳ ರಫ್ತಿನಲ್ಲಿ ದಾಖಲೆ

ರೋಮ್ (ಪಿಟಿಐ): ಸರಕು ಮತ್ತು ಸೇವೆಗಳ ರಫ್ತು ವಹಿವಾಟು 2022–23ನೇ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರ ಇಟ್ಟುಕೊಂಡಿದ್ದ ಗುರಿಯನ್ನು ಮೀರಿದೆ.

2022–23ನೇ ಹಣಕಾಸು ವರ್ಷದಲ್ಲಿ ₹61.50 ಲಕ್ಷ ಕೋಟಿ ಮೌಲ್ಯದ ಸರಕು ಮತ್ತು ಸೇವೆಗಳನ್ನು ರಫ್ತು ಮಾಡುವ ಗುರಿಯನ್ನು ಸರ್ಕಾರ ಹೊಂದಿತ್ತು. ಆದರೆ, ದಾಖಲೆಯ ₹63.14 ಲಕ್ಷ ಕೋಟಿ ಮೌಲ್ಯದ ರಫ್ತು ವಹಿವಾಟು ನಡೆದಿದೆ.

2021–22ನೇ ಹಣಕಾಸು ವರ್ಷದಲ್ಲಿ ₹ 55.43 ಲಕ್ಷ ಕೋಟಿ ಮೌಲ್ಯದ ವಹಿವಾಟು ನಡೆದಿತ್ತು ಎಂದು



ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಗುರುವಾರ ಮಾಹಿತಿ ನೀಡಿದ್ದಾರೆ.

ಸರಕು ಮತ್ತು ಸೇವೆಗಳ ಆಮದು ವಹಿವಾಟು 2022–23ರಲ್ಲಿ ₹73.14 ಲಕ್ಷ ಕೋಟಿಗೆ ತಲುಪಿದೆ ಎಂದು ಅವರು ಹೇಳಿದ್ದಾರೆ.

ವಿದೇಶಿ ವ್ಯಾಪಾರ ಮತ್ತು ಹೂಡಿಕೆ ಒಪ್ಪಂದಗಳನ್ನು ಇನ್ನಷ್ಟು ಬಲಪಡಿಸುವ ಸಲುವಾಗಿ ಗೋಯಲ್ ಅವರು ಇಟಲಿ ಮತ್ತು ಫ್ರಾನ್ಸ್ ಪ್ರವಾಸದಲ್ಲಿದ್ದು, ಅಲ್ಲಿನ ಪ್ರಮುಖ ನಾಯಕರು ಮತ್ತು ಸಿಇಒಗಳ ಜೊತೆ ಸರಣಿ ಸಭೆಗಳನ್ನು ನಡೆಸಿದ್ದಾರೆ.

ದೇಶದ ರಫ್ತು ವಹಿವಾಟು 2022–23ನೇ ಹಣಕಾಸು ವರ್ಷದಲ್ಲಿ ಶೇ 6ರಷ್ಟು ಹೆಚ್ಚಾಗಿ ₹36.65 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಪೆಟ್ರೋಲಿಯಂ, ಔಷಧ, ರಾಸಾಯನಿಕ ಮತ್ತು ಸಾಗರೋತ್ತರ ಉತ್ಪನ್ನಗಳ ರಫ್ತು ಹೆಚ್ಚಾಗಿರುವುದೇ ಇದಕ್ಕೆ ಕಾರಣ ಎಂದು ಅವರು ಹೇಳಿದ್ದಾರೆ.

ಆಮದು ವಹಿವಾಟು ಕೂಡಾ 2022–23ನೇ ಹಣಕಾಸು ವರ್ಷದಲ್ಲಿ ಶೇ 16.5ರಷ್ಟು ಹೆಚ್ಚಾಗಿದ್ದು ₹58.54 ಲಕ್ಷ ಕೋಟಿಗೆ ತಲುಪಿದೆ.

ಸೇವೆಗಳ ರಫ್ತು ವಹಿವಾಟು ಶೇ 27.16ರಷ್ಟು ಹೆಚ್ಚಾಗಿ ₹26.48 ಲಕ್ಷ ಕೋಟಿಗೆ ತಲುಪಿದೆ. 2021–22ರಲ್ಲಿ ₹20.82 ಲಕ್ಷ ಕೋಟಿ ಮೌಲ್ಯದ ವಹಿವಾಟು ನಡೆದಿತ್ತು.

ರಫ್ತು ವಲಯದಲ್ಲಿ ಎಲೆಕ್ಟ್ರಾನಿಕ್ಸ್ ವಸ್ತುಗಳು, ತಂಬಾಕು, ಎಣ್ಣೆ ಕಾಳುಗಳು, ಅಕ್ಕಿ, ಕಾಫಿ, ಹಣ್ಣು ಮತ್ತು ತರಕಾರಿ, ಔಷಧ, ರಾಸಾಯನಿಕ ವಲಯಗಳು ಉತ್ತಮ ಬೆಳವಣಿಗೆ ಕಂಡಿವೆ ಎಂದು ಹೇಳಿದ್ದಾರೆ.

ಇನ್ಫೊಸಿಸ್ ಲಾಭ ಶೇ 7.8ರಷ್ಟು ಏರಿಕೆ

2022–23ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದ ಆರ್ಥಿಕ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ಫೊಸಿಸ್ ಕಂಪನಿಯ ನಿವ್ವಳ ಲಾಭವು 2022–23ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಶೇ 7.8ರಷ್ಟು ಹೆಚ್ಚಾಗಿ ₹6,128 ಕೋಟಿಗೆ ತಲುಪಿದೆ.



ಸಲೀಲ್ ಪಾರೇಖ್

ಕಂಪನಿಯ ವರಮಾನವು ಮಾರ್ಚ್ ತ್ರೈಮಾಸಿಕದಲ್ಲಿ ಶೇ 16ರಷ್ಟು ವೃದ್ಧಿಯಾಗಿದ್ದು ₹37,441 ಕೋಟಿಗೆ ಏರಿಕೆ ಆಗಿದೆ.

2022–23ನೇ ಹಣಕಾಸು ವರ್ಷಕ್ಕೆ ನಿವ್ವಳ ಲಾಭ ಶೇ 9ರಷ್ಟು ಹೆಚ್ಚಾಗಿ ₹24,095 ಕೋಟಿಗೆ ತಲುಪಿದೆ. ವರಮಾನವು ಶೇ 20.7ರಷ್ಟು ಏರಿಕೆ ಕಂಡು ₹1.46 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಜಾಗತಿಕ ಆರ್ಥಿಕ ಅನಿಶ್ಚಿತತೆಯ ಕಾರಣದಿಂದಾಗಿ 2023-24ನೇ ಹಣಕಾಸು ವರ್ಷಕ್ಕೆ ಕಂಪನಿಯ ವರಮಾನವು ಶೇ 4–7ರ ಮಟ್ಟದಲ್ಲಿ ಬೆಳವಣಿಗೆ ಕಾಣುವ ಅಂದಾಜನ್ನು ಕಂಪನಿ ಮಾಡಿದೆ.

ಜಾಗತಿಕ ಆರ್ಥಿಕ ಅನಿಶ್ಚಿತತೆ ಮತ್ತು ಹಣಕಾಸು ವ್ಯವಸ್ಥೆಯಲ್ಲಿನ ಕುಸಿತದಿಂದಾಗಿ ಇನ್ಫೊಸಿಸ್‌ನ ವರಮಾನವು ನಿರೀಕ್ಷೆಗಿಂತಲೂ ಕಡಿಮೆ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂದು ರಾಯಿಟರ್ಸ್ ವರದಿ ಮಾಡಿದೆ.

2023-24ನೇ ಹಣಕಾಸು ವರ್ಷಕ್ಕೆ ವರಮಾನ ಬೆಳವಣಿಗೆಯ ಕುರಿತು ಕಂಪನಿ ಮಾಡಿರುವ ಅಂದಾಜು ಸಹ ಮಾರುಕಟ್ಟೆ ವಿಶ್ಲೇಷಕರ ನಿರೀಕ್ಷೆಗಿಂತಲೂ ಕಡಿಮೆ ಎಂದು ರಾಯಿಟರ್ಸ್ ಹೇಳಿದೆ.

2022-23ನೇ ಹಣಕಾಸು ವರ್ಷದ ಉತ್ತಮ ಫಲಿತಾಂಶವು ಡಿಜಿಟಲ್, ಕ್ಲೌಡ್ ಮತ್ತು ಆಟೊಮೇಷನ್ ಸಾಮರ್ಥ್ಯದ ಕಡೆಗೆ ಗಮನ ಮುಂದುವರಿಸಿರುವುದನ್ನು ಸೂಚಿಸುತ್ತಿದೆ ಎಂದು ಕಂಪನಿಯ ಸಿಇಒ ಸಲೀಲ್ ಪಾರೇಖ್ ಹೇಳಿದರು.

ಕಂಪನಿ ಬಿಟ್ಟು ಹೋಗುತ್ತಿರುವವ ಪ್ರಮಾಣವು ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 24.3ರಷ್ಟು ಇದ್ದಿದ್ದು ಮಾರ್ಚ್ ತ್ರೈಮಾಸಿಕದಲ್ಲಿ ಶೇ 20.9ಕ್ಕೆ ಇಳಿಕೆ ಆಗಿದೆ.

₹68 ಕೋಟಿ ಲಾಭಾಂಶ ಪಡೆಯಲಿರುವ ಅಕ್ಷತಾ

ನವದೆಹಲಿ (ಪಿಟಿಐ): ಇನ್ಫೊಸಿಸ್ ಸಹ ಸ್ಥಾಪಕ ನಾರಾಯಣ ಮೂರ್ತಿ ಅವರ ಪುತ್ರಿ, ಬ್ರಿಟನ್ ಪ್ರಧಾನಿ ರಿಶಿ ಸುನಕ್ ಅವರ ಪತ್ನಿ ಅಕ್ಷತಾ ಮೂರ್ತಿ ಅವರು ಇನ್ಫೊಸಿಸ್‌ನಲ್ಲಿ ಹೊಂದಿರುವ ಷೇರುಪಾಲಿಗಾಗಿ ಲಾಭಾಂಶ ರೂಪದಲ್ಲಿ ₹68.17 ಕೋಟಿ ಪಡೆಯಲಿದ್ದಾರೆ.

ಅಕ್ಷತಾ ಅವರು ಇನ್ಫೊಸಿಸ್‌ನಲ್ಲಿ ಡಿಸೆಂಬರ್ ಅಂತ್ಯಕ್ಕೆ 3.89 ಕೋಟಿ ಷೇರುಗಳನ್ನು ಹೊಂದಿದ್ದಾರೆ ಎಂದು ಕಂಪನಿಯು ಷೇರುಪೇಟೆಗೆ ನೀಡಿರುವ ಮಾಹಿತಿಯಲ್ಲಿ ಇದೆ. ಕಂಪನಿಯು 2022–23ನೇ ಹಣಕಾಸು ವರ್ಷಕ್ಕೆ ಪ್ರತಿ ಷೇರಿಗೆ ₹17.50 ಅಂತಿಮ ಲಾಭಾಂಶ ಘೋಷಿಸಿದೆ. ಅಕ್ಷತಾ ಅವರು ಜೂನ್ 2ರವರೆಗೆ ತಮ್ಮ ಷೇರುಪಾಲನ್ನು ಉಳಿಸಿಕೊಂಡಲ್ಲಿ ಅವರಿಗೆ ₹68.17 ಕೋಟಿ ಲಾಭಾಂಶ ಸಂದಾಯ ಆಗಲಿದೆ.

ಕಂಪನಿಯು ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಪ್ರತಿ ಷೇರಿಗೆ ₹16.50 ಮಧ್ಯಂತರ ಲಾಭಾಂಶ ಘೋಷಿಸಿತ್ತು. ಇದನ್ನೂ ಸೇರಿಸಿದರೆ ಲಾಭಾಂಶದ ರೂಪದಲ್ಲಿ ಅವರಿಗೆ ಒಟ್ಟು ₹132.4 ಕೋಟಿ ಸಿಗಲಿದೆ.

ಈಕ್ವಿಟಿ ಎಂಎಫ್: ಹೂಡಿಕೆ ಶೇ 31 ಹೆಚ್ಚಳ

ಬೆಂಗಳೂರು (ರಾಯಿಟರ್ಸ್): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳ ಮೂಲಕ ಮಾರ್ಚ್‌ನಲ್ಲಿ ಬಂಡವಾಳ ಹೂಡಿಕೆಯು ಶೇ 31ರಷ್ಟು ಹೆಚ್ಚಾಗಿದ್ದು, ₹20,582 ಕೋಟಿಗೆ ತಲುಪಿದೆ. 12 ತಿಂಗಳಲ್ಲಿ ಆಗಿರುವ ಗರಿಷ್ಠ ಮೊತ್ತದ ಹೂಡಿಕೆ ಇದಾಗಿದೆ.

2022ರ ನವೆಂಬರ್‌ನಲ್ಲಿ ₹2,250 ಕೋಟಿಯಷ್ಟು ಕನಿಷ್ಠ ಮಟ್ಟದ ಹೂಡಿಕೆ ಆಗಿತ್ತು. ಆ ಬಳಿಕ ಪ್ರತಿ ತಿಂಗಳೂ ಹೂಡಿಕೆ ಪ್ರಮಾಣವು ನಿಧಾನವಾಗಿ ಹೆಚ್ಚಾಗುತ್ತಿದೆ ಎಂದು ಯೂನಿಯನ್ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಜಿ. ಪ್ರದೀಪ್‌ಕುಮಾರ್ ಹೇಳಿದ್ದಾರೆ.

ಸ್ಮಾಲ್‌ಕ್ಯಾಪ್ ಫಂಡ್‌ಗಳು ₹2,129 ಕೋಟಿಯಷ್ಟು ಹೂಡಿಕೆ ಆಕರ್ಷಿಸಿವೆ. ಲಾರ್ಜ್ ಕ್ಯಾಪ್‌ಗಳಲ್ಲಿ ಹೂಡಿಕೆಯು ಮಾರ್ಚ್‌ನಲ್ಲಿ ಬಹುಪಾಲು ಮೂರುಪಟ್ಟು ₹911 ಕೋಟಿಗೆ ಏರಿಕೆ ಕಂಡಿದೆ. ಫೆಬ್ರುವರಿಯಲ್ಲಿ ₹355 ಕೋಟಿ ಹೂಡಿಕೆ ಆಗಿತ್ತು.

ವ್ಯವಸ್ಥಿತ ಹೂಡಿಕೆ ಯೋಜನೆಗಳಲ್ಲಿ (ಎಸ್‌ಐಪಿ) ಹೂಡಿಕೆಯು ಶೇ 4ರಷ್ಟು ಹೆಚ್ಚಾಗಿದ್ದು, ₹14,276 ಕೋಟಿಗೆ ತಲುಪಿದೆ. ಮಾರ್ಚ್‌ನಲ್ಲಿ ಒಟ್ಟಾರೆ 7 ಲಕ್ಷ ಹೊಸ ಎಸ್‌ಐಪಿ ಖಾತೆಗಳನ್ನು ತೆರೆಯಲಾಗಿದೆ.

2023ರಲ್ಲಿ ಜನವರಿ–ಮಾರ್ಚ್ ಅವಧಿಯಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ₹26,200 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಎಸ್‌ಐಪಿಗೆ ಉತ್ತಮ ಬೇಡಿಕೆ ಬಂದಿರುವುದರಿಂದ ಈಕ್ವಿಟಿ ಯೋಜನೆಗಳಲ್ಲಿ ಒಳಹರಿವು ಹೆಚ್ಚಾಗಿದೆ ಎಂದು ಟ್ರಸ್ಟ್ ಮ್ಯೂಚುವಲ್ ಫಂಡ್‌ನ ಮುಖ್ಯ ವಹಿವಾಟು ಅಧಿಕಾರಿ ಅಜಯ್‌ಕುಮಾರ್ ಗುಪ್ತಾ ತಿಳಿಸಿದ್ದಾರೆ.

ಮ್ಯೂಚುವಲ್ ಫಂಡ್ ಉದ್ಯಮದ ನಿರ್ವಹಣಾ ಸಂಪತ್ತು (ಲಕ್ಷ ಕೋಟಿಗಳಲ್ಲಿ)

₹40.05 ಮಾರ್ಚ್ ಅಂತ್ಯಕ್ಕೆ

₹40.69 ಫೆಬ್ರುವರಿ ಅಂತ್ಯಕ್ಕೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-53000
ಕುಂದಾಪುರ	
ಹಳೆಚಾಲಿ	44000-44500
ಹೊಸಚಾಲಿ	35000-36000
ಕಾರ್ಕಳ	
ಹೊಸತು	30000-38000
ಹಳತು	40000-53000
ಸಾಗರ	
ಬಿಳಿಗೋಟು	25811-30199
ಚಾಲಿ	32099-36200
ಕೋಕ	12319-32299
ಕೆಂಪುಗೋಟು	14989-34899
ರಾಶಿ	34899-46399
ಸಿಪ್ಪೆಗೋಟು	4690-19699
ಶಿವಮೊಗ್ಗ	
ಬೆಟ್ಟೆ	44400-51829
ಗೊರಬಲು	21000-33969
ರಾಶಿ	32089-46199
ಸರಕು	42769-80877
ಶಿರಸಿ	
ಬೆಟ್ಟೆ	34010-41999
ಬಿಳಿಗೋಟು	23199-31399
ಚಾಲಿ	32099-36799
ಕೆಂಪುಗೋಟು	26899-33518
ರಾಶಿ	41210-44699
ಯಲ್ಲಾಪುರ	
ಬಿಳಿಗೋಟು	23299-33499
ಚಾಲಿ	32699-37919
ಕೋಕ	16899-30922
ಕೆಂಪುಗೋಟು	26899-34210
ರಾಶಿ	41269-48669
ತಟ್ಟಿಬೆಟ್ಟೆ	36599-44269

ವಿವೊದಿಂದ ₹1,100 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಸ್ಮಾರ್ಟ್‌ಫೋನ್ ತಯಾರಿಸುವ ವಿವೊ ಕಂಪನಿಯು ಭಾರತದಲ್ಲಿ ತನ್ನ ತಯಾರಿಕಾ ಸಾಮರ್ಥ್ಯ ವಿಸ್ತರಣೆಗಾಗಿ ಈ ವರ್ಷಾಂತ್ಯದ ಒಳಗೆ ₹1,100 ಕೋಟಿ ಹೂಡಿಕೆ ಮಾಡುವುದಾಗಿ ಗುರುವಾರ ಹೇಳಿದೆ.

ಭಾರತದಲ್ಲಿ ಕಂಪನಿಯು ಒಟ್ಟು ₹7,500 ಕೋಟಿ ಹೂಡಿಕೆ ಮಾಡುವ ಯೋಜನೆ ಹೊಂದಿದೆ. ಮೊದಲ ಹಂತದಲ್ಲಿ 2023ರ ಅಂತ್ಯದ ವೇಳೆಗೆ ₹3,500 ಕೋಟಿ ಹೂಡಿಕೆ ಮಾಡಲು ಉದ್ದೇಶಿಸಿದ್ದು, ಅದರಲ್ಲಿ ₹2,400 ಕೋಟಿ ಹೂಡಿಕೆ ಮಾಡಲಾಗಿದೆ. ಇನ್ನುಳಿದ ₹1,100 ಕೋಟಿಯನ್ನು ವರ್ಷಾಂತ್ಯದ ಒಳಗೆ ಹೂಡಿಕೆ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಗ್ರೇಟರ್ ನೊಯಿಡಾದಲ್ಲಿ ತನ್ನ ಹೊಸ ಸ್ಮಾರ್ಟ್‌ಫೋನ್‌ಗಳ ತಯಾರಿಕೆಯು 2024ರ ಮೊದಲಿಗೆ ಆರಂಭ ಆಗುವ ನಿರೀಕ್ಷೆ ಮಾಡಿರುವುದಾಗಿ ಅದು ತಿಳಿಸಿದೆ.

‘ಭದ್ರತಾ ಸವಾಲು ಎದುರಿಸಲು ಭಾರತ ಶಕ್ತ’

ಕಂಪಾಲ (ಪಿಟಿಐ): ‘ಈಗಿರುವುದು ಭಿನ್ನ ಭಾರತ, ಈಗಿನ ಭಾರತವು ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆ ನೀಡುತ್ತದೆ ಎಂದು ದಶಕಗಳ ಕಾಲ ಭಾರತದ ಜೊತೆ ಗಡಿ ತಿಕ್ಕಾಟ ನಡೆಸಿದ ದೇಶಗಳಿಗೆ ಈಗ ಮನವರಿಕೆ ಆಗಿದೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಉಗಾಂಡದಲ್ಲಿ ಬುಧವಾರ ಹೇಳಿದರು.

ಉಗಾಂಡದ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, ಚೀನಾ ಮತ್ತು ಪಾಕಿಸ್ತಾನ ತಂದೊಡ್ಡುತ್ತಿರುವ ರಾಷ್ಟ್ರೀಯ ಭದ್ರತಾ ಸವಾಲುಗಳನ್ನು ಎದುರಿಸಲು ಇಂದಿನ ಭಾರತ ಶಕ್ತವಾಗಿದೆ. ಈಗ ಜನರು ಬೇರೆಯದ್ದೇ ಭಾರತವನ್ನು ನೋಡುತ್ತಿದ್ದಾರೆ ಎಂದು ಒತ್ತಿ ಹೇಳಿದರು.

2016ರಲ್ಲಿ ‘ಉರಿ’ ಸೇನಾನೆಲೆ ಮೇಲೆ ಪಾಕಿಸ್ತಾನದ ಉಗ್ರರು ನಡೆಸಿದ್ದ ದಾಳಿಗೆ ಪ್ರತೀಕಾರವಾಗಿ ಬಾಲಾಕೋಟ್‌ನಲ್ಲಿದ್ದ ಉಗ್ರರ ಶಿಬಿರದ ಮೇಲೆ ನಡೆಸಿದ್ದ ವಾಯುದಾಳಿ ಕುರಿತು ಮಾತನಾಡಿದ ಅವರು, ಗಡಿ ಬಳಿಯ ಭಯೋತ್ಪಾದನೆಗೆ ಭಾರತ ತಕ್ಕ ಉತ್ತರ ನೀಡುತ್ತದೆ ಎಂದು ನೆರೆ ದೇಶಗಳಿಗೆ ಈಗ ಮನವರಿಕೆಯಾಗಿದೆ ಎಂದರು.

ಗಡಿ ಬಳಿ ಚೀನಾ ಎಸೆಯುತ್ತಿರುವ ಸವಾಲುಗಳ ಕುರಿತು ಮಾತನಾಡಿದ ಅವರು, ‘ಗಡಿ ಒಪ್ಪಂದಗಳನ್ನು ಉಲ್ಲಂಘಿಸಿರುವ ಚೀನಾ ಕಳೆದ ಮೂರು ವರ್ಷಗಳಿಂದ ಗಡಿ ಬಳಿ ತನ್ನ ಸೇನೆಯನ್ನು ದೊಡ್ಡ ಪ್ರಮಾಣದಲ್ಲಿ ನಿಯೋಜಿಸಿದೆ. ಇದಕ್ಕೆ ಪ್ರತಿಯಾಗಿ ಭಾರತವೂ ತನ್ನ ಸೇನೆಯನ್ನು ಅತಿ ಎತ್ತರದ ಪ್ರದೇಶಗಳಲ್ಲೂ ನಿಯೋಜಿಸಿದೆ. ಸೇನೆಗೆ ಅಗತ್ಯ ಮೂಲಸೌಕರ್ಯ ಮತ್ತು ಉಪಕರಣಗಳನ್ನು ಒದಗಿಸಲಾಗಿದೆ’ ಎಂದರು.

‘ಭಾರತ ಈಗ ಅತ್ಯಂತ ಹೆಚ್ಚು ಸ್ವತಂತ್ರ ದೇಶವಾಗಿದೆ. ದೇಶದ ನೀತಿ, ನಿಯಮಗಳು ಹೊರಗಿನ ಒತ್ತಡಕ್ಕೆ ಒಳಗಾಗಿಲ್ಲ’ ಎಂದರು.

‘ಟೈಮ್’ ಪ್ರಭಾವಿಗಳ ಪಟ್ಟಿಯಲ್ಲಿ ಶಾರುಕ್ ಖಾನ್, ರಾಜಮೌಳಿ

ನ್ಯೂಯಾರ್ಕ್ (ಪಿಟಿಐ): ಟೈಮ್ ನಿಯತಕಾಲಿಕ ಸಿದ್ಧಪಡಿಸಿರುವ 2023ರ ಜಾಗತಿಕ ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿ ಬಾಲಿವುಡ್ ನಟ ಶಾರುಕ್ ಖಾನ್, ತೆಲುಗಿನ ಖ್ಯಾತ ನಿರ್ದೇಶಕ ಎಸ್. ಎಸ್. ರಾಜಮೌಳಿ, ಲೇಖಕ ಸಲ್ಮಾನ್ ರಶ್ದಿ, ಕಿರುತೆರೆ ನಿರೂಪಕಿ ಹಾಗೂ ತೀರ್ಪುಗಾರ್ತಿ ಪದ್ಮಾ ಲಕ್ಷ್ಮಿ ಅವರ ಹೆಸರು ಇದೆ.

ವಿಶ್ವದ 100 ಪ್ರಭಾವಿಗಳ ಪಟ್ಟಿಯನ್ನು ಗುರುವಾರ ಟೈಮ್ ಬಿಡುಗಡೆಗೊಳಿಸಿದೆ. ಈ ಪಟ್ಟಿಯಲ್ಲಿ ಅಮೆರಿಕದ ಅಧ್ಯಕ್ಷ ಜೋ ಬೈಡನ್, ಬ್ರಿಟನ್ ರಾಜ ಕಿಂಗ್ ಚಾರ್ಲ್ಸ್, ಟ್ವಿಟರ್ ಸಿಇಒ ಇಲಾನ್ ಮಸ್ಕ್, ಸಿರಿಯಾ ಮೂಲದ ಈಜುಗಾರ್ತಿಯರಾದ ಸಾರಾ ಮಾರ್ಡಿನಿ ಮತ್ತು ಇಸ್ರಾ ಮಾರ್ಡಿನಿ, ಗಾಯಕ ಬೆಯಾನ್ಸ್ ಅವರ ಹೆಸರು ಪಟ್ಟಿಯಲ್ಲಿದೆ.

ದಕ್ಷಿಣ ಫ್ಲಾರಿಡಾದಲ್ಲಿ ಧಾರಾಕಾರ ಮಳೆ

ಫೋರ್ಟ್ ಲಾಡೆರ್ಡೇಲ್, ಅಮೆರಿಕ (ಎಪಿ): 24 ತಾಸುಗಳಲ್ಲಿ ಸುರಿದ 63.5 ಸೆಂಟಿ ಮೀಟರ್ (25 ಇಂಚು) ಭಾರಿ ಮಳೆಗೆ ನಗರದಲ್ಲಿ ಪ್ರವಾಹ ಉಂಟಾಗಿದೆ. ವಿಮಾನ ನಿಲ್ದಾಣ ಬಂದ್ ಮಾಡುವುದರ ಜತೆಗೆ ಬ್ರೋವರ್ಡ್ ಕೌಂಟಿ ಪ್ರದೇಶಕ್ಕೆ ರೈಲು ಸೇವೆ ಸ್ಥಗಿತಗೊಳಿಸಲಾಗಿದೆ. ನೀರು ಕಡಿಮೆ ಆಗುವವರೆಗೆ ರಸ್ತೆಗಳ ಬಳಿ ಬರದಂತೆ ನಿವಾಸಿಗಳಿಗೆ ಸೂಚನೆ ನೀಡಲಾಗಿದೆ.

ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್: ಅಂತಿಮ್‌ಗೆ ಬೆಳ್ಳಿ

ಅಮನ್ ಚಿನ್ನದ ಹೊಳಪು

ಅಸ್ತಾನ, ಕಜಕಸ್ತಾನ (ಪಿಟಿಐ): ಭಾರತದ ಅಮನ್ ಸೆಹ್ರಾವತ್ ಅವರು ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಚಿನ್ನದ ಪದಕಕ್ಕೆ ಮುತ್ತಿಟ್ಟರು.

ಪುರುಷರ 57 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಅಮನ್ ಫೈನಲ್ ಬೌಟ್‌ನಲ್ಲಿ ಕಿರ್ಗಿಸ್ತಾನದ ಅಲ್ಮಾಜ್ ಸ್ಮನ್‌ಬೆಕೊವ್ ಅವರನ್ನು ಚಿತ್ ಮಾಡಿದರು. ಭಾರತದ ಕುಸ್ತಿಪಟುವಿಗೆ 9–4 ಪಾಯಿಂಟ್ಸ್‌ನಿಂದ ಗೆಲುವು ಒಲಿಯಿತು.

ಈ ಬಾರಿಯ ಚಾಂಪಿಯನ್‌ಷಿಪ್ ಭಾರತಕ್ಕೆ ದಕ್ಕಿದ ಮೊದಲ ಚಿನ್ನದ ಪದಕ ಇದು. ತಂಡವು ಇದುವರೆಗೆ ಒಟ್ಟು 12 ಪದಕಗಳನ್ನು ಜಯಿಸಿದೆ.

ಸೆಮಿಫೈನಲ್ ಬೌಟ್‌ನಲ್ಲಿ ಅಮನ್ 7–4ರಿಂದ ಚೀನಾದ ವನಾಹೊ ಜೊ ಅವರನ್ನು ಪರಾಭವಗೊಳಿಸಿದ್ದರು.

ಕಳೆದ ವರ್ಷ 23 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ವಿಜೇತರಾಗಿದ್ದ ಅಮನ್


ಅಮನ್ ಸೆಹ್ರಾವತ್

ಅವರಿಗೆ ಎಂಟರಘಟ್ಟದಲ್ಲಿ 7–1ರಿಂದ ಜಪಾನ್‌ನ ರಿಕುಟೊ ಅರಾಯಿ ಎದುರು ಜಯ ಒಲಿದಿತ್ತು.

2023ರ ಋತುವಿನಲ್ಲಿ ಅಮನ್ ಎರಡನೇ ಬಾರಿ 'ಪೋಡಿಯಂ ಫಿನಿಶ್' ಮಾಡಿದರು. ಫೆಬ್ರುವರಿಯಲ್ಲಿ ನಡೆದ ಜಗ್ರೆಬ್ ಓಪನ್ ಟೂರ್ನಿಯಲ್ಲಿ ಅವರು ಕಂಚು ಜಯಿಸಿದ್ದರು.

ದೀಪಕ್ ಕುಕ್ನಾ ಹಾಗೂ ದೀಪಕ್ ನೆಹ್ರಾ ಕಂಚಿನ ಪದಕದ ಸುತ್ತು ಪ್ರವೇಶಿಸಿದರು.

ಕುಕ್ನಾ ಹಾಗೂ ನೆಹ್ರಾ ಕ್ರಮವಾಗಿ 79 ಮತ್ತು 97 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದು, ಸೆಮಿಫೈನಲ್ ಬೌಟ್‌ಗಳಲ್ಲಿ ಸೋಲು ಅನುಭವಿಸಿದರು.

ಅನುಜ್ ಕುಮಾರ್ (65 ಕೆಜಿ) ಮತ್ತು ಮುಲಾಯಂ ಯಾದವ್ (70 ಕೆಜಿ) ಪದಕದ ಸುತ್ತು ಪ್ರವೇಶಿಸುವಲ್ಲಿ ವಿಫಲರಾದರು.

ಅಂತಿಮ್‌ಗೆ ಬೆಳ್ಳಿ: ಮಹಿಳೆಯರ 53 ಕೆಜಿ ವಿಭಾಗದಲ್ಲಿ ಅಂತಿಮ್ ಪಂಘಲ್ ಅವರು ಬೆಳ್ಳಿ ಪದಕ ಗಳಿಸಿದರು. ಬುಧವಾರ ನಡೆದ ಫೈನಲ್‌ನಲ್ಲಿ ಅವರು ಜಪಾನ್‌ನ ಅಕಾರಿ ಫುಜಿನಾಮಿ ಎದುರು ಸೋಲನುಭವಿಸಿದರು.

ಅನ್ನು ಮಲಿಕ್ (57 ಕೆಜಿ), ಸೋನಮ್ ಮಲಿಕ್ (62 ಕೆಜಿ), ಮನೀಷಾ (65 ಕೆಜಿ) ಮತ್ತು ರಿತಿಕಾ (72 ಕೆಜಿ) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಹಾಕಿ: ಆಯ್ಕೆ ಟ್ರಯಲ್ಸ್ 19ರಿಂದ

ಬೆಂಗಳೂರು: ಹಾಕಿ ಇಂಡಿಯಾ ರಾಷ್ಟ್ರೀಯ ಚಾಂಪಿಯನ್‌ಷಿಪ್ ಸಿದ್ಧತೆಗಾಗಿ ರಾಜ್ಯ ಸಬ್ ಜೂನಿಯರ್ ಪುರುಷರ ಮತ್ತು ಮಹಿಳಾ ತಂಡಗಳ ಆಯ್ಕೆ ಟ್ರಯಲ್ಸ್ ಏಪ್ರಿಲ್ 19ರಿಂದ ನಡೆಯಲಿದೆ. ಶಾಂತಿನಗರದ ಕೆ.ಎಂ. ಕಾರ್ಯಪ್ಪ ಕ್ರೀಡಾಂಗಣದಲ್ಲಿ 19 ಮತ್ತು 20ರಂದು ಟ್ರಯಲ್ಸ್ ನಿಗದಿಯಾಗಿದೆ.

'ಸಬ್‌ಜೂನಿಯರ್ ಮಹಿಳೆಯರ ರಾಷ್ಟ್ರೀಯ ಚಾಂಪಿಯನ್‌ಷಿಪ್ ಮೇ 4ರಿಂದ 14ರವರೆಗೆ ಹಾಗೂ ಪುರುಷರ ಚಾಂಪಿಯನ್‌ಷಿಪ್ ಮೇ 18ರಿಂದ 28ರವರೆಗೆ ರೂರ್ಕೆಲಾದಲ್ಲಿ ನಡೆಯಲಿವೆ' ಎಂದು ಹಾಕಿ ಕರ್ನಾಟಕ ಪ್ರಧಾನ ಕಾರ್ಯದರ್ಶಿ ಎ.ಬಿ. ಸುಬ್ಬಯ್ಯ ಅವರು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹಾಕಿ ಆಯ್ಕೆ ಸಮಿತಿ ಮುಖ್ಯಸ್ಥರಾಗಿ ಸಿಂಗ್

ನವದೆಹಲಿ (ಪಿಟಿಐ): ಮಾಜಿ ಅಂತರರಾಷ್ಟ್ರೀಯ ಆಟಗಾರ ಮತ್ತು ಉತ್ತರ ಪ್ರದೇಶದ ಕ್ರೀಡಾ ನಿರ್ದೇಶಕ ಆರ್.ಪಿ. ಸಿಂಗ್ ಅವರನ್ನು ಹಾಕಿ ಇಂಡಿಯಾವು, ಭಾರತ ಹಾಕಿ ತಂಡದ ಆಯ್ಕೆ ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ. ಅವರು ಹರ್ಬಿಂದರ್ ಸಿಂಗ್ ಸ್ಥಾನ ತುಂಬಲಿದ್ದಾರೆ.

ಸಿಂಗ್ ಅವರನ್ನು ಮಂಗಳವಾರ ನೇಮಕ ಮಾಡಲಾಗಿದೆ. ಅವರ ನೇತೃತ್ವದ ಹೊಸ ಸಮಿತಿಯು ಏ. 15ರಂದು ಅಧಿಕಾರ ವಹಿಸಿಕೊಳ್ಳಲಿದೆ. ಆಯ್ಕೆ ಸಮಿತಿಯಲ್ಲಿ ಸಿಂಗ್ ಜೊತೆ ಬಲ್ವಿಂದರ್ ಸಿಂಗ್, ಮೊಹಮದ್ ರಿಯಾಜ್, ಎಂ.ಎಂ. ಸೋಮಯ್ಯ, ಸುಭದ್ರ ಪ್ರಧಾನ್, ಸರ್ದಾರ್ ಸಿಂಗ್, ಬಿ.ಪಿ.ಗೋವಿಂದ, ಚಿಂಗ್ಲೇಸಾನ ಸಿಂಗ್ ಕಂಜುಗಮ್, ರಜನೀಶ್ ಮಿಶ್ರಾ, ವಿ.ಆರ್. ರಘುನಾಥ್, ಸಮೀರ್ ದಾಡ್, ಯುವರಾಜ್ ವಲ್ಮೀಕಿ, ಜಯದೀಪ್ ಕೌರ್ ಮತ್ತು ಅಸುಂತ ಲಾಕ್ರಾ. ರಘುನಾಥ್ ಕರ್ನಾಟಕದವರಾಗಿದ್ದು, ಬಿ.ಪಿ.ಗೋವಿಂದ ಮತ್ತು ಸೋಮಯ್ಯ ಅವರು ಕರ್ನಾಟಕ ಮೂಲದವರು.

ಸಮಿತಿಯು ಪುರುಷರ ಮತ್ತು ಮಹಿಳಾ ತಂಡದ ಮುಖ್ಯ ಕೋಚ್, ವೈಜ್ಞಾನಿಕ ಸಲಹೆಗಾರರು ಮತ್ತು ಹೈ ಫರ್ಫಾಮೆನ್ಸ್ ಡೈರೆಕ್ಟರ್ ಅವರನ್ನು ಒಳಗೊಂಡಿದೆ.

ಶನಿವಾರ ಬೆಂಗಳೂರಿನಲ್ಲಿ ಭಾರತ ತಂಡದ ಆಯ್ಕೆ ಟ್ರಯಲ್ಸ್ ಮೂಲಕ ಸಿಂಗ್ ತಮ್ಮ ಕಾರ್ಯಭಾರ ಆರಂಭಿಸಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಬ್ಳೆ ತರಬೇತಿಗೆ ಅನುಮೋದನೆ


ಅವಿನಾಶ್ ಸಬ್ಳೆ

ನವದೆಹಲಿ (ಪಿಟಿಐ): ಈ ವರ್ಷ ನಡೆಯಲಿರುವ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಸಿದ್ಧತೆಗಾಗಿ ಸ್ಟೀಪಲ್‌ಚೇಸ್ ಓಟಗಾರ ಅವಿನಾಶ್ ಸಬ್ಳೆ ಅವರಿಗೆ ಸ್ವಿಟ್ಜರ್ಲೆಂಡ್‌ನ ಸೇಂಟ್ ಮೊರಿಟ್ಜ್‌ನಲ್ಲಿ ತರಬೇತಿ ಪಡೆಯಲು ಕೇಂದ್ರ ಕ್ರೀಡಾ ಸಚಿವಾಲಯದ ಮಿಶನ್ ಒಲಿಂಪಿಕ್ ಸೆಲ್ (ಎಂಒಸಿ) ಅನುಮೋದನೆ ನೀಡಿದೆ.

ಸಚಿವಾಲಯದ ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆಯಡಿ (ಟಾಪ್ಸ್) ಅವಿನಾಶ್ ಅವರ ತರಬೇತಿ ಖರ್ಚುವೆಚ್ಚಗಳನ್ನು ನಿಭಾಯಿಸಲಾಗುತ್ತದೆ.

ಸೇಂಟ್ ಮೊರಿಟ್ಜ್‌ನಲ್ಲಿ ಆಗಸ್ಟ್ 7ರಿಂದ 16ರವರೆಗೆ ಅವಿನಾಶ್ ಅವರ ತರಬೇತಿ ನಿಗದಿಯಾಗಿದೆ.

ಭಾರತಕ್ಕೆ ನಿರಾಸೆ

ತಾಷ್ಕೆಂಟ್, ಉಜ್ಬೆಕಿಸ್ತಾನ (ಪಿಟಿಐ): ಸತತ ಎರಡು ಪಂದ್ಯಗಳಲ್ಲಿ ಗೆದ್ದು ಆತ್ಮವಿಶ್ವಾಸದಲ್ಲಿದ್ದ ಭಾರತ ತಂಡದವರು ಬಿಲ್ಲಿ ಜೀನ್ ಕಿಂಗ್ ಕಪ್ ಟೆನಿಸ್ ಏಷ್ಯಾ / ಒಷಾನಿಯಾ ಗುಂಪು ಒಂದರ ಸ್ಪರ್ಧೆಯ ಮೂರನೇ ಪಂದ್ಯದಲ್ಲಿ ಚೀನಾ ತಂಡಕ್ಕೆ ಸೋತರು.

ಗುರುವಾರ ನಡೆದ ಹಣಾಹಣಿಯಲ್ಲಿ ಭಾರತ 0–3ರಿಂದ ನಿರಾಸೆ ಅನುಭವಿಸಿತು. ಮೊದಲ ಸಿಂಗಲ್ಸ್ ಪಂದ್ಯದಲ್ಲಿ ಭಾರತದ ಋತುಜಾ ಭೋಸ್ಲೆ 3-6, 5-7ರಿಂದ ಚೀನಾದ ಕ್ಸಿನ್‌ಯು ಜಿಯಾಂಗ್ ಎದುರು ಸೋತರು. ಅಂಕಿತಾ ರೈನಾ, ಎರಡನೇ ಪಂದ್ಯದಲ್ಲಿ 5-7, 1-6ರಿಂದ ಯು ಯುವಾನ್ ವಿರುದ್ಧ ಮಣಿದರು.

ಡಬಲ್ಸ್ ಹಣಾಹಣಿಯಲ್ಲಿ ಶ್ರೀವಲ್ಲಿ ರಶ್ಮಿಕಾ ಭಮಿದಿಪತಿ– ವೈದೇಹಿ ಚೌಧರಿ ಅವರಿಗೆ 0–6, 1–6ರಿಂದ ಕ್ಸಿನ್‌ಯು ಜಿಯಾಂಗ್– ಜೊಷುವಾನ್ ಯಾಂಗ್ ವಿರುದ್ಧ ಸೋಲು ಎದುರಾಯಿತು.

ಸ್ವರ್ಣ ಪದಕದ ಮೇಲೆ ಕಣ್ಣು

ದೋಹಾ ಡೈಮಂಡ್ ಲೀಗ್ ಕೂಟದಲ್ಲಿ ನೀರಜ್ ಸ್ಪರ್ಧೆ

ನವದೆಹಲಿ (ಪಿಟಿಐ): ದೋಹಾದಲ್ಲಿ ಮೇ 5ರಂದು ನಡೆಯಲಿರುವ ಡೈಮಂಡ್ ಲೀಗ್ ಕೂಟದಲ್ಲಿ ಪಾಲ್ಗೊಳ್ಳುವ ಮೂಲಕ ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ ಅವರು ಸ್ಪರ್ಧಾ ಋತುವನ್ನು ಆರಂಭಿಸಲಿದ್ದಾರೆ. ವಿಶ್ವದ ಪ್ರಮುಖ ಜಾವೆಲಿನ್ ಸ್ಪರ್ಧಿಗಳು ಈ ಕಣದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಒಲಿಂಪಿಕ್ ಸ್ವರ್ಣ ವಿಜೇತರಾಗಿರುವ, 25 ವರ್ಷದ ಚೋಪ್ರಾ, ಡೈಮಂಡ್ ಲೀಗ್‌ನ ಹಾಲಿ ಚಾಂಪಿಯನ್ ಕೂಡ. ಜ್ಯೂರಿಚ್‌ನಲ್ಲಿ ಕಳೆದ ಸೆಪ್ಟೆಂಬರ್‌ನಲ್ಲಿ ನಡೆದ ಗ್ರ್ಯಾಂಡ್ ಫಿನಾಲೆಯಲ್ಲಿ ಅವರು ಚಿನ್ನದ ಪದಕ ಜಯಿಸಿದ್ದರು.

ಡೈಮಂಡ್ ಲೀಗ್ 14 ಕೂಟಗಳನ್ನು ಹೊಂದಿದ್ದು, ಮೊದಲನೆಯದು ಕತಾರ್ ರಾಜಧಾನಿ ದೋಹಾದಲ್ಲಿ ನಡೆಯಲಿದೆ. ಅಮೆರಿಕದ ಯುಜಿನ್‌ನಲ್ಲಿ ಸೆ. 16 ಮತ್ತು 17ರಂದು ಕೊನೆಯ ಕೂಟ


ನೀರಜ್ ಚೋಪ್ರಾ

ನಿಗದಿಯಾಗಿದೆ. ಚೋಪ್ರಾ ಜೊತೆ, ವಿಶ್ವ ಚಾಂಪಿ ಯನ್ ಆ್ಯಂಡರ್ಸನ್ ಪೀಟರ್ (ಗ್ರೆನೇಡಾ), ಒಲಿಂಪಿಕ್ ಬೆಳ್ಳಿ ವಿಜೇತ ಜಾಕುಬ್ ವಡ್ಲೇಚ್ (ಜೆಕ್ ರಿಪಬ್ಲಿಕ್) ಕೂಡ ಕಣಕ್ಕಿಳಿಯಲಿದ್ದಾರೆ.

ಸ್ಟಾಕ್‌ಹೋಮ್‌ನಲ್ಲಿ ನಡೆದ ಕಳೆದ ವರ್ಷದ ಡೈಮಂಡ್ ಲೀಗ್‌ನಲ್ಲಿ ಎರಡನೇ ಸ್ಥಾನ ಪಡೆಯುವಾಗ ಸಾಧಿಸಿದ 89.94 ಮೀಟರ್‌ಗಳ ದೂರ, ಚೋಪ್ರಾ ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿದೆ. ಚೋಪ್ರಾ ಪ್ರಸ್ತುತ ಟರ್ಕಿಯಲ್ಲಿ ತರಬೇತಿ ಪಡೆಯುತ್ತಿದ್ದು, ಮೇ 31ರವರೆಗೆ ಅಲ್ಲಿ ಇರಲಿದ್ದಾರೆ.

ಗಾಯಾಳಾಗಿದ್ದ ಕಾರಣ ಭಾರತದ ಸೂಪರ್‌ಸ್ಟಾರ್ ಅಥ್ಲೀಟ್, 2022ರ ದೋಹಾ ಡೈಮಂಡ್ ಲೀಗ್ ಕೂಟದಲ್ಲಿ ಕಣಕ್ಕಿಳಿದಿರಲಿಲ್ಲ. ಆ ಕೂಟದಲ್ಲಿ ಗ್ರೆನೇಡಾದ ಪೀಟರ್ಸ್ ಅವರು ಜಾವೆಲಿನ್‌ಅನ್ನು 93.07 ಮೀ. ದೂರಕ್ಕೆಸೆದು ವಿಜಯಿಯಾಗಿದ್ದರು. ಇದು ಇತಿಹಾಸದಲ್ಲಿ ಇದು ಐದನೇ ಅತಿ ಶ್ರೇಷ್ಠ ಸಾಧನೆ.

90 ಮೀ. ದಾಟುವ ಗುರಿ: ಚೋಪ್ರಾ ಅವರ ಮುಂದಿನ ಗುರಿ 90 ಮೀ. ದಾಟುವ ಸಾಧನೆ ದಾಖಲಿಸುವುದು. 'ನಾನೂ 90 ಮೀ. ಮಾರ್ಕ್ ಹತ್ತಿರದಲ್ಲಿದ್ದೇನೆ. ಈ ಮೈಲಿಗಲ್ಲು ದಾಟುವುದು ನನಗೆ ತುಂಬಾ ಮಹತ್ವದ್ದು' ಎನ್ನುತ್ತಾರೆ ನೀರಜ್.

'ಬ್ರಿಜ್‌ಭೂಷಣ್ ವಿರುದ್ಧದ ಆರೋಪ ಸಾಬೀತಾಗದು'

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪಗಳನ್ನು ಸಾಬೀತುಪಡಿಸಲು ಸ್ಪಷ್ಟ ಸಾಕ್ಷ್ಯಗಳು ಲಭ್ಯವಾಗಿಲ್ಲ ಎಂದು ತಿಳಿದುಬಂದಿದೆ.

ದೇಶದ ಪ್ರಮುಖ ಮಹಿಳಾ ಕುಸ್ತಿಪಟುಗಳು ಡಬ್ಲ್ಯುಎಫ್‌ಐ ಅಧ್ಯಕ್ಷರ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿದ್ದರು. ಆ ಕುರಿತು ತನಿಖೆ ಮಾಡಲು ಬಾಕ್ಸರ್ ಎಂಸಿ ಮೇರಿ ಕೋಮ್ ನೇತೃತ್ವದಲ್ಲಿ ಏಳು ಸದಸ್ಯರ ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯು ಏಪ್ರಿಲ್ ಮೊದಲ ವಾರದಲ್ಲಿ ತನ್ನ ವರದಿ ಸಲ್ಲಿಸಿದೆ.

'ಸಮಿತಿಯು ಮಹಿಳಾ ಕುಸ್ತಿಪಟುಗಳನ್ನು ಹಲವು ಸುತ್ತಿನ ವಿಚಾರಣೆಗೆ ಒಳಪಡಿಸಿದೆ. ಬ್ರಿಜ್ ಭೂಷಣ್ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂಬುದನ್ನು


ಬ್ರಿಜ್‌ಭೂಷಣ್

ಸಾಬೀತುಪಡಿಸಲು ಅವರಿಗೆ ಸಾಧ್ಯವಾಗಿಲ್ಲ' ಎಂದು ಮೂಲಗಳು ತಿಳಿಸಿವೆ.

'ಕಳೆದ ವರ್ಷ ಬಲ್ಗೇರಿಯದಲ್ಲಿ ನಡೆದಿದ್ದ ಸ್ಪರ್ಧೆಯೊಂದರ ವೇಳೆ ಬ್ರಿಜ್‌ಭೂಷಣ್ ಅವರು ಬೆನ್ನುನೋವು ಶಮನಕ್ಕೆ ಮಸಾಜ್ ಮಾಡುವಂತೆ ಮಹಿಳಾ ಫಿಸಿಯೊ ಒಬ್ಬರಲ್ಲಿ ಕೇಳಿಕೊಂಡಿದ್ದರು ಎಂದು ಆರೋಪಿಸಲಾಗಿತ್ತು. ಆದರೆ ಅಂತಹ ಘಟನೆ ನಡೆದೇ ಇಲ್ಲ ಎಂದು ಅದೇ ಮಹಿಳಾ ಫಿಸಿಯೊ ತನಿಖಾ ಸಮಿತಿ ಮುಂದೆ ತಿಳಿಸಿದ್ದಾರೆ' ಎಂದು ಮೂಲಗಳು ಖಚಿತಪಡಿಸಿವೆ.

ವಿನೇಶಾ ಫೋಗಟ್ ಮತ್ತು ಸಾಕ್ಷಿ ಮಲಿಕ್ ಅವರು ತಮ್ಮ ಹೇಳಿಕೆಯನ್ನು ಸಮಿತಿಗೆ ಲಿಖಿತವಾಗಿ ಸಲ್ಲಿಸಿದ್ದರು. ಆದರೆ ಇಬ್ಬರೂ ತಪ್ಪು ಮಾಹಿತಿ ನೀಡಿದ್ದಾಗಿ ತಿಳಿದುಬಂದಿದೆ.

'2015 ರಲ್ಲಿ ಟರ್ಕಿಗೆ ತೆರಳಿದ್ದಾಗ ಬ್ರಿಜ್‌ಭೂಷಣ್ ನನ್ನನ್ನು ಅನುಚಿತವಾಗಿ ಸ್ಪರ್ಶಿಸಿದ್ದರು ಎಂದು ವಿನೇಶಾ ತಮ್ಮ ಅಫಿಡವಿಟ್‌ನಲ್ಲಿ ಆರೋಪಿಸಿದ್ದರು. ಆದರೆ ವಿನೇಶಾ ಆ ವರ್ಷ ಟರ್ಕಿಯಲ್ಲಿ ನಡೆದಿದ್ದ ಸ್ಪರ್ಧೆಯಲ್ಲಿ ಪಾಲ್ಗೊಂಡಿರಲೇ ಇಲ್ಲ. ಆ ಬಳಿಕ ತಮ್ಮ ಹೇಳಿಕೆ ಬದಲಿಸಿದ್ದ ವಿನೇಶಾ, ಘಟನೆಯು 2016 ರಲ್ಲಿ ಮಂಗೋಲಿಯದಲ್ಲಿ ನಡೆದಿತ್ತು ಎಂದಿದ್ದರು' ಎಂಬುದಾಗಿ ಮೂಲಗಳು ಹೇಳಿವೆ.

'2015 ರಲ್ಲಿ ಬ್ರಿಜ್‌ಭೂಷಣ್ ತಮ್ಮನ್ನು ತಬ್ಬಿಕೊಂಡಿದ್ದಾಗಿ ಸಾಕ್ಷಿ ಅವರು ಅಫಿಡವಿಟ್‌ನಲ್ಲಿ ಹೇಳಿದ್ದರು. ಆದರೆ ತಂದೆಯ ಸ್ಥಾನದಲ್ಲಿ ನಿಂತು ತಬ್ಬಿಕೊಂಡದ್ದಾಗಿ ಬ್ರಿಜ್‌ಭೂಷಣ್ ಸಾಕ್ಷಿಗೆ ತಿಳಿಸಿದ್ದರು' ಎಂಬ ಮಾಹಿತಿಯೂ ವರದಿಯಲ್ಲಿದೆ ಎನ್ನಲಾಗಿದೆ.

4ನೇ ಪಂದ್ಯದಲ್ಲಿ ಲಿರೆನ್‌ಗೆ ಜಯ

ಅಸ್ತಾನ, ಕಜಕಸ್ತಾನ: ಬುಧವಾರದ 'ಡ್ರಾ' ನಂತರ ವಿಶ್ವಾಸ ಮರಳಿ ಗಳಿಸಿದಂತೆ ಕಂಡ ಚೀನಾದ ಡಿಂಗ್ ಲಿರೆನ್ ಗುರುವಾರ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ 4ನೇ ಪಂದ್ಯದಲ್ಲಿ ಗುರುವಾರ ಎದುರಾಳಿ ಇಯಾನ್ ನೆಪೊಮ್‌ನಿಷಿ ವಿರುದ್ಧ ಜಯಗಳಿಸಿದರು. ಇದರಿಂದ 14 ಪಂದ್ಯಗಳ (ಬೆಸ್ಟ್ ಆಫ್ 14) ಹಣಾಹಣಿಯಲ್ಲಿ ಸ್ಕೋರ್ ಸದ್ಯ 2–2 ರಲ್ಲಿ ಸಮನಾಗಿದೆ.

ಬಿಳಿ ಕಾಯಿಗಳಲ್ಲಿ ಆಡಿದ ಲಿರೆನ್ ಆರಂಭದಿಂದಲೇ ಎದುರಾಳಿಯ ಮೇಲೆ ಒತ್ತಡ ಹೇರುವ ತಂತ್ರಕ್ಕೆ ಮುಂದಾದರು. ಆದರೆ 28ನೇ ನಡೆಯಲ್ಲಿ 'ಎಕ್ಸ್‌ಚೇಂಜ್'ನಲ್ಲಿ ನೆಪೊಮ್‌ನಿಷಿ ತಪ್ಪೆಸಗಿದರು. ನಂತರ ಡಿಂಗ್ ಅವರ ಪ್ರಬಲ ತಂತ್ರಗಾರಿಕೆ ಅವರಿಗೆ ಗೆಲುವನ್ನು ತಂದುಕೊಟ್ಟಿತು.

ಶುಕ್ರವಾರ, ಈ ಹಣಾಹಣಿಯ ಎರಡನೇ ವಿರಾಮದ ದಿನವಾಗಿದೆ.

